ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಗಾಂಧಿ ಜಯಂತಿಯ ಹಿನ್ನೆಲೆಯಲ್ಲಿ ರಾಷ್ಟ್ರದ ಎರಡು ಮೇರು ವ್ಯಕ್ತಿತ್ವಗಳ ಅನುಸಂಧಾನ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವನ್ಯಜೀವಿ ಸಪ್ತಾಹ

ವನ್ಯಜೀವಿ ಸಪ್ತಾಹದ ಅಂಗವಾಗಿ ಉತ್ತರಪ್ರದೇಶದ ಗೋರಖ್‌ಪುರದಲ್ಲಿ ಶನಿವಾರ ಯುವತಿಯರು ಮುಖಕ್ಕೆ ಹುಲಿ ವೇಷದ ಬಣ್ಣಹಚ್ಚಿಕೊಂಡು ಸೆಲ್ಫಿ ತೆಗೆದುಕೊಂಡರು

Let's celebrate together.

Manege banni.
Come home to IKEA.

The festive season is here. And we've set up our home with delightful festive décor and up to 9000 home furnishing products, designed to make every home beautiful and every celebration special. So come home to IKEA and avail exciting offers on your festive shopping.

Festive Offer
Up to 50% off*

Delivery Offer
Get 20% off on delivery charges*

American Express® Cards
10% off on minimum goods transaction of Rs.15000*

10% cashback on Citi Credit and Debit Cards*

*T&C apply

Scan to join the IKEA Family club for free

Visit IKEA Nagasandra.

IKEA.in | IKEA app

1800 419 4532 (toll free)

IKEA®

Home furnishings

ಭಾನುವಾರ, ಅಕ್ಟೋಬರ್ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 273 | ಪುಟ 24
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಹೃದಯ ಸಂಬಂಧಿತ ಎಮರ್ಜೆನ್ಸಿ ಸೇವೆಗಾಗಿ ಸ್ಕ್ಯಾನ್ ಮಾಡಿ

‘ಪೇಸಿಎಂ’ ಟೀಶರ್ಟ್ ಧರಿಸಿದ್ದ ಪಾದಯಾತ್ರಿ ವಶಕ್ಕೆ 6

ಅದ್ದೂರಿ ಬೀಳ್ಕೊಡುಗೆ; ಸೇವೆ ನೆನೆದು ಭಾವುಕರಾದ ಬಿಜ್ಜರಗಿ ಗ್ರಾಮಸ್ಥರು
ನಿವೃತ್ತ ಶಿಕ್ಷಕನಿಗೆ ಭರ್ಜರಿ ಉಡುಗೊರೆ 6

ಮಹಾತ್ಮ ಗಾಂಧಿ ಮತ್ತು ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತಿ ಶುಭಾಶಯಗಳು

‘ಸಿಇಟಿ: 500ವರೆಗಿನ ರ್‍ಯಾಂಕಿಂಗ್‌ನಲ್ಲಿ ವ್ಯತ್ಯಾಸ ಇಲ್ಲ’

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪ್ರಸಕ್ತ ಸಾಲಿನಲ್ಲಿ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ರ್‍ಯಾಂಕಿಂಗ್ ಅನ್ನು ಹೈಕೋರ್ಟ್ ಆದೇಶದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪರಿಷ್ಕರಿಸಿ ಶನಿವಾರ ಪ್ರಕಟಿಸಿದೆ. 4A

ಜಿಎಸ್‌ಟಿ ಸಂಗ್ರಹ ಶೇ 26ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಸೆಪ್ಟೆಂಬರ್‌ನಲ್ಲಿ ₹1.47 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಆಗಿದ್ದ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಶೇ 26ರಷ್ಟು ಹೆಚ್ಚಾಗಿದೆ. 10

ಕಾಮಗಾರಿಗೆ ಚಾಲನೆ: ಎಚ್‌ಡಿಕೆ–ಸಿಪಿವೈ ಜಟಾಪಟಿ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಭಿವೃದ್ಧಿ ಯಂತ್ರಕ್ಕೆ ಸಿಲುಕಿ ಅಪ್ಪಚ್ಚಿಯಾದ ರೈತರ ಬದುಕು

ಭೂ ಸ್ವಾಧೀನದ ಕಬಂಧಬಾಹು!

• ಕೆ.ಎಚ್. ಓಬಳೇಶ್

ಒಳನೋಟ

ಆತಂಕದಲ್ಲಿ ಅನ್ನದಾತ

ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ನವೆಂಬರ್‌ನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ (ಜಿಮ್) ರಾಜ್ಯ ಸರ್ಕಾರ ಸಿದ್ಧತೆ ನಡೆಸಿರುವ ಬೆನ್ನಲ್ಲೇ ಅನ್ನದಾತರ ಒಡಲಲ್ಲಿ ತಳಮಳ ಶುರುವಾಗಿದೆ. ಸಮಾವೇಶದ ಮೂಲಕ ರಾಜ್ಯದಾದ್ಯಂತ ಸಮತೋಲಿತ ಕೈಗಾರಿಕೀಕರಣಕ್ಕೆ ಉತ್ತೇಜಿಸುವುದು ಸರ್ಕಾರದ ಗುರಿ. ಆದರೆ, ಸರ್ಕಾರಿ ‘ಅಭಿವೃದ್ಧಿ ಯಂತ್ರ’ದ ಚಕ್ರಗಳಿಗೆ ಸಿಲುಕಿ ತಮ್ಮ ಬದುಕು ಅಪ್ಪಚ್ಚಿಯಾಗುತ್ತದೆ ಎಂಬ ಆತಂಕ ಕೃಷಿಕರದ್ದು.

ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಮುಂದೆ ಬರುವ ಉದ್ಯಮಿಗಳಿಗೆ ಅನುಕೂಲ ಕಲ್ಪಿಸಲು 50 ಸಾವಿರ ಎಕರೆಗೂ ಹೆಚ್ಚು ಕೃಷಿ ಭೂಮಿ ಸ್ವಾಧೀನಕ್ಕೆ ಕೆಐಎಡಿಬಿ ಮುಂದಾಗಿದೆ. ಆದರೆ, ಕೈಗಾರಿಕೆಗಳ ಹೆಸರಿನಲ್ಲಿ ಸರ್ಕಾರ ಹಗಲು ದರೋಡೆಗೆ ಇಳಿದಿದೆ ಎಂಬ ಆರೋಪ ಕೇಳಿಬಂದಿದೆ.

ಕೈಗಾರಿಕೆಗಳ ಬೆಳವಣಿಗೆಗಾಗಿ ಪ್ರತಿ ಜಿಲ್ಲೆಯಲ್ಲೂ ಭಾರಿ ಪ್ರಮಾಣದಲ್ಲಿ ಭೂಸ್ವಾಧೀನ ನಡೆಯುತ್ತಿದೆ. ಆದರೆ ಭೂಸ್ವಾಧೀನ, ರೈತರಿಗೆ ಪರಿಹಾರ, ಡಿನೋಟಿಫೈ, ಉದ್ಯಮಗಳಿಗೆ ಭೂಮಿ ಹಂಚಿಕೆ ಸೇರಿದಂತೆ ವಿವಿಧ ಹಂತದಲ್ಲಿ ಅವ್ಯವಹಾರ ತಾಂಡವವಾಡುತ್ತಿದೆ. ಈ ಜಾಲದ ಹಿಂದೆ ಜನಪ್ರತಿನಿಧಿಗಳು, ಅಧಿಕಾರಶಾಹಿ ಮತ್ತು ರಿಯಲ್ ಎಸ್ಟೇಟ್ ಮಾಫಿಯಾ ಇದೆ ಎಂಬುದು ರೈತರ ದೂರು.

ಅದರಲ್ಲೂ ಕೆಐಎಡಿಬಿ ಅಧಿಕಾರಿಗಳು ಮತ್ತು ರಿಯಲ್ ಎಸ್ಟೇಟ್ ಮಾಫಿಯಾ ನಡುವಿನ ‘ಅಲಿಖಿತ ಸಂಬಂಧ’ ಸಾವಿರಾರು ರೈತರ ಜೀವನಕ್ಕೆ ಮುಳುವಾಗಿದೆ. ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗುವ ಮೊದಲೇ ರಿಯಲ್ ಎಸ್ಟೇಟ್ ಮಾಫಿಯಾ, ಭೂ ಮಾಲೀಕರ ಸಂಪರ್ಕಕ್ಕೆ ಎಡತಾಕುತ್ತದೆ. ಹಣದ ಅವಶ್ಯಕತೆ ಹೆಚ್ಚಿರುವ ಸಣ್ಣ ಹಿಡುವಳಿದಾರರೇ ಇದರ ಉರುಳಿಗೆ ಕೊರಳೊಡ್ಡುತ್ತಾರೆ.

ಮತ್ತೊಂದೆಡೆ ಉದ್ದೇಶಿತ ಕೈಗಾರಿಕಾ ಪ್ರದೇಶಕ್ಕೆ ಜಮೀನು ಸ್ವಾಧೀನವಾಗುವ ಬಗ್ಗೆ ಪಹಣಿಯಲ್ಲಿ ನಮೂದಾದ ಬಳಿಕ ರೈತ ಕುಟುಂಬಗಳಲ್ಲಿ ಬೇಗುದಿ ಶುರುವಾಗುತ್ತದೆ. ಈ ಭೂಮಿಯಲ್ಲಿ ಕೃಷಿ ಚಟುವಟಿಕೆಗಳಿಗೆ ಸಹಕಾರ ಸಂಘ, ವಾಣಿಜ್ಯ ಬ್ಯಾಂಕ್‌ಗಳಲ್ಲಿ ಸುಲಭವಾಗಿ ಸಾಲ ದೊರೆಯುವುದಿಲ್ಲ.

ಮೂರು ವರ್ಷದ ಹಿಂದೆ ದೇವನಹಳ್ಳಿ ತಾಲ್ಲೂಕಿನ ಪೋಲನಹಳ್ಳಿಯಲ್ಲಿ ಹರಳೂರು ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ಮೊದಲ ಹಂತದಲ್ಲಿ ವಶಪಡಿಸಿಕೊಂಡಿರುವ ಜಮೀನಿನಲ್ಲಿ ಈಗ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ

ಮನೆ, ದ್ರಾಕ್ಷಿ ತೋಟದ ಸ್ವಾಧೀನಕ್ಕೆ ಕೆಐಎಡಿಬಿ ನೋಟಿಸ್ ನೀಡಿದೆ. ಕೈಗಾರಿಕೆ ಸ್ಥಾಪನೆಯಾದರೆ ಹಸಿರು ಭೂಮಿ ಬರಡಾಗುತ್ತದೆ. ಉದ್ಯಮಗಳ ಸ್ಥಾಪನೆಗೆ ಭೂಮಿ ಕೊಟ್ಟಿರುವವರು ಇಂದು ಊಟಕ್ಕೂ ಪರದಾಡುತ್ತಿದ್ದಾರೆ

ಮಾರೇಗೌಡ, ರೈತ, ಚನ್ನರಾಯಪಟ್ಟಣ, ದೇವನಹಳ್ಳಿ ತಾಲ್ಲೂಕು

8ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 8

ದೇಶದಲ್ಲಿ ‘5ಜಿ ಯುಗ’ ಆರಂಭ

ನವದೆಹಲಿ (ಪಿಟಿಐ): ದೇಶದಲ್ಲಿ ಬಹುನಿರೀಕ್ಷಿತ ‘5ಜಿ ಯುಗ’ ಆರಂಭವಾಗಿದೆ. ಮೊಬೈಲ್ ಫೋನ್‌ಗಳಿಗೆ ಅತಿವೇಗದ ಇಂಟರ್ನೆಟ್ ಸಂಪರ್ಕವನ್ನು ಒದಗಿಸುವ 5ಜಿ ದೂರಸಂಪರ್ಕ ಸೇವೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಚಾಲನೆ ನೀಡಿದರು.

ಬೆಂಗಳೂರು, ಮುಂಬೈ, ದೆಹಲಿ ಮತ್ತು ವಾರಾಣಸಿ ಸೇರಿದಂತೆ ದೇಶದ ಎಂಟು ನಗರಗಳಲ್ಲಿ ಶನಿವಾರದಿಂದಲೇ ಏರ್‌ಟೆಲ್ 5ಜಿ ಸೇವೆಗಳು ಲಭ್ಯ ಎಂದು ಭಾರ್ತಿ ಏರ್‌ಟೆಲ್ ಕಂಪನಿ ಘೋಷಿಸಿದೆ. 2024ರ ಮಾರ್ಚ್ ಒಳಗಾಗಿ ದೇಶದಾದ್ಯಂತ 5ಜಿ ಸೇವೆ ಲಭ್ಯವಾಗಲಿದೆ ಎಂದು ಕಂಪನಿಯ ಅಧ್ಯಕ್ಷ ಸುನಿಲ್ ಭಾರ್ತಿ ಮಿತ್ತಲ್ ಅವರು ತಿಳಿಸಿದರು.

ದೀಪಾವಳಿ ವೇಳೆಗೆ ನಾಲ್ಕು ಮಹಾನಗರಗಳಲ್ಲಿ ಜಿಯೊ 5ಜಿ ಸೇವೆಗಳು ಆರಂಭ ಆಗಲಿವೆ ಎಂದು ರಿಲಯನ್ಸ್ ತಿಳಿಸಿದೆ. 2023ರ ಡಿಸೆಂಬರ್ ಒಳಗಾಗಿ ದೇಶದಾದ್ಯಂತ ಲಭ್ಯವಾಗಲಿದೆ ಎಂದು ಅದು ಹೇಳಿದೆ. ವೊಡಾಫೋನ್ ಐಡಿಯಾ ಕಂಪನಿಯು ಶೀಘ್ರವೇ 5ಜಿ ಸೇವೆ ಆರಂಭಿಸುವುದಾಗಿ ಹೇಳಿದೆ.

10ನೇ ಪುಟ ನೋಡಿ

ಮೈಸೂರು ಜಿಲ್ಲೆ ಪ್ರವೇಶಿಸಿದ ‘ಭಾರತ್ ಜೋಡೊ’ ಯಾತ್ರೆ

ಪ್ರಜಾವಾಣಿ ವಾರ್ತೆ

ಮೈಸೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ‘ಭಾರತ್ ಜೋಡೊ’ ಯಾತ್ರೆಯು ಶನಿವಾರ ಬೆಳಿಗ್ಗೆ ಮೈಸೂರು ಜಿಲ್ಲೆ ಪ್ರವೇಶಿಸಿತು.

ಬೆಳಿಗ್ಗೆ 7.30ರ ಸುಮಾರಿಗೆ ಚಾಮರಾಜನಗರ ಜಿಲ್ಲೆ ಬೇಗೂರು ಬಳಿಯಿಂದ ಆರಂಭವಾದ 2ನೇ ದಿನದ ಯಾತ್ರೆಯು, ಬೆಳಿಗ್ಗೆ 9ಕ್ಕೆ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಎಲಚಗೆರೆ ಬೋರೆ ಗೇಟ್ ಬಳಿಗೆ ತಲುಪಿತು.

ಬೆಳಿಗ್ಗೆ 11ರ ಸುಮಾರಿಗೆ ಕಳಲೆ ಗ್ರಾಮ ತಲುಪಿದ ಯಾತ್ರಿಗಳು ತಾತ್ಕಾಲಿಕ ಟೆಂಟ್‌ನಲ್ಲಿ ವಿಶ್ರಾಂತಿ ಪಡೆದರು. ಸಂಜೆ 4.30ರ ಸುಮಾರಿಗೆ ಕಳಲೆ ಗೇಟ್‌ನಿಂದ ಪಾದಯಾತ್ರೆ ಶುರುವಾಗಿ ಸಂಜೆ 5ಕ್ಕೆ ನಂಜನಗೂಡಿನ ಹುಲ್ಲಹಳ್ಳಿ ವೃತ್ತಕ್ಕೆ ಬಂತು. ಸಂಜೆ 6.30ಕ್ಕೆ ಚಿಕ್ಕಯ್ಯನಛತ್ರದಲ್ಲಿ ಕಾರ್ನರ್ ಮೀಟಿಂಗ್ ಜೊತೆ ಮುಕ್ತಾಯಗೊಂಡಿತು. ತಾಂಡವಪುರದ ಎಂ.ಐ.ಟಿ ಕಾಲೇಜಿನ ಎದುರಿನ ಟೆಂಟ್‌ನಲ್ಲಿ ವಾಸ್ತವ್ಯ ಹೂಡಿರುವ ರಾಹುಲ್, ಅ.2ರಂದು ಬದನವಾಳಿನ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಗಾಂಧಿ ಜಯಂತಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸಂಜೆ ಪಾದಯಾತ್ರೆ ಮೈಸೂರಿನತ್ತ ಬರಲಿದೆ.

ಇನ್ನಷ್ಟು ಸುದ್ದಿಗಳು 6

SINGHANIA UNIVERSITY

(Recognized under Section 2(f) of the UGC Act, 1956 WEBSITE: www.singhaniauniversity.ac.in)

MAIN CAMPUS : Pacheri Bari, Jhunjhunu, Rajasthan OTHER ADMISSION, EDUCATION PROMOTION & EXAMINATION CENTERS: RAJASTHAN: Jaipur, Neemrana, Jodhpur. HARYANA: Narnaul, Manesar, Gurgaon. NEW DELHI: Green Park Extn., Vasant Vihar, Gadaipur. UTTARPRADESH: Noida, Lucknow. MP: Bhopal. WEST BENGAL: Kolkata. ASSAM: Guwahati. MAHARASHTRA: Mumbai. KARNATAKA : Bangalore. TELANGANA: Hyderabad. TAMILNADU: Chennai. ENGLAND: London.

“ANY KIND OF CORRUPTION IN EDUCATION SYSTEM CORRUPTS THE WHOLE SOCIETY”

MISSION : EDUCATION FOR ALL, HEALTHCARE FOR ALL, EMPLOYMENT FOR ALL, CORRUPTION FREE, AUTONOMOUS & MULTI TASKING EDUCATION SYSTEM

FACULTY OF MEDICINE
INTRODUCES
HOLISTIC & P B L (Problem Based Learning) in medical education as is prevalent in US & other developed countries

“UNIVERSITY” RECOGNIZED U/S 2(X) OF THE NMC ACT, 2019 & MEDICAL QUALIFICATION RECOGNIZED U/S 35(1) AND 35(8) OF THE NMC ACT, 2019 i.e. REGISTERABLE MEDICAL QUALIFICATION BY STATE MEDICAL COUNCILS. SUCH QUALIFICATION HOLDERS FALL IN THE CATEGORY OF 'REGISTERED MEDICAL PRACTITIONER' AND ENTITLED FOR PRACTICE OF MEDICINE & DEEMED TO BE REGISTERED UNDER RULE 2(ee) OF THE DRUGS & COSMETICS RULES.

UG DEGREE AND DIPLOMA

Diploma In General Medicine
Diploma In General Surgery
Diploma In Cardiology
Diploma In Paediatrics
Diploma In Orthopaedics
Diploma In Gynaecology & Obstetrics
Diploma In Opthalmic Medicine & Surgery
Diploma In Health Education
Diploma In Neurology
Diploma In Diabetology
Diploma In Medicine (Pharmacology)
Diploma In Anaesthesiology
Diploma In Forensic Medicine
Diploma In Emergency Medicine
Diploma In Dermatology
Diploma in Community Medicine
Diploma in Radiation Medicine
Diploma In Clinical Pathology
Diploma in Public Health
Diploma In Sports Medicine
Diploma in Pharma
Diploma in MLT
Diploma in RIT
Diploma in Physiotherapy
Diploma in Physical Medicine & Rehabilitation
Diploma In Infertility & Assisted Reproductive Technique
B. PHARMA, ANM, GNM, BSC (Nursing), Sonography, BDS, BMLT, BRIT, BPT, Dialysis Technician, X-Ray Technician, MBBS, BHMS, BAMS, BUMS, BNYS & all other courses

DEPARTMENT OF INTEGRATED SYSTEM OF MEDICINE

- Diploma In General Medicine & Nursing
- Diploma In General Medicine & Pharmacy
- Diploma In General Medicine & Physiotherapy
- Diploma In General Medicine & Veterinary
- Diploma In General Medicine & Clinical Pathology
- Diploma In General Medicine & Dental Surgery
- Diploma In Gynaec Medicine, Infertility & Reproductive Techniques
- Diploma In Opthalmic Medicine & Surgery
- Diploma In Health Education & Community Medicine
- Diploma In Health Education & Medical Lab Technology
- Diploma in Health Education & Nutrition
- Diploma in Health Education & Preventive Healthcare
- Diploma in Health Education & Promotive Healthcare

Note:- HON. SUPREME COURT OF INDIA in SLP (C) No. 20144/16 vide order dated 01.10.2018 has held as under “No coercive action shall be taken against persons who are practicing the Integrated System of Medicine persuant to Degrees / Diploma that have been obtained from Universities which are recognized for teaching the same.”

Eligibility: BAMS / BHMS / ANM / GNM / BSC Nursing / DPharma / BPharma / DPT / BPT / MBBS / Any qualification in medical, paramedical or allied / 12th Pass with Bio.

PG DEGREE AND PG DIPLOMA

Postgraduate Diploma in Genetic Counselling, MD / MS (All Specialization), MDS, MPT, M. PHARMA, MSC (Nursing) & all other courses

ALL UNDERGRADUATE, POST GRADUATE AND RESEARCH COURSES AVAILABLE. FOR MORE DETAILS VISIT UNIVERSITY WEBSITE

LEGAL OPINION - (IN PUBLIC INTEREST)

As per law & legal advice, Singhania University established by an Act of State Legislature and recognized u/s 2(f) of the UGC Act, is an autonomous, self-regulated & constitutionally recognized as an apex body for all education including MBBS, MD, MS and other Diploma courses and being a statutory university, separate and distinct from other non-statutory bodies like college/institution is empowered by the authority of law u/s 12A & 22 of the UGC Act to impart degree/diploma/certificate in all courses including all degree & diploma courses which are registerable qualifications. As the autonomy of university is constitutionally protected under Entry 44, List 1, Schedule 7 to the Constitution of India, it is exempted from the regulatory control of any council including National Medical Commission, State Medical Councils & any other authority and as such the degree/diploma/certificate awarded by Singhania University are sui-generis & valid for all intents & purposes. The holders of recognized & registerable medical qualification u/s 35(1) & 35(8) of the NMC Act, 2019 fall in the category of registered medical practitioner under the Rule 2(ee) of Drugs and Cosmetics Rules and are entitled for practice of Medicine & Deemed to be Registered. Similar legal position regarding practice of medicine and registration exists in almost all other states of India as well.
In this regard, a typical reference can be made to section 2(7), 15, 26 & 27 of the Delhi Medical Council Act, 1997 which provides as under: Section 2(7) of the Delhi Medical Council Act, 1997 “Medical practitioner” or “practitioner” means a person who is engaged in the practice of modern scientific system of medicine and all its branches and has qualifications as prescribed in the First, Second or Third Schedule to the Indian Medical Council Act, 1956. Singhania University in exercise of its fundamental rights protected under article 14 and 19(1)(g) can take admission of students returning from Ukraine & other foreign countries who want to pursue medical qualification from India.
FOR MORE INFORMATION & LEGAL OPINION, VISIT THE UNIVERSITY WEBSITE & FOR CONSULTANCY WRITE TO (legal@singhaniauniversity.ac.in) “SINGHANIA & CO. LLP - LEGAL DEPARTMENT OF SINGHANIA UNIVERSITY”

APPLY FOR COLLABORATION / AFFILIATION

INVITING APPLICATIONS FOR COLLABORATION/AFFILIATION FROM HOSPITALS, DIAGNOSTIC CENTERS, MEDICAL RESEARCH LABS & OTHER INTERESTED ORGANIZATIONS FOR COUNSELING, ADMISSIONS, CLINICAL TRAINING & EXAMINATIONS OF STUDENTS IN MEDICAL COURSES INCLUDING MBBS, MD, MS etc.
For Collaboration mail at: coll@singhaniauniversity.ac.in

FOR ADMISSION: CALL AT 8447836846
MAIL AT admission@singhaniauniversity.ac.in

ಬಿಡಿಎ ತಪ್ಪು ಗುರುತಿಸಿದ ನ್ಯಾ.ಎ.ವಿ. ಚಂದ್ರಶೇಖರ್ ಸಮಿತಿ ● ಪ್ರಭಾವಿಗಳಿಗೆ ನೆರವಾಗಲು ನಿಯಮ ಉಲ್ಲಂಘನೆ

ಬದಲಿ ನಿವೇಶನ ಹಂಚಿಕೆಯಲ್ಲಿ ಭಾರಿ ಅಕ್ರಮ

• ನವೀನ್ ಮಿನೇಜಸ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸುಪ್ರೀಂ ಕೋರ್ಟ್ ಆದೇಶ ಮತ್ತು ತನ್ನದೇ ನಿಯಮಗಳನ್ನು ಉಲ್ಲಂಘಿಸಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿರುವುದನ್ನು ಸುಪ್ರೀಂ ಕೋರ್ಟ್‌ನಿಂದ ನೇಮಕಗೊಂಡಿರುವ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ನೇತೃತ್ವದ ಸಮಿತಿ ಪತ್ತೆಹಚ್ಚಿದೆ.

ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಈ ಕುರಿತು ವಿಚಾರಣೆ ನಡೆಸಿದ ಸಮಿತಿಯು, ಸೆ.19ರಂದು ತನ್ನ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿದೆ. ಬದಲಿ ನಿವೇಶನಗಳ ಹಂಚಿಕೆಯಲ್ಲಿ ವ್ಯಾಪಕವಾಗಿ ಅಕ್ರಮಗಳನ್ನು ಎಸಗಿರುವುದು, ಅಧಿಕಾರ ದುರ್ಬಳಕೆ ಮಾಡಿರುವುದನ್ನು ಸಮಿತಿ ವರದಿಯಲ್ಲಿ ಉಲ್ಲೇಖಿಸಿದೆ. ಈ ಪ್ರಕ್ರಿಯೆಯಲ್ಲಿ ಪ್ರಭಾವಿ ರಾಜಕಾರಣಿಗಳಿಗೆ ಅನುಕೂಲ ಮಾಡಿಕೊಟ್ಟಿರುವುದನ್ನೂ ಸಮಿತಿ ಹೊರಗೆಡವಿದೆ.

ಬಿಡಿಎ ಅಧಿಕಾರಯುತ ಸಮಿತಿಯನ್ನು ಕಡೆಗಣಿಸಲು ಉಚಿತವಲ್ಲದ ನ್ಯಾಯಾಲಯದ ಆದೇಶವೊಂದನ್ನು ಉಲ್ಲೇಖಿಸಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ನಿಯಮಗಳನ್ನು ಉಲ್ಲಂಘಿಸಿ ಶ್ರೀಮಂತರು ಮತ್ತು ಪ್ರಭಾವಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದು ವಿಚಾರಣಾ ವರದಿ ಹೇಳಿದೆ.

ಬದಲಿ ನಿವೇಶನ ಕೋರಿ ಅರ್ಜಿ ಸಲ್ಲಿಸುವವರಿಗೆ ದುಬಾರಿ ಬೆಲೆಯ ನಿವೇಶನಗಳನ್ನು ಹಂಚಿಕೆ ಮಾಡುತ್ತಿದ್ದು, ಇದರಿಂದ ಪ್ರಾಧಿಕಾರಕ್ಕೆ ದೊಡ್ಡ ಪ್ರಮಾಣದ ಆರ್ಥಿಕ ನಷ್ಟ ಉಂಟಾಗುತ್ತಿದೆ ಎಂಬುದು ಸುಪ್ರೀಂ ಕೋರ್ಟ್ ಗಮನಕ್ಕೆ ಬಂದಿತ್ತು.

ಈ ಕುರಿತು ವಿಚಾರಣೆ ನಡೆಸುವಂತೆ ನ್ಯಾಯಾಲಯ ಆದೇಶಿಸಿತ್ತು. ಬದಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ 2021ರ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದ ಬಳಿಕ ಅಂತಹ ಬಡಾವಣೆಗಳಲ್ಲಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿರುವ ಪ್ರಕರಣಗಳ ಕುರಿತು ಸಮಿತಿ ವಿಚಾರಣೆ ನಡೆಸಿತ್ತು.

2021ರ ಅಕ್ಟೋಬರ್ ನಂತರ 96 ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಈ ಪೈಕಿ ಇನ್ನೂ ಅಭಿವೃದ್ಧಿಯ ಹಂತದಲ್ಲಿರುವ ಅರ್ಕಾವತಿ ಬಡಾವಣೆಯಲ್ಲಿ 28 ಮತ್ತು ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿನ 38 ಬದಲಿ ನಿವೇಶನಗಳ ಹಂಚಿಕೆಯನ್ನು ವಿಚಾರಣೆಯಿಂದ ಹೊರಗಿಡಲಾಗಿತ್ತು.

ಪತ್ತೆಯಾದ ಉಲ್ಲಂಘನೆಗಳು: ಬಿಡಿಎ (ನಿವೇಶನ ಹಂಚಿಕೆ) (ತಿದ್ದುಪಡಿ) ನಿಯಮಗಳು– 2003ರ ಸೆಕ್ಷನ್ 11(ಎ) ಹಾಗೂ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಉಳಿದಿರುವ ನಿವೇಶನಗಳನ್ನು ಹರಾಜಿನ ಮೂಲಕವೇ ಮಾರಾಟ ಮಾಡುವಂತೆ ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್‌ನಲ್ಲಿ ನೀಡಿದ್ದ ಆದೇಶಗಳನ್ನು ಹಲವು ಪ್ರಕರಣಗಳಲ್ಲಿ ಉಲ್ಲಂಘಿಸಿರುವುದು ಪತ್ತೆಯಾಗಿದೆ ಎಂದು ಉಲ್ಲೇಖ ವರದಿಯಲ್ಲಿದೆ.

ಫಲಾನುಭವಿಗಳೊಂದಿಗೆ ಭೋಗ್ಯ ಮತ್ತು ಕ್ರಯದ ಕರಾರುಪತ್ರವನ್ನು ಮಾಡಿಕೊಂಡ ಬಳಿಕವೂ ಬದಲಿ ನಿವೇಶನ ಹಂಚಿಕೆಯ ಕೋರಿಕೆಗಳನ್ನು ಮಾನ್ಯ ಮಾಡಿರುವುದನ್ನು ವಿಚಾರಣಾ ಸಮಿತಿ ಗುರುತಿಸಿದೆ. ನಿವೇಶನಗಳ ಸ್ವಾಧೀನತಾ ಪತ್ರ ವಿತರಿಸಿದ ಬಳಿಕ ಬಿಡಿಎ ಮತ್ತು ಫಲಾನುಭವಿಯ ನಡುವಿನ ಸಂಬಂಧ ಕಡಿತವಾಗುತ್ತದೆ. ಆದರೆ, ಪ್ರಾಧಿಕಾರದ ನಿಯಮ ಉಲ್ಲಂಘಿಸಿ ಈ ರೀತಿಯ ಕೋರಿಕೆಗಳನ್ನು ಮಾನ್ಯ ಮಾಡಲಾಗಿದೆ ಎಂದು ಸಮಿತಿ ಹೇಳಿದೆ.

ಬಿಡಿಎ ಹಿಂದಿನ ಆಯುಕ್ತರಾಗಿದ್ದ ಐಎಎಸ್ ಅಧಿಕಾರಿ ಎಂ.ಬಿ. ರಾಜೇಶ್ ಗೌಡ, ಉಪ ಕಾರ್ಯದರ್ಶಿ ಡಾ.ಎನ್.ಎನ್. ಮಧು ಮತ್ತು ಕಾರ್ಯದರ್ಶಿ ಸಿ.ಎಲ್. ಆನಂದ್ ಈ ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ ಎಂದು ವರದಿಯಲ್ಲಿ ಹೆಸರಿಸಲಾಗಿದೆ.

ನಿವೇಶನ: ಯಾರಿಗೆ, ಎಲ್ಲಿ?

ಆರಗ ಜ್ಞಾನೇಂದ್ರ

ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ 'ಜಿ' ಕೋಟಾದಡಿ ಎಚ್‌ಎಸ್‌ಆರ್ ಮೂರನೇ ಹಂತದ ಬಡಾವಣೆಯಲ್ಲಿ 40X60 ಚದರ ಅಡಿ ವಿಸ್ತೀರ್ಣದ ನಿವೇಶನವನ್ನು 2006ರಲ್ಲಿ ಹಂಚಿಕೆ ಮಾಡಲಾಗಿತ್ತು. ಅವರ ಕೋರಿಕೆಯಂತೆ 50X80 ಚ.ಅಡಿ ವಿಸ್ತೀರ್ಣದ ಬದಲಿ ನಿವೇಶನವನ್ನು 2009ರಲ್ಲಿ ಹಂಚಿಕೆ ಮಾಡಲಾಗಿತ್ತು. ಕಡತದಲ್ಲಿ ಯಾವುದೇ ಕಾರಣ ಉಲ್ಲೇಖಿಸದೆ 2021ರ ಡಿಸೆಂಬರ್‌ನಲ್ಲಿ ಜ್ಞಾನೇಂದ್ರ ಅವರಿಗೆ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ 50X80 ಚ. ಅಡಿ ವಿಸ್ತೀರ್ಣದ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ. 'ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡುವುದು ಬದಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದ ನಿಯಮಗಳ ಸೆಕ್ಷನ್ 11(ಎ) ಉಲ್ಲಂಘನೆಯಾಗುತ್ತದೆ' ಎಂದು ಬಿಡಿಎ ಆಗಿನ ಉಪ ಕಾರ್ಯದರ್ಶಿ ಕಡತದಲ್ಲಿ ಆಕ್ಷೇಪಣೆ ದಾಖಲಿಸಿದ್ದರು.

ವೀರಣ್ಣ ಚರಂತಿಮಠ

ಬಾಗಲಕೋಟೆ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಬಿಜೆಪಿ ಶಾಸಕ ವೀರಣ್ಣ ಚರಂತಿಮಠ ಅವರಿಗೆ ಎಚ್‌ಎಸ್‌ಆರ್ ಮೂರನೇ ಹಂತದ ಬಡಾವಣೆಯಲ್ಲಿ 'ಜಿ' ಕೋಟಾದಡಿ 40X60 ಚ.ಅಡಿ ವಿಸ್ತೀರ್ಣದ ನಿವೇಶನವನ್ನು 2006ರ ಸೆಪ್ಟೆಂಬರ್‌ನಲ್ಲಿ ಹಂಚಿಕೆ ಮಾಡಲಾಗಿತ್ತು. ಆದರೆ, ಭೋಗ್ಯ ಮತ್ತು ಕ್ರಯಪತ್ರಕ್ಕೆ ಸಹಿ ಮಾಡಿರದ ಕಾರಣದಿಂದ 2011ರ ಏಪ್ರಿಲ್‌ನಲ್ಲಿನ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಕಾನೂನು ವ್ಯಾಜ್ಯದ ಕಾರಣ ನೀಡಿ ಅದೇ ಬಡಾವಣೆಯಲ್ಲಿ ಚರಂತಿಮಠ ಅವರಿಗೆ 2022ರ ಫೆಬ್ರುವರಿಯಲ್ಲಿ ಮತ್ತೊಂದು ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ. ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿದ್ದು, ಬದಲಿ ನಿವೇಶನ ಹಂಚಿಕೆ ಸಮಿತಿಯ ಗಮನಕ್ಕೂ ತಾರದೆ ಅಧಿಕಾರಿಗಳೇ ಹಂಚಿಕೆ ಮಾಡಿದ್ದಾರೆ.

ಬಸವರಾಜ ಪಾಟೀಲ ಸೇಡಂ

ಬಿಜೆಪಿ ಮುಖಂಡ, ರಾಜ್ಯಸಭೆಯ ಮಾಜಿ ಸದಸ್ಯ ಬಸವರಾಜ ಪಾಟೀಲ ಸೇಡಂ ಅವರಿಗೆ ಎಚ್‌ಎಸ್‌ಆರ್ ಮೂರನೇ ಹಂತದ ಬಡಾವಣೆಯಲ್ಲಿ 2010ರ ಜುಲೈನಲ್ಲಿ 50X80 ಅಳತೆಯ ನಿವೇಶವನ್ನು 'ಜಿ' ಕೋಟಾದಡಿ ಹಂಚಿಕೆ ಮಾಡಲಾಗಿತ್ತು. ನಂತರ 2022ರ ಫೆಬ್ರುವರಿಯಲ್ಲಿ ಅವರಿಗೆ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ತಮಗೆ ಹಂಚಿಕೆ ಮಾಡಿದ ನಿವೇಶನಕ್ಕೆ ಸಂಬಂಧಿಸಿದಂತೆ ಕಾನೂನು ವ್ಯಾಜ್ಯವಿದೆ ಎಂಬ ಕಾರಣ ಉಲ್ಲೇಖಿಸಿದ್ದ ಸೇಡಂ, ಮತ್ತೊಂದು ಬದಲಿ ನಿವೇಶನ ಹಂಚಿಕೆ ಮಾಡುವಂತೆ ಕೋರಿಕೆ ಸಲ್ಲಿಸಿದ್ದರು.

'ಈ ಹಿಂದೆ ಹಂಚಿಕೆ ಮಾಡಿದ್ದ ನಿವೇಶನ ಸಂಖ್ಯೆ 6ಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಾಜ್ಯವೂ ಬಾಕಿ ಇಲ್ಲ' ಎಂದು ಬಿಡಿಎ ಕಾನೂನು ಅಧಿಕಾರಿ ಅಭಿಪ್ರಾಯ ನೀಡಿದ್ದರು. ಬದಲಿ ನಿವೇಶನ ಹಂಚಿಕೆಯು ಸೆಕ್ಷನ್ 11(ಎ) ಉಲ್ಲಂಘನೆಯಾಗುತ್ತದೆ ಎಂದು ಉಪ ಕಾರ್ಯದರ್ಶಿ ಆಕ್ಷೇಪಿಸಿದ್ದರು. ಮೂಲೆ ನಿವೇಶನವನ್ನು ಹರಾಜಿನ ಮೂಲಕ ಮಾರಾಟ ಮಾಡುವಂತೆ ಎಂಜಿನಿಯರಿಂಗ್ ವಿಭಾಗ ಶಿಫಾರಸು ಮಾಡಿತ್ತು. ಈ ಎಲ್ಲವನ್ನೂ ಕಡೆಗಣಿಸಿದ ಬಿಡಿಎ ಆಡಳಿತ ಮಂಡಳಿಯು ಸೇಡಂ ಅವರಿಗೆ ದುಬಾರಿ ಬೆಲೆ ನಿವೇಶನವನ್ನು ಬದಲಿ ನಿವೇಶನದ ರೂಪದಲ್ಲಿ ಹಂಚಿಕೆ ಮಾಡಿತ್ತು.

ಅಭಯ ಪಾಟೀಲ



ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಬಿಜೆಪಿ ಶಾಸಕ ಅಭಯ ಪಾಟೀಲ ಅವರಿಗೆ 'ಜಿ' ಕೋಟಾದಡಿ ಜೆ.ಪಿ. ನಗರ ಎಂಟನೇ ಹಂತದಲ್ಲಿ 2007ರ ಸೆಪ್ಟೆಂಬರ್‌ನಲ್ಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಶಾಸಕರ ಕೋರಿಕೆಯಂತೆ 2010ರ ಏಪ್ರಿಲ್‌ನಲ್ಲಿ 50X80 ಚದರ ಅಡಿ ವಿಸ್ತೀರ್ಣದ ಬದಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ನಂತರ, 2011ರ ಏಪ್ರಿಲ್‌ನಲ್ಲಿ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ ಬೇರೊಂದು ಬದಲಿ ನಿವೇಶನ ಪಡೆದುಕೊಂಡಿದ್ದರು. ಅದೇ ತಿಂಗಳಲ್ಲಿ ಭೋಗ್ಯ ಮತ್ತು ಕರಾರು ಪತ್ರವನ್ನೂ ಮಾಡಿಕೊಳ್ಳಲಾಗಿತ್ತು. ನಂತರ 2016ರ ಮಾರ್ಚ್‌ನಲ್ಲಿ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲೇ ಇನ್ನೊಂದು ಬದಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಆ ನಿವೇಶನ ಬೃಹತ್ ಚರಂಡಿ ಪಕ್ಕ ಇದೆ ಎಂಬ ಕಾರಣ ನೀಡಿ ಶಾಸಕರು ಸಲ್ಲಿಸಿದ ಕೋರಿಕೆಯನ್ನು ಮಾನ್ಯ ಮಾಡಿದ ಬಿಡಿಎ, ಸುಪ್ರೀಂಕೋರ್ಟ್ ಆದೇಶ ಉಲ್ಲಂಘಿಸಿ ಬದಲಿ ನಿವೇಶನ ಹಂಚಿಕೆ ಮಾಡಿದೆ.

ಸಂಕ್ಷಿಪ್ತ ಸುದ್ದಿ

ಸುಲಿಗೆ: ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಆರೋಪಿ ಆಸೀಫ್ ಖಾನ್ ಅಲಿಯಾಸ್ ಪಿಸ್ತೂಲ್‌ನನ್ನು (38) ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

'ಸುಲಿಗೆ, ಜೀವ ಬೆದರಿಕೆ ಸೇರಿದಂತೆ 30 ಪ್ರಕರಣಗಳಲ್ಲಿ ಆರೋಪಿಯಾಗಿದ್ದ ಆಸೀಫ್ ಖಾನ್, ತಲೆಮರೆಸಿಕೊಂಡಿದ್ದ. ನ್ಯಾಯಾಲಯದ ವಿಚಾರಣೆಗೆ ಗೈರು-ಹಾಜರಾಗುತ್ತಿದ್ದ. ಇತ್ತೀಚೆಗೆ ಸುಳಿವು ಪತ್ತೆ ಮಾಡಿ ಈತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ, ಜಾಮೀನಿನ ಮೇಲೆ ಹೊರ ಬಂದಿದ್ದ. ನಂತರವೂ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ. ಈತನ ಬಂಧನಕ್ಕಾಗಿ ನ್ಯಾಯಾಲಯದ ವಾರಂಟ್‌ಗಳೂ ಜಾರಿಯಲ್ಲಿದ್ದವು' ಎಂದು ತಿಳಿಸಿದರು.

ವಿಶ್ವಕರ್ಮ ಡಾಟ್‌ಕಾಂ ಲೋಕಾರ್ಪಣೆ

ಬೆಂಗಳೂರು: 'ವಿಶ್ವಕರ್ಮ ಸಮಾಜವನ್ನು ಒಗ್ಗೂಡಿಸಲು ವಿಶ್ವಕರ್ಮ ಡಾಟ್‌ಕಾಂ ಮೊಬೈಲ್ ಆ್ಯಪ್ ಸಹಕಾರಿಯಾಗಲಿದೆ' ಎಂದು ವಿಶ್ವಕರ್ಮ ನಿಗಮದ ಮಾಜಿ ಅಧ್ಯಕ್ಷ ಬಾಬು ಪತ್ತಾರ್ ಹೇಳಿದರು.

'ವಿಶ್ವಕರ್ಮ ಸಮಾಜದವರು ಭಾರತೀಯ ಪರಂಪರೆಯಲ್ಲಿ ಚಿನ್ನ, ಬೆಳ್ಳಿ, ಆಭರಣಗಳ ತಯಾರಿಕೆಯಲ್ಲಿ ನಿಪುಣರು. ಸಮುದಾಯದ ಜನಗಣತಿ, ಆರ್ಥಿಕ ಬೆಳವಣಿಗೆ, ಕುಲ ಕಸುಬುಗಳ ಮಾಹಿತಿ ಈ ಆನ್‌ಲೈನ್ ವೇದಿಕೆಯಲ್ಲಿ ದೊರೆಯಲಿದೆ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿಶ್ವಕರ್ಮ ಡಾಟ್‌ಕಾಂ ಸಂಸ್ಥಾಪಕ ಶ್ರೀಧರ್ ಆಚಾರ್ ಮಾತನಾಡಿ, 'ಈ ಆ್ಯಪ್ ಮೂಲಕ ಜನರು ತಮಗೆ ಬೇಕಾದ ತಾಂತ್ರಿಕ ಶಿಲ್ಪಿಗಳು, ಬಡಗಿ ಮತ್ತು ಚಿನ್ನ-ಬೆಳ್ಳಿ ಕೆಲಸಗಾರರನ್ನು ನೇರವಾಗಿ ಸಂಪರ್ಕಿಸಬಹುದು' ಎಂದು ಮಾಹಿತಿ ನೀಡಿದರು.

ಗ್ಯಾಸ್ಟ್ರೊಎಂಟ್ರಾಲಜಿ ಸಂಸ್ಥೆ: 8 ತಿಂಗಳಲ್ಲಿ 30 ಸಾವಿರ ಮಂದಿಗೆ ಚಿಕಿತ್ಸೆ

ಅಗ್ಗದ ದರದಲ್ಲಿ ದುಬಾರಿ ಕಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಆಸ್ಪತ್ರೆಗಳಲ್ಲಿ ₹26 ಲಕ್ಷದಿಂದ ₹40 ಲಕ್ಷ ವೆಚ್ಚವಾಗುವ ಯಕೃತ್ತು ಕಸಿಯನ್ನು 'ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್' ಸಂಸ್ಥೆಯು ಅಗ್ಗದ ದರದಲ್ಲಿ ನಡೆಸಲಾರಂಭಿಸಿದೆ.

ದಾನಿಗಳ ನೆರವಿನಿಂದ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ತಲೆಯೆತ್ತಿರುವ ಈ ಸಂಸ್ಥೆಯು, 120 ಹಾಸಿಗೆಗಳನ್ನು ಒಳಗೊಂಡಿದೆ. ಉದರ ಸಂಬಂಧಿ ಸಮಸ್ಯೆಗಳು ಹಾಗೂ ಕಸಿಗಳಿಗೆ ಒಂದೇ ಸೂರಿನಡಿ ಸಮಗ್ರ ಪರೀಕ್ಷೆಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದಾಗಿ ವಿವಿಧ ಪರೀಕ್ಷೆಗಳಿಗೆ ರೋಗಿಗಳು ಅಲೆದಾಡುವುದು ತಪ್ಪಿದೆ. 8 ತಿಂಗಳಲ್ಲಿಯೇ ಉದರ ಸಂಬಂಧಿ ಸಮಸ್ಯೆಗಳಿಗೆ 30 ಸಾವಿರ ಮಂದಿ ಇಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಸಾರ್ವಜನಿಕ ವಲಯದಲ್ಲಿ ಕಾರ್ಯ-ನಿರ್ವಹಿಸುತ್ತಿರುವ ದೇಶದ ಮೊದಲ ಉದರ ಸಂಬಂಧಿ ಸಂಸ್ಥೆ ಇದಾಗಿದೆ. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ದಾನಿಗಳು ಸಂಸ್ಥೆ ನಿರ್ಮಾಣಕ್ಕೆ ₹ 22.5 ಕೋಟಿ ಒದಗಿಸಿದ್ದರು. 2021ರ ಅಕ್ಟೋಬರ್‌ನಿಂದ ಸಂಸ್ಥೆ ಕಾರ್ಯನಿ-ರ್ವಹಿಸುತ್ತಿದ್ದು, ಹೃದಯ, ಮೂತ್ರಪಿಂಡ ಸೇರಿ ವಿವಿಧ ಅಂಗಾಂಗಗಳ ಕಸಿಯನ್ನು ಇಲ್ಲಿ ನಡೆಸಲಾಗುತ್ತದೆ. ಸಂಸ್ಥೆಯಲ್ಲಿ ಉದರ, ಕುರುಳು ಸಂಬಂಧಿ ಕ್ಯಾನ್ಸರ್‌ಗಳಿಗೂ ಚಿಕಿತ್ಸೆ ಒದಗಿಸಲಾಗುತ್ತದೆ. ಸ್ವತಂತ್ರ ಕೀಮೋಥೆರಪಿ ಘಟಕವನ್ನೂ ಹೊಂದಿದೆ. ರಾಜ್ಯ ಅಂಗಾಂಗ ಕಸಿ ಯೋಜನೆಯಡಿ ₹ 4 ಲಕ್ಷದಲ್ಲಿ ಕಸಿ ಮಾಡಲಾಗುತ್ತಿದೆ.

ಯಕೃತ್ತು ಕಸಿ ಕ್ಲಿನಿಕ್: ಯಕೃತ್ತು ಕಸಿಗೆ ರೋಗಿಗಳನ್ನು ಮೌಲ್ಯಮಾಪನ ಮಾಡಲು ಯಕೃತ್ತು ಕಸಿ ಕ್ಲಿನಿಕ್‌ಗಳನ್ನು ಸಂಸ್ಥೆ ಸ್ಥಾಪಿಸಿದೆ. ಯಕೃತ್ತಿನ ಕಸಿಗೆ 500ಕ್ಕೂ ಅಧಿಕ ರೋಗಿಗಳನ್ನು ಮೌಲ್ಯಮಾಪನ ಮಾಡಲಾಗಿದೆ. 6,500ಕ್ಕೂ ಅಧಿಕ ಶಸ್ತ್ರಚಿಕಿತ್ಸೆ, ಎಂಡೋಸ್ಕೋಪಿ ನಡೆಸಲಾಗಿದೆ.

'ಸಂಸ್ಥೆಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಕಾರ್ಪೊರೇಟ್ ಆಸ್ಪತ್ರೆಗಳ ಮಾದರಿಯಲ್ಲಿ ಸೇವೆಯನ್ನು ಒದಗಿ-ಸಲಾಗುತ್ತಿದೆ. ಈ ಮೊದಲು ಉದರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿವಿಧ ಪರೀಕ್ಷೆಗಳಿಗೆ ರೋಗಿಗಳು ಅಲೆದಾಟ ನಡೆಸಬೇಕಿತ್ತು. ನಮ್ಮಲ್ಲಿ ರೋಗಿ ಒಮ್ಮೆ ದಾಖಲಾದರೆ ಇಲ್ಲಿಯೇ ಎಲ್ಲ ರೀತಿಯ ಪರೀಕ್ಷೆಗಳನ್ನು ನಡೆಸಿ, ಶಸ್ತ್ರಚಿಕಿತ್ಸೆಗಳ-ನ್ನೂ ನಡೆಸಲಾಗುತ್ತದೆ' ಎಂದು ಸಂಸ್ಥೆಯ ನಿರ್ದೇಶಕ ಡಾ. ನಾಗೇಶ್ ಎನ್.ಎಸ್. ತಿಳಿಸಿದರು.

ಯಕೃತ್ತು ಕಸಿಯು ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ. ಇದನ್ನು ರಾಜ್ಯ ಸರ್ಕಾರದ ಯೋಜನೆಗಳಡಿ ಬಡ ರೋಗಿಗಳಿಗೆ ಅಗ್ಗದ ದರದಲ್ಲಿ ಒದಗಿಸುತ್ತಿದ್ದೇವೆ.

ಡಾ. ನಾಗೇಶ್ ಎನ್.ಎಸ್.,
ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ ನಿರ್ದೇಶಕ

ರೋಗಿಗಳಿಗೆ ಉಚಿತ ಸೇವೆ

'ಉದರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಎಲ್ಲ ರೀತಿಯ ಚಿಕಿತ್ಸೆ ನೀಡಲಾಗುತ್ತದೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಕರುಳು, ಅನ್ನನಾಳ, ಹೊಟ್ಟೆ, ಜಠರ, ಯಕೃತ್ತು ಸೇರಿ ವಿವಿಧ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಯಕೃತ್ತು ಕಸಿಗೆ ಕಾಯುತ್ತಿರುವ ಪ್ರತಿ 30 ಮಂದಿಯಲ್ಲಿ ಒಬ್ಬರಿಗೆ ಮಾತ್ರ ಹೊಂದಾಣಿಕೆಯಾಗುವ ಯಕೃತ್ತು ಲಭ್ಯ-ವಾಗುತ್ತದೆ. 29 ಮಂದಿ ಕಸಿಗೆ ಕಾಯಬೇಕಾಗುತ್ತದೆ. ಅಂಗಾಂಗ ಸಿಗುವವರೆಗೆ ನಿಯಮಿತವಾಗಿ ಆಸ್ಪತ್ರೆ ದಾಖಲಾಗಿ, ಚಿಕಿತ್ಸೆ ಪಡೆದುಕೊಳ್ಳಬೇಕು. ಈ ಅವಧಿಯಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಬೇಕಾಗುತ್ತದೆ. ನಮ್ಮಲ್ಲಿ ಕಸಿ ನಡೆಸುವವರೆಗೂ ಉಚಿತ ಸೇವೆ ದೊರೆಯಲಿದೆ' ಎಂದು ಡಾ. ನಾಗೇಶ್ ಎನ್.ಎಸ್. ಅವರು ತಿಳಿಸಿದರು.

ಮುಖ್ಯಾಂಶಗಳು

- ಖಾಸಗಿ ಆಸ್ಪತ್ರೆಗಳಲ್ಲಿ ಈ ಚಿಕಿತ್ಸೆಗೆ ₹26 ಲಕ್ಷದಿಂದ ₹40 ಲಕ್ಷ ವೆಚ್ಚ
- ₹ 4 ಲಕ್ಷದಲ್ಲಿ ಅಂಗಾಂಗ ಕಸಿ

ಮಟ್ಕಾ: ಆರೋಪಿಗಳ ಬಂಧನ

ಬೆಂಗಳೂರು: ಎಸ್.ಜೆ. ಪಾರ್ಕ್ ಠಾಣೆ ವ್ಯಾಪ್ತಿಯ ಚಹಾ ಅಂಗಡಿಯೊಂದನ್ನು ಅಡ್ಡೆ ಮಾಡಿಕೊಂಡು ಮಟ್ಕಾ ನಡೆಸುತ್ತಿದ್ದ ನಾಲ್ವರು ಆರೋಪಿಗಳನ್ನು ಕೇಂದ್ರ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

'ಸಲೀಂ ಅಲಿಯಾಸ್ ಪಾಷಾ, ಅತಾವುಲ್ಲಾ ರೆಹಮಾನ್ ಅಲಿಯಾಸ್ ಬಾಬು, ಸಲೀಂ ಹಾಗೂ ಸಮೀರ್ ಉರ್ ರೆಹಮಾನ್ ಬಂಧಿತರು. ಇನ್ನೊಬ್ಬ ಆರೋಪಿ ಆರ್.ಕೆ. ಸೆಂದಿಲ್ ಅಲಿಯಾಸ್ ಮಾರ್ಕೆಟ್ ಎಂಬಾತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಗಳಿಂದ ₹ 9 ಸಾವಿರ ನಗದು, ಮೂರು ಮೊಬೈಲ್ ಹಾಗೂ ಮಟ್ಕಾ ಚೀಟಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ಚಹಾ ಅಂಗಡಿಯಲ್ಲಿ ಕುಳಿತು-ಕೊಳ್ಳುತ್ತಿದ್ದ ಆರೋಪಿಗಳು, ಒಸಿ (ಒಪನ್ ಹಾಗೂ ಕ್ಲೋಸ್) ಮಟ್ಕಾ ಬರೆದುಕೊಳ್ಳುತ್ತಿದ್ದರು. ಮಾರ್ಕೆಟ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರು ಹಾಗೂ ಇತರರು ಆರೋಪಿಗಳ ಬಳಿ ಬಂದು ಮಟ್ಕಾ ಆಡುತ್ತಿದ್ದರು. ಕೃತ್ಯದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಯಿತು' ಎಂದು ಹೇಳಿದರು.

ನಗರದ ಪ್ರಮುಖ ವೃತ್ತಗಳ ಬಳಿ ಫಲಕ ಅಳವಡಿಕೆ

ಹೃದಯ ಚಿಕಿತ್ಸೆಗೆ ಕ್ಯೂಆರ್ ಕೋಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಹೃದಯ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆಗಳ ಸಮೂಹವು ಹೃದಯದ ತುರ್ತು ಚಿಕಿತ್ಸೆಗೆ ಕ್ಯೂಆರ್ ಕೋಡ್ ಬಿಡುಗಡೆ ಮಾಡಿದ್ದು, ನಗರದ ಪ್ರಮುಖ ವೃತ್ತಗಳ ಬಳಿ ವಿಶೇಷ ವಿನ್ಯಾಸದ ಫಲಕಗಳನ್ನು ಅಳವಡಿಸಲಾಗಿದೆ.

ಬಿಬಿಎಂಪಿ ಹಾಗೂ ಬೆಂಗಳೂರು ನಗರ ಸಂಚಾರ ಪೊಲೀಸರ ಸಹಯೋಗದಲ್ಲಿ ಈ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಹೃದಯದ ಸಮಸ್ಯೆ ಕಾಣಿಸಿಕೊಂಡಾಗ ಪ್ರಾಥಮಿಕ ಅಥವಾ ತುರ್ತು ಚಿಕಿತ್ಸೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವೈದ್ಯಕೀಯ ಸೇವೆ ಪಡೆದುಕೊಳ್ಳಬಹುದಾಗಿದೆ. ವ್ಯಕ್ತಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುತ್ತಿ-ದ್ದಂತೆಯೇ ತುರ್ತು ಸಂಖ್ಯೆಗೆ ಸಂಪರ್ಕ ಕಲ್ಪಿಸಿ, ಆಂಬುಲೆನ್ಸ್ ಸೇವೆಗೆ ನಿರ್ದೇಶಿಸ-ಲಾಗುತ್ತದೆ ಎಂದು ಆಸ್ಪತ್ರೆ ತಿಳಿಸಿದೆ.

ನಗರದಲ್ಲಿ ಶನಿವಾರ ಆಸ್ಪತ್ರೆ ಆಯೋಜಿಸಿದ 'ಸಿಪಿಆರ್' (ಕಾರ್ಡಿಯೋ ಪಲ್ಮನರಿ ರೆಸಸಿಟೇಶನ್) ತರಬೇತಿ ಕಾರ್ಯಕ್ರಮದಲ್ಲಿ ನೂರಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು. ಹೃದಯ ಸ್ತಂಭನಕ್ಕೆ ಒಳಗಾದವರಿಗೆ ತುರ್ತು ಚಿಕಿತ್ಸೆ ಒದಗಿಸುವಿಕೆಗೆ ಸಂಬಂಧಿಸಿದಂತೆ ತರಬೇತಿ ನೀಡಲಾಯಿತು. ಸಿಪಿಆರ್ ಕ್ರಮದ ಬಗ್ಗೆ ತಿಳಿಸುವ ಕ್ಯೂಆರ್ ಕೋಡ್ ಅನ್ನು ಆಸ್ಪತ್ರೆ ಬಿಡುಗಡೆ ಮಾಡಿತು.

'ಸಿಪಿಆರ್ ವಿಧಾನದಿಂದ ಹೃದಯ ಮತ್ತು ಶ್ವಾಸಕೋಶಗಳ ಪುನರುಜ್ಜೀವನಗೊಳಿಸಿ, ವ್ಯಕ್ತಿಯ ಜೀವ ಉಳಿಸಲು ಸಾಧ್ಯ. ಇದನ್ನು ಯಾವ ರೀತಿ ಬಳಸಬಹುದು ಎಂಬುದು ಬಹುತೇಕರಿಗೆ ತಿಳಿದಿಲ್ಲ. ತುರ್ತು ಸಂದರ್ಭದಲ್ಲಿ ತ್ವರಿತವಾಗಿ ರೋಗಿಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲು ಕ್ಯೂಆರ್ ಕೋಡ್‌ಗಳನ್ನು ರೂಪಿಸಲಾಗಿದೆ' ಎಂದು ಆಸ್ಪತ್ರೆಯ ಪ್ರಾದೇಶಿಕ ಮುಖ್ಯ ಕಾರ್ಯಾಚರಣೆ ಅಧಿಕಾರಿ ದೀಪಕ್ ವೇಣುಗೋಪಾಲನ್ ತಿಳಿಸಿದರು.

'ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ವ್ಯಕ್ತಿಗೆ ತುರ್ತು ಸಂಖ್ಯೆಗಳನ್ನು ನೆನಪಿ-ನಲ್ಲಿಟ್ಟುಕೊಳ್ಳುವುದು ಕಷ್ಟವಾಗಲಿದೆ. ಆದ್ದರಿಂದ ನಗರದ ಎಲ್ಲ ಸಿಗ್ನಲ್‌ಗಳಲ್ಲಿ ಕ್ಯೂಆರ್ ಕೋಡ್ ಫಲಕ ಅಳವಡಿಸ-ಲಾಗುವುದು' ಎಂದು ಹೇಳಿದರು.

ಕ್ಯೂಆರ್ ಕೋಡ್ ಹೊಂದಿರುವ ಫಲಕವನ್ನು ವೃತ್ತವೊಂದರಲ್ಲಿ ಅಳವಡಿಸಿರುವುದು

ಆಂಬುಲೆನ್ಸ್ ಸೇವೆ, ಚಿಕಿತ್ಸೆಗೆ ಶುಲ್ಕ

'ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದ ಬಳಿಕ ಆಂಬುಲೆನ್ಸ್ ಸೇವೆಗೆ ಸಂಬಂಧಿಸಿದ ದೂರವಾಣಿ ಸಂಖ್ಯೆ ಹಾಗೂ ಆಸ್ಪತ್ರೆಯ ವಿವರವನ್ನು ಕಳಿಸಲಾಗುತ್ತದೆ. ಸೇವೆ ಅಗತ್ಯ ಇರುವ ವ್ಯಕ್ತಿ ದೂರವಾಣಿ ಸಂಖ್ಯೆಗೆ ಕರೆ ಮಾಡಬೇಕಾಗುತ್ತ-ದೆ. ಆಂಬುಲೆನ್ಸ್ ಸೇವೆ ಹಾಗೂ ಆಸ್ಪತ್ರೆಯಲ್ಲಿನ ಚಿಕಿತ್ಸೆಗೆ ಪ್ರತ್ಯೇಕವಾಗಿ ಹಣ ಪಾವತಿಸಬೇಕು. ಮಣಿಪಾಲ್ ಆಸ್ಪತ್ರೆಗಳ ಸಮೂಹವು ನಗರದಲ್ಲಿ ಏಳು ಘಟಕಗಳನ್ನು ಹೊಂದಿದ್ದು, ರೋಗಿಯನ್ನು ಹತ್ತಿರದ ಘಟಕಕ್ಕೆ ಕರೆದೊಯ್ಯಲಾಗುತ್ತದೆ' ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದರು.

'ಸ್ಮೈಲ್ ವಾಕ್'

ವಿಶ್ವ ಹಿರಿಯರ ದಿನಾಚರಣೆ ಪ್ರಯುಕ್ತ ಇಂಡಿಯನ್ ಪ್ರೋಸ್ಥೋಡೋಂಟಿಕ್ ಸೊಸೈಟಿ (ಐಪಿಎಸ್) ನಗರದಲ್ಲಿ ಶನಿವಾರ ಆಯೋಜಿಸಿದ 'ಸ್ಮೈಲ್ ವಾಕ್' ಜಾಗೃತಿ ಅಭಿಯಾನದಲ್ಲಿ ಐಪಿಎಸ್ ಅಧ್ಯಕ್ಷ ಡಾ.ವಿ. ರಂಗರಾಜನ್, ಸಹಕಾರ್ಯದರ್ಶಿ ಶೇಷಾ ರೆಡ್ಡಿ, ಬೆಂಗಳೂರು ಘಟಕದ ಅಧ್ಯಕ್ಷ ಪಿ.ಸಿ. ಜೇಕಬ್, ಸಹಕಾರ್ಯದರ್ಶಿ ಪಿ. ರೋಷನ್ ಕುಮಾರ್ ಹಾಗೂ ಐಪಿಎಸ್ ಸದಸ್ಯರು ದಂತ ಆರೋಗ್ಯಕ್ಕೆ ಸಂಬಂಧಿಸಿದಂತೆ ಉಚಿತ ಸಮಾಲೋಚನೆ ನಡೆಸಿದರು

ಗುದದ್ವಾರದಲ್ಲಿ ₹36.97 ಲಕ್ಷ ಮೌಲ್ಯದ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುದದ್ವಾರದಲ್ಲಿ ಚಿನ್ನ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ ಮೂವರು ಪ್ರಯಾಣಿಕರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

'ದುಬೈನಿಂದ ಇಕೆ- 568 ವಿಮಾನದಲ್ಲಿ ಸೆ. 30ರಂದು ಬೆಂಗಳೂರಿನ ನಿಲ್ದಾಣಕ್ಕೆ ಬಂದಿಳಿದಿದ್ದ ಮೂವರು ಪ್ರಯಾಣಿಕರ ಬಳಿ ₹ 36.97 ಲಕ್ಷ ಮೌಲ್ಯದ 729 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ವಿಮಾನದ ಮೂಲಕ ಅಕ್ರಮವಾಗಿ ಚಿನ್ನ ಸಾಗಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಮೂವರು ಪ್ರಯಾಣಿಕರನ್ನು ತಪಾಸಣೆ ನಡೆಸಿದಾಗ ಯಾವುದೇ ಚಿನ್ನ ಪತ್ತೆಯಾಗಿರಲಿಲ್ಲ. ಆದರೆ, ಅವರ ನಡೆಯಿಂದ ಅನುಮಾನ ಹೆಚ್ಚಾಗಿತ್ತು.'

'ಮೂವರನ್ನೂ ಪ್ರತ್ಯೇಕ ಕೊಠಡಿಗೆ ಕರೆದೊಯ್ದು ಪುನಃ ತಪಾಸಣೆಗೆ ಒಳಪ-ಡಿಸಲಾಯಿತು. ಅವರ ಗುದದ್ವಾರ ದಲ್ಲಿ ಚಿನ್ನ ಬಚ್ಚಿಟ್ಟುಕೊಂಡಿದ್ದು ಗೊತ್ತಾಯಿತು. ವೈದ್ಯರ ಸಹಾಯದಿಂದ ಚಿನ್ನವನ್ನು ಹೊರಗೆ ತೆಗೆಸಲಾಯಿತು. ಕಪ್ಪು ಬಣ್ಣದ ಸಣ್ಣ ರಬ್ಬರ್ ಚೀಲದೊಳಗೆ ಚಿನ್ನ ಇರಿಸಲಾಗಿತ್ತು. ಅದೇ ಚೀಲವನ್ನು ಆರೋಪಿಗಳು ಗುದದ್ವಾರದಲ್ಲಿ ಇರಿಸಿಕೊಂಡಿದ್ದರು' ಎಂದು ತಿಳಿಸಿವೆ.

₹ 22.16 ಲಕ್ಷ ಮೌಲ್ಯದ ಇ-ಸಿಗರೇಟ್: 'ಮೂವರು ಇ-ಸಿಗರೇಟ್ ಸಹ ಸಾಗಿಸುತ್ತಿದ್ದರು. ಅವರ ಬ್ಯಾಗ್‌ನಲ್ಲಿದ್ದ ₹22.16 ಲಕ್ಷ ಮೌಲ್ಯದ ಇ-ಸಿಗರೇಟ್ ಜಪ್ತಿ ಮಾಡಲಾಗಿದೆ' ಎಂದು ಹೇಳಿವೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿರುವ ಮೂವರು ಪ್ರಯಾಣಿಕರಿಂದ ಜಪ್ತಿ ಮಾಡಲಾಗಿರುವ ಚಿನ್ನ

ನಗರದಲ್ಲಿ ಇಂದು

ಕ್ಯಾನ್ಸರ್ ರೋಗಿಗಳ ನೆರವಿಗಾಗಿ ಮ್ಯಾರಥಾನ್: ಆಯೋಜನೆ: ರೋಟರಿ, ಕರ್ನಾಟಕ ಕ್ಯಾನ್ಸರ್ ಸೊಸೈಟಿ, ಸ್ಥಳ: ಎನ್‌ಟಿಐ ಮೈದಾನ, ವಿದ್ಯಾರಣ್ಯಪುರ, ಬೆಳಿಗ್ಗೆ 6

'9ನೇ ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಪದ್ಮಿನಿ ನಾಗರಾಜು, ಪ್ರಶಸ್ತಿ ಪುರಸ್ಕೃತರು: ಎಚ್.ಎಸ್. ವೆಂಕಟೇಶಮೂರ್ತಿ, ಪ್ರಶಸ್ತಿ ಪ್ರದಾನ: ಎಂ.ಗೋಪಾಲಕೃಷ್ಣ ಜೋಶಿ, ವಿ.ಜೆ. ಕೆ. ನಾಯರ್, ಅತಿಥಿಗಳು: ಪ್ರತಿಮಾ ಜಗದೀಶ್, ಉಪಸ್ಥಿತಿ: ಪ್ರಶಾಂತ್ ಕುಮಾರ್ ಶೆಟ್ಟಿ, ಆಯೋಜನೆ: ಮೈಕೊ ಕನ್ನಡ ಬಳಗ, ಸ್ಥಳ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ (ಎಸ್.ಜೆ.ಆರ್.ಐ.ಎಸ್), ಆನಂದರಾವ್ ವೃತ್ತ, ಬೆಳಿಗ್ಗೆ 9



ವೆಂಕಟೇಶ ಮೂರ್ತಿ

'68ನೇ ವನ್ಯಜೀವಿ ಸಪ್ತಾಹ' ವನ್ಯಜೀವಿಗಳ ಸಂರಕ್ಷಣೆಗಾಗಿ ನಡಿಗೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಪಿ.ಸಿ. ಮೋಹನ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಜಾವೇದ್ ಅಖ್ತರ್, ರಾಜ್ ಕಿಶೋರ್ ಸಿಂಗ್, ಆಯೋಜನೆ: ಕರ್ನಾಟಕ ಅರಣ್ಯ ಇಲಾಖೆ, ಕಬ್ಬನ್ ಪಾರ್ಕ್ (ಹೈಕೋರ್ಟ್ ಗೇಟ್ ನಂ.02 ಮತ್ತು 03) ಮುಂಭಾಗದಿಂದ ಲಾಲ್‌ಬಾಗ್‌ವರೆಗೆ, ಸ್ಥಳ: ವಿಧಾನ ಸೌಧ ಬೆಳಿಗ್ಗೆ 10.20

ಇಂಟರ್‌ನ್ಯಾಷನಲ್ ವೀಕ್ ಆಫ್ ದಿ ಡೆಫ್ ಪೀಪಲ್: ಅತಿಥಿಗಳು: ಎಸ್. ನಾಗರಾಜ, ಕಾರ್ತಿಕ್.ಎಸ್., ಆಯೋಜನೆ: ಕರ್ನಾಟಕ ಡೆಫ್ ವುಮೆನ್ ಫೌಂಡೇಷನ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ವಾಡಿಯಾ ಹಾಲ್, ಬಸವನಗುಡಿ, ಬೆಳಿಗ್ಗೆ 10.30

ರಾಜ್ಯ ಮಟ್ಟದ ಕಿತ್ತೂರು ಉತ್ಸವಕ್ಕೆ ಪೂರ್ವಭಾವಿಯಾಗಿ ಕಿತ್ತೂರು ಚೆನ್ನಮ್ಮ ವಿಜಯ ಜ್ಯೋತಿ ಯಾತ್ರೆಗೆ ಚಾಲನೆ: ಬಸವರಾಜ ಬೊಮ್ಮಾಯಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

ಪ್ರತಿಭಾ ನಂದಕುಮಾರ್ ಅನುವಾದಿಸಿದ, ಮಣಿ ರಾವ್ ಅವರ 'ಬೇಗ ಪ್ರೀತ್ಸು ನನ್ನ' ದ್ವಿಭಾಷಾ ಕವನ ಸಂಕಲನದ ಚರ್ಚೆ: ಭಾಗವಹಿಸುವವರು: ಪ್ರತಿಭಾ ನಂದಕುಮಾರ್, ಮಣಿರಾವ್, ಸ್ಥಳ: ರಂಗಶಂಕರ, ಬೆಳಿಗ್ಗೆ 11.30

ಶಂಕರ ಮಹಾದೇವ ಬಿದರಿ ಅವರ ಆತ್ಮಚರಿತ್ರೆ 'ಸತ್ಯಮೇವ ಜಯತೇ' ಪುಸ್ತಕ ಬಿಡುಗಡೆ: ಉದ್ಘಾಟನೆ: ಜಗದೀಶ್ ಶೆಟ್ಟರ್, ಅಧ್ಯಕ್ಷತೆ: ಅರವಿಂದ ಜತ್ತಿ, ಅತಿಥಿಗಳು: ಅನಿಲ್ ವಿನಾಯಕ ಗೋಕಾಕ್, ಗುರುಲಿಂಗ ಕಾಪ್ಸೆ, ವಿಶ್ವೇಶ್ವರ ಭಟ್, ಉಪಸ್ಥಿತಿ: ಶಂಕರ ಮಹಾದೇವ ಬಿದರಿ, ಆಯೋಜನೆ: ಬಸವ ಸಮಿತಿ, ಸ್ಥಳ: ಅನುಭವ ಮಂಟಪ,ಬಸವ ಸಮಿತಿ, ಬಸವ ಭವನ, ಮಧ್ಯಾಹ್ನ 3

ಕೂಚಿಪುಡಿ ರಂಗಪ್ರವೇಶ: ಪ್ರಸ್ತುತಿ: ಸಂಜನಾ ಪ್ರಸಾದ್.ಬಿ.ಕೆ., ಆಯೋಜನೆ: ಲಾಸ್ಯ ಲಹರಿ ಸಾಂಸ್ಕೃತಿಕ ಕಲಾ ಸಂಸ್ಥೆ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 6

ಗಾಂಧಿ ಜಯಂತಿ ವಿಶೇಷ ಕಾರ್ಯಕ್ರಮಗಳು:

ಗಾಂಧಿ ಜಯಂತಿ ಆಚರಣೆ: ಅಧ್ಯಕ್ಷತೆ: ಎ.ಎಚ್. ರಾಮರಾವ್, ಅತಿಥಿಗಳು: ಆರ್.ಜಿ. ಹಳ್ಳಿ ನಾಗರಾಜ, ಎಸ್.ಎನ್. ನಾಗರಾಜ ರೆಡ್ಡಿ, ಪಿ. ಸದಾನಂದ ಮಯ್ಯ, ಆಯೋಜನೆ: ನ್ಯಾಷನಲ್ ಕಾಲೇಜು, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 9

ಗಾಂಧಿ ಜಯಂತಿ: ಅತಿಥಿಗಳು: ತಲಕಾಡು ಚಿಕ್ಕರಂಗೇಗೌಡ, ಬಿ.ಎಂ. ಪಟೇಲ್ ಪಾಂಡು, ಅಧ್ಯಕ್ಷತೆ: ಕಾಮರಾಜು, ಆಯೋಜನೆ ಮತ್ತು ಸ್ಥಳ: ಶಾರದಾ ವಿದ್ಯಾಪೀಠ, ಬ್ಯಾಟರಾಯನಪುರ, ಬೆಳಿಗ್ಗೆ 9

ಗಾಂಧಿ ಜಯಂತಿ: ಕವಿಗೋಷ್ಠಿ ಮತ್ತು ಗಾಯನದ ಅಧ್ಯಕ್ಷತೆ: ಎಂ. ಶಿವಸ್ವಾಮಿ, ಭರತನಾಟ್ಯ ಪ್ರಸ್ತುತಿ: ಅನುಪಮಾ ಭೂಷಣ, ದೀಪ್ತಿ, ಪ್ರಶಸ್ತಿ ಪ್ರದಾನ ಸಮಾರಂಭ, ಆಯೋಜನೆ: ನವಭಾರತ ಉದಯ ಪ್ರತಿಷ್ಠಾನ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ ಕಲಾಗ್ರಾಮ, ಜ್ಞಾನಭಾರತಿ, ಬೆಳಿಗ್ಗೆ 9ರಿಂದ 2ರವರೆಗೆ

ಗಾಂಧಿ ಜಯಂತಿ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ: ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, 'ಮುಖ್ಯಮಂತ್ರಿ' ಚಂದ್ರು, ಪರಿಮಳ ಎಸ್. ಮರೂರು, ಡಾ.ಸುರೇಶ್ ಶಾಸ್ತ್ರಿ, ಮಂಜುನಾಥ ಆರಾಧ್ಯ, ನಾ.ಸೋಮೇಶ್ವರ, ಆಯೋಜನೆ: ಬೆಂಗಳೂರು ರಂಗಕಲಾವಿದರ ವಿವಿಧೋದ್ದೇಶ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9.30

ಗಾಂಧಿ ಜಯಂತಿ ಮತ್ತು 'ಫಿಟ್ ಇಂಡಿಯಾ ರನ್'ಗೆ ಚಾಲನೆ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಸ್ಥಳ: ವಿಧಾನಸೌಧ ಮತ್ತು ವಿಕಾಸ ಸೌಧದ ನಡುವೆ, ಬೆಳಿಗ್ಗೆ 10

ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಸ್ಥಳ: ನೈರುತ್ಯ ದಿಕ್ಕು, ವಿಧಾನಸೌಧ ಆವರಣ, ಬೆಳಿಗ್ಗೆ 10.10

ಗಾಂಧಿ ಜಯಂತಿ ಅಂಗವಾಗಿ ಮೊರಾರ್ಜಿ ದೇಸಾಯಿ ವಸತಿಶಾಲೆ ಮಕ್ಕಳಿಗೆ ಉಚಿತ ಕ್ಷೌರ ಸೇವೆ: ಉದ್ಘಾಟನೆ: ನೆ.ಭ. ರಾಮಲಿಂಗ ಶೆಟ್ಟಿ, ಅಧ್ಯಕ್ಷತೆ: ವರದಾ ಶ್ರೀನಿವಾಸ್, ಅತಿಥಿಗಳು: ಜ್ಯೋತಿ ಸಂಗಯ್ಯ, ಆಯೋಜನೆ: ಅಣ್ಣಾ ಹಜಾರೆ ಸಮಾಜ ಸೇವಾ ಟ್ರಸ್ಟ್, ಸ್ಥಳ: ಮೊರಾರ್ಜಿ ದೇಸಾಯಿ ವಸತಿಶಾಲೆ, ಚಾಮರಾಜಪೇಟೆ, ಬೆಳಿಗ್ಗೆ 10

ಗಾಂಧಿ ಜಯಂತಿ: ರಾಷ್ಟ್ರಧ್ವಜಾರೋಹಣ, ಧ್ವಜದಾನ, ಆಯೋಜನೆ: ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ, ಲೋಕಮಾನ್ಯ ಸಂಘ, ಕರ್ನಾಟಕ ಲೇಖಕರ ಸಂಘ–ಫೇಮಸ್ ಏಜೆನ್ಸೀಸ್, ಸ್ಥಳ: ಸಜ್ಜನ್‌ರಾವ್ ವೃತ್ತ, ವಿಶ್ವೇಶ್ವರಪುರ, ಬೆಳಿಗ್ಗೆ 10

ಗಾಂಧಿ ಜಯಂತಿ ವಿಶೇಷ ಉಪನ್ಯಾಸ, ಗಾಂಧೀಜಿ ಕುರಿತು ಕನ್ನಡ ಪುಸ್ತಕ ಬಿಡುಗಡೆ: ಉಪನ್ಯಾಸ: ಮಂಡಗದ್ದೆ ಶ್ರೀನಿವಾಸಯ್ಯ, ಅತಿಥಿಗಳು: ಚೂಡಾಮಣಿ ನಂದಗೋಪಾಲ್, ರಾಮನಾಥ್, ಕಲಾವಿದೆ: ಇಂದುಶ್ರೀ ರವೀಂದ್ರ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ಬೆಳಿಗ್ಗೆ 11

ಗಾಂಧಿ ಜಯಂತಿ: ಉದ್ಘಾಟನೆ: ರವಿವರ್ಮ ಕುಮಾರ್, ಅಧ್ಯಕ್ಷತೆ: ಜಯಕರ ಎಸ್.ಎಂ., ಅತಿಥಿಗಳು: ಅಚ್ಯುತ್ ಕುಮಾರ್, ಎಂ. ಕೊಟ್ರೇಶ್, ದೇವರಾಜ್. ಎಚ್., ಆಯೋಜನೆ: ಗಾಂಧಿ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 11

ಗಾಂಧಿ ಜಯಂತಿ ಸತ್ಯ ಮತ್ತು ಅಹಿಂಸಾ ಮಹೋತ್ಸವ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಸಾನ್ನಿಧ್ಯ: ಸರ್ವಧರ್ಮಗಳ ಮುಖಂಡರು, ಅತಿಥಿಗಳು: ವಿ. ಸೋಮಣ್ಣ, ಆಯೋಜನೆ: ರಾಜಭವನ, ಸ್ಥಳ: ಗ್ಲಾಸ್ ಹೌಸ್, ರಾಜಭವನ, ಸಂಜೆ 6

ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ: ಅತಿಥಿಗಳು: ಪ್ರೀತಿ ಭರತ್, ಸುಧಾದೇವಿ, ಉಪಸ್ಥಿತಿ: ಟಿ.ಎನ್. ಚಂದ್ರಶೇಖರ ರಾವ್, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಗಾಂಧಿ ಜಯಂತಿ ಮತ್ತು 'ಗಾಂಧಿ ಅನುಯಾಯಿ ಕಡಿದಾಳ್ ಮಂಜಪ್ಪ' ಕೃತಿ ಬಿಡುಗಡೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ವೂಡೇ.ಪಿ. ಕೃಷ್ಣ, ಗೋವಿಂದ ಕಾರಜೋಳ, ಎಚ್.ಕೆ. ಪಾಟೀಲ, ಎಲ್. ಹನುಮಂತಯ್ಯ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 11

ಸತ್ಯಾಗ್ರಹ 2.0: ಪ್ರಾಣಿಗಳಿಗೆ ಸ್ವಾತಂತ್ರ್ಯ: ಸ್ಥಳ: ಬ್ರಿಗೇಡ್ ರಸ್ತೆ ಸಂಜೆ 4

ನವರಾತ್ರಿ ವಿಶೇಷ ಕಾರ್ಯಕ್ರಮಗಳು:

ನವರಾತ್ರಿ ವಿಶೇಷ ಹೋಮ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಪ್ಲಾಟ್‌ಫಾರ್ಮ್ ರಸ್ತೆ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30

ವಚನ ನವರಾತ್ರಿ ವಿಜಯದಶಮಿ: ಆಶಯ ನುಡಿ: ಎಸ್. ಪಿನಾಕಪಾಣಿ, ಉಪನ್ಯಾಸ: ನೀಲಾಂಬಿಕೆ ಚಂದ್ರಶೇಖರ್, ವಚನ ಗಾಯನ: ಶರ್ವಾಣಿ ಯೋಗೇಶ್ ಮತ್ತು ತಂಡ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪದ್ಮಜ ಪ್ರಸನ್ನ ಮನೆಯಂಗಳ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5.30

ಶರನ್ನವರಾತ್ರಿ ಮಹೋತ್ಸವ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಆಯೋಜನೆ: ಗೋಸಾಯಿ ಮಹಾಸಂಸ್ಥಾನ ಮಠ, ಸ್ಥಳ: ಭವಾನಿ ಪೀಠ, ಗವೀಪುರ, ಸಂಜೆ 5.30

ನವರಾತ್ರಿ ಉತ್ಸವ: ದೇವಿಗೆ ಸರಸ್ವತಿ ಅಲಂಕಾರ, ಭಜನೆ: ಮಧು ಮತ್ತು ತಂಡದವರಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಸ್ಥಳ: ಕೃಷ್ಣರಾಜಪುರ, ಸಂಜೆ 6

ರಂಜಿತಾ ಪ್ರಸಾದ್, ಭಾವನಾ ಮೂರ್ತಿ

ಶರನ್ನವರಾತ್ರಿ, ಶ್ರೀರಾಮ ಮಂದಿರದ ಶತಮಾನೋತ್ಸವ ಸಮಾರಂಭ: ದಾಸರ ಪದಗಳ ಗಾಯನ: ರಂಜಿತಾ ಪ್ರಸಾದ್ ಮತ್ತು ಭಾವನಾ ಮೂರ್ತಿ ತಂಡದಿಂದ, ಆಯೋಜನೆ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ಉತ್ಸವ: ಭರತನಾಟ್ಯ: ಪ್ರಸ್ತುತಿ: ಸುಪ್ರಿಯಾ ಮತ್ತು ಪಿ.ಎಸ್. ಸುಗನ್ಯ, ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ, ಸ್ಥಳ: ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ನವರಾತ್ರಿ ಸಾಂಸ್ಕೃತಿಕ ಉತ್ಸವ: ಭರತನಾಟ್ಯ ಪ್ರಸ್ತುತಿ: ಪದ್ಮಾವತಿ ಕಲಾನಿಕೇತನ, ಶಾಲಿನಿ ಶ್ರೀಕಾಂತ್, ಆಯೋಜನೆ ಮತ್ತು ಸ್ಥಳ: ಪದ್ಮಾವತಿ ಕಲಾನಿಕೇತನ, ಆವರಣ, ಮತ್ತಿಕೆರೆ ಲೇಔಟ್, ಸಂಜೆ 6.30

ಶರನ್ನವರಾತ್ರಿ ಉತ್ಸವ: ದೇವಿಗೆ ಸರಸ್ವತಿ ಅಲಂಕಾರ, ಆಯೋಜನೆ: ಯಲ್ಲಮ್ಮದೇವಿ ದೇವಾಲಯ, ಸ್ಥಳ: ದೇಶದಪೇಟೆ ರಸ್ತೆ, ಯಲಹಂಕ

ಶರನ್ನವರಾತ್ರಿ ಉತ್ಸವ: ದೇವಿಗೆ ಸರಸ್ವತಿ ಅಲಂಕಾರ, ಆಯೋಜನೆ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಸ್ಥಳ: ಚಿಕ್ಕದೇವಸಂದ್ರ, ಕೃಷ್ಣರಾಜಪುರ

ನವರಾತ್ರಿ ಉತ್ಸವ: ಮಹಾರುದ್ರ ಹೋಮ, ಆಯೋಜನೆ: ಆರ್ಟ್‌ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಸೆಂಟರ್

ನವರಾತ್ರಿ ಸಂಗೀತ ನೃತ್ಯೋತ್ಸವ: ಪ್ರಸ್ತುತಿ: ದೇವಿ ಸಂಗೀತ ನೃತ್ಯ ಕಲಾವಿದರಿಂದ ಭರತನಾಟ್ಯ, ನಿರ್ದೇಶನ: ಎಂ.ಎನ್. ಲತಾ, ಸ್ಥಳ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30

ರಾಹುಲ್ ಹೇಳಿಕೆಗೆ ಖಂಡನೆ

ಬೆಂಗಳೂರು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹೇಳಿಕೊಟ್ಟಿದ್ದನ್ನು ಪಾದಯಾತ್ರೆಯಲ್ಲಿ ಹೇಳುವಂತಾಗಿದೆ. ಇದು ನಿಮ್ಮ ಅಪ್ರಬುದ್ಧತೆಯನ್ನು ಎತ್ತಿ ತೋರಿಸುತ್ತದೆ ಎಂದು ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಎನ್. ರವಿಕುಮಾರ್ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಉದ್ದೇಶಿಸಿ ಹೇಳಿದ್ದಾರೆ.

ರಾಜ್ಯ ಸರ್ಕಾರದ ವಿರುದ್ಧ ಶೇ 40ರ ಲಂಚದ ಸರ್ಕಾರ ಎಂದು ರಾಹುಲ್ ಟೀಕೆಗೆ ಪ್ರತಿಕ್ರಿಯಿಸಿದ ಅವರು, ಆಧಾರ ರಹಿತ ಆರೋಪ ಮಾಡುವುದು ಸರಿಯಲ್ಲ. ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ ಎಂದಿದ್ದಾರೆ.

ಈ ಹಿಂದೆ ಕೇಂದ್ರದ ಮನಮೋಹನ ಸಿಂಗ್ ಮತ್ತು ರಾಜ್ಯದ ಸಿದ್ದರಾಮಯ್ಯ ಸರ್ಕಾರವೇ ಸಾಲು ಸಾಲು ಹಗರಣಗಳಲ್ಲಿ ಭಾಗಿಯಾಗಿತ್ತು ಎಂಬುದನ್ನು ಮರೆತಿದ್ದೀರಿ ಎಂದು ನೆನಪಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಮಕ್ಕಳಿಗಾಗಿ ಖರೀದಿಸಿದ್ದ [illegible] ಖರೀದಿಯಲ್ಲಿ ಅಕ್ರಮ, [illegible] ಅರ್ಕಾವತಿ ಬಡಾವಣೆಯ ರೀಡೂ, ಮರಳು ಲೂಟಿ, ವಿದ್ಯಾರ್ಥಿಗಳ ಲ್ಯಾಪ್ ಟಾಪ್ ಖರೀದಿಯಲ್ಲಿ ಅಕ್ರಮ, ಬಿಬಿಎಂಪಿ ಕಸ ಹಾಗೂ ಕೊಳಗೇರಿ ಮಂಡಳಿಯ ಹಗರಣಗಳು ನಡೆದಿದ್ದವು. ಇದನ್ನು ನಿಮಗೆ ನೆನಪಿಸುತ್ತಿದ್ದೇವೆ ಎಂದು ರವಿಕುಮಾರ್ ಹೇಳಿದ್ದಾರೆ.

ಚುನಾವಣೆ ಮುಂದೂಡುವ ಪಕ್ಷಗಳ ತಂತ್ರ ಮೊಟಕುಗೊಳಿಸಲು ನಾಗರಿಕ ಸಂಘಟನೆಗಳ ಸಲಹೆ

‘ಚುನಾವಣಾ ಆಯೋಗ ಇನ್ನಷ್ಟು ಬಿಗಿಯಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಚುನಾವಣೆಯನ್ನು ಪ್ರಸಕ್ತ ವರ್ಷದ ಡಿಸೆಂಬರ್ ಅಂತ್ಯದೊಳಗೆ ನಡೆಸಬೇಕು’ ಎಂದು ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ಹೈಕೋರ್ಟ್ ನಿರ್ದೇಶಿಸಿರುವುದರಿಂದ ಎರಡು ವರ್ಷಗಳ ಸುದೀರ್ಘ ಕಾನೂನು ಹೋರಾಟ ಒಂದು ಘಟ್ಟಕ್ಕೆ ಬಂದು ನಿಂತಂತೆ ಕಾಣುತ್ತಿದೆ.

2020ರ ಸೆಪ್ಟೆಂಬರ್‌ನಿಂದ ಬಿಬಿಎಂಪಿ ಚುನಾವಣೆಯನ್ನು ಮುಂದೂಡಿಕೊಂಡು ಬರಲು ಸರ್ಕಾರ ಹಲವು ಕಾರಣಗಳನ್ನು ನೀಡುತ್ತಾ ಬಂದಿದೆ. ಸದ್ಯಕ್ಕೆ ಕಾರ್ಪೊರೇಟರ್‌ಗಳಿಲ್ಲದೆ ಬಿಬಿಎಂಪಿ ಚಟುವಟಿಕೆ ನಡೆಯುತ್ತಿದ್ದು, ಸಾರ್ವಜನಿಕರ ಅಹವಾಲುಗಳನ್ನು ಕೇಳುವ ಕಿವಿಗಳೇ ಕಡಿಮೆಯಾದ ಹಾಗೆ ಆಗಿದೆ.

ಮಹಾನಗರಗಳ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡಲು ರಾಜಕೀಯ ಪಕ್ಷಗಳು ತಮ್ಮದೇ ಆದ ತಂತ್ರಗಳನ್ನು ಹೆಣೆಯುತ್ತಿವೆ. ಇದನ್ನು ತಪ್ಪಿಸಲು ಚುನಾವಣಾ ಆಯೋಗ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಮಾಜಿ ಸದಸ್ಯರು ಹಾಗೂ ವಿವಿಧ ನಾಗರಿಕರ ಸಂಘಟನೆಗಳವರು ಆಗ್ರಹಿಸಿದ್ದಾರೆ.

‘ವಾರ್ಡ್ ಮರುವಿಂಗಡಣೆ ಹಾಗೂ ವಾರ್ಡ್‌ಗಳ ಮೀಸಲಾತಿ ನಿಗದಿಯ ಹೊಣೆಯನ್ನು ಸರ್ಕಾರದಿಂದ ಹೊರತೆಗೆಯಬೇಕು. ಸ್ವತಂತ್ರ ಸಂಸ್ಥೆಯೊಂದಕ್ಕೆ ಅದರ ಜವಾಬ್ದಾರಿ ವಹಿಸಿಕೊಡಬೇಕು. ಆ ಸಂಸ್ಥೆಯು ನೇರವಾಗಿ ಚುನಾವಣಾ ಆಯೋಗಕ್ಕೆ ವರದಿಗಳನ್ನು ಸಲ್ಲಿಸುವಂತಾಗಬೇಕು’ ಎಂದು ಬೆಂಗಳೂರು ಪ್ರಜಾ ವೇದಿಕೆಯ ಸಂಸ್ಥಾಪಕ ಎನ್.ಎಸ್. ಮುಕುಂದ್ ಅಭಿಪ್ರಾಯಪಡುತ್ತಾರೆ.

ಚುನಾವಣೆ ಬೇಗ ನಡೆಸಬೇಕು ಎಂದು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದವರಲ್ಲಿ ಒಬ್ಬರಾಗಿದ್ದ, ಬಿಬಿಎಂಪಿ ಮಾಜಿ ಸದಸ್ಯ ಅಬ್ದುಲ್ ವಜೀದ್ ಈಗ ಹೈಕೋರ್ಟ್ ಚುನಾವಣೆ ನಡೆಸಲು ಆದೇಶಿಸಿರುವುದನ್ನು ಸ್ವಾಗತಿಸಿದರು.

ಮುಖ್ಯಾಂಶಗಳು
- ಡಿಸೆಂಬರ್ ಅಂತ್ಯದೊಳಗೆ ಚುನಾವಣೆ ನಡೆಸಲು ಸೂಚಿಸಿರುವ ಹೈಕೋರ್ಟ್
- 2020ರ ಸೆಪ್ಟೆಂಬರ್‌ನಿಂದ ಮುಂದೂಡಲ್ಪಟ್ಟಿದ್ದ ಚುನಾವಣೆ
- ಕಾರ್ಪೊರೇಟರ್‌ಗಳಿಲ್ಲದೇ ನಡೆಯುತ್ತಿರುವ ಬಿಬಿಎಂಪಿ ಚಟುವಟಿಕೆ

‘ವಾರ್ಡ್ ಮರುವಿಂಗಡಣೆ ಮಾಡಲು ಎರಡು ವರ್ಷಗಳಷ್ಟು ಸುದೀರ್ಘ ಅವಧಿಯ ಅಗತ್ಯವಿಲ್ಲ. ಸರ್ಕಾರ ವಿನಾ ಕಾರಣ ಚುನಾವಣೆ ಮುಂದೂಡಲು ಇಂತಹ ತಂತ್ರ ಅನುಸರಿಸಿದೆ. ಅಷ್ಟೇ ಅಲ್ಲದೆ, ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗೆ ಬೇರೆ ಬೇರೆ ವಾರ್ಡ್ ಮರುವಿಂಗಡಣಾ ವರದಿಗಳನ್ನು ಸಲ್ಲಿಸಿ ಇನ್ನಷ್ಟು ಗೋಜಲು ಸೃಷ್ಟಿಸಿತು’ ಎಂದು ಅವರು ದೂರಿದರು.

‘ಎಲ್ಲ ಪ್ರಮುಖ ರಾಜಕೀಯ ಪಕ್ಷಗಳಿಗೂ ಮೂರನೇ ಹಂತದ ಸ್ಥಳೀಯ ಆಡಳಿತ ವ್ಯವಸ್ಥೆ ಬಗ್ಗೆ ಒಲವಿಲ್ಲ. ಕಾನೂನಿನಲ್ಲಿ ಇರುವ ಲೋಪಗಳನ್ನೇ ಅವಕಾಶಗಳನ್ನಾಗಿ ಮಾಡಿಕೊಂಡು ಚುನಾವಣೆಯನ್ನು ಮುಂದೂಡಲಾಗುತ್ತಿದೆ. ಬೆಂಗಳೂರಿನಲ್ಲಿ ಇತ್ತೀಚೆಗೆ ವಿಪರೀತ ಮಳೆ ಸುರಿದು, ಎಷ್ಟೋ ಪ್ರದೇಶಗಳು ಜಲಾವೃತಗೊಂಡವು. ರಸ್ತೆಗಳಲ್ಲಿ ವಿಪರೀತ ಗುಂಡಿಗಳಾದವು. ಹೀಗೆ ಆದಾಗ ಪ್ರಶ್ನಿಸುವುದಾದರೂ ಯಾರನ್ನು? ಬೆಂಗಳೂರಿನಲ್ಲಿ 28 ಶಾಸಕರಿದ್ದಾರೆ. ಇಲ್ಲಿನ ಸಮಸ್ಯೆಗಳನ್ನು ನಿರ್ಲಕ್ಷಿಸಿದ ಮಾತ್ರಕ್ಕೆ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಸ್ಥಾನಕ್ಕೆ ಕುತ್ತು ಬಂದೀತು ಎಂಬ ಆತಂಕ ಮುಖ್ಯಮಂತ್ರಿಗೆ ಇರುವುದಿಲ್ಲ. ಈ ಬಾರಿ ಬಿಬಿಎಂಪಿ ಚುನಾವಣೆಯನ್ನು ಇಷ್ಟು ಮುಂದೂಡಿರುವುದು ಜನರಿಗೆ ಪಾಠವಾಗಬೇಕು’ ಎನ್ನುವುದು ‘ಜನಾಗ್ರಹ’ ಸಂಸ್ಥೆಯ ಶ್ರೀನಿವಾಸ ಅಲವಿಲ್ಲಿ ಅವರ ಪ್ರತಿಕ್ರಿಯೆ.

ಹೈಕೋರ್ಟ್ ನಿರ್ದೇಶನದಂತೆ ಈ ವರ್ಷದೊಳಗೆ ಬಿಬಿಎಂಪಿ ಚುನಾವಣೆ ನಡೆದೀತೆ ಎಂಬ ಪ್ರಶ್ನೆ ಈಗಲೂ ನಾಗರಿಕ ಸಂಘಟನೆಗಳಿಗೆ ಇದೆ.

ಕರ್ನಾಟಕ ಸರ್ಕಾರ

ಸರ್ಕಾರಿ ವೈಮಾನಿಕ ತರಬೇತಿ ಶಾಲೆ

ನಿರ್ದೇಶಕರ ಕಛೇರಿ, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು ವಿಮಾನ ನಿಲ್ದಾಣ, ಬೆಂಗಳೂರು–560064.

ಸಂಖ್ಯೆ: ಎಫ್‌ಟಿಎಸ್: 05: ಟಿಆರ್‌ಜಿ: 2021–22 ದಿನಾಂಕ: 21.09.2022

ವಾಣಿಜ್ಯ ಪೈಲಟ್ ಲೈಸೆನ್ಸ್ ಹಾಗೂ ಖಾಸಗಿ ಪೈಲಟ್ ಲೈಸೆನ್ಸ್ ತರಬೇತಿಗಾಗಿ ಅರ್ಜಿ ಆಹ್ವಾನ

ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು ವಿಮಾನ ನಿಲ್ದಾಣ, ಬೆಂಗಳೂರು ಇಲ್ಲಿ ವಾಣಿಜ್ಯ ಪೈಲಟ್ ಲೈಸೆನ್ಸ್ ಮತ್ತು ಖಾಸಗಿ ಪೈಲಟ್ ಲೈಸೆನ್ಸ್ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ವಿದ್ಯಾರ್ಹತೆ : ಸಿಪಿಎಲ್ ತರಬೇತಿ : ಪಿ.ಯು.ಸಿ/10+2 (ಭೌತಶಾಸ್ತ್ರ ಮತ್ತು ಗಣಿತ ವಿಷಯಗಳನ್ನು ಹೊಂದಿರಬೇಕು) ಪಿ.ಪಿ.ಎಲ್ ತರಬೇತಿ : ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು.** ಅರ್ಜಿದಾರರು ಅಂಚೆ ಮೂಲಕ ಅಥವಾ ನೇರವಾಗಿ ಅರ್ಜಿಗಳನ್ನು ಅರ್ಜಿ ಶುಲ್ಕದೊಂದಿಗೆ **ದಿನಾಂಕ: 31.10.2022** ರೊಳಗೆ ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು ವಿಮಾನ ನಿಲ್ದಾಣ, ಯಲಹಂಕ ಅಂಚೆ, ಬೆಂಗಳೂರು–560064 ಇವರಿಗೆ ಕಳುಹಿಸಬೇಕು. ಇ–ಮೇಲ್ **ವಿಳಾಸ: gfts.kar@gmail.com** ದೂರವಾಣಿ ಸಂಖ್ಯೆ: **080–29533178** ಅರ್ಜಿದಾರರು ಅರ್ಜಿಗಳನ್ನು **dyes.karnataka.gov.in** ಜಾಲತಾಣದಿಂದ ಪಡೆಯಬಹುದಾಗಿದೆ.

ಸಹಿ/– ನಿರ್ದೇಶಕರು,
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು, ಬೆಂಗಳೂರು.

ವಾಸಾಸಂಇ/ವಾ.ಪ್ರ/2451/ಬಿಸಿಎಲ್/2022–23

ಅಪಘಾತ: 22 ಸಾವು

ಕಾನ್ಪುರ, ಉತ್ತರ ಪ್ರದೇಶ (ಪಿಟಿಐ): ಜಿಲ್ಲೆಯ ಭದೆಯುನ ಗ್ರಾಮದ ಬಳಿ ಟ್ರ್ಯಾಕ್ಟರ್ ಟ್ರಾಲಿಯೊಂದು ಮುಗುಚಿ, ಕೆರೆಗೆ ಉರುಳಿದ್ದು ಒಟ್ಟು 22 ಮಂದಿ ಮೃತಪಟ್ಟಿದ್ದಾರೆ. ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಟ್ರ್ಯಾಕ್ಟರ್‌ನಲ್ಲಿ 50 ಜನರಿದ್ದರು. ಚಂದ್ರಿಕಾದೇವಿ ದೇವಸ್ಥಾನದ ಭೇಟಿ ಬಳಿಕ ಘಟಂಪುರ್‌ಗೆ ಮರಳುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸ್ವಚ್ಛ ಸರ್ವೇಕ್ಷಣೆ: 15 ಸ್ಥಾನ ಕುಸಿದ ಬಿಬಿಎಂಪಿ

ಕೇಂದ್ರ ಸರ್ಕಾರ ನಡೆಸಿದ ಸಮೀಕ್ಷೆ: ಶೌಚಾಲಯ ಸ್ವಚ್ಛತೆಯಲ್ಲಿ ಹಿಂದೆ, ಕಸ ಸಂಗ್ರಹಣೆಯಲ್ಲಿ ಮುಂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ನಡೆಸುವ ಸ್ವಚ್ಛ ಸರ್ವೇಕ್ಷಣ ಸಮೀಕ್ಷೆಯ ವರದಿ ಶನಿವಾರ ಪ್ರಕಟಗೊಂಡಿದ್ದು, ಬಿಬಿಎಂಪಿ 15 ಸ್ಥಾನಗಳಷ್ಟು ಕುಸಿದಿದೆ.

ಹತ್ತು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ 45 ನಗರಗಳ ಸ್ಥಳೀಯ ಸಂಸ್ಥೆಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಆ ಪೈಕಿ ಬಿಬಿಎಂಪಿ 43ನೇ ಸ್ಥಾನದಲ್ಲಿದೆ. 2020ರಲ್ಲಿ 37ನೇ ಸ್ಥಾನದಲ್ಲಿತ್ತು. 2021ರಲ್ಲಿ ಸುಧಾರಣೆ ಕಂಡು, 28ನೇ ಸ್ಥಾನಕ್ಕೆ ಬಂದಿತ್ತು. ಈಗ ಸಾಕಷ್ಟು ಕುಸಿತ ಕಂಡಿದೆ. ಸ್ವಚ್ಛತೆಯ ಪ್ರಮಾಣ ಅಳೆಯುವ ಮಾನದಂಡ ಬದಲಾಗಿರುವುದರಿಂದ ಕಳೆದ ವರ್ಷಗಳಿಗೆ ಈ ಸಲದ ಸಮೀಕ್ಷಾ ಫಲಿತಾಂಶವನ್ನು ಹೋಲಿಸಬಾರದು ಎಂದು ಬಿಬಿಎಂಪಿ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

‘ನಲವತ್ತು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವುದರಿಂದ ಕಳೆದ ವರ್ಷ ನಮ್ಮ ನಗರವನ್ನು ಮೆಗಾಸಿಟಿ ಎಂದು ಸಮೀಕ್ಷೆಯಲ್ಲಿ ಪರಿಗಣಿಸಿದ್ದರು. ಪಾಯಿಂಟ್ ನೀಡುವ ಕ್ರಮ ಹಾಗೂ ಸ್ಥಾನಕ್ಕಾಗಿ ಅಳೆಯುವ ಮಾನದಂಡದಲ್ಲೂ ಬದಲಾವಣೆ ಆಗಿದೆ. ಹೀಗಾಗಿ ಕಳೆದ ವರ್ಷಗಳಿಗೆ ಹೋಲಿಸಿ, ಕುಸಿತ ಕಂಡಿದ್ದೇವೆ ಎಂದು ಹೇಳಲಾಗದು’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ತ್ಯಾಜ್ಯ ನಿರ್ವಹಣೆ) ಡಾ. ಹರೀಶ್ ಕುಮಾರ್ ಪ್ರತಿಕ್ರಿಯಿಸಿದರು.

ಮುಖ್ಯಾಂಶಗಳು
- 45 ನಗರಗಳಲ್ಲಿ ಸಮೀಕ್ಷೆ
- 43ನೇ ಸ್ಥಾನಕ್ಕಿಳಿದ ಬಿಬಿಎಂಪಿ

2021ರಲ್ಲಿ 6,000 ಪಾಯಿಂಟ್‌ಗಳಿಗೆ ಬಿಬಿಎಂಪಿ 3,585.56 ಪಾಯಿಂಟ್ ಪಡೆದಿತ್ತು. 2022ರಲ್ಲಿ 7,000 ಪಾಯಿಂಟ್‌ಗಳಿಗೆ 2892.98 ಪಾಯಿಂಟ್ ಲಭಿಸಿರುವುದು ಅದರ ಸ್ಥಾನ ಎಷ್ಟು ಕುಸಿದಿದೆ ಎನ್ನುವುದನ್ನು ಸಮರ್ಥಿಸುತ್ತದೆ.

ತ್ಯಾಜ್ಯಮುಕ್ತ ನಗರ ಹಾಗೂ ’ವಾಟರ್ + +‘ ಎಂಬ ಹೆಗ್ಗಳಿಕೆಗೆ ಪಾತ್ರವಾಗಲು ನಗರಕ್ಕೆ ಸಾಧ್ಯವಾಗಲಿಲ್ಲ. ಇದರಿಂದಲೇ 2,000 ಪಾಯಿಂಟ್‌ಗಳನ್ನು ಕಳೆದುಕೊಳ್ಳಬೇಕಾಯಿತು. ಒಳಚರಂಡಿ ನೀರು ಮನೆಗಳಿಗೆ ಪೈರೈಕೆಯಾಗುವ ನೀರಿನ ಪೈಪ್ ಒಳಗೆ ಸ್ವಲ್ಪವೂ ಸೇರಕೂಡದು. ಆಗಷ್ಟೆ ’ವಾಟರ್ + +‘ ಪ್ರಮಾಣಪತ್ರ ಸಿಗಲು ಸಾಧ್ಯ. ಬಿಡಬ್ಲ್ಯುಎಸ್‌ಎಸ್‌ಬಿ ಜತೆಗೂಡಿ ಈ ಕೊರತೆಯನ್ನು ನೀಗಿಸಿಕೊಳ್ಳಬೇಕಿದೆ ಎಂದು ಹರೀಶ್‌ಕುಮಾರ್ ಸ್ಪಷ್ಟಪಡಿಸಿದರು.

ಮನೆ ಮನೆಗೆ ತೆರಳಿ, ವಿಂಗಡಿಸಿದ ಕಸ ಸಂಗ್ರಹ ಮಾಡುವ ವಿಷಯದಲ್ಲಿ ನಗರ 90% ಪಾಯಿಂಟ್ ಗಳಿಸಿದೆ. ಶೌಚಾಲಗಳ ಸ್ವಚ್ಛತೆ ಹಾಗೂ ನಾಗರಿಕ ಸಮಸ್ಯೆ ಬಗೆಹರಿಸುವ ವ್ಯವಸ್ಥೆಯ ವಿಷಯದಲ್ಲಿ ಶೇ 50ಕ್ಕೂ ಕಡಿಮೆ ಪಾಯಿಂಟ್‌ಗಳು ಲಭಿಸಿವೆ. ರಸ್ತೆಗಳ ಸ್ವಚ್ಛತೆ, ಜಲಮೂಲಗಳ ನಿರ್ವಹಣೆ ಹಾಗೂ ನಗರ ಸೌಂದರ್ಯೀಕರಣದ ವಿಷಯದಲ್ಲಿ ಶೇ 50ರಿಂದ ಶೇ 75ರಷ್ಟು ಪಾಯಿಂಟ್‌ಗಳು ದೊರಕಿವೆ ಎಂದು ಸಮೀಕ್ಷಾ ವರದಿ ತಿಳಿಸಿದೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಆರ್‌ಇಎಸ್‌ಬಿಸಿ_ಇಎಲ್_ಜಿಆರ್.296_ಓಟಿ-ಜಿ-01 ದಿನಾಂಕ : 24-09-2022 ಮತ್ತು ಇಎಲ್‌ಆರ್‌ಇಎಸ್‌ಬಿಸಿ-ಜಿಆರ್.259-ಓಟಿ-ಹೆಚ್‌ಟಿ-01 ದಿನಾಂಕ : 26-09-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು ವಿಭಾಗ : ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಜಿ.ಆರ್.296ನ ಆರ್‌ಇ ಕಾಮಗಾರಿಗೆ ಸಂಬಂಧಿಸಿದಂತೆ ಚಿಕ್ಕಬಾಣಾವರ (ಹೊರತುಪಡಿಸಿ) – ಹಾಸನ (ಹೊರತುಪಡಿಸಿ) ವರೆಗೆ ಎಎಸ್‌ಎಂ ಕೋಣೆಯಲ್ಲಿ ಕಲರ್ ಲೈಟ್ ಸಿಗ್ನಲಿಂಗ್‌ಗಾಗಿ ಪವರ್ ಸರಬರಾಜು ವ್ಯವಸ್ಥೆ ಮತ್ತು ಟಿಎಸ್‌ಎಸ್‌ನ ಯಾರ್ಡ್ ಲೈಟಿಂಗ್ ಒಳಗೊಂಡಂತೆ ಟ್ರ್ಯಾಕ್ಷನ್ ಸಬ್–ಸ್ಟೇಷನ್‌ನ ಒಳಾಂಗಣ ವೈರಿಂಗ್.	ರೂ. 1,57,18,885.92
2	ಬೆಂಗಳೂರು ವಿಭಾಗ : ತ್ಯಾಮಗೊಂಡ್ಲು ಬೆಸ್ಕಾಂ ಕಛೇರಿಯಲ್ಲಿ 66ಕೆವಿ ಟರ್ಮಿನಲ್ ಬೇ ನಿರ್ಮಾಣಕ್ಕೆ ಕಾರಿಡಾರ್ ಒದಗಿಸುವುದಕ್ಕಾಗಿ ಹಾಲಿ ಇರುವ 11ಕೆವಿ ಓ/ಹೆಚ್ ಟಿಎಫ್–7 ಬೀರಗೊಂಡನಹಳ್ಳಿ ಅಗ್ರಿ, ಟಿಎಫ್–8 ತೋಟನಹಳ್ಳಿ ಫೀಡರ್ ಮಾರ್ಗ ಮತ್ತು ಟಿಎಫ್–1 ಬಿಗ್‌ಬ್ಯಾಗ್‌ನ 11ಕೆವಿ 400 ಚ.ಮಿಮೀ ಯುಜಿ ಕೇಬಲ್, ಟಿಎಫ್–2 ಟಿಆರ್‌ಎಂಎನ್, ಟಿಎಫ್–3 ಸಟ್ರ್ಯಾಕ್, ಟಿಎಫ್–4 ಕೆಎಸ್‌ಡಿಎಲ್, ಟಿಎಫ್–9 ರಾಮ ಹೈ ಪವರ್, ಟಿಎಫ್–11 ಕೆಐಎಡಿಬಿ ಫೀಡರ್ ಮಾರ್ಗದ ಸ್ಥಳಾಂತರ ಮತ್ತು ರೀ–ರೂಟಿಂಗ್.	ರೂ. 69,75,758.06

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17–10–2022 ರಂದು 15:00 ಗಂಟೆವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ರೈಲ್ವೆ ವಿದ್ಯುದೀಕರಣ

ಪಿಯುಬಿ/400/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 ಬಿಜಿ ನಗರ

S.W.Railways | SWRRLY | SWRRLY

ನಿಧನ ವಾರ್ತೆ

ಟಿ.ಎಸ್. ಛಾಯಾಪತಿ



ಮೈಸೂರು: ಸಾಹಿತಿ ದಿ.ತ.ಸು. ಶಾಮರಾಯ ಅವರ ಪುತ್ರ, ಪ್ರಕಾಶಕ, ಗೋಕುಲಂ ಬಡಾವಣೆ ನಿವಾಸಿ ಟಿ.ಎಸ್.ಛಾಯಾಪತಿ (79) ಶನಿವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ತಳುಕಿನ ವೆಂಕಣ್ಣಯ್ಯ ಗ್ರಂಥಮಾಲೆ ಪ್ರಕಾಶನ ನಡೆಸುತ್ತಿದ್ದ ಅವರು, ಸಾವಿರಕ್ಕೂ ಅಧಿಕ ಪುಸ್ತಕ ಪ್ರಕಟಿಸಿದ್ದರು. 25 ಕೃತಿಗಳನ್ನು ಬರೆದಿದ್ದರು. ಅತ್ಯುತ್ತಮ ಪ್ರಕಾಶಕ ಸೇರಿದಂತೆ ಹಲವು ಪ್ರಶಸ್ತಿಗಗಳಿಗೆ ಪಾತ್ರರಾಗಿದ್ದರು.

ಅಂತ್ಯಕ್ರಿಯೆ ಅ.2 (ಭಾನುವಾರ) ಮಧ್ಯಾಹ್ನ ಗೋಕುಲಂ ಬಡಾವಣೆ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ಶನಿವಾರ ಡಾ.ರಾಜ್‌ಕುಮಾರ್ ಅಕಾಡೆಮಿ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ 2017–18ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ ಪರೀಕ್ಷೆಯಲ್ಲಿ ಯಶಸ್ಸುಗಳಿಸಿದ ಸಾಧಕರ ಜತೆ ಅಶ್ವಿನಿ ಪುನೀತ್‌ರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠ್ಠಲ ಮೂರ್ತಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ರಕ್ಷಣಾ ಕಾರ್ಯದರ್ಶಿ ಡಾ.ಶ್ರೀನಿವಾಸನ್, ಕಾಫಿ ಡೇ ಅಧ್ಯಕ್ಷ ಎಸ್.ವಿ.ರಂಗನಾಥ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಇದ್ದರು. –ಪ್ರಜಾವಾಣಿ ಚಿತ್ರ

ಜನಸ್ಪಂದನೆಯೇ ಆಡಳಿತ ನೈಜ ಅಭಿವ್ಯಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಿಯಾದ ಸಮಯಕ್ಕೆ ನಿರ್ಧಾರ ತೆಗೆದುಕೊಳ್ಳುವುದು, ಕಾನೂನು ಚೌಕಟ್ಟಿನಲ್ಲಿ ಜನಪರವಾಗಿ ಸ್ಪಂದಿಸುವುದೇ ಆಡಳಿತದ ನೈಜ ಅಭಿವ್ಯಕ್ತಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

2017–18ನೇ ಸಾಲಿನ ಕೆಪಿಎಸ್‌ಸಿ (ಗೆಜೆಟೆಡ್ ಪ್ರೊಬೆಷನರ್) ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳಿಗೆ ಡಾ.ರಾಜ್‌ಕುಮಾರ್ ಅಕಾಡೆಮಿ ಶನಿವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಆಡಳಿತದ ವಿಷಯದಲ್ಲಿ ಸಮಯಕ್ಕೆ ಸರಿಯಾಗಿ ನಿರ್ಧಾರ ತೆಗೆದುಕೊಳ್ಳದಿದ್ದರೆ ಬಹಳಷ್ಟು ಜನರಿಗೆ ತೊಂದರೆ ಆಗುತ್ತದೆ. ಅಧಿಕಾರಿಗಳು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಎಷ್ಟೋ ಜನರ ಬದುಕು ಅವಲಂಬಿತವಾಗಿರುತ್ತದೆ ಎಂದರು.

ಕೆಲಸ ಮಾಡುವಾಗ ಅಧಿಕಾರಿಗಳು, ಜನಪ್ರತಿನಿಧಿಗಳ ಮಧ್ಯೆ ಹೊಂದಾಣಿಕೆ ಅಗತ್ಯ. ಹೊಂದಾಣಿಕೆ ತಪ್ಪಿದರೆ ಆಡಳಿತವೂ ಹಳಿ ತಪ್ಪುತ್ತದೆ. ಕರ್ತವ್ಯದ ಮೇಲಿನ ಲಕ್ಷ್ಯ ಕಡಿಮೆಯಾಗಿ, ಅಧಿಕಾರದ ವ್ಯಾಪ್ತಿಯ ಚಿಂತನೆ ಆರಂಭವಾದಾಗ ಸಂಘರ್ಷಗಳು ಹುಟ್ಟಿಕೊಳ್ಳುತ್ತವೆ. ಅದಕ್ಕಾಗಿ ಎರಡೂ ವರ್ಗದಲ್ಲಿ ಅಹಂ ಬೆಳೆಯಬಾರದು. ಆಗ ಮಾತ್ರ ಉತ್ತಮ ಆಡಳಿತ ನೀಡಲು ಸಾಧ್ಯ. ನಟ ರಾಜ್‌ಕುಮಾರ್ ಅವರ ಸರಳತೆ, ವಿಧೇಯ ಗುಣ ಎಲ್ಲರಿಗೂ ಮಾದರಿಯಾಗಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅಕಾಡೆಮಿ ಮುಖ್ಯಸ್ಥ ಯುವ ರಾಜ್‌ಕುಮಾರ್, ’2017ರಲ್ಲಿ ಆರಂಭವಾದ ಅಕಾಡೆಮಿ ಒಂದು ವ್ಯವಸ್ಥಿತ ಶಿಕ್ಷಣ ಕೇಂದ್ರವಾಗಿ ಅಭಿವೃದ್ಧಿ ಹೊಂದಿದೆ. ಇದುವರೆಗೆ 70 ಅಭ್ಯರ್ಥಿಗಳು ಯುಪಿಎಸ್‌ಸಿ, 150 ಕೆಪಿಎಸ್‌ಸಿ ಸೇರಿ 500ಕ್ಕೂ ಹೆಚ್ಚು ಜನರು ಸರ್ಕಾರಿ ಸೇವೆಗೆ ಸೇರಲು ಅಕಾಡೆಮಿ ಜತೆಯಾಗಿದೆ. 2017–18ನೇ ಸಾಲಿನಲ್ಲಿ ಆಯ್ಕೆಯಾದ 318 ಅಭ್ಯರ್ಥಿಗಳಲ್ಲಿ 200ಕ್ಕೂ ಹೆಚ್ಚು ಅಭ್ಯರ್ಥಿಗಳು ವಿವಿಧ ಹಂತಗಳಲ್ಲಿ ಅಕಾಡೆಮಿಯಿಂದ ತರಬೇತಿ ಪಡೆದವರು‘ ಎಂದು ಸಂತಸ ಹಂಚಿಕೊಂಡರು.

ನಟ ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಇದ್ದರು.

ಮುದ್ರಣ, ಲೇಖನ ಸಾಮಗ್ರಿ & ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ

8ನೇ ಮೈಲಿ, ಆರ್. ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು – 560 059. ದೂರವಾಣಿ : 080–2848 4515, 2848 4518.

ಸಂ.: ಡಿಪಿಎಸ್46ಪಿಯುಆರ್(ಸಿ)/2021–22/ಸಿಬಿಎಲ್‌ಎಸ್/ಕರೆ–2 ದಿ: 29–09–2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ರಿಂಟರ್ ಕನ್ಸ್ಯೂಮಬಲ್ಸ್‌ಗಳ ಸಂಗ್ರಹಣೆಗಾಗಿ ದರ ಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ. 48.20 ಲಕ್ಷಗಳಾಗಿರುತ್ತದೆ ಹಾಗೂ ಟೆಂಡರ್‌ನಲ್ಲಿ ಇ.ಎಂ.ಡಿ.ಯು ಈ ಕೆಳಕಂಡಂತೆ ವಿವರಿಸಿದೆ.

Sl. No.	Group No.	Description	EMD in Rs. (in Lakhs)
1	Group A	Canon	0.05
2	Group B	HP	0.50
3	Group C	Konica Minolta	1.75
4	Group E	Toshiba	0.06
5	Group F	Ricoh	0.05

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15–10–2022. 17.30 ಗಂಟೆಗೆ. ಮಾಹಿತಿಯನ್ನು ವೆಬ್‌ಸೈಟ್ : https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು.

ವಾಸಾಇ/ಬೆಂ.ನ./2462/ಮಣಿಪಾಲ್/2022–23

ಪುರಸಭಾ ಕಾರ್ಯಾಲಯ, ದೇವನಹಳ್ಳಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110

ಸಂ:ದೇಪು/ತಾಂತ್ರಿಕ/ಟೆಂಡರ್–02/2022–23 ದಿನಾಂಕ:29.09.2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ದೇವನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ಪುರಸಭಾ ಅನುದಾನದಲ್ಲಿ ತೆಗೆದುಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಕರ್ನಾಟಕ ಲೋಕೋಪಯೋಗಿ ಇಲಾಖೆ ನೋಂದಾಯಿತರಾದ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಸಿವಿಲ್ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕೆಟಿಪಿಪಿ-2000ರನ್ವಯ ಈ ಕೆಳಕಂಡಂತೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಇ–ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್: **http://eproc.karnataka.gov.in** ಮೂಲಕ ಸಂಪರ್ಕಿಸಿ ಅರ್ಜಿ ಸಲ್ಲಿಸಲು ಕೋರಲಾಗಿದೆ. **ಕಾಮಗಾರಿ ವಿವರ:** (1) TMC/DEV/SR/002/2022-23/Call-2. ಅಂದಾಜು ಮೊತ್ತ: **ರೂ.20.40 ಲಕ್ಷಗಳು.** (2) TMC/DEV/SR/001/2022-23/Call-2. ಅಂದಾಜು ಮೊತ್ತ: **ರೂ.5.70 ಲಕ್ಷಗಳು.** (3) DMA/2021-22/IND13106/Call-3. ಅಂದಾಜು ಮೊತ್ತ: **ರೂ.2.50ಲಕ್ಷಗಳು.**

ಸಹಿ/– (ಶ್ರೀಮತಿ ಡಿ.ಗೋಪಮ್ಮ) ಅಧ್ಯಕ್ಷರು, ಪುರಸಭೆ, ದೇವನಹಳ್ಳಿ
ಸಹಿ/– (ಶ್ರೀಮತಿ ಗೀತಾ.ಕೆ) ಉಪಾಧ್ಯಕ್ಷರು, ಪುರಸಭೆ, ದೇವನಹಳ್ಳಿ
ಸಹಿ/– (ಶ್ರೀ ಎಸ್.ಸಿ.ಚಂದ್ರಪ್ಪ) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ದೇವನಹಳ್ಳಿ
ಸಹಿ/– (ಶ್ರೀ ಎ.ಹೆಚ್.ನಾಗಾರಾಜ್) ಮುಖ್ಯಾಧಿಕಾರಿ, ಪುರಸಭೆ, ದೇವನಹಳ್ಳಿ

ವಾಸಾಸಂಇ/ಉನಿ-ಸಿ.ಪಿ/2467/ಎಂಸಿಎ/2022–23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮುಳಬಾಗಿಲು

ಸಂ: ಕೃಉಮಾಸ/ಮು/201/2022–23 ದಿನಾಂಕ: 23.09.2022

ಪ್ರಕಟಣೆ

ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹರಾಜುಕಟ್ಟೆ ಪರಿವರ್ತಿತ 17 ಸಂಖ್ಯೆ ಗೋದಾಮುಗಳನ್ನು ಆಸ್ತಿ ಹಂಚಿಕೆ ನಿಯಂತ್ರಣ ನಿಯಮಗಳು 2004ರ ನಿಯಮ 13 ರನ್ವಯ ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ ಲೈಸನ್ಸ್ ಪಡೆದ ಪೇಟೆಕಾರ್ಯಕರ್ತರಿಗೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಫಾರಂ ಶುಲ್ಕ ರೂ.500/– ಹಾಗೂ ನೊಂದಣಿ ಶುಲ್ಕ ರೂ.300ನ್ನು ನಗದಾಗಿ ಪಾವತಿಸಿ ನೊಂದಾಯಿಸಿ ಅರ್ಜಿ ನಮೂನೆ ಪಡೆಯಲು ಕೊನೆಯ ದಿನಾಂಕ: **18.10.2022 ಸಂಜೆ 5.00 ಗಂಟೆ.** ಇಎಂಡಿ **ರೂ.5000/–ದೊಂದಿಗೆ** ಭರ್ತಿ ಮಾಡಿದ ಅರ್ಜಿ ಸ್ವೀಕೃತಿ ದಿನಾಂಕ: **21.10.2022 ಸಂಜೆ 5.00 ಗಂಟೆ,** ನಿಯಮ 17ರನ್ವಯ 2,7,14 ಅನ್ನು ಪ.ಜಾತಿಯವರಿಗೆ, 13 ಅನ್ನು ಪ.ಪಂಗಡದವರಿಗೆ, 6,11 ಅನ್ನು ನೊಂದಾಯಿತ ರೈತ ಉತ್ಪಾದಕ ಸಂಸ್ಥೆಯವರಿಗೆ, 5ನ್ನು ಮಹಿಳೆಯರಿಗೆ ಮೀಸಲಿರಿಸಿದೆ. ಸಂಬಂಧಿಸಿದವರು ಅಧಿಕೃತ ಪ್ರಮಾಣ ಪತ್ರಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಮತ್ತು ಷರತ್ತುಗಳನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು.

ಸಹಿ/– ಟಿ.ಎಸ್.ರವಿಕುಮಾರ್, ಕಾರ್ಯದರ್ಶಿ, ಕೃಉಮಾಸ, ಮುಳಬಾಗಿಲು
ಸಹಿ/– ಆರ್.ಶೋಭಿತಾ, ಕ.ಆ.ಸೇ, ಆಡಳಿತಾಧಿಕಾರಿಗಳು, ಕೃಉಮಾಸ, ಮುಳಬಾಗಿಲು

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ317/ಎಂಸಿಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/44/2022–23 ದಿನಾಂಕ: 29–09–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವ್ಯವಸಾಯ”** ವಲಯದಿಂದ **“ಕೈಗಾರಿಕೆ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀಮತಿ ಸರಿತಾ. ಎಂ. ರಾಧಾಕೃಷ್ಣನ್ ಕೋಂ ಮಿಲನ್ ರಾಧಕೃಷ್ಣನ್ ಮತ್ತು ಶ್ರೀ ವಲ್ಲಲರಾಜನ್ ಕೋಂ ಕೆ. ರಾಜನ್	ನೆಲಮಂಗಲ	ಕಸಬಾ	ಹ್ಯಾಡಾಳು	73/2	01–00	ವ್ಯವಸಾಯ	ಕೈಗಾರಿಕೆ
					73/3	02–01		
					ಒಟ್ಟು	03–01		

ಷರಾ:– ಸದರಿ ಪ್ರಸ್ತಾವನೆಯಲ್ಲಿ ಅರ್ಜಿದಾರರು, ಪ್ರಶ್ನಿತ ಜಮೀನಿನ ಪರಿಸರದಲ್ಲಿ ಕೈಗಾರಿಕೆ ಇಲ್ಲದೇ ಇರುವುದರಿಂದ ಪ್ರಶ್ನಿತ ಜಮೀನುಗಳಲ್ಲಿ ಉತ್ತಮ ಸೌಲಭ್ಯಗಳನ್ನೊಳಗೊಂಡ ಕೈಗಾರಿಕೆ ಸ್ಥಾಪಿಸಿದಲ್ಲಿ ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸುಮಾರು 50 ಜನ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುವುದು ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ವ್ಯವಸಾಯ”** ವಲಯದಿಂದ **“ಕೈಗಾರಿಕೆ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು (ಪ್ರ)
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/2476/2022–23

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/25/2022–23 ದಿನಾಂಕ: 01–10–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವಸತಿ”** ವಲಯದಿಂದ **“ವಾಣಿಜ್ಯ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀಮತಿ ಸುಮ್ಮಿಯ ಬದರ್ ಕೋಂ ಉಮ್ರಾಜ್ ಅಹಮದ್ ನೂರ್ ಮತ್ತು ಶ್ರೀ ಸೈಯ್ಯದ್ ಷಾ ಮೊಹಿದ್ದೀನ್ ಬಿನ್ ರಫೀಕ್ ಅಹಮದ್	ನೆಲಮಂಗಲ	ಕಸಬಾ	ಮಲ್ಲಾಪುರ	77/2	00–34	ವಸತಿ	ವಾಣಿಜ್ಯ
					77/3	00–18		
					78/1	01–14		
					78/2	01–17		
					ಒಟ್ಟು	04–03		

ಷರಾ:– ಪ್ರಸ್ತಾಪಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಉದ್ದೇಶದ ವಿನ್ಯಾಸಗಳು ಅನುಮೋದನೆಯಾಗಿದ್ದು, ವಾಣಿಜ್ಯ ಚಟುವಟಿಕೆ ಕೇಂದ್ರ ಇಲ್ಲದೇ ಇರುವುದರಿಂದ ಪ್ರಶ್ನಿತ ಜಮೀನಿನಲ್ಲಿ ಉತ್ತಮ ಸೌಲಭ್ಯಗಳನ್ನು ಒಳಗೊಂಡ ವಾಣಿಜ್ಯ ಚಟುವಟಿಕೆ ಕೇಂದ್ರ ಸ್ಥಾಪಿಸಿದಲ್ಲಿ ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸುಮಾರು 25 ಜನ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುವುದು ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ವಸತಿ”** ವಲಯದಿಂದ **“ವಾಣಿಜ್ಯ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು (ಪ್ರ)
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/2482/ಅಡ್ವರ್ಟೋರ್/2022–23

ಎಸ್.ಕೆ.ಕಾಂತಾಗೆ ‘ಜೆ.ಎಚ್.ಪಟೇಲ್ ಪ್ರಶಸ್ತಿ’ ಪ್ರದಾನ

‘ವಿಪಕ್ಷದವರನ್ನೂ ವಿರೋಧಿಸದ ಪಟೇಲ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆ.ಎಚ್.ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ವಿರೋಧ ಪಕ್ಷದ ಸದಸ್ಯರನ್ನೂ ವಿರೋಧಿಸಿದವರು ಅಲ್ಲ; ಎಲ್ಲರನ್ನೂ ಆತ್ಮೀಯವಾಗಿ ಮಾತನಾಡಿಸಿ ಕ್ಷೇತ್ರದ ಆಗುಹೋಗುಗಳ ಕುರಿತು ಚರ್ಚಿಸುತ್ತಿದ್ದರು’ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಹೇಳಿದರು.

ವಿ.ಸೋಮಣ್ಣ ಪ್ರತಿಷ್ಠಾನದಿಂದ ನೀಡುವ ‘ಜೆ.ಎಚ್.ಪಟೇಲ್ ಪ್ರಶಸ್ತಿ’ಯನ್ನು ಮಾಜಿ ಸಚಿವ ಎಸ್.ಕೆ.ಕಾಂತಾ ಅವರಿಗೆ ಶನಿವಾರ ಪ್ರದಾನ ಮಾಡಿ ಮಾತನಾಡಿದರು.



ಸಮಾರಂಭದಲ್ಲಿ ಎಸ್.ಕೆ.ಕಾಂತಾ ಅವರಿಗೆ ‘ಜೆ.ಎಚ್.ಪಟೇಲ್ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. (ಎಡದಿಂದ) ಪಾಲನೇತ್ರ, ಬಿ.ಎಸ್.ನವೀನ್, ವಿ.ಸೋಮಣ್ಣ, ಶೈಲಜಾ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಜಯಪ್ರಕಾಶ್ ಹೆಗ್ಡೆ, ಗೋವಿಂದ ಎಂ. ಕಾರಜೋಳ, ಅರುಣ್ ಸೋಮಣ್ಣ ಇದ್ದರು ಪ್ರಜಾವಾಣಿ ಚಿತ್ರ

‘ಮುಖ್ಯಮಂತ್ರಿ ಎಂಬ ಅಹಂ ಇರಲಿಲ್ಲ. ಸಾಮಾನ್ಯ ವ್ಯಕ್ತಿಯಂತೆಯೇ ಬದುಕಿದ್ದರು. ಹೊಸದಾಗಿ ಶಾಸಕರಾಗಿ ಆಯ್ಕೆಯಾದವರು ಸೂಕ್ತ ತಯಾರಿ ನಡೆಸಿ ಸದನಕ್ಕೆ ಬರುವಂತೆ ತಿಳಿಸುತ್ತಿದ್ದರು. ಪಟೇಲ್‌ರದ್ದು ನೇರನುಡಿಯ ವ್ಯಕ್ತಿತ್ವವಾಗಿತ್ತು’ ಎಂದು ಹೇಳಿದರು.

ಸಚಿವ ಗೋವಿಂದ ಎಂ. ಕಾರಜೋಳ ಮಾತನಾಡಿ, ‘ಪಟೇಲರು ಪ್ರಕೃತಿಯ ಆರಾಧಕರಾಗಿದ್ದರು. ಬಸವಣ್ಣನವರ ಚಿಂತನೆ ಮೈಗೂಡಿಸಿಕೊಂಡು ಬದುಕಿದ್ದರು. ರಾಮಕೃಷ್ಣ ಹೆಗಡೆ, ಎಸ್.ಆರ್.ಬೊಮ್ಮಾಯಿ ಹಾಗೂ ಜೆ.ಎಚ್. ಪಟೇಲ್ ನನಗೆ ರಾಜಕೀಯ ಕ್ಷೇತ್ರದಲ್ಲಿ ಅವಕಾಶ ಕಲ್ಪಿಸಿದರು. ಅವರಿಂದ ವಿಧಾನಸಭೆ ಪ್ರವೇಶಿಸುವಂತೆ ಆಯಿತು’ ಎಂದರು.

‘ಬಡವರು ಹಾಗೂ ಪರಿಶಿಷ್ಟ ವರ್ಗದ ಬಗ್ಗೆ ಪಟೇಲ್ ಅವರಿಗೆ ಅಪಾರ ಕಾಳಜಿ ಇತ್ತು. ಸಾಕಷ್ಟು ವಿರೋಧವಿದ್ದರೂ ಸಂಪುಟದಲ್ಲಿ ಪರಿಶಿಷ್ಟರಿಗೆ ಆದ್ಯತೆ ನೀಡಿದ್ದರು. ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಿದ್ದರು. ಸದನದಲ್ಲಿ ಹಾಸ್ಯದ ಜತೆಗೇ ಚಾಟಿ ಬೀಸುತ್ತಿದ್ದರು. ಅಂತರ್ಜಾತಿಯ ವಿವಾಹಗಳು ಹೆಚ್ಚಾದರೆ ಜಾತಿ ವ್ಯವಸ್ಥೆ ದೂರವಾಗಲಿದೆ ಎಂದು ಪಟೇಲರು ನಂಬಿದ್ದರು’ ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿದ ಎಸ್.ಕೆ.ಕಾಂತಾ ಮಾತನಾಡಿ, ‘ಪಟೇಲರು ಒಮ್ಮೆ ಅಬಕಾರಿ ಹಾಗೂ ಕೆಇಬಿ ಎರಡೂ ಖಾತೆ ಹೊಂದಿದ್ದರು. ವಿರೋಧ ಪಕ್ಷದವರು ಪ್ರಶ್ನಿಸಿದಾಗ ‘ಕಿಕ್’ ಹಾಗೂ ‘ಶಾಕ್’ ಅಗ್ಗೀರಾ ಎಂದು ಸದನವನ್ನು ನಗೆಯಲ್ಲಿ ತೇಲುವಂತೆ ಮಾಡುತ್ತಿದ್ದರು’ ಎಂದು ನೆನಪಿಸಿಕೊಂಡರು.

‘ಸಂಸತ್‌ಗೆ ಆಯ್ಕೆಯಾದ ವೇಳೆ ಮಾತೃಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿ, ಮಾತೃಭಾಷೆ ಪ್ರೇಮ ಮೆರೆದಿದ್ದರು. ಶ್ರೀಮಂತ ಕುಟುಂಬದ ಹಿನ್ನೆಲೆಯುಳ್ಳವರು ಸಮಾಜವಾದಿ ಪಕ್ಷಕ್ಕೆ ಬರುವುದು ಕಡಿಮೆ ಇತ್ತು. ಆದರೆ, ಪಟೇಲರು ಸಮಾಜವಾದಿ ಪಕ್ಷಕ್ಕೆ ಬಂದು ಸರಳತೆ ತೋರಿದ್ದರು. ಅವರದ್ದು ತ್ಯಾಗಮಯಿ ವ್ಯಕ್ತಿತ್ವ’ ಎಂದು ಹೇಳಿದರು.

ಸಾಣೇಹಳ್ಳಿ ತರಳಬಾಳು ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ವಸತಿ ಸಚಿವ ವಿ.ಸೋಮಣ್ಣ, ವಿ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ, ಕಾರ್ಯಾಧ್ಯಕ್ಷ ಡಾ.ಅರುಣ್ ಸೋಮಣ್ಣ, ಕೋಶಾಧ್ಯಕ್ಷ ಡಾ.ಬಿ.ಎಸ್.ನವೀನ್, ಪ್ರಧಾನ ಕಾರ್ಯದರ್ಶಿ ಪಾಲನೇತ್ರ, ಕಾರ್ಯದರ್ಶಿ ದಿವ್ಯಾ ಅವಿನಾಶ್ ಹಾಜರಿದ್ದರು.

ಬಾಲವನ ಪ್ರಶಸ್ತಿಗೆ ಅಕ್ಷರ ಕೆ.ವಿ. ಭಾಜನ



ಪುತ್ತೂರು (ದಕ್ಷಿಣ ಕನ್ನಡ): ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪುತ್ತೂರಿನ ಪರ್ಲಡ್ಕದ ಡಾ.ಶಿವರಾಮ ಕಾರಂತ ಬಾಲವನ ಮತ್ತು ಪುತ್ತೂರು ಉಪ ವಿಭಾಗಾಧಿಕಾರಿ ಕಚೇರಿ ವತಿಯಿಂದ ಪ್ರತಿ ವರ್ಷ ನೀಡುವ ಡಾ. ಶಿವರಾಮ ಕಾರಂತ ಬಾಲವನ ಪ್ರಶಸ್ತಿಗೆ ಈ ವರ್ಷ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಹೆಗ್ಗೋಡಿನ ರಂಗಕರ್ಮಿ ಅಕ್ಷರ ಕೆ.ವಿ. ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿರುವ ಶಾಸಕ ಸಂಜೀವ ಮಠಂದೂರು, ಆಯ್ಕೆ ಸಮಿತಿಯ ಪದನಿಮಿತ್ತ ಕಾರ್ಯದರ್ಶಿ ಉಪವಿಭಾಗಾಧಿಕಾರಿ ಗಿರೀಶ್ ನಂದನ್. ಎಂ ತಿಳಿಸಿದ್ದಾರೆ.

ಪ್ರಶಸ್ತಿಯು ₹ 25,000 ನಗದು ಒಳಗೊಂಡಿದೆ. ಅ.10ರಂದು ಪುತ್ತೂರಿನಲ್ಲಿ ನಡೆಯುವ ಡಾ.ಕಾರಂತರ 121ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಶಾಸಕರು ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ 92ನೇ ಜನ್ಮದಿನ

ಅಭಿಮಾನಿಗಳಿಂದ 'ಸೌಹಾರ್ದ ಸಂಭ್ರಮ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಎಚ್. ಪಟೇಲ್ ಅವರ 92ನೇ ಜನ್ಮದಿನವನ್ನು ಅಭಿಮಾನಿಗಳು ಶನಿವಾರ ಜಾಥಾ ನಡೆಸಿ ಪಟೇಲರ ರಾಜಕೀಯೇತರ ವ್ಯಕ್ತಿತ್ವವನ್ನು ಸ್ಮರಿಸುವ ಮೂಲಕ 'ಸೌಹಾರ್ದ ಸಂಭ್ರಮ'ವನ್ನಾಗಿ ಆಚರಿಸಿದರು.

'ಮಸೀದಿಯಿಂದ ಮಂದಿರ' ದವರೆಗೆ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು. ಮೆಹಬೂಬ್ ನಗರದ ಮುಬಾರಕ್ ಮಸೀದಿ ಬಳಿ ವಿರಕ್ತಮಠದ ಬಸವಪ್ರಭು ಸ್ವಾಮೀಜಿ, ಮಸೀದಿಯ ಮಹಮ್ಮದ್ ನೂರುಲ್ಲಾ, ಚರ್ಚ್ ಧರ್ಮಗುರು ಪಾಸ್ಟರ್ ರಾಜಶೇಖರ್, ರೈತ ನಾಯಕ ತೇಜಸ್ವಿ ಪಟೇಲ್, ಮಹಿಮ ಪಟೇಲ್, ಪರಿಶಿಷ್ಟ ಸಮುದಾಯದ ಮುಖಂಡ ಹೆಗ್ಗೆರೆ ರಂಗಪ್ಪ, ನೆರಳು ಬೀಡಿ ಕಾರ್ಮಿಕ ಯೂನಿಯನ್‌ನ ಜಬೀನಾಖಾನಂ ಮುಂತಾದವರು ಸೌಹಾರ್ದ ಜಾಥಾಕ್ಕೆ ಚಾಲನೆ ನೀಡಿದರು.

ಲಂಬಾಣಿ ನೃತ್ಯ, ಚಂಡೆ ವಾದನ, ನಾಸಿಕ್ ಡೋಲ್, ಎತ್ತಿನ ಗಾಡಿ, ಜಗ್ಗಲಗಿ, ನಗಾರಿ ವಾದನಗಳು ಮೆರವಣಿಗೆಗೆ ಮೆರುಗು ನೀಡಿದವು. ಇಪ್ಟಾ ಕಲಾವಿದರಾದ ಐರಣಿ ಚಂದ್ರು, ಹೆಗ್ಗೆರೆ ರಂಗಪ್ಪ, ಶರಣಪ್ಪ, ಬಾನಪ್ಪ, ಸುರೇಶ್ ಕ್ರಾಂತಿಗೀತೆಗಳನ್ನು ಹಾಡಿದರು. ಜಾಥಾವು ಶಿವಯೋಗ ಮಂದಿರದಲ್ಲಿ ಸಮಾಪನಗೊಂಡಿತು.

ಮಧ್ಯಾಹ್ನದ ಬಳಿಕ ನಡೆದ ಸೌಹಾರ್ದ ಸಂಭ್ರಮ ಸಭಾ ಕಾರ್ಯಕ್ರಮವನ್ನು ಸಾಲುಮರದ ತಿಮ್ಮಕ್ಕ ಅವರು ಜೆ.ಎಚ್. ಪಟೇಲರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಉದ್ಘಾಟಿಸಿದರು. ಸಾಹಿತಿ ಕಾಳೇಗೌಡ ನಾಗವಾರ, ರೈತನಾಯಕ ಕೆ.ಟಿ. ಗಂಗಾಧರ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಪತ್ರಕರ್ತ ಎಸ್.ಆರ್. ಆರಾಧ್ಯ, ಪಟೇಲರ ಸಹೋದರಿ ಅನಸೂಯಾ ಪಟೇಲ್ ಅವರು ಜೆ.ಎಚ್. ಪಟೇಲರ ಕೊಡುಗೆಗಳನ್ನು ಮೆಲುಕು ಹಾಕಿದರು. ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ಹೊಸದಾಗಿ ಏಳು ಜಿಲ್ಲೆಗಳನ್ನು ರಚಿಸಿದ್ದನ್ನು ಸ್ಮರಿಸಲಾಯಿತು.

ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ 92ನೇ ಜನ್ಮದಿನದ ಪ್ರಯುಕ್ತ ದಾವಣಗೆರೆಯಲ್ಲಿ 'ಸೌಹಾರ್ದ ಸಂಭ್ರಮ' ಮೆರವಣಿಗೆ ನಡೆಯಿತು

ಸಿಇಟಿ– 500ವರೆಗಿನ ರ್‍ಯಾಂಕಿಂಗ್‌ನಲ್ಲಿ ವ್ಯತ್ಯಾಸ ಇಲ್ಲ: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪ್ರಸಕ್ತ ಸಾಲಿನಲ್ಲಿ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ರ್‍ಯಾಂಕಿಂಗ್ ಅನ್ನು ಹೈಕೋರ್ಟ್ ಆದೇಶದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪರಿಷ್ಕರಿಸಿ ಶನಿವಾರ ಪ್ರಕಟಿಸಿದೆ.

ಜುಲೈ 30ರಂದು ಪ್ರಕಟಿಸಿದ್ದ ರ್‍ಯಾಂಕಿಂಗ್ ಪಟ್ಟಿಗೆ ಹೋಲಿಸಿದರೆ, ಪರಿಷ್ಕೃತ ಪಟ್ಟಿಯಲ್ಲಿ ಮೊದಲ 500ವರೆಗಿನ ರ್‍ಯಾಂಕಿಂಗ್‌ನಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ.

ಈ ಬಗ್ಗೆ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, '2020–21ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ತೇರ್ಗಡೆ ಹೊಂದಿ, ಈ ವರ್ಷವೂ ಸಿಇಟಿ ಬರೆದಿದ್ದ 24 ಸಾವಿರ ಅಭ್ಯರ್ಥಿಗಳು 2021ರಲ್ಲಿ ಗಳಿಸಿದ್ದ ಅಂಕಗಳಲ್ಲಿ ಶೇ 6ರಷ್ಟನ್ನು ಕಡಿತಗೊಳಿಸಿದ ನಂತರ ಆ ವರ್ಷದ ಅಂಕಗಳ ಶೇ 50ರಷ್ಟು ಮತ್ತು ಸಿಇಟಿಯಲ್ಲಿ ಪಡೆದ ಅಂಕಗಳ ಶೇ 50ರಷ್ಟನ್ನು ಪರಿಗಣಿಸಿ ಪರಿಷ್ಕೃತ ಪಟ್ಟಿ ಸಿದ್ಧಪಡಿಸಲಾಗಿದೆ. ಹೊಸ ಪಟ್ಟಿಯಲ್ಲಿ 501ರಿಂದ 1,000ನೇ ರ್‍ಯಾಂಕ್ ಮಧ್ಯೆ ಹೋದ ವರ್ಷದ 14 ವಿದ್ಯಾರ್ಥಿಗಳು ಮಾತ್ರ ಸ್ಥಾನ ಪಡೆದಿದ್ದಾರೆ' ಎಂದು ಹೇಳಿದರು.

'1001ರಿಂದ 10 ಸಾವಿರವರೆಗಿನ ರ್‍ಯಾಂಕಿಂಗ್‌ನಲ್ಲಿ ಹೋದ ವರ್ಷದ 2,063 ಅಭ್ಯರ್ಥಿಗಳು, 10,001ರಿಂದ 1 ಲಕ್ಷದವರೆಗಿನ ರ್‍ಯಾಂಕಿಂಗ್‌ನಲ್ಲಿ ಹೋದ ವರ್ಷದ 22,022 ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ. ಪರಿಷ್ಕೃತ ಪಟ್ಟಿಯು ಎಂಜಿನಿಯರಿಂಗ್, ಕೃಷಿ, ಯೋಗ, ನ್ಯಾಚುರೋಪತಿ ಕೋರ್ಸುಗಳಿಗೆ ಮಾತ್ರ ಅನ್ವಯ ಆಗಲಿದೆ. ಪಶು ವೈದ್ಯಕೀಯ ಮತ್ತು ಫಾರ್ಮಸಿ ಕೋರ್ಸುಗಳಿಗೆ ಈ ಹಿಂದೆ ನೀಡಿರುವಂತೆ ಸಿಇಟಿ ಅಂಕಗಳನ್ನು ಮಾತ್ರ ಪರಿಗಣಿಸಿ ರ್‍ಯಾಂಕಿಂಗ್ ನಿರ್ಧರಿಸಲಾಗಿದೆ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಕೋವಿಡ್ ಕಾರಣದಿಂದಾಗಿ 2021ರಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ನಡೆದಿರಲಿಲ್ಲ. ಆ ಸಾಲಿನ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪಡೆದ ಅಂಕ ಮತ್ತು ಪ್ರಥಮ ಪಿಯುಸಿ ಅಂಕಗಳನ್ನು ಪರಿಗಣಿಸಿ ತೇರ್ಗಡೆಗೊಳಿಸಲಾಗಿತ್ತು. ಬಳಿಕ, ದ್ವಿತೀಯ ಪಿಯುಸಿ ಅಂಕಗಳನ್ನು ಮಾತ್ರ ಪರಿಗಣಿಸಿ ಅವರಿಗೆ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ನೀಡಲಾಗಿತ್ತು. ಅಂಥವರ ಪೈಕಿ, 24 ಸಾವಿರ ವಿದ್ಯಾರ್ಥಿಗಳು ಈ ವರ್ಷವೂ ಸಿಇಟಿ ಬರೆದಿದ್ದರು. ತಮ್ಮ ಸಿಇಟಿ ಅಂಕವನ್ನೂ ಪರಿಗಣಿಸಬೇಕೆಂದು ಕೋರಿ ವಿದ್ಯಾರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ರಾಜೇಶ್ ಗೌಡ ರೇಷ್ಮೆ ಅಭಿವೃದ್ಧಿ ಆಯುಕ್ತ

ಬೆಂಗಳೂರು: ಬದಲಿ ನಿವೇಶನ ಹಂಚಿಕೆಯಲ್ಲಿ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಬಿಡಿಎ ಆಯುಕ್ತರ ಹುದ್ದೆಯಿಂದ ವರ್ಗಾವಣೆಯಾಗಿದ್ದ ಐಎಎಸ್ ಅಧಿಕಾರಿ ಎಂ.ಬಿ. ರಾಜೇಶ್ ಗೌಡ ಅವರನ್ನು ರೇಷ್ಮೆ ಅಭಿವೃದ್ಧಿ ಆಯುಕ್ತರು ಮತ್ತು ರೇಷ್ಮೆ ಇಲಾಖೆ ನಿರ್ದೇಶಕರ ಹುದ್ದೆಗೆ ನೇಮಿಸಿ ಶನಿವಾರ ಆದೇಶ ಹೊರಡಿಸಲಾಗಿದೆ.

ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಉಲ್ಲಂಘಿಸಿರುವುದಕ್ಕಾಗಿ ರಾಜೇಶ್ ಗೌಡ ವಿರುದ್ಧ ಸುಪ್ರೀಂಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಬಳಿಕ ಅವರನ್ನು ಬಿಡಿಎ ಆಯುಕ್ತರ ಹುದ್ದೆಯಿಂದ ಆಗಸ್ಟ್ 26ರಂದು ವರ್ಗಾವಣೆ ಮಾಡಲಾಗಿತ್ತು. ಯಾವುದೇ ಹುದ್ದೆ ತೋರಿಸಿರಿಲ್ಲ. ಹತ್ತು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಶನಿವಾರ ಆದೇಶ ಹೊರಡಿಸಿದ್ದು, ರಾಜೇಶ್ ಗೌಡ ಅವರಿಗೆ ಹುದ್ದೆ ತೋರಿಸಲಾಗಿದೆ.

ಇತರ ವರ್ಗಾವಣೆಗಳು: ಪ್ರಿಯಾಂಕಾ ಮೇರಿ ಫ್ರಾನ್ಸಿಸ್– ಆಯುಕ್ತೆ, ಪಂಚಾಯತ್ ರಾಜ್ ಇಲಾಖೆ; ಶ್ರೀವಿದ್ಯಾ ಪಿ.– ಹೆಚ್ಚುವರಿ ಕಾರ್ಯದರ್ಶಿ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ; ಹೆಪ್ಸಿಬಾ ರಾಣಿ ಕೊರ್ಲಪಾಟಿ– ಜಂಟಿ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ; ಡಾ. ಶಿವಶಂಕರ ಎನ್.– ಕಾರ್ಯನಿರ್ವಾಹಕ ನಿರ್ದೇಶಕ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್.

ಜಾನಕಿ ಕೆ.ಎಂ.– ನಿರ್ದೇಶಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ಝುಹೆರಾ ನಸೀಂ– ಜಂಟಿ ನಿರ್ದೇಶಕಿ, ನಗರ ಭೂಸಾರಿಗೆ ನಿರ್ದೇಶನಾಲಯ; ಶುಭಾ ಕಲ್ಯಾಣ್– ನಿರ್ದೇಶಕಿ, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ; ಶಿಲ್ಪಾ ಶರ್ಮ– ವ್ಯವಸ್ಥಾಪಕ ನಿರ್ದೇಶಕಿ, ಕರ್ನಾಟಕ ವಿದ್ಯುತ್ ಕಾರ್ಖಾನೆ; ಚಂದ್ರಶೇಖರ್ ಎನ್.– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ.

ಚಿತ್ರದುರ್ಗ: ಶರಣ ಸಂಸ್ಕೃತಿ ಉತ್ಸವ 4ರಿಂದ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಪ್ರತಿ ವರ್ಷ 9 ದಿನಗಳ ಕಾಲ ನಡೆಯುತ್ತಿದ್ದ ಶರಣ ಸಂಸ್ಕೃತಿ ಉತ್ಸವವನ್ನು ಈ ಬಾರಿ ಮಠದಲ್ಲಿ ನಡೆದ ಬೆಳವಣಿಗೆಯಿಂದಾಗಿ ಅಕ್ಟೋಬರ್ 4ರಿಂದ 6ರವರೆಗೆ ಸರಳವಾಗಿ ಆಚರಿಸಲಾಗುತ್ತಿದೆ' ಎಂದು ಉತ್ಸವ ಸಮಿತಿ ಗೌರವಾಧ್ಯಕ್ಷ ಬಸವ ಕುಮಾರ ಸ್ವಾಮೀಜಿ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉತ್ಸವದ ಪ್ರಮುಖ ಘಟ್ಟವಾದ ಶೂನ್ಯಪೀಠಾರೋಹಣವನ್ನು ಅ.6ರಂದು ಬೆಳಿಗ್ಗೆ ಅಲಂಕೃತ ಮಠದ ಆಸನದ ಮೇಲೆ ಮುರಿಗಾ ಶಾಂತವೀರ ಸ್ವಾಮೀಜಿ ಅವರ ಭಾವಚಿತ್ರವನ್ನಿಟ್ಟು ಪುಷ್ಪಾರ್ಚನೆ ಮಾಡುವ ಮೂಲಕ ನೆರವೇರಿಸಲಾಗುತ್ತದೆ. ಹೆಬ್ಬಾಳು ವಿರಕ್ತಮಠದ ಮಹಾಂತ ರುದ್ರೇಶ್ವರ ಸ್ವಾಮೀಜಿ ನೇತೃತ್ವ ವಹಿಸುವರು' ಎಂದರು.

ಬಸವ ಕುಮಾರ ಸ್ವಾಮೀಜಿ

ಮಠದ ಪೀಠಾಧ್ಯಕ್ಷರು ಚಿನ್ನದ ಕಿರೀಟ, ಬಂಗಾರದ ಪಾದುಕೆ ಹಾಗೂ ಆಭರಣ ಧರಿಸಿ ರತ್ನಖಚಿತ ಸಿಂಹಾಸನದ ಪೀಠಾರೋಹಣ ಮಾಡುವುದು ಮಠದ ವಾಡಿಕೆಯಾಗಿತ್ತು. ಶಿವಮೂರ್ತಿ ಮುರುಘಾ ಶರಣರು ಚಿನ್ನದ ಬದಲು ರುದ್ರಾಕ್ಷಿ ಕಿರೀಟ ಧರಿಸುವ ಪರಂಪರೆ ಆರಂಭಿಸಿದರು. ಮಠದ ಪಾದುಕೆ ಧರಿಸಿ, ಮಠದ ಆಸನದ ಮೇಲೆ ಕುಳಿತು ಶೂನ್ಯಪೀಠಾರೋಹಣ ಮಾಡುತ್ತಿದ್ದರು.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ: 7ರಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೀಸಲಾತಿ ಪ್ರಮಾಣ ಹೆಚ್ಚಿಸುವ ಕುರಿತಂತೆ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಸಮಿತಿ ನೀಡಿರುವ ವರದಿ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದೇ 7ರಂದು ವಿಧಾನ ಮಂಡಲದ ಉಭಯ ಸದನಗಳ ನಾಯಕರ ಸಭೆ ಕರೆದಿದ್ದಾರೆ.

ಮುಖ್ಯಮಂತ್ರಿಯ ಗೃಹ ಕಚೇರಿ ಕೃಷ್ಣಾದಲ್ಲಿ ಬೆಳಿಗ್ಗೆ 11.30ಕ್ಕೆ ನಡೆಯಲಿರುವ ಈ ಸಭೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಭಾಗವಹಿಸಲಿದ್ದಾರೆ.

ಪರಿಶಿಷ್ಟ ಜಾತಿಯವರಿಗೆ ಶೇ 15ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ 3ರಿಂದ ಶೇ 7.5ಕ್ಕೆ ಮೀಸಲಾತಿ ಹೆಚ್ಚಿಸುವಂತೆ ಸರ್ಕಾರಕ್ಕೆ ಸಮಿತಿ ವರದಿ ನೀಡಿದೆ. ವರದಿಯಲ್ಲಿರುವ ಎಲ್ಲ ಅಂಶಗಳ ಕುರಿತು ಎಲ್ಲ ಪಕ್ಷಗಳ ಮುಖಂಡರ ಸಲಹೆ, ಅಭಿಪ್ರಾಯ ಪಡೆಯಲು ಮುಖ್ಯಮಂತ್ರಿ ಬೊಮ್ಮಾಯಿ ಅವರು ನಿರ್ಧರಿಸಿದ್ದಾರೆ.

ನ್ಯಾ. ನಾಗಮೋಹನದಾಸ್ ಸಮಿತಿಯ ವರದಿಯನ್ನು ಜಾರಿ ಮಾಡುವಂತೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು 200ಕ್ಕೂ ಹೆಚ್ಚುದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ.

ವಸತಿನಿಲಯ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ವತಿಯಿಂದ 2022–23ನೇ ಶೈಕ್ಷಣಿಕ ಸಾಲಿನ ವಸತಿನಿಲಯದ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ತಾಂತ್ರಿಕ, ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ವೈದ್ಯಕೀಯ ಹಾಗೂ ಔಷಧ ವಿಜ್ಞಾನ ಪದವಿ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ಈಡಿಗ ಜನಾಂಗದ ಬಡ ಹಾಗೂ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿಗಳನ್ನು ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಈಡಿಗ ಭವನ, ನಂ.185, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಂಗಳೂರು–560020 ಇಲ್ಲಿಗೆ ಅಕ್ಟೋಬರ್ 30ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 08048145442ಗೆ ಸಂಪರ್ಕಿಸಿ.

ಅಗತ್ಯಕ್ಕೆ ತಕ್ಕಂತೆ ಇಂಗ್ಲಿಷ್ ಶಿಕ್ಷಕರ ನೇಮಕವಾಗುತ್ತಿಲ್ಲ: ನಾಗೇಶ್

ಅರಸೀಕೆರೆ (ಹಾಸನ ಜಿಲ್ಲೆ): 'ರಾಜ್ಯದಲ್ಲಿ ಆಂಗ್ಲ ಮಾಧ್ಯಮದ ಪಬ್ಲಿಕ್ ಶಾಲೆಗಳನ್ನು ಸ್ಥಾಪಿಸಿ ಮೂರು ವರ್ಷಗಳಾದರೂ ಅಗತ್ಯಕ್ಕೆ ತಕ್ಕಂತೆ ಇಂಗ್ಲಿಷ್ ಶಿಕ್ಷಕರನ್ನು ನೇಮಿಸಲು ಸಾಧ್ಯವಾಗುತ್ತಿಲ್ಲ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ನಗರದಲ್ಲಿ ಶನಿವಾರ ಸೇವಾ ಸಂಕಲ್ಪ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತಿದ್ದರೂ ಪೋಷಕರು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿರುವುದು ವಿಷಾದನೀಯ. ಶಿಕ್ಷಣ ವ್ಯಾಪಾರೀಕರಣವಾಗುತ್ತಿರುವುದು ವಿಪರ್ಯಾಸ' ಎಂದರು.

'ನಾನು ರಾಜ್ಯದೆಲ್ಲೆಡೆ ಸುತ್ತಿ ಶಿಕ್ಷಣ ಮತ್ತು ಸರ್ಕಾರಿ ಶಾಲೆಗಳ ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದ ಸಂದರ್ಭ, ಎಲ್ಲರೂ ಒಳ್ಳೆಯ ಶಿಕ್ಷಕರನ್ನು ಹಾಗೂ ಸಂಸ್ಕಾರಯುತ ಶಿಕ್ಷಣ ಬೇಕೆಂದು ಕೇಳಲಿಲ್ಲ. ಆಂಗ್ಲ ಮಾಧ್ಯಮದ ಶಾಲೆಗಳನ್ನು ಕೊಡಿ ಎಂದು ಕೇಳುತ್ತಿದ್ದರು' ಎಂದರು.

ಕಥಾ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಅನೇಕಲ್ ಘಟಕ, ಪ್ರಜಾತಾರೆ ಬಳಗ, ಗಂಧದ ನಾಡು ಜನಪರ ವೇದಿಕೆ ಹಾಗೂ ಕೌದಿ ಪ್ರಕಾಶನದ ಸಹಯೋಗದಲ್ಲಿ 'ಕಥಾ ಸಮಯ' ವಾರ್ಷಿಕ ಕಥಾ ಸ್ಪರ್ಧೆ ಆಯೋಜಿಸಲಾಗಿದೆ.

45 ವರ್ಷದೊಳಗಿನವರು ಮಾತ್ರ ಕಥೆ ಕಳುಹಿಸಬಹುದು. ಸ್ಪರ್ಧೆಗೆ ಕಳುಹಿಸುವ ಕಥೆ ಸಾಮಾಜಿಕ ಜಾಲತಾಣ ಸೇರಿ ಯಾವುದೇ ಮಾಧ್ಯಮದಲ್ಲಿ ಪ್ರಕಟವಾಗಿರಬಾರದು. ಬಹುಮಾನಿತ ಕಥೆಗಳನ್ನೂ ಒಳಗೊಂಡಂತೆ ಆಯ್ದ ಮೊದಲ 20 ಕಥೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು.

ಮೊದಲ ಮೂರು ಅತ್ಯುತ್ತಮ ಕಥೆಗಳಿಗೆ ತಲಾ ₹10ಸಾವಿರ ಬಹುಮಾನ ನೀಡಲಾಗುವುದು. ಆಸಕ್ತರು ನವೆಂಬರ್ 1ರೊಳಗೆ anekalkathasparde@gmail.comಗೆ ಇ-ಮೇಲ್ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ 7795212012/9380697082ಗೆ ಸಂಪರ್ಕಿಸಿ.

ನಿಧನ ವಾರ್ತೆ

ನಿವೃತ್ತ ಎಡಿಜಿಪಿ ಕೆ.ಎ. ಹಫೀಜ್

ಬೆಂಗಳೂರು: ರಾಜ್ಯದ ನಿವೃತ್ತ ಎಡಿಜಿಪಿ ಕೆ.ಎ. ಹಫೀಜ್ (69) ಅವರು ಆಂಧ್ರಪ್ರದೇಶದ ಗುಂಟೂರಿನಲ್ಲಿ ಶುಕ್ರವಾರ ನಿಧನರಾದರು.

ಬಳ್ಳಾರಿಯ ಹಫೀಜ್ ಅವರು ಹಾಸನ, ಚಿಕ್ಕಮಗಳೂರು ಎಸ್ಪಿ ಹಾಗೂ ಬೆಂಗಳೂರು ಹೆಚ್ಚುವರಿ ಕಮಿಷನರ್ ಆಗಿ ಕೆಲಸ ಮಾಡಿದ್ದರು. ರೈಲ್ವೆ ಎಡಿಜಿಪಿ ಆಗಿ ನಿವೃತ್ತರಾಗಿದ್ದರು. ಬಳಿಕ, ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಸವಿದ್ದರು.

ಹಫೀಜ್ ಅವರಿಗೆ ಪುತ್ರಿ ಹಾಗೂ ಇಬ್ಬರು ಪುತ್ರರಿದ್ದಾರೆ. ಹಿರಿಯ ಮಗ ಆಶೀಫ್, ರೈಲ್ವೆ ಇಲಾಖೆಯಲ್ಲಿ ಹಿರಿಯ ಸಿಪಿಒ ಆಗಿದ್ದಾರೆ. ಕಿರಿಯ ಮಗ ಆರೀಫ್ ಗುಂಟೂರು ಎಸ್ಪಿ ಆಗಿದ್ದು, ಕೆಲ ದಿನಗಳಿಂದ ಅವರ ಮನೆಯಲ್ಲಿ ಹಫೀಜ್ ಉಳಿದುಕೊಂಡಿದ್ದರು.

'ಹಫೀಜ್ ಅವರ ಅಂತ್ಯಕ್ರಿಯೆಯನ್ನು ಬಳ್ಳಾರಿಯಲ್ಲಿ ಶನಿವಾರ ನೆರವೇರಿಸಲಾಯಿತು' ಎಂದು ಕುಟುಂಬದವರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ವಿಭಾಗ, ಕೆ. ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 6 ದಿನಾಂಕ: 30/09/2022

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು /ಮಾಡಲು/ ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ (ಪೂರ್ವ ಅರ್ಹತೆ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ 17.00 ಗಂಟೆಗೆ
ಜಿ–37/22–23	ಟಿಕೇಟ್ ಮುದ್ರಣಕ್ಕಾಗಿ ಮ್ಯಾಪ್ಲಿಥೋ ಪೇಪರ್ ರೀಲ್ಸ್‌ಗಳ ಖರೀದಿ	4.10	25/10/2022
ಜಿ–40/22–23	ಥರ್ಮಲ್ ಪೇಪರ್ ಸ್ಲಿಟರ್ ಟೇಪ್‌ಲೆಸ್ ರಿ–ವೈಂಡರ್(ವಿಥೌಟ್ ಕೋರ್) ಮಷೀನ್, ಹೈಡ್ರಾಲಿಕ್ ಬೇಲಿಂಗ್ ಮೆಷೀನ್, ವೆಬ್–ಆಫ್‌ಸೆಟ್ ಪ್ರಿಂಟಿಂಗ್ ಮೇಷಿನ್ & ಕಂಪ್ಯೂಟರ್ ಸ್ಟೇಷನರಿ ಪ್ರಿಂಟಿಂಗ್ ಮೇಷಿನ್.	1.50	31/10/2022
ಜಿ–41/22–23	ಸಪ್ಲೈ, ಇನ್‌ಸ್ಟಾಲೇಶನ್ ಮತ್ತು ಕಮೀಷನಿಂಗ್ ಆಫ್ ಪೈಂಟ್ ಬೂತ್	2.50	31/10/2022
ಜಿ–42/22–23	ಸಪ್ಲೈ, ಇನ್‌ಸ್ಟಾಲೇಶನ್ ಮತ್ತು ಕಮೀಷನಿಂಗ್ ಆಫ್ 24 ವೋಲ್ಟ್ ಮತ್ತು 1.5 ಕೆ.ವಿ.ಇನ್ವರ್ಟರ್‌ಗಳು ಟರ್ನ್‌ಕೀ ಆಧಾರದ ಮೇಲೆ	0.10	15/10/2022
ಜಿ–43/22–23	ಬನಿಯನ್ ನೂಲು ಹತ್ತಿ ತ್ಯಾಜ್ಯಗಳ ಖರೀದಿ	0.40	17/10/2022
ಜಿ–44/22–23	ಇಂಜಿನ್ ಬ್ಲಾಕ್ ಸ್ವಚತೆಗಾಗಿ ಕೈಗಾರಿಕಾ ಡಿಗ್ರೀಸರ್‌ಗಳ ಖರೀದಿ	0.30	15/10/2022
ಜಿ–45/22–23	ಜೆ.ಕೆ.ಡೋರ್ ರಬ್ಬರ್‌ಗಳ ಖರೀದಿ	0.27	17/10/2022
ಜಿ–46/22–23	ಸಪ್ಲೈ, ಇನ್‌ಸ್ಟಾಲೇಶನ್ ಮತ್ತು ಕಮೀಷನಿಂಗ್ ಆಫ್ ಗ್ಯಾಸ್ ವೆಲ್ಡಿಂಗ್ ಸೆಟ್ ಮತ್ತು ಪ್ಲಾಸ್ಮಾ ಕಟಿಂಗ್ ಮೆಷೀನ್ ಟರ್ನ್‌ಕೀ ಆಧಾರದ ಮೇಲೆ	0.10	31/10/2022
ಜಿ–48/22–23	ಸಪ್ಲೈ ಇನ್‌ಸ್ಟಾಲೇಶನ್ ಮತ್ತು ಕಮೀಷನಿಂಗ್ ಆಫ್ ಮೇಜರ್ ಗ್ಯಾರೇಜ್ ಇಕ್ವಿಪ್‌ಮೆಂಟ್ಸ್ ಟರ್ನ್‌ಕೀ ಆಧಾರದ ಮೇಲೆ	7.00	31/10/2022
ಜಿ–49/22–23	ಸಪ್ಲೈ, ಇನ್‌ಸ್ಟಾಲೇಶನ್ ಕಮೀಶನಿಂಗ್ ಆಫ್ ಸ್ಕ್ರ್ಯೂ ಟೈಪ್ ಏರ್ ಕಂಪ್ರೆಸರ್ ಮತ್ತು ನೈಟ್ರೋಜನ್ ಜನರೇಶನ್ ಇನ್‌ಫ್ಲೇಟರ್ ಸುಟೆಬಲ್ ಫಾರ್ ಟೈರ್ ಫಿಲ್ಲಿಂಗ್ ಆಫ್ ಪ್ಯಾಸೆಂಜರ್ ಬಸ್ ಟರ್ನ್‌ಕೀ ಆಧಾರದ ಮೇಲೆ.	3.00	31/10/2022
ಜಿ–50/22–23	GHTಬೋಲ್ಟ್, GHT 'U' ಬೋಲ್ಟ್ ಹಾಗೂ ನೈಲಾಕ್ ನಟ್ಸ್ ಖರೀದಿ	2.00	17/10/2022
ಎ–11/22–23	ವೈಪರ್ ಮೋಟಾರ್ಸ್, ಆರ್ಮ್ಸ್ & ಬ್ಲೇಡ್ಸ್ ಖರೀದಿ	6.00	17/10/2022
ಎ–12/22–23	ಬಾಲ್ ಮತ್ತು ರೋಲರ್ ಬೇರಿಂಗ್‌ಗಳ ಖರೀದಿ	4.53	31/10/2022
ಎ–13/22–23	ಪ್ರೋಪೆಲ್ಲರ್ ಶಾಫ್ಟ್ ಮತ್ತು ಕಾಂಪೋನೆಂಟ್ಸ್ ಖರೀದಿ	1.81	17/10/2022
ಎ–14/22–23	ವಾಟರ್ ಪಂಪ್ಸ್ ಮತ್ತು ಪಾರ್ಟ್ಸ್‌ಗಳ ಖರೀದಿ	4.00	31/10/2022
ಎ–15/22–23	ಕಿಂಗ್ ಪಿನ್‌ಮತ್ತು ಕಾಂಪೊನೆಂಟ್ಸ್ ಖರೀದಿ	4.80	31/10/2022
ಎ–16/22–23	ಸಿಲಿಂಡರ್ ಲೈನರ್ಸ್‌ಗಳ ಖರೀದಿ	1.00	17/10/2022
ಎ–17/22–23	ಫ್ಯೂಯಲ್ ಇಂಜೆಕ್ಷನ್ ಪೈಪ್‌ಗಳು & ಲೀಕ್ ಆಫ್ ಪೈಪ್‌ಗಳ ಖರೀದಿ	0.70	17/10/2022
ಎ–18/22–23	ವ್ಹೀಲ್ ಬೋಲ್ಟ್ಸ್ ಮತ್ತು ನಟ್ಸ್‌ಗಳ ಖರೀದಿ	0.30	17/10/2022
	ಅಲ್ಪಾವಧಿ ಟೆಂಡರ್		
ಜಿ–47/22–23	ಸಿಸಿಟಿವಿ ಕಣ್ಗಾವಲು ವ್ಯವಸ್ಥೆ ಸರಬರಾಜು ಹಾಗೂ ಅಳವಡಿಸುವ ಕುರಿತು.	8.00	13/10/2022
ಜಿ–51/22–23	ಅಲ್ಯೂಮಿನಿಯಂ ಶೀಟ್ಸ್ & ಎಕ್ಸ್‌ಟ್ರೂಷನ್ಸ್‌ಗಳ ಖರೀದಿ	3.00	11/10/2022
ಜಿ–52/22–23	ಕರಾರಸಾನಿಗಮದ ಮಂಗಳೂರು ವಿಭಾಗ, ವಾಹನ ಚಾಲಕರ ಸೇವೆಗಳನ್ನು ಒದಗಿಸುವ ಏಜೆನ್ಸಿಯನ್ನು ನೇಮಿಸುವ ಕುರಿತು (ಮಂಗಳೂರು ಡಿಪೋ 1,2,3, ಉಡುಪಿ ಮತ್ತು ಕುಂದಾಪುರ ಡಿಪೋಗಳು)	5.40	10/10/2022
ಜಿ–53/22–23	ಕರಾರಸಾನಿಗಮದ ಪುತ್ತೂರು ವಿಭಾಗ, ವಾಹನ ಚಾಲಕರ ಸೇವೆಗಳನ್ನು ಒದಗಿಸುವ ಏಜೆನ್ಸಿಯನ್ನು ನೇಮಿಸುವ ಕುರಿತು (ದರ್ಮಸ್ಥಳ, ಬಿ.ಸಿ.ರೋಡ್, ಸುಳ್ಯ ಮತ್ತು ಪುತ್ತೂರು ಡಿಪೋಗಳು)	3.60	10/10/2022
ಜಿ–39/22–23	ಕರಾರಸಾನಿಗಮದ ರಾಮನಗರ ವಿಭಾಗ, ವಾಹನ ಚಾಲಕರ ಸೇವೆಗಳನ್ನು ಒದಗಿಸುವ ಏಜೆನ್ಸಿಯನ್ನು ನೇಮಿಸುವ ಕುರಿತು (ರಾಮನಗರ,ಚನ್ನಪಟ್ಟಣ, ಮಾಗಡಿ, ಕನಕಪುರ, ಹಾರೋಹಳ್ಳಿ ಮತ್ತು ಆನೇಕಲ್ ಡಿಪೋಗಳು)	1.80	10/10/2022
ಜಿ–38/22–23	ಕರಾರಸಾನಿಗಮದ ಚಾಮರಾಜನಗರ ವಿಭಾಗ, ವಾಹನ ಚಾಲಕರ ಸೇವೆಗಳನ್ನು ಒದಗಿಸುವ ಏಜೆನ್ಸಿಯನ್ನು ನೇಮಿಸುವ ಕುರಿತು(ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ನಂಜನಗೂಡು ಡಿಪೋಗಳು)	1.80	10/10/2022

ಜಿ–20/22–23, ಜಿ–02/22–23, ಜಿ–11/22–23, ಜಿ–21/22–23, ಜಿ–24/22–23, ಜಿ–04/21–22, ಜಿ–92/–19–20, ಎ–1 7/21–22, ಎ–24/21–22, ಎ–25/21–22 ಟೆಂಡರ್‌ಗಳನ್ನು ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ:–ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ: 080–22230960/22234115, ಕರೆಮಾಡಿ / **eprocurement helpdesk@gmail.com**, ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತದೆ. ಬಿಡ್ಡುದಾರರಿಗೆ ಕರಾರಸಾನಿಗಮದಿಂದ ಸಹಾಯದ ಅಗತ್ಯವಿದ್ದರೆ **cosp@ksrtc.org**, ನಲ್ಲಿ ಸಂಪರ್ಕಿಸಬಹುದು, (ಸಂಪರ್ಕಿಸಿ 7760990225,7760990224).

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು (ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಜಿಎ/2484/2022–23

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ

ಮುಖ್ಯ ಅಭಿಯಂತರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
ಮಿನಿ ವಿಧಾನಸೌಧ ಎದುರುಗಡೆ, ಐವಾನ–ಇ–ಶಾಹಿ ರಸ್ತೆ, ಕಲಬುರಗಿ–585102, ದೂ: 08472–220817,
ಫಾ: 08472–260818, E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಸಅ–1/ಕೆ.ಕೆ.ಆರ್.ಡಿ.ಬಿ–ಸುರಪುರ/868/2022–23 ದಿನಾಂಕ: 01–10–2022

:: ಟೆಂಡರ್ ಪ್ರಕಟಣೆ ::

1) ಕಾಮಗಾರಿ ವಿವರ: 2022–23 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸರ್ಕಾರದ ವಿವೇಚನಾ ನಿಧಿಯಡಿ ಸುರಪುರ ನಗರಸಭೆ ವ್ಯಾಪ್ತಿಯಲ್ಲಿನ ಕುಡಿಯುವ ನೀರು ಸರಬರಾಜುವಿಗಾಗಿ ಫ್ಲೋ ಕಂಟ್ರೋಲ್ ವಾಲ್ವ್, ಪ್ರೆಜರ್ ಲಾಗರ್, ಫ್ಲೋ ಮೀಟರ್ ಹಾಗೂ ಆಕ್ಚುವೇಟರ್ ಅಳವಡಿಸುವ ಕಾಮಗಾರಿ (ಲಂಪಸಮ್) (**ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್‌ಡಿಬಿ/2022–23/ ಡಬ್ಲ್ಯೂಎಸ್/ವರ್ಕ_ಇಂಡೆಂಟ್3230**), 2) ಕಾಮಗಾರಿ ಅಂದಾಜು ಮೊತ್ತ: **ರೂ. 382.27 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ)**, 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ.5,74,000/–, 5) ಕಾಮಗಾರಿಯ ಅವಧಿ: 02 ತಿಂಗಳು (ಮಳೆಗಾಲ ಸೇರಿ), 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಷನ್ ಕೊನೆಯ ದಿನಾಂಕ : **18–10–2022 ಸಮಯ : 11:00 ಗಂಟೆಯವರೆಗೆ,** 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ:**02–11–2022 ಸಮಯ : 17:00 ಗಂಟೆಯವರೆಗೆ,** 8) ಟೆಂಡರ್ ತೆರೆಯುವ ದಿನಾಂಕ: **04–11–2022 ಸಮಯ : 11:00 ನಂತರ.** 9) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, ಮಿನಿ ವಿಧಾನಸೌಧ ಎದುರುಗಡೆ, ಐವಾನ–ಇ–ಶಾಹಿ ರಸ್ತೆ, ಕಲಬುರಗಿ–585102 ದೂ: 08472–220817, E-mail ID : kwbceklb14@gmail.com, 10) ಅಂತರಜಾಲ ತಾಣದ ವಿಳಾಸ: www.eproc.karnataka.gov.in.

ಸಹಿ/– ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/688/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/3131/2022–23 ದಿನಾಂಕ : 29–09–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.in ವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು –ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಸಬಹುದಾಗಿದೆ.

ಕ್ರ ಸಂ	ಕಾಮಗಾರಿಗಳ ವಿವರ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	5054–(ಯೋಜನೆ)– ರಾಜ್ಯ ಹೆದ್ದಾರಿಗಳ ಸುಧಾರಣೆ :	
1)	KPWD/2022-23/RD/WORK_INDENT156703	300.00
	5054–(ಯೋಜನೆ)– ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ :	
2)	KPWD/2022-23/RD/WORK_INDENT155569	450.00
3)	KPWD/2022-23/BG/WORK_INDENT154784	600.00
4)	KPWD/2022-23/RD/WORK_INDENT151863/CALL-2	92.48
	8443–ಠೇವಣಿ ಕಾಮಗಾರಿಗಳು :	
5)	KPWD/2022-23/BD/WORK_INDENT155340	100.00
6)	KPWD/2022-23/RD/WORK_INDENT156259	50.59
7)	KPWD/2022-23/RD/WORK_INDENT156258	50.59

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **06–10–2022 ರಂದು 12.00 ಗಂಟೆಯ ವರೆಗೆ.** ಆ) ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **10–10–2022 ರಂದು 16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **11–10–2022ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/502/ಎಂಸಿಎ/2022–23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.33/ಎ, ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ವಲಯ ಕಛೇರಿ, ಪಿ. ಬಿ. ರಸ್ತೆ, ಧಾರವಾಡ–580 004
ದೂರವಾಣಿ: 0836–2467323 ವೆಬ್ ಸೈಟ್ : www.kiadb.in e-mail : dodharwad@kiadb.in

ಸಂಖ್ಯೆ: ಕ.ಕೈ.ಪ್ರ.ಅ.ಮಂ/ಧಾ/ಕಾ.ಅ./1403/2022–23 ದಿನಾಂಕ: 28/09/2022

ವಸತಿ ಗೃಹಗಳ ಹಂಚಿಕೆ ಪ್ರಕಟಣೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೆಐಎಡಿಬಿ ಕಾಯ್ದೆ 1966 ರಡಿಯಲ್ಲಿ ರಚಿತವಾದ ಶಾಸನಬದ್ದ ಸಂಸ್ಥೆಯಾಗಿದ್ದು ರಾಜ್ಯಾದ್ಯಂತ ಕೈಗಾರಿಕಾ ಪ್ರದೇಶಗಳ ಸ್ಥಾಪನೆ ಮತ್ತು ಕೈಗಾರಿಕೆಗಳ ಶೀಘ್ರಗತಿ ಹಾಗೂ ವ್ಯವಸ್ಥಿತ ಬೆಳವಣಿಗೆಯನ್ನು ಉತ್ತೇಜಿಸುವುದು ಸದರಿ ಕಾಯ್ದೆಯ ಉದ್ದೇಶವಾಗಿರುತ್ತದೆ.

ದಿನಾಂಕ: 05.04.2016 ರಂದು ನಡೆದ ಮಂಡಳಿ ಸಭೆಯಲ್ಲಿ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಿಸಲಾದ ವಾಸದ ಗೃಹ ಹಂಚಿಕೆ ದರವನ್ನು ನಿಗದಿಪಡಿಸಿದ್ದು, ದಿನಾಂಕ: 17.02.2020 ರಂದು ನಡೆದ ಮಂಡಳಿ ಸಭೆಯಲ್ಲಿ ವಾಸದ ಗೃಹ ಹಂಚಿಕೆ ಕುರಿತಾದ ಮಾರ್ಗಸೂಚಿಗಳನ್ನು ರೂಪಿಸಲಾಗಿರುತ್ತದೆ ಮತ್ತು ಸರ್ಕಾರದ ಆದೇಶ ಸಂ:ಸಿಐ 106 ಎಸ್‌ಪಿಕ್ಯೂ (ಇ) 2020 ದಿನಾಂಕ: 06.06.2020 ರನ್ವಯ ವಾಸದ ಗೃಹ ವಿಲೇವಾರಿ ಮಾಡುವ ಬಗ್ಗೆ ಸಮಿತಿಯನ್ನು ರಚಿಸಿದ್ದು ಸದರಿ ಸಮಿತಿಯು ದಿನಾಂಕ: 03.08.2020 ರಂದು ನಡೆದ ಸಭೆಯಲ್ಲಿ ವಾಸದ ಗೃಹ ಹಂಚಿಕೆ ಕುರಿತು ದಿನಪತ್ರಿಕೆಗಳಲ್ಲಿ ಅಧಿಸೂಚನೆ ಹೊರಡಿಸಲು ನಿರ್ಣಯಿಸಿರುತ್ತದೆ ಹಾಗೂ ಮಂಡಳಿಯ 373ನೇ ಸಭೆ ದಿನಾಂಕ: **17.06.2021** ರಂದು ತಾತ್ಕಾಲಿಕ ಹಂಚಿಕೆ ದರ ಪರಿಷ್ಕರಿಸಲಾಗಿದೆ.

ಆದ್ದರಿಂದ, ಅರ್ಹ ಕೈಗಾರಿಕೋದ್ಯಮಿಗಳು/ಉದ್ದಿಮೆದಾರರು/ಕೈಗಾರಿಕೆಯಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು/ಸರ್ಕಾರಿ ನೌಕರರು/ ರಾಜ್ಯ/ ಕೇಂದ್ರ ಸ್ವಾಧೀನ ಸಂಸ್ಥೆಗಳು/ಸಾರ್ವಜನಿಕರಿಂದ ಗಾಮನಗಟ್ಟಿ ಕೈಗಾರಿಕಾ ಪ್ರದೇಶ, ಹುಬ್ಬಳ್ಳಿ ತಾಲೂಕ ಧಾರವಾಡ ಜಿಲ್ಲೆ. ಇಲ್ಲಿ ಮಂಡಳಿಯಿಂದ ನಿರ್ಮಿಸಲಾದ ವಾಸದ ಗೃಹಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿರುತ್ತದೆ. (ವಿ.ಸೂಚನೆ:– ಗಾಮನಗಟ್ಟಿ ಕೈಗಾರಿಕಾ ಪ್ರದೇಶ ಕೈಗಾರಿಕೋದ್ಯಮಿಗಳು/ ಉದ್ದಿಮೆದಾರರು/ಕೈಗಾರಿಕೆಯಲ್ಲಿ ಕಾರ್ಯನಿವಹಿಸುವ ಕಾರ್ಮಿಕರಿಗೆ ಆದ್ಯತೆ ನೀಡಲಾಗುವುದು)

1. ಹಂಚಿಕೆಗೆ ಲಭ್ಯವಿರುವ ವಾಸದ ಗೃಹಗಳ ವಿವರ ಕೆಳಗಿನಂತಿದೆ
ಗಾಮನಗಟ್ಟಿ ಕೈಗಾರಿಕಾ ಪ್ರದೇಶ, ಹುಬ್ಬಳ್ಳಿ ತಾಲೂಕ ಧಾರವಾಡ ಜಿಲ್ಲೆ.

ಕ್ರ ಸಂ	ಅಳತೆ (ಮೀಟರ್‌ಗಳಲ್ಲಿ)	ವಸತಿ ಗೃಹಗಳ ಸಂಖ್ಯೆ	ಪ್ಲಿಂತ ಏರಿಯಾ (ಚದರ ಮೀಟರ್‌ಗಳಲ್ಲಿ)	ತಾತ್ಕಾಲಿಕ ಹಂಚಿಕೆ ದರ (ರೂ. ಲಕ್ಷಗಳಲ್ಲಿ)	20% ಆರಂಭಿಕ ಠೇವಣ
1	1 ಬಿಹಚ್‌ಕೆ (9ಬ್ಲಾಕ್‌ಗಳು) ನೆಲ ಮಹಡಿಯಲ್ಲಿ ನಾಲ್ಕು ಮನೆಗಳು	36	39.48	10.00	2,00,000/–
2	1 ಬಿಹಚ್‌ಕೆ (9ಬ್ಲಾಕ್‌ಗಳು) ಮೊದಲನೆ ಮಹಡಿಯಲ್ಲಿ ನಾಲ್ಕು ಮನೆಗಳು	36	39.48	9.50	1,90,000/–
3	1 ಬಿಹಚ್‌ಕೆ (9ಬ್ಲಾಕ್‌ಗಳು) ಎರಡನೇ ಮಹಡಿಯಲ್ಲಿ ನಾಲ್ಕು ಮನೆಗಳು	36	39.48	9.00	1,80,000/–
4	2 ಬಿಹಚ್‌ಕೆ (9ಬ್ಲಾಕ್‌ಗಳು) ನೆಲ ಮಹಡಿಯಲ್ಲಿ ನಾಲ್ಕು ಮನೆಗಳು	21	53.51	13.00	2,60,000/–
5	2 ಬಿಹಚ್‌ಕೆ (9ಬ್ಲಾಕ್‌ಗಳು) ಮೊದಲನೆ ಮಹಡಿಯಲ್ಲಿ ನಾಲ್ಕು ಮನೆಗಳು	22	53.51	12.50	2,50,000/–
6	2 ಬಿಹಚ್‌ಕೆ (9ಬ್ಲಾಕ್‌ಗಳು) ಎರಡನೇ ಮಹಡಿಯಲ್ಲಿ ನಾಲ್ಕು ಮನೆಗಳು	24	53.51	12.00	2,40,000/–

2. **ಅರ್ಹತಾ ಮಾನದಂಡಗಳು** : 1) ಅರ್ಜಿದಾರರು ಭಾರತದ ಪ್ರಜೆಯಾಗಿರಬೇಕು, 2) ಅರ್ಜಿದಾರನು ಈ ಅಧಿಸೂಚನೆಯ ದಿನಾಂಕಕ್ಕೆ ಮುನ್ನಾ 5 ವರ್ಷಗಳಿಗೆ ಕಡಿಮೆ ಇರದಂತೆ ಕರ್ನಾಟಕದ ನಿವಾಸಿಯಾಗಿರಬೇಕು, 3) ಅರ್ಜಿದಾರರ ವಯಸ್ಸು ಈ ಪ್ರಕಟಣೆ ದಿನಾಂಕಕ್ಕೆ 18 ವರ್ಷ ಪೂರೈಸಿರಬೇಕು ,4) ಹಂಚಿಕೆಯನ್ನು ಶುದ್ಧಕ್ರಯದ ಅಧಾರದ ಮೇಲೆ ನೀಡಲಾಗುವುದು.

3. **ಹಣ ಪಾವತಿ ವಿವರ** : 1) ಅರ್ಜಿದಾರರು **ರೂ.2,000/–** ಭೂ ಹಂಚಿಕೆ ಅರ್ಜಿ ಶುಲ್ಕ ಮತ್ತು **ರೂ.5,000/–** ಇ.ಎಂ.ಡಿ. ಯನ್ನು ಪಾವತಿಸಬೇಕು.(Non-refundable), 2)ಅರ್ಜಿದಾರು ಮಂಡಳಿಯಿಂದ ವಾಸದ ಗೃಹ ಹಂಚಿಕೆಗೆ ಆಯ್ಕೆ ಪತ್ರ ತಲುಪಿದ **30** ದಿವಸಗಳೊಳಗಾಗಿ ವಾಸದ ಗೃಹದ ಮೊತ್ತದ ಪೈಕಿ ಶೇ.20 ರಷ್ಟು ಮೊತ್ತವನ್ನು ಪ್ರಾರಂಭಿಕ ಠೇವಣಿಯಾಗಿ ಪಾವತಿಸಬೇಕು, 3) ಉಳಿದ ಶೇ.80 ರಷ್ಟು ಮೊತ್ತವನ್ನು ಹಂಚಿಕೆ ಪತ್ರ ನೀಡಿದ ದಿನಾಂಕದಿಂದ **90** ದಿವಸಗಳೊಳಗಾಗಿ ಪಾವತಿಸಬೇಕು.

4) **ಸಾಮಾನ್ಯ ನಿಬಂಧನೆಗಳು** : 1) ಅರ್ಜಿದಾರರು ಭರ್ತಿ ಮಾಡಿದ ಅರ್ಜಿಗಳನ್ನು ವಿವರಗಳೊಂದಿಗೆ ಈ ಪ್ರಕಟಣೆಯ ದಿನಾಂಕದಿಂದ **30** ದಿವಸಗಳೊಳಗಾಗಿ ಸಲ್ಲಿಸತಕ್ಕದ್ದು, 2) ನಿಗದಿತ ಅವಧಿಯ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾವುದಿಲ್ಲ, 3) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **31/10/2022** ಆಗಿರುತ್ತದೆ, 4) ಅರ್ಜಿ ಫಾರಂಗಳು ನಮ್ಮ ವೆಬ್‌ಸೈಟ್: **www.kiadb.in** ಇಲ್ಲಿಯೂ ಸಹ ದೊರೆಯುತ್ತವೆ, 5) ಸದರಿ ಹಂಚಿಕೆಗೆ ಸಂಬಂಧಿಸಿದಂತೆ ಹಂಚಿಕೆ ದರ ಪರಿಷ್ಕರಣೆಯೂ ಸೇರಿದಂತೆ ಎಲ್ಲಾ ಹಕ್ಕುಗಳನ್ನು ಮಂಡಳಿ ಕಾಯ್ದಿರಿಸಿಕೊಂಡಿರುತ್ತದೆ.

ಸಂಪೂರ್ಣ ಮಾಹಿತಿಯುಳ್ಳ ಹಾಗೂ ನಿಗಧಿತ ಗೃಹಗಳ ಆರಂಭಿಕ ಠೇವಣಿ (ಮೌಲ್ಯ) ದೊಂದಿಗೆ ಅರ್ಜಿಗಳನ್ನು ಈ ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ **ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯದರ್ಶಿ, ಕೆ.ಐ.ಎ.ಡಿ.ಬಿ. ಲಕ್ಕಮನಹಳ್ಳಿ, ಪಿ. ಬಿ. ರೋಡ, ಧಾರವಾಡ ಇವರನ್ನು ಸಂಪರ್ಕಿಸಬಹುದಾಗಿದೆ.**

ಸಹಿ/–ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ,
ವಲಯ ಕಛೇರಿ, ಧಾರವಾಡ.

ವಾ.ಸಾ.ಇ/ಧಾ/626/2022–23/ದೇಶಪಾಂಡೆಪಬ್ಲಿಸಿಟಿ

ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ತಿಂಗಳ ಮೊದಲ ದಿನವೇ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಚಾಲಕರು ಹಾಗೂ ನಿರ್ವಾಹಕರಿಗೆ 65 ವರ್ಷಗಳ ಬಳಿಕ ಮೊದಲ ಬಾರಿಗೆ ತಿಂಗಳ ಆರಂಭದ ದಿನದಂದೇ ವೇತನ ಪಾವತಿಸಲಾಗಿದೆ.

ನಿಗಮದ 36 ಸಾವಿರ ಚಾಲಕರು ಹಾಗೂ ನಿರ್ವಾಹಕರ ಬ್ಯಾಂಕ್ ಖಾತೆಗೆ ಅಕ್ಟೋಬರ್ 1ರಂದು ವೇತನ ನೀಡಲಾಗಿದೆ.

1957ರಿಂದ (ಅಂದಿನ ಮೈಸೂರು ಸರ್ಕಾರ ರಸ್ತೆ ಸಾರಿಗೆ ಇಲಾಖೆ) ಇದುವರೆಗೆ ಚಾಲಕರು ಹಾಗೂ ನಿರ್ವಾಹಕರಿಗೆ ಪ್ರತಿ ತಿಂಗಳ 7ರಂದು ವೇತನ ಪಾವತಿ ಆಗುತ್ತಿತ್ತು. ತಾಂತ್ರಿಕ ಸಿಬ್ಬಂದಿಗೆ ಆಯಾ ತಿಂಗಳ 4ರಂದು ಹಾಗೂ ಅಧಿಕಾರಿಗಳು, ಆಡಳಿತ ಸಿಬ್ಬಂದಿಗೆ 1ರಂದು ವೇತನ ನೀಡಲಾಗುತ್ತಿತ್ತು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಸೂಚನೆಯಂತೆ ಚಾಲಕರಿಗೆ ವೇತನ ಪಾವತಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಹಿರಿಯರ ಪ್ರತಿಭೆ ಸದ್ಬಳಕೆಗೆ ಯೋಜನೆ

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಡಾ.ಕೋಡೂರು, ಅಂಕಡಪ್ಪ ಅಂಬಾಜಿ ಸುಗತೇಕರ, ಡಾ.ಬಿ.ಕೆ. ಬಸವರಾಜ ರಾಜಋಷಿ, ಬೋಪಯ್ಯ, ವಿಜಯ ರಮೇಶ್, ಕೆ.ಜಿ.ಕುಲಕರ್ಣಿ, ಸಾವಿತ್ರಮ್ಮ ರಾಮ ಶರ್ಮ ಸೇವಾ ಟ್ರಸ್ಟ್ ಮುಖ್ಯಸ್ಥರಿಗೆ 2022ನೇ ಸಾಲಿನ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ, ಸಚಿವರಾದ ಶಂಕರ ಪಾಟೀಲ ಮುನೇನಕೊಪ್ಪ, ಆಚಾರ್ಯ ಹಾಲಪ್ಪ ಬಸಪ್ಪ, ವಿ.ಸೋಮಣ್ಣ, ಶಾಸಕ ಉದಯ ಗರುಡಾಚಾರ್, ರವಿ ಸುಬ್ರಮಣ್ಯ ಇದ್ದಾರೆ —ಪ್ರಜಾವಾಣಿ ಚಿತ್ರ.

ಬೆಂಗಳೂರು: 'ಹಿರಿಯ ನಾಗರಿಕರ ಪ್ರತಿಭೆ ಸದ್ಬಳಕೆ ಮಾಡಿಕೊಳ್ಳಲು ಹೊಸ ಯೋಜನೆ ರೂಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಶಕ್ತರಾಗಿರುವ, ಕ್ರಿಯಾಶೀಲ ನಾಗರಿಕರ ಪಟ್ಟಿ ಸಿದ್ಧಗೊಳಿಸಲಾಗುವುದು. ಸರ್ಕಾರದ ವಿವಿಧ ಹಂತಗಳಲ್ಲಿ ಅವರ ಅನುಭವ, ಸಲಹೆ ಪಡೆದುಕೊಳ್ಳಲಾಗುವುದು. ಇದರಿಂದ ಸರ್ಕಾರದ ಮಟ್ಟದಲ್ಲಿ ಆಗುವ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಬಹುದು ಎಂದರು.

60 ವರ್ಷ ಮೇಲ್ಪಟ್ಟ ನಾಗರಿಕರ ಆರೋಗ್ಯ ವರ್ಷಕ್ಕೆ ಎರಡು ಬಾರಿ ತಪಾಸಣೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಕಣ್ಣಿನ ತೊಂದರೆ ಇರುವವರಿಗೆ ಸರ್ಕಾರವೇ ಉಚಿತ ಕನ್ನಡಕ ನೀಡಲಿದೆ. ಶ್ರವಣ ಸಾಧನಗಳ ವಿತರಣೆಗಾಗಿಯೇ ₹ 500 ಕೋಟಿ ಮೀಸಲಿಡಲಾಗಿದೆ. ಡಯಾಲಿಸಿಸ್ ಸೇರಿದಂತೆ ಎಲ್ಲ ರೀತಿಯ ಆರೈಕೆಯಲ್ಲೂ ಪ್ರಾಶಸ್ತ್ಯ ನೀಡಲಾಗುತ್ತಿದೆ ಎಂದು ವಿವರ ನೀಡಿದರು.

ಈಚಿನ ದಿನಗಳಲ್ಲಿ ವೃದ್ಧಾಶ್ರಮ ಸಂಸ್ಕೃತಿ ಆರಂಭವಾಗಿರುವುದು ನೋವಿನ ಸಂಗತಿ. ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ಸಂಕೇತ. ವೃದ್ಧಾಶ್ರಮಗಳಲ್ಲಿ ಆಶ್ರಯ ಪಡೆದವರ ಆರೈಕೆಗೆ ಒತ್ತು ನೀಡಿರುವ ಸರ್ಕಾರ, ಪ್ರತಿ ವೃದ್ಧಾಶ್ರಮಕ್ಕೂ ₹ 12 ಲಕ್ಷ ವಾರ್ಷಿಕ ಅನುದಾನ ನೀಡುತ್ತಿದೆ ಎಂದು ಮಾಹಿತಿ ನೀಡಿದರು.

ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವ ಹಾಲಪ್ಪ ಆಚಾರ್, ರಾಜ್ಯದಲ್ಲಿ 60 ವರ್ಷ ಮೇಲ್ಪಟ್ಟ 57 ಲಕ್ಷ ನಾಗರಿಕರು ಇದ್ದಾರೆ. ಅವರಲ್ಲಿ 46.80 ಲಕ್ಷ ನಾಗರಿಕರಿಗೆ ಪ್ರತಿ ತಿಂಗಳು ₹ 1,200 ವೇತನ ನೀಡಲಾಗುತ್ತಿದೆ ಎಂದು ಹೇಳಿದರು.

ಸಾಧಕರಾದ ಎಂ.ಎಂ.ಬೋಪಯ್ಯ, ಡಾ.ಬಿ.ಕೆ.ಬಸವರಾಜ ರಾಜಋಷಿ, ವೆಂಕಪ್ಪ ಅಂಬಾಜಿ ಸುಗತೇಕರ, ಡಾ.ಕೆ.ಜಿ.ಕುಲಕರ್ಣಿ, ವಿಜಯಾ ರಮೇಶ್, ಡಾ.ಕೋಡೂರು ವೆಂಕಟೇಶ್ ಹಾಗೂ ಸಾವಿತ್ರಮ್ಮ ರಾಮಶರ್ಮ ಸೇವಾ ಟ್ರಸ್ಟ್‌ಗೆ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಸಚಿವರಾದ ವಿ.ಸೋಮಣ್ಣ, ಶಂಕರ ಪಾಟೀಲ ಮುನೇನಕೊಪ್ಪ, ಶಾಸಕರಾದ ರವಿ ಸುಬ್ರಹ್ಮಣ್ಯ, ರವಿಕುಮಾರ್, ಉದಯ ಗರುಡಾಚಾರ್, ವಾಗ್ಮಿ ಇಂದುಮತಿ ಸಾಲಿಮಠ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ ಉಪಸ್ಥಿತರಿದ್ದರು.

ಸಿ.ಎಂ ಮನಕಲಕಿದ ವೃದ್ಧೆಯ ಮಾತು

'ಬೆಂಗಳೂರಿನ ಭಿಕ್ಷುಕರ ಕೇಂದ್ರವೊಂದಕ್ಕೆ ಈಚೆಗೆ ಭೇಟಿ ನೀಡಿದಾಗ, ಅಲ್ಲಿದ್ದ ವೃದ್ಧೆಯ ಮಾತು ಮನಕಲಕಿಸಿತು. ಎಲ್ಲ ಇದ್ದರೂ, ಸಾಕಲು ಆಗದೇ ಬೀದಿಗೆ ಬಿಟ್ಟಿದ್ದಾರೆ ಎಂದು ಅವರು ಕಣ್ಣೀರು ಸುರಿಸಿದರು. ಮೂರ್‍ನಾಲ್ಕು ತಿಂಗಳಿಗೆ ಒಮ್ಮೆ ನೋಡಲು ಬರುತ್ತಾರೆ. ನನ್ನ ಮೇಲಿನ ಪ್ರೀತಿಯಿಂದ ಅಲ್ಲ, ಸತ್ತಿದ್ದೇನಾ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಎಂದಾಗ ನನ್ನ ಹೃದಯ ವಿಚಲಿತವಾಯಿತು' ಎಂದು ಹೇಳುತ್ತಾ ಬಸವರಾಜ ಬೊಮ್ಮಾಯಿ ಮೌನಕ್ಕೆ ಜಾರಿದರು.

'ವಯಸ್ಸಾಗಿದೆ ಎನ್ನುವವರಿಗೆ ಸಿ.ಎಂ.ಉದಾಸಿ ಯಾವಾಗಲೂ ಒಂದು ಮಾತು ಹೇಳುತ್ತಿದ್ದರು. 'ನಾವು ಮಾಜಿ ಯುವಕರು, ಅವರು ಭವಿಷ್ಯದ ವೃದ್ಧರು' ಎನ್ನುವ ಉದಾಸಿ ಮಾತು ಎಷ್ಟು ಸತ್ಯವಲ್ಲವೇ? ಕ್ರಿಯಾಶೀಲರಿಗೆ ಎಂದೂ ವಯಸ್ಸು ಮುಖ್ಯವಲ್ಲ' ಎಂದು ಅವರು ಹೇಳಿದರು.

10 ಸಾಧಕರಿಗೆ 'ಶಿಲ್ಪಶ್ರೀ ಪ್ರಶಸ್ತಿ'

ಬೆಂಗಳೂರು: ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 2022ನೇ ಸಾಲಿನ 'ಶಿಲ್ಪಶ್ರೀ ಪ್ರಶಸ್ತಿ' ಘೋಷಿಸಿದ್ದು, 10 ಶಿಲ್ಪಿಗಳು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷ ವೀರಣ್ಣ ಅರ್ಕಸಾಲಿ ನೇತೃತ್ವದ ಕಾರ್ಯಕಾರಿ ಸಮಿತಿ ಪ್ರಶಸ್ತಿಗೆ ಶಿಲ್ಪ ಕಲಾವಿದರನ್ನು ಆಯ್ಕೆ ಮಾಡಿದೆ. ಗದಗ ಜಿಲ್ಲೆಯ ರಾಘವೇಂದ್ರ ಎನ್., ಉಡುಪಿಯ ಕೆ.ಸತೀಶ್ ಆಚಾರ್ಯ, ವಿಜಯನಗರದ ಕೆ. ಸುರೇಶ್ ಆಚಾರ್ಯ, ಧಾರವಾಡದ ನಾಗೇಂದ್ರ ಎಸ್. ಕಮ್ಮಾರ, ಬೆಳಗಾವಿಯ ಅಶೋಕ ಆರ್. ಬಡಿಗೇರ, ಬೆಂಗಳೂರಿನ ಜಿ.ವಿ. ಶಿವಕುಮಾರ್, ಯಾದಗಿರಿಯ ನಾಗರಾಜ ಬಿ. ಕಂಬಾರ, ಬಾಗಲಕೋಟೆಯ ವೀರೇಶ್ ಜಿ. ಮಾಯಚಾರ್ಯ, ಕಲಬುರಗಿಯ ನಿಂಗಪ್ಪಾ ಡಿ. ಕೇರಿ ಹಾಗೂ ಶಿವಮೊಗ್ಗದ ಡಿ.ಎನ್. ಚಂದ್ರಶೇಖರ ಅವರು 'ಶಿಲ್ಪಶ್ರೀ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಇದೇ 10ರಂದು ಸಂಜೆ 5 ಗಂಟೆಗೆ ಮೈಸೂರು ವಿಶ್ವವಿದ್ಯಾಲಯ ವಿಜ್ಞಾನ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ರಿಜಿಸ್ಟ್ರಾರ್ ಆರ್. ಚಂದ್ರಶೇಖರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಉಚ್ಚ ನ್ಯಾಯಾಲಯ

ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–01

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಹೆಚ್‌ಸಿಸಿ ಸಂ. 40/2022 ದಿನಾಂಕ: 30.09.2022

ಕರ್ನಾಟಕ ಉಚ್ಚ ನ್ಯಾಯಾಲಯವು, ತನ್ನ ಪ್ರಧಾನ ಪೀಠ ಮತ್ತು ಪೀಠಗಳಾದ ಧಾರವಾಡ ಮತ್ತು ಕಲಬುರಗಿ ಮತ್ತು ತನ್ನ ಅಧೀನ ನ್ಯಾಯಾಲಯಗಳಿಗೆ ಒಟ್ಟು 31 ಸಂಖ್ಯೆಗಳ 5 ಕೆ.ವಿ.ಎ ಯುಪಿಎಸ್ ಜೊತೆ ಬ್ಯಾಟರಿ, 7 ಸಂಖ್ಯೆಗಳ 10 ಕೆ.ವಿ.ಎ ಯುಪಿಎಸ್ ಜೊತೆ ಬ್ಯಾಟರಿ ಹಾಗೂ 170 ಬ್ಯಾಟರಿಯನ್ನು, 53 ಸಂಖ್ಯೆಗಳ ಹಳೆ ಯುಪಿಎಸ್ ಮತ್ತು 568 ಹಳೆ ಬ್ಯಾಟರಿಗಳನ್ನು ಬೈಬ್ಯಾಕ್ ಮಾಡುವ ಮುಖಾಂತರ ಖರೀದಿಸಲು ನಿರ್ಧರಿಸಿದ್ದು ಅದಕ್ಕಾಗಿ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್‌ನ್ನು ದಿನಾಂಕ 17.10.2022 ರ 4.00 ಗಂಟೆಯೊಳಗೆ ಆಸಕ್ತರು ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು https://eroc.karnataka.gov.in ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/–
(ಎನ್. ಜಿ. ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು

DIPR/CP/2468/GREENFMC/2022-23

ನಗರಸಭಾ ಕಾರ್ಯಾಲಯ ರಾಮನಗರ

ರಾಮನಗರ ಜಿಲ್ಲೆ – 562 159.
ದೂ.: 080–27271286. ಇಮೇಲ್: itstaff_ulb_ramanagaram@yahoo.com
ವೆಬ್‌ಸೈಟ್: www.ramanagaracity.mrc.gov.in

ಸಂಖ್ಯೆ : ನಸರಾ/ಆ.ಶಾ./ಸ.ಕಾ.ಅ./ಸಿಆರ್/95/2021–22 ದಿನಾಂಕ : 30–09–2022

ಟೆಂಡರ್ ಪ್ರಕಟಣೆ - 2

2021–22 ನೇ ಸಾಲಿನ 15ನೇ ಹಣಕಾಸು, 2019–20 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ ಯೋಜನೆ ಅನುದಾನದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಭಾಗವಹಿಸಲು ಕೊನೆಯ ದಿನಾಂಕ : 15–10–2022 ರ ಸಂಜೆ 4.30 ಆತರುತ್ತದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ವಿವರ : 1) ಹಸಿ ಕಸ ಮತ್ತು ಒಣ ತ್ಯಾಜ್ಯದ ವಿಂಗಡಣೆಗೆ ನಗರಸಭಾ ವ್ಯಾಪ್ತಿಯ ಮನೆಗಳಿಗೆ ಗಾರ್ಬೇಜ್ ಬಿನ್‌ಗಳನ್ನು ತಲಾ 02 ರಂತೆ 01 ಮನಗೆ ಖರೀದಿಸುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 63.00, ಇ.ಎಂ.ಡಿ (ರೂ. ಗಳಲ್ಲಿ) : 1,57,500.00/–. 2) ಮನೆ ಮನೆ / ಅಂಗಡಿಗಳಿಂದ ತ್ಯಾಜ್ಯ ಸಂಗ್ರಹಿಸಲು 13 ಸಂಖ್ಯೆ ಆಟೋ ಟಿಪ್ಪರ್‌ಗಳ ಖರೀದಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 88.00, ಇ.ಎಂ.ಡಿ (ರೂ. ಗಳಲ್ಲಿ) : 2,20,000.00/–.

ಸಹಿ/– ಅಧ್ಯಕ್ಷರು, ನಗರಸಭೆ, ರಾಮನಗರ. ಸಹಿ/– ಪೌರಾಯುಕ್ತರು, ನಗರಸಭೆ, ರಾಮನಗರ.

ಡಿಐಪಿಆರ್/ರಾಮನಗರ/252/ಮಣಿಪಾಲ್/2022–23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಬಾಗಲಕೋಟ

ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ–1,3,4/ಟೆಂಡರ್/2022–23/1359 ದಿನಾಂಕ:28–09–2022

ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್–ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

Badami Taluka :
1) Indent No- 47479 **(Mallapur)** APT- 52.80 Lakhs
2) Indent No- 47478 **(Kulageri)** APT- 59.64 Lakhs
3) Indent No 47477 **(Kalas)** APT- 44.47 Lakhs

Mudhol Taluka :
1) Indent No - 47266 **(Roogi)** APT- 37.72 Lakhs
2) Indent No - 47265 **(Bhirappa vasti)** APT- 34.40 Lakhs
3) Indent No - 47267 **(Kempandi Vasti)** APT-32.40 Lakhs

Jamkhandi Taluka : Indent No - 44890 **(Hunnur vasti)** APT-33.76 Lakhs call- 2

1) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್ ಡಿ ಮೊತ್ತ ಇ–ಪ್ರೊಕ್ಯೂರಮೆಂಟ್ ಪ್ರಕಾರ
2) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **13–10–2022** ಸಾಯಂಕಾಲ **5.30** ಗಂಟೆಯ ವರೆಗೆ
3) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **06–10–2022** ಸಾಯಂಕಾಲ **5.30** ಗಂಟೆಯ ವರೆಗೆ **44890 (Hunnur Vasti)** ಕಾಮಗಾರಿಗೆ ಮಾತ್ರ.
4) ಹೆಚ್ಚಿನ ವಿವರಗಳಿಗಾಗಿ ಅಂತರ್ಜಾಲದಲ್ಲಿ ನೋಡಬಹುದಾಗಿದೆ. ವಿಳಾಸ **www.eproc.karnataka.gov.in**

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾಕುನೀಮತ್ತುನೈ ವಿಭಾಗ, ಬಾಗಲಕೋಟ

ವಾ.ಸಾ.ಇ/ಬಾಗಲಕೋಟ/475/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರಕಾರ

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಹಾವೇರಿ

ಸಂ:ಹಾಜಿಪಂ/ಸ್ವಭಾಮಿ(ಗ್ರಾ)/ಗೋಧನ್/ಇ–ಟೆಂಡರ/2022–23 ದಿನಾಂಕ:23–09–2022

ಇ–ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ ಮಿಷನ್(ಗ್ರಾ)–ಗೋಬರ್‌ಧನ್ ಕಾರ್ಯಕ್ರಮದಡಿ ಸಮುದಾಯ ಜೈವಾನಿಲ ಸ್ಥಾವರ ನಿರ್ಮಾಣಕ್ಕಾಗಿ ಟೆಂಡರ ನಲ್ಲಿ ನಿಗದಿಪಡಿಸಿದ 3 ಸ್ಥಳಗಳಲ್ಲಿ ಟೆಂಡರ ಷರತ್ತು ಮತ್ತು ನಿಬಂಧನೆಗಳನ್ವಯ ಹಾವೇರಿ ಜಿ.ಪಂ.ನಿಂದ ಅನುಮೋದಿತ ಜೈವಾನಿಲ ಟರ್ನಕೀ ಏಜೆನ್ಸಿಗಳಿಂದ ಪ್ರತ್ಯೇಕವಾಗಿ ಮೂರು ಇ–ಟೆಂಡರಗಳನ್ನು ಆಹ್ವಾನಿಸಲಾಗಿದೆ.

1) Tender No: HZP/SBMG/G/E-TENDER/AGADI/1/2022-23 > Tender amount: **10.98** Lakhs.
2) Tender No: HZP/SBMG/G/E-TENDER/IRANI/2/2022-23 > Tender amount: **10.98** Lakhs.
3) Tender No: HZP/SBMG/G/E-TENDER/TADAS/3/2022-23 > Tender amount: **6.12** Lakhs.

(4) E.M.D ಮೊತ್ತ ರೂ. ಇ–ಪೋರ್ಟಲ್ ನಲ್ಲಿರುವಂತೆ. (5) ಟೆಂಡರ ದಾಖಲೆಗಳನ್ನು ಇ–ಪ್ರಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ : **15–10–2022** ರ 16.00 ರವರೆಗೆ ಟೆಂಡರಗಳನ್ನು ಸಲ್ಲಿಸಬಹುದು. (6) ಇ–ಪ್ರೋಕ್ಯುರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **17–10–2022.** 11.00 A.M. (7) ಇ–ಪ್ರೋಕ್ಯುರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ ಆರ್ಥಿಕಬಿಡ್ ತೆರೆಯುವ ದಿನಾಂಕ : **19–10–2022.** 11.30 A.M.

ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ಟೆಂಡರ ನಿಯಮಗಳು/ಟೆಂಡರ ಪೋಸೆಸ್ಸಿಂಗ್ ಫೀ ಇತ್ಯಾದಿ ವಿವರಗಳನ್ನು **http://eproc.karnataka.gov.in** ಮೂಲಕ ಪಡೆದು, ಟೆಂಡರಗಳನ್ನು ಸಲ್ಲಿಸುವುದು.

ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಸಂಧರ್ಭಗಳಲ್ಲಿ ಕಾರಣ ನೀಡದೇ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರುಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ ಹಾವೇರಿ.

ವಾಸಾಸಂಇ/ಹಾವೇರಿ/ಎಂ.ಸಿ.ಎ/291/2022–23

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್

KSMC
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ: 5ನೇ ಮಹಡಿ, ಟಿಟಿಎಂಸಿ ಬಿಲ್ಡಿಂಗ್, ಶಾಂತಿನಗರ,
ಕೆ. ಹೆಚ್. ರಸ್ತೆ, ಬೆಂಗಳೂರು–560027. ಫೋನ್ ಸಂಖ್ಯೆ : 080–22278813/14/15/16,
www.ksmc.karnataka.gov.in

No. 86/KSMCL/Empanelment /2022-23/1867 Date: 01.10.2022

ಟೆಂಡರ್ ಆಹ್ವಾನ

ಕೆಎಸ್‌ಎಂಸಿಎಲ್ ನಲ್ಲಿನ ಕಾನೂನು ವಿಷಯಗಳ ಸಮಸ್ಯಗಳ ಕುರಿತಂತೆ, ಕಾನೂನು ಅಭಿಪ್ರಾಯ/ಸಲಹೆಗಳನ್ನು ಪಡೆಯುವ ಸಲುವಾಗಿ Empanelment of Litigation Law Firms ರಚಿಸಲು ಉದ್ದೇಶಿಸಿದೆ. ಈ ಸಂಬಂಧ, ಅರ್ಹ ವ್ಯಾಜ್ಯ ಕಾನೂನು ಸಂಸ್ಥೆಗಳಿಂದ ಅರ್ಜಿಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ. ನಿರ್ದಿಷ್ಟವಾಗಿ ಗುತ್ತಿಗೆ ನಿರ್ವಹಣೆ/ಸಿವಿಲ್/ಸೇವೆ/ಕಾರ್ಮಿಕ ಗಣಿಗಾರಿಕೆ ವಿಷಯಗಳಿಗೆ ಸಂಬಂಧಿಸಿದ ಕಾನೂನು ವಿಷಯಗಳಲ್ಲಿ ವ್ಯವಹರಿಸುವಲ್ಲಿ ಹೊಂದಿರುವ ಅನುಭವದೊಂದಿಗೆ ಮತ್ತು ಅಗತ್ಯ ದಾಖಲೆಗಳೊಂದಿಗೆ ಆಯಾ ಕಾನೂನು ಕ್ಷೇತ್ರಗಳಿಗೆ ಪ್ರತ್ಯೇಕವಾಗಿ ಅರ್ಜಿಗಳನ್ನು **ದಿನಾಂಕ 31.10.2022** ರಂದು ಅಥವಾ ಮೊದಲು ಸಲ್ಲಿಸಬಹುದಾಗಿದೆ. ಅರ್ಹತಾ ಮಾನದಂಡಗಳು ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಸ್ಥೆಯ **www.ksmc.karnataka.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದಾಗಿದೆ.

DIPR/CP/RO2474/AAPL/2022-23 ಸಹಿ/– ಪ್ರಧಾನ ವ್ಯವಸ್ಥಾಪಕರು (ಆ&ಜಾ)

ಬೆಳಗಾವಿ ಮಹಾನಗರ ಪಾಲಿಕೆ

ಸಂಖ್ಯೆ:ಸಿಸಿಬಿ:ಲೋ.ವಿ./ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ–12/2022–23 ದಿನಾಂಕ:30–09–2022

ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ಪ್ರಕಾರ ಆೃಕ್ಟ 2000 ನಿಯಮದಂತೆ Standard Bid Documents ನಿಯಮಗಳನ್ವಯ ಕಾಮಗಾರಿಗಳಿಗೆ ಸನ್ 2021–22 & 2022–23ನೇ ಸಾಲಿನ 15ನೇ ಹಣಕಾಸು ಆಯೋಗ ಹಾಗೂ ಸನ್ 2021–22 & 2022–23ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರು ಹಾಗೂ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ ಮಂಜೂರಾದ ಒಟ್ಟು 08 ಕಾಮಗಾರಿಗಳ ಕುರಿತು ಟೆಂಡರನ್ನು ಇ–ಪ್ರೋಕ್ಯೂರಮೆಂಟ ಪೋರ್ಟಲ ಮುಖಾಂತರ ಅಹ್ವಾನಿಸಲಾಗಿದೆ. ಸದರಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 21–10–2022 ರಂದು ಇರುತ್ತದೆ. ವಿವರಗಳನ್ನು ಇ–ಪ್ರೋಕ್ಯೂರಮೆಂಟ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ (https://www.eproc.karnataka.gov.in) ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪ್ರೋಕ್ಯೂರಮೆಂಟ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಆಯುಕ್ತರು
ಮಹಾನಗರ ಪಾಲಿಕೆ, ಬೆಳಗಾವಿ

DIPR/BGM/RO-NO-949/MCA/2022-23

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಟೆಂಡರ್ ಪ್ರಕಟಣೆ
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 1) CONSTRUCTION OF UNDERPASS AT CH 221.377 KM OF YETTINAHOLE GRAVITY CANAL 2) Construction of Bridge at Ch: 216.752km of Yettinahole Gravity Canal (NH -4 Ch:85+522km) by Box pushing method ಕಾಮಗಾರಿಗಳಿಗೆ ಟೆಂಡರ್ ಗಿಟ್ಟ ಮೊತ್ತ ರೂ.511.42 ಲಕ್ಷಗಳಿಂದ ರೂ.1381.00ಲಕ್ಷಗಳವರೆಗೆ "ಶೇಕಡಾವಾರು ದರಗಳಲ್ಲಿ" ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ **ದಿ: 06.10.2022 ರಿಂದ ದಿ:. 05.11.2022** ರವರೆಗೆ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: **05.11.2022** ರವರೆಗೆ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟ್‌ಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ– eeypd2tmk@gmail.com

---

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
(ಕೆರೆಗಳು–ಯಲಹಂಕ), ರೂಂ ನಂ. 308, 3ನೇ ಮಹಡಿ, ಅನೆಕ್ಸ್ ಬಿಲ್ಡಿಂಗ್–3,
ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ–(ಯಲಹಂಕ–ಕೆರೆಗಳು)/ಟೆಂಡರ್–10/2022–23 ದಿನಾಂಕ: 01–10–2022

ಟೆಂಡರ್ ಪ್ರಕಟಣೆ
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆರೆಗಳು–ಯಲಹಂಕ, ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೃಬೆಂಮಪಾಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ಅಥವಾ ಯಾವುದೇ ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಯಲಹಂಕ ವಲಯ ಮತ್ತು ಪೂರ್ವ ವಲಯದಲ್ಲಿನ ಕೆರೆಗಳ ಬೌಂಡರಿಗೆ ಚೈನ್ ಲಿಂಕ್ ಫೆನ್ಸಿಂಗ್ ಹಾಕುವುದು.	100.00	2.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ದಸ್ತಾವೇಜುಗಳ ಲಭ್ಯತೆ: **03–10–2022 ರಂದು 10.00 ಗಂಟೆಯ ನಂತರ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **12–10–2022ರಂದು 16.00 ಗಂಟೆಗೆ.** 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **18–10–2022 ರಂದು 16.00 ಗಂಟೆಯವರೆಗೆ.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19–10–2022 ರಂದು 16.30 ಗಂಟೆಗೆ.** 6) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕೆರೆಗಳು–ಯಲಹಂಕ), ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯ, ಭಾರತ ಸರ್ಕಾರ
ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್
ವಿಜಿನಾಪುರ, ಎಫ್‌ಸಿಐ ಗೋಡೌನ್ ಹತ್ತಿರ, ದೂರವಾಣಿನಗರ, ಬೆಂಗಳೂರು–560 016.
E-mail: kvicbang@gmail.com

ವೃತ್ತಿಪರ ತರಬೇತಿ ಅಸೋಸಿಯೇಟ್‌ಗಳು(ಪಿಟಿಎ) ಮತ್ತು ಸ್ಥಳೀಯ ಕೌಶಲ್ಯ ತರಬೇತುದಾರರು (ಎಲ್‌ಎಸ್‌ಟಿ) ಎಮ್‌ಡಿಟಿಸಿ, ಕೆವಿಐಸಿ, ಜೊತೆಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಕಾರ್ಯಕ್ರಮಗಳ ತರಬೇತಿಗಾಗಿ ಅರ್ಜಿ ಆಹ್ವಾನ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್ ವತಿಯಿಂದ ಅಗತ್ಯವಿರುವ ವ್ಯಕ್ತಿಗಳಿಗೆ ಸ್ವಯಂ–ಹಣಕಾಸಿನ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಲು ಕೌಶಲ್ಯ ಅಭಿವೃದ್ಧಿ ತರಬೇತಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವ್ಯಕ್ತಿಗಳು / ವೃತ್ತಿಪರರು / ಸಂಸ್ಥೆಗಳಗಳಿಂದ ವಿವಿಧ ಕೌಶಲ್ಯ ಅಭಿವೃದ್ಧಿ ಕೋರ್ಸ್‌ಗಳನ್ನು ನಡೆಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಯ್ಕೆಯ ನಂತರ ಅವರನ್ನು ವೃತ್ತಿಪರ ತರಬೇತಿ ಸಹವರ್ತಿಗಳು ಮತ್ತು ಸ್ಥಳೀಯ ಕೌಶಲ್ಯ ತರಬೇತುದಾರರಾಗಿ ನೇಮಕ ಮಾಡಲಾಗುತ್ತದೆ. ಅನುಮೋದಿತ ತರಬೇತಿ ಕಾರ್ಯಕ್ರಮಗಳ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದು.

ಹೆಚ್ಚಿನ ಉದ್ಯೋಗಾವಕಾಶವನ್ನು ಹೊಂದಿರುವ ಯಾವುದೇ ಇತರ ಸ್ಥಳೀಯ ಅಗತ್ಯ ಮತ್ತು ಮಾರುಕಟ್ಟೆ ಪ್ರವೃತ್ತಿ ಆಧಾರಿತ ತರಬೇತಿ ಕೋರ್ಸ್‌ಗಳನ್ನು ಸಹ ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ಸಲ್ಲಿಸಬಹುದು. ಆಸಕ್ತ ವ್ಯಕ್ತಿಗಳು/ ವೃತ್ತಿಪರರು / ಸಂಸ್ಥೆಗಳು ತಮ್ಮ ವಿವರಗಳನ್ನು ಈ ಕಛೇರಿಯಿಂದ ನಿಗದಿತ ನಮೂನೆಯನ್ನು ಪಡೆದು, ಭರ್ತಿಮಾಡಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ, 080–25650285 / 8299377420 / 8294217711 / 9543425994 ಅಥವಾ ಇ–ಮೇಲ್: kvicbang@gmail.com ಅನ್ನು ಸಂಪರ್ಕಿಸಬಹುದು. ನಿಯಮಗಳು ಮತ್ತು ಷರತ್ತುಗಳನ್ನು ಎಂಪ್ಯಾನೆಲ್‌ಮೆಂಟ್ ಸಮಯದಲ್ಲಿ ತಿಳಿಸಲಾಗುತ್ತದೆ. ಯಾವುದೇ ಕಾರಣವನ್ನು ನೀಡದೆ PTA/LST ಅರ್ಜಿಗಳನ್ನು ಆಯ್ಕೆ ಮಾಡುವ ಮತ್ತು ತಿರಸ್ಕರಿಸುವ ಅಧಿಕಾರವನ್ನು MDTC, KVIC, ಯು ಕಾಯ್ದಿರಿಸಿಕೊಂಡಿದೆ.

ಸಹಿ/– ನಿರ್ದೇಶಕರು / ಪ್ರಾಂಶುಪಾಲರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

ಮಾನಿಮಂ/117/ಹಿಪಅ/ಗಣಿ/ಪಸಾಸ/2022–23/4451 ದಿನಾಂಕ: 30/09/2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ ರಾಮರೆಡ್ಡೆಪ್ಪ, ರವರು ಸರ್ವೆ ನಂ. 53 (ಭಾಗ) ಕೋಳೂರು ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ 6–00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 66,882 ಟನ್‌ಗಳಷ್ಟು ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009)ಗೆ ಒಳಪಟ್ಟಿದ್ದು, ಅದರ ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ : SEIAA 593 2021 ದಿನಾಂಕ: 14.01.2022 ಮತ್ತು ಉದ್ದಿಮೆದಾರರು ಮಂಡಳಿಗೆ ಸಲ್ಲಿಸಿದ ಮನವಿ ಪತ್ರದ ದಿನಾಂಕ : 16.02.2022 ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ. ಈ ಹಿಂದೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯು **ದಿನಾಂಕ 24.06.2022 ರಂದು ನಿಗದಿಯಾಗಿತ್ತು** ಮತ್ತು ಈ ಬಗ್ಗೆ ದಿನಾಂಕ 25.05.2022 ರಂದು ಪತ್ರಿಕಾ ಪ್ರಕಟಣೆಯು (ಕನ್ನಡ: ಪ್ರಜಾವಾಣಿ ಮತ್ತು ಆಂಗ್ಲ: ದ ಹಿಂದೂ) ಸಹ ನೀಡಲಾಗಿತ್ತು. ಆದರೆ, ಜಿಲ್ಲಾಧಿಕಾರಿಗಳು, ಕೊಪ್ಪಳ ಇವರ ಸೂಚನೆ ಮೇರೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮುಂದೂಡಲಾಗಿದ್ದು, **ದಿನಾಂಕ 18.10.2022 (ಮಂಗಳವಾರ) ರಂದು ಬೆಳಗ್ಗೆ 11.00 ಗಂಟೆಗೆ ಮರುನಿಗದಿಪಡಿಸಲಾಗಿದೆ.**

ಯೋಜನೆಯ ವಿವರಗಳು ಕೆಳಕಂಡಂತಿವೆ.

1. ಉದ್ದಿಮೆದಾರರ ಹೆಸರು ಮತ್ತು ವಿಳಾಸ: ಶ್ರೀ ರಾಮರೆಡ್ಡೆಪ್ಪ, S/o, ನಾಗರೆಡ್ಡೆಪ್ಪ ರೆಡ್ಡೆರ್, ಹೌಸ್ ನಂ. 1/29, ಕೋಳುರು ಗ್ರಾಮ, ಕೊಪ್ಪಳ ತಾಲ್ಲೂಕು & ಜಿಲ್ಲೆ, ಕರ್ನಾಟಕ
2. ಉದ್ದೇಶಿತ ಯೋಜನೆಯ ಸ್ಥಳ: ಸರ್ವೆ ನಂ. 53 (ಭಾಗ) ಕೋಳೂರು ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ.
3. ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆ: ವರ್ಷಕ್ಕೆ 66,882 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ.
4. ಉದ್ದೇಶಿತ ಮಾಲಿನ್ಯ ನಿಯಂತ್ರಣ ಕ್ರಮಗಳು: ಕ್ವಾರಿ ಕಛೇರಿಯಿಂದ ಉತ್ಪತ್ತಿಯಾಗುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ರಾಸಾಯನಿಕ ಶೌಚಾಲಯಕ್ಕೆ ಬಿಡಲಾಗುವುದು. ಮಳೆಗಾಲದಲ್ಲಿ ಗಣಿ ಹೊಂಡಗಳಲ್ಲಿ ಸಂಗ್ರಹವಾದ ಮಳೆನೀರನ್ನು ಧೂಳು ನಿಗ್ರಹಕ್ಕೆ ಮತ್ತು ತೋಟಗಾರಿಕೆಗೆ ಬಳಸಲಾಗುತ್ತದೆ. ಸಾಗಿಸುವ ಮತ್ತು ಪ್ರವೇಶ ರಸ್ತೆಗಳಲ್ಲಿ ನಿಯಮಿತವಾಗಿ ನೀರನ್ನು ಸಿಂಪಡಿಸಲಾಗುತ್ತದೆ. ಡೀಸಲ್ ಎಂಜಿನ್‌ಗಳಿಂದ ಹೊರಹೊಮ್ಮುವ ಧೂಳಿನ ಕಣಗಳು ಮತ್ತು ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಎಲ್ಲಾ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಲಾಗುತ್ತದೆ. ಗುತ್ತಿಗೆ ಪ್ರದೇಶದ ಗಡಿ ಉದ್ದಕ್ಕೂ ದಟ್ಟವಾದ ಹಸಿರು ಪಟ್ಟಿಯನ್ನು ಒದಗಿಸಲಾಗಿದೆ ಮತ್ತು ಇದು ಪ್ಯುಜಿಟಿವ್ ಎಮಿಷನ್‌ಗಳನ್ನು ನಿರ್ಬಂಧಿಸಲು ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ.
5. ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: 18.10.2022 (ಮಂಗಳವಾರ) ರಂದು ಬೆಳಗ್ಗೆ 11:00 ಗಂಟೆ, ಸರ್ವೆ ನಂ. 53 (ಭಾಗ) ಕೋಳೂರು ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ.

6. ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:
ಅ. ಜಿಲ್ಲಾಧಿಕಾರಿಗಳ ಕಛೇರಿ, ಕೊಪ್ಪಳ ಜಿಲ್ಲೆ, ಕೊಪ್ಪಳ ಆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇ. ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ ಈ. ತಾಲ್ಲೂಕು ಪಂಚಾಯತಿ ಕಾರ್ಯಲಯ, ಕೊಪ್ಪಳ ಉ. ತಹಶೀಲ್ದಾರರ ಕಾರ್ಯಲಯ, ಕೊಪ್ಪಳ ಊ. ಗ್ರಾಮ ಪಂಚಾಯಿತಿ ಕಾರ್ಯಾಲಯ, ಕೋಳೂರು ಋ. ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ ಎ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಕೊಠಡಿ ಸಂಖ್ಯೆ 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001 ಏ. ಸಹಾಯಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರುತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ

#128, ಜಿಲ್ಲಾ ಆಡಳಿತ ಭವನ, ನವನಗರ, ಬಾಗಲಕೋಟೆ–587103

ಸಂಖ್ಯೆ: DHS/NHM/NUHM/15TH FC/04/2022-23 Date: 01.10.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ವಿಷಯ: ಬಾಗಲಕೋಟೆ ಜಿಲ್ಲೆಯ ನಮ್ಮ ಕ್ಲಿನಿಕ್‌ಗಳಿಗೆ ಅಗತ್ಯವಿರುವ ವೈದ್ಯಕೀಯ ಉಪಕರಣ/ಸಲಕರಣೆಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) ನಿಯಮಗಳು 1999/2000 ರನ್ವಯ ನೋಂದಾಯಿತ ಅರ್ಹ ಸಂಸ್ಥೆಗಳಿಂದ/ಮೂಲ ತಯಾರಕರು/ಅಧೀಕೃತ ಪ್ರತಿನಿಧಿಗಳು/ಅಧೀಕೃತ ವಿತರಕರಿಂದ 2022–23 ನೇ ಸಾಲಿಗೆ ನಮ್ಮ ಕ್ಲಿನಿಕ್‌ಗಳಿಗೆ ಅಗತ್ಯವಿರುವ ವೈದ್ಯಕೀಯ ಉಪಕರಣ/ಸಲಕರಣೆಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಇ–ಟೆಂಡರ್ ಕರೆದಿದ್ದು (Short Term E-Procurement Tender) ಅರ್ಹ ಟೆಂಡರ್‌ದಾರರು ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in/ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

1	ಟೆಂಡರ್ ಪ್ರಕಟಣೆ ದಿನಾಂಕ	ಸಂಖ್ಯೆ: DHS/NHM/NUHM/15TH FC/04/2022-23 Date:01.10.2022
2	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ: 01.10.2022
3	ಈ ಟೆಂಡರ್ ಬಗ್ಗೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಇ–ಸಂಗ್ರಹಣೆಯಲ್ಲಿ ಸಲ್ಲಿಸಬಹುದು.	ದಿನಾಂಕ: 06.10.2022 ಸಂಜೆ 05:00 ಗಂಟೆ ರೊಳಗಾಗಿ
4	ಸ್ಯಾಂಪಲ್ ಸಲ್ಲಿಸುವ ದಿನಾಂಕ	ದಿನಾಂಕ: 06.10.2022 ರ ಸಂಜೆ 05:00 ಗಂಟೆಗೆ
5	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 12.10.2022ರ ಸಂಜೆ 05:00 ಗಂಟೆಗೆ
6	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಬಾಗಲಕೋಟ ಜಿಲ್ಲೆ, ದಿನಾಂಕ:15.10.2022 ರ ಬೆಳಿಗ್ಗೆ 11:00 ಗಂಟೆಗೆ
7	ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಬಾಗಲಕೋಟೆ ದಿನಾಂಕ: 19.10.2022 ರ ಬೆಳಿಗ್ಗೆ 11:00 ಗಂಟೆಗೆ
8	ಟೆಂಡರ್‌ನ ಒಟ್ಟು ಅಂದಾಜು ಮೊತ್ತ	ರೂ. 36,00,000.00
9	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ. 72,000.00
10	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ:	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬಾಗಲಕೋಟೆ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
11	ವೆಬ್ ಸೈಟ್ ವಿಳಾಸ	www.eproc.karnataka.gov.in

ಸಹಿ/–ಉಪಾಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಹಾಗೂ
ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, ಬಾಗಲಕೋಟೆ ಜಿಲ್ಲೆ.

DIPR/BGK/RO-NO-489/MCA/2021-22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃಹತ್ ನೀರು ಕಾಲುವೆ,
(ಯಲಹಂಕ ವಲಯ), ಬೃ.ಬೆಂ.ಮ.ಪಾಲಿಕೆ, 9ನೇ ಮಹಡಿ ವಾಣಿಜ್ಯ
ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು–560 011.

ಸಂಖ್ಯೆ:ಕಾಪಾಅ/ಬೃನೀಕಾ/ಯವ/ಟೆಂಡರ್/06/2022–23 ದಿನಾಂಕ: 01.10.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಬೃ.ನೀ.ಕಾ), ಯಲಹಂಕ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ಅಥವಾ ಸಮನಾಂತರವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾ.ಟೆಂ.ದಾ–ಕೆಡಬ್ಲ್ಯೂ–4)**

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ
1	ಯಲಹಂಕ ವಲಯ ಬ್ಯಾಟರಾಯನಪುರ ಕ್ಷೇತ್ರದ ವಾರ್ಡ್ ಸಂಖ್ಯೆ–06 ರಲ್ಲಿ ಮಾನ್ಯತಾ ಟೆಕ್ ಪಾರ್ಕ್‌ನಿಂದ ಎಲಿಮೆಂಟ್ ಮಾಲ್‌ವರೆಗೆ ಡ್ರಾಫ್ಟ್ ಚ್ಯಾನೆಲ್ (ಬಿಪಿ–183) ನಿರ್ಮಾಣ ಮತ್ತು ಮರು ವಿನ್ಯಾಸಗೊಳಿಸುವುದು.	824.35	8.30 ಲಕ್ಷಗಳು
2	ಯಲಹಂಕ ವಲಯ ಯಲಹಂಕ ಕ್ಷೇತ್ರದ ವಾರ್ಡ್ ಸಂಖ್ಯೆ–01 ರಲ್ಲಿ ನಿಟ್ಟೆ ಮೀನಾಕ್ಷಿ ಕಾಲೇಜು ರಸ್ತೆಯಿಂದ ಬಿಎಸ್‌ಎಫ್ ಕ್ಯಾಂಪಸ್ ಮಾರ್ಗವಾಗಿ ಯಲಹಂಕ ಕೆರೆ ಸಂಪರ್ಕಿಸುವವರೆಗೆ ಬೃ.ನೀ.ಕಾ ಆರ್‌ಸಿಸಿ ಚರಂಡಿ (ಬಿಪಿ–141) ನಿರ್ಮಾಣ ಮತ್ತು ಮರು ವಿನ್ಯಾಸಗೊಳಿಸುವುದು.	826.38	8.30 ಲಕ್ಷಗಳು

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **03.10.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ವಿಚಾರಣೆ/ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **11.10.2022**ರ ಸಂಜೆ **4:00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **11.10.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **18.10.2022**ರ ಸಂಜೆ **4:00** ಗಂಟೆಯವರೆಗೆ. (5) ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **19.10.2022**ರ ಸಂಜೆ **4:30** ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಂತರ ತಿಳಿಸಲಾಗುವುದು). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೃ.ನೀ.ಕಾ, ಯಲಹಂಕ ವಲಯ

ಕರ್ನಾಟಕ ಸರ್ಕಾರ
Govt of Karnataka

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ– 587103

OFFICE OF THE DEPUTY COMMISSIONER, DISTRICT URBAN DEVELOPMENT CELL, BAGALKOTE DISTRICT, BAGALKOTE- 587103
Ph: 08354-235776 E-mail:dudc_bgk@yahoo.co.in,
Itstaff dudc_bagalkote@yahoo.co.in

ಸಂಖ್ಯೆ:ಜಿನಕೋಬಾ: ನಗರೋತ್ಥಾನ ಹಂತ–3:ಟೆಂ.ಪ್ರ:2022–23 ದಿನಾಂಕ:29.09.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
E-Procurement portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ನಗರಸಭೆ ಬಾಗಲಕೋಟೆ, ಪುರಸಭೆ ಬಾದಾಮಿಗೆ ಸಂಬಂಧಿಸಿದ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಹಂತ–3 ರ ಕಾಮಗಾರಿಗಳಿಗೆ ಹಾಗೂ ನಗರಸಭೆ ಬಾಗಲಕೋಟೆ –2, ಜಮಖಂಡಿ–1, ಬಾದಾಮಿ–1 ಇಂದಿರಾ ಕ್ಯಾಂಟೀನಗಳಿಗೆ ಆಹಾರ ತಯಾರಿಸಿ, ಸರಬರಾಜು ಮಾಡುವ ಬಗ್ಗೆ e-protal: https://eproc.karnataka.gov.inಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದ್ದು, ವಿವರಗಳನ್ನು ಸದರಿ ಇಂಡೆಂಟಗಳಲ್ಲಿ ಪಡೆಯಬಹುದಾಗಿದೆ.
ಇಂಡೆಂಟ್ ಈ ಕೆಳಗಿನಂತೆ ಇರುತ್ತದೆ.

(1) DMA/2022-23/OW/WORK_INDENT133179/CALL-2
(2) DMA/2022-23/OW/WORK_INDENT137836
(3) BGK/DUDC/INDIRA CANTEEN /2022-23/01

ಸೂಚನೆಗಳು :(1) Pre-bid Meeting Date: 14.10.2022 at 4.00 am.
(2) Last Date & Time for receipt of tenders Date : 21.10.2022 At 16.00 pm.
(3) Opening of Technical bid Date : 27.10.2022 at 11.00 am.
(4) Date & Time for Opening of Financial Bid Date:04.11.2022 at 11.00 am.

ಸೂಚನೆ:1)WORK_INDENT133179/CALL-2 ಗೆ Pre-bid Meeting ಅನ್ವಯಿಸುವದಿಲ್ಲ.
2)ಟೆಂಡರನಲ್ಲಿ ದಿನಾಂಕ ಹಾಗೂ ಇತರೆ ತಿದ್ದುಪಡಿಗಳು ಬಂದಲ್ಲಿ ಇ–ಪೋರ್ಟಲ್‌ನಲ್ಲಿ ತಿಳಿಸಲಾಗುವದು ಮತ್ತು ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವದಿಲ್ಲ ಎಂದು ಸೂಚಿಸಿದೆ.

ಕಛೇರಿ ಟಿಪ್ಪಣಿ : ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದಿಸಲ್ಪಟ್ಟಿದೆ.

ಸಹಿ/–ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟ.

DIPR/BGK/RO-NO-483/MCA/2022-23

‘ಪರಿಣತ ಪ್ರಾಧ್ಯಾಪಕರ’ ನೇಮಕ ಅಧಿಸೂಚನೆ ಪ್ರಕಟಿಸಿದ ಯುಜಿಸಿ

ನವದೆಹಲಿ (ಪಿಟಿಐ): ದೇಶದ ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಈಗ ‘ವಿವಿಧ ಕ್ಷೇತ್ರಗಳ ಪರಿಣತ ಪ್ರಾಧ್ಯಾಪಕ’ರನ್ನು (ಪ್ರೊಫೆಸರ್ಸ್ ಆಫ್ ಪ್ರಾಕ್ಟೀಸ್) ನೇಮಕ ಮಾಡಿಕೊಳ್ಳಬಹುದಾಗಿದೆ.

‘ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಲ್ಲಿ ಪರಿಣತ ಪ್ರಾಧ್ಯಾಪಕರು’ ಕೆಟಗರಿಯಡಿ ಈ ನೇಮಕಾತಿ ಮಾಡಲು ಅವಕಾಶ ನೀಡಲಾಗಿದೆ. ಔಪಚಾರಿಕ ಶೈಕ್ಷಣಿಕ ಅರ್ಹತೆ ಮತ್ತು ಅಗತ್ಯಸಂಖ್ಯೆಯಷ್ಟು ಸಂಶೋಧನಾ ಕೃತಿಗಳನ್ನು ಪ್ರಕಟಿಸಬೇಕು ಎಂಬ ಅರ್ಹತೆಗಳು ಈ ಕೆಟಗರಿಯಡಿ ನೇಮಕವಾಗುವವರಿಗೆ ಕಡ್ಡಾಯವಾಗಿರುವುದಿಲ್ಲ.

ಈ ಕುರಿತು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಈ ಸಂಬಂಧ ಶುಕ್ರವಾರ ಅಧಿಸೂಚನೆ ಪ್ರಕಟಿಸಿದೆ.

ಈ ನೂತನ ಮಾರ್ಗಸೂಚಿಗಳ ಪ್ರಕಾರ, ಎಂಜಿನಿಯರಿಂಗ್, ವಿಜ್ಞಾನ, ಮಾಧ್ಯಮ, ಸಾಹಿತ್ಯ, ಉದ್ಯಮಶೀಲತೆ, ಸಮಾಜವಿಜ್ಞಾನ, ಲಲಿತಕಲೆ, ನಾಗರಿಕ ಸೇವೆಗಳು ಹಾಗೂ ಭದ್ರತಾಪಡೆಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ತಜ್ಞರು ‘ಪರಿಣತ ಪ್ರಾಧ್ಯಾಪಕರು’ ಕೆಟಗರಿಯಡಿ ನೇಮಕವಾಗಲು ಅರ್ಹತೆ ಹೊಂದಲಿದ್ದಾರೆ.

‘ಪರಿಣತ ಪ್ರಾಧ್ಯಾಪಕರ’ ಸಂಖ್ಯೆಯು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಮಂಜೂರಾದ ಒಟ್ಟು ಹುದ್ದೆಗಳ ಶೇ 10ರಷ್ಟಿಕ್ಕಿಂತ ಹೆಚ್ಚಿರಬಾರದು. ಉದ್ದಿಮೆಗಳಿಂದ ಹಣಕಾಸು ನೆರವು ಹೊಂದಿರುವ, ಸಂಸ್ಥೆಗಳೇ ಸಂಪನ್ಮೂಲ ಭರಿಸುತ್ತಿರುವ ಹಾಗೂ ಗೌರವ ಬೋಧಕರ ವರ್ಗಗಳಡಿ ‘ಪರಿಣತ ಪ್ರಾಧ್ಯಾಪಕರ’ನ್ನು ನೇಮಕ ಮಾಡಿಕೊಳ್ಳಬೇಕು.

ಈ ‘ಪ್ರಾಧ್ಯಾಪಕ’ರ ಸೇವಾವಧಿ ಮೂರು ವರ್ಷ ಮೀರಬಾರದು. ವಿಶೇಷ ಸಂದರ್ಭಗಳಲ್ಲಿ ಮಾತ್ರ ಒಂದು ವರ್ಷದ ವರೆಗೆ ಸೇವಾವಧಿಯನ್ನು ವಿಸ್ತರಿಸಬಹುದು ಎಂದು ಮಾರ್ಗಸೂಚಿಗಳಲ್ಲಿ ಹೇಳಲಾಗಿದೆ.

ವಿದೇಶಗಳಲ್ಲಿನ ಹಲವಾರು ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ‘ಪರಿಣತ ಪ್ರಾಧ್ಯಾಪಕರ’ನ್ನು ನೇಮಕ ಮಾಡಿಕೊಳ್ಳುವ ಪರಿಪಾಟ ಇದೆ. ಭಾರತದಲ್ಲಿ ದೆಹಲಿ, ಮದ್ರಾಸ್ ಹಾಗೂ ಗುವಾಹಟಿ ಐಐಟಿಗಳಲ್ಲಿ ಸಹ ಇಂಥ ನೇಮಕಾತಿ ರೂಢಿಯಲ್ಲಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್‌ಗೆ ಕೋವಿಡ್

ಬೆಂಗಳೂರು: ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಕೋವಿಡ್ ದೃಢಪಟ್ಟಿದೆ.

ಕೊರೊನಾ ಪರೀಕ್ಷೆ ಮಾಡಿದಾಗ, ಅವರು ಕೋವಿಡ್ ಬಾಧಿತರಾಗಿರುವುದು ಶನಿವಾರ ಖಚಿತವಾಗಿದೆ. ರಾಜ್ಯಪಾಲರ ಆರೋಗ್ಯ ಸ್ಥಿರವಾಗಿದೆ ಎಂದು ರಾಜಭವನದ ಪ್ರಕಟಣೆ ತಿಳಿಸಿದೆ.



ಬಾಲಕನ ಗಮನ ಬೇರೆಡೆ ಸೆಳೆದು ಕೃತ್ಯ

ಕೇಬಲ್ ದುರಸ್ತಿ ನೆಪ: ನಗದು, ಚಿನ್ನಾಭರಣ ಕದ್ದೊಯ್ದ ಕಳ್ಳ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮನೆಯಲ್ಲಿ ಒಂಟಿಯಾಗಿದ್ದ ಬಾಲಕನ ಗಮನ ಬೇರೆಡೆ ಸೆಳೆದು ನಗದು ಹಾಗೂ ಚಿನ್ನಾಭರಣ ಕಳ್ಳತನ ಮಾಡಲಾಗಿದ್ದು, ಈ ಬಗ್ಗೆ ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಟಿ. ದಾಸರಹಳ್ಳಿಯ ಮನೆಯೊಂದರಲ್ಲಿ ಕಳ್ಳತನ ನಡೆದಿರುವ ಬಗ್ಗೆ ಮಾಲೀಕ ಚಂದ್ರಶೇಖರ್ ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಚಂದ್ರಶೇಖರ್, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ವಾಸವಿದ್ದಾರೆ. ಮನೆ ಸಮೀಪದ ಕಟ್ಟಡವೊಂದರಲ್ಲಿ ಪ್ರಾವಿಜನ್ ಸ್ಟೋರ್ ನಡೆಸುತ್ತಿದ್ದಾರೆ. ಸೆ. 28ರಂದು ಅವರು ಆಸ್ಪತ್ರೆಗೆ ಹೋಗಿದ್ದರು. ಪತ್ನಿ, ಅಂಗಡಿಯಲ್ಲಿದ್ದರು. ಇಬ್ಬರು ಮಕ್ಕಳು ಶಾಲೆಗೆ ಹೋಗಿದ್ದರು.’

‘ಎರಡನೇ ತರಗತಿಯಲ್ಲಿ ಓದುತ್ತಿರುವ ಮಗ, ಮಧ್ಯಾಹ್ನ 1.15ಕ್ಕೆ ಶಾಲೆ ಮುಗಿಸಿಕೊಂಡು ಬಂದಿದ್ದ. ಅಂಗಡಿಯಲ್ಲಿದ್ದ ತಾಯಿ ಬಳಿ ಕೀ ಪಡೆದುಕೊಂಡು ಒಬ್ಬನೇ ಮನೆಗೆ ಹೋಗಿದ್ದ. ಇದೇ ಸಂದರ್ಭದಲ್ಲಿ ಮನೆಗೆ ಬಂದಿದ್ದ ಆರೋಪಿ, ‘ನಾನು ಕೇಬಲ್ ದುರಸ್ತಿ ಮಾಡಲು ಬಂದಿದ್ದೇನೆ. ನಿಮ್ಮ ಮನೆಯ ಚಾವಣಿಗೆ ಹೋಗಿ, ಕೇಬಲ್ ಗಟ್ಟಿಯಾಗಿ ಹಿಡಿದುಕೊ. ನಾನು ನಿಮ್ಮ ಟಿ.ವಿ ಕೇಬಲ್ ಸರಿ ಮಾಡುತ್ತೇನೆ’ ಎಂದಿದ್ದ. ಇದನ್ನು ನಂಬಿದ್ದ ಬಾಲಕ, ಚಾವಣಿಗೆ ಹೋಗಿ ನಿಂತಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘15 ನಿಮಿಷಗಳ ನಂತರ ಬಾಲಕ ಚಾವಣಿಯಿಂದ ಇಳಿದು ಮನೆಗೆ ಬಂದಿದ್ದ. ಅಷ್ಟರಲ್ಲೇ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ. ಬಾಲಕ, ಮನೆಯೊಳಗೆ ಹೋದಾಗ ಬೀರು ತೆರೆದಿತ್ತು. ತಾಯಿಯನ್ನು ಕರೆದು ತೋರಿಸಿದ್ದ. ಪರಿಶೀಲನೆ ನಡೆಸಿದಾಗ, ₹ 8 ಲಕ್ಷ ನಗದು, 35 ಗ್ರಾಂ ಚಿನ್ನಾಭರಣ ಹಾಗೂ 1 ಕೆ.ಜಿ ಬೆಳ್ಳಿ ಸಾಮಗ್ರಿಗಳು ಕಳ್ಳತನ ಆಗಿರುವುದು ಗೊತ್ತಾಗಿದೆ’ ಎಂದೂ ಮೂಲಗಳು ಹೇಳಿವೆ.

ವಿವಿಧ ಕ್ಷೇತ್ರಗಳ ಪ್ರತಿನಿಧಿಗಳೊಂದಿಗೆ ರಾಹುಲ್ ಗಾಂಧಿ ಸಂವಾದ

‘ಪ್ರೀತಿ ಸಿಗದೆ ದ್ವೇಷಿಸುವ ನರೇಂದ್ರ ಮೋದಿ’

● ಎಂ.ಮಹೇಶ

ಕಳಲೆ (ಮೈಸೂರು ಜಿಲ್ಲೆ): ‘ಪ್ರಧಾನಿ ನರೇಂದ್ರ ಮೋದಿ ಹಿನ್ನೆಲೆಯನ್ನು ಗಮನಿಸಿದರೆ, ಅವರಿಗೆ ಎಲ್ಲಿಯೂ ಪ್ರೀತಿ ಸಿಕ್ಕಿಲ್ಲ. ಹೀಗಾಗಿಯೇ ಈಗ ಎಲ್ಲರನ್ನೂ ದ್ವೇಷಿಸುತ್ತಿದ್ದಾರೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅನುಕಂಪ ವ್ಯಕ್ತಪಡಿಸಿದರು.

‘ಭಾರತ್ ಜೋಡೊ ಪಾದ ಯಾತ್ರೆ’ಯ ವಿಶ್ರಾಂತಿ ಸಮಯದಲ್ಲಿ ಇಲ್ಲಿನ ಕಳಲೆ ಗೇಟ್ ಬಳಿ ‘ಕಲೆಯು ದ್ವೇಷವನ್ನು ನಿಗ್ರಹಿಸುತ್ತದೆ’ ಎಂಬ ಶೀರ್ಷಿಕೆಯಲ್ಲಿ ವಿವಿಧ ರಂಗದ ಪ್ರತಿನಿಧಿಗಳೊಂದಿಗೆ ಶನಿವಾರ ಸಂವಾದ ನಡೆಸಿದರು.

‘ಮೋದಿ ಒಂದು ಕಾಲಕ್ಕೆ ಎಲ್ಲರಿಂದಲೂ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು. ಅವರ ಪಕ್ಷದ ನಾಯಕರು ಅವರನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಅದರಿಂದಾಗಿಯೇ ಈಗ ಎಲ್.ಕೆ.ಅಡ್ವಾಣಿ ಸೇರಿದಂತೆ ಆ ಪಕ್ಷದ ನಾಯಕರೆಲ್ಲರನ್ನೂ ಕಡಗಣಿಸುತ್ತಿದ್ದಾರೆ’ ಎಂದು ವಿಶ್ಲೇಷಿಸಿದರು.

‘ಆರ್‌ಎಸ್‌ಎಸ್‌ನವರು ಭಯವನ್ನು ಸೃಷ್ಟಿಸುತ್ತಿದ್ದು, ನಂತರ ಅದನ್ನು ದ್ವೇಷವನ್ನಾಗಿ ಪರಿವರ್ತಿಸುತ್ತಾರೆ. ಹೀಗಾಗಿ, ಆ ಸಂಘಟನೆಯ ಬಗ್ಗೆ ಭಯವನ್ನು ಬಿಡಿ. ಆಗ ಅದಾಗಿಯೇ ನಿಷ್ಕ್ರಿಯವಾಗುತ್ತದೆ. ದ್ವೇಷವನ್ನು ಬಿತ್ತುತ್ತಿರುವ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿಯೇ ಭಾರತ ಐಕ್ಯತಾ ಯಾತ್ರೆ ನಡೆಸುತ್ತಿದ್ದೇವೆ. ಒಬ್ಬ ರಾಹುಲ್ ನಡೆದರೆ ಭಾರತ್ ಜೋಡೊ ಆಗುವುದಿಲ್ಲ. ಜನರೆಲ್ಲರೂ ಕೈಜೋಡಿಸಿದರೆ ಮಾತ್ರ ಸಾಧ್ಯವಾಗುತ್ತದೆ’ ಎಂದು ಕೋರಿದರು.

ದ್ವೇಷದ ಆಯುಧ: ‘ಬಿಜೆಪಿಯವರು ಭಯವನ್ನು ದ್ವೇಷದ ಆಯುಧವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಹಿಂದೆ ಹಳ್ಳಿಗಳಲ್ಲಿ ಇದ್ದಂತಹ ಸುರಕ್ಷತಾ ಭಾವ ಎಲ್ಲೆಡೆಯೂ ಮೂಡಬೇಕು. ಅದಕ್ಕಾಗಿ ಆರ್‌ಎಸ್‌ಎಸ್, ಮೋದಿಯನ್ನು ದ್ವೇಷಿಸಬೇಕಿಲ್ಲ. ನಮ್ಮೊಳಗಿನ ಭಯವನ್ನು ಹೋಗಲಾಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಬಿಜೆಪಿಯವರು ಅನವಶ್ಯವಾಗಿ ಯೋಜನೆ ರೂಪಿಸುವುದಿಲ್ಲ. ನೋಟು ಅಮಾನ್ಯೀಕರಣದಿಂದ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಮುಚ್ಚಿದವು; ಲಕ್ಷಾಂತರ ಮಂದಿ ನಿರುದ್ಯೋಗಿಗಳಾದರು. ಇದರ ವಿರುದ್ಧ ನಾವು ಹೋರಾಡಬೇಕು ಎಂಬ ಕರೆಯನ್ನೂ ನೀಡಿದ್ದಾರೆ’ ಎಂದು ಸಂವಾದದಲ್ಲಿ ಪಾಲ್ಗೊಂಡಿದ್ದವರು ‘ಪ್ರಜಾವಾಣಿ’ಯೊಂದಿಗೆ ಮಾಹಿತಿ ಹಂಚಿಕೊಂಡರು.

ಸಂವಿಧಾನದ ಪೀಠಿಕೆಯ ಕನ್ನಡ ಅನುವಾದವನ್ನು ಸಂಯೋಜಿಸಿ ಹಾಡಿದ ಚಿಂತನ್ ವಿಕಾಸ್, ‘ದಲಿತರೆಂಬ ಕಾರಣಕ್ಕೇ ಸರ್ಕಾರ ನಿರ್ಲಕ್ಷಿಸುತ್ತಿದೆ’ ಎಂದರು.

ಅವರಿಗೆ ಪ್ರತಿಕ್ರಿಯಿಸಿದ ರಾಹುಲ್ ಗಾಂಧಿ, ‘ಯಾರನ್ನು ಯಾರೂ ನಿರ್ಲಕ್ಷಿಸಲಾಗದು. ಸಂವಿಧಾನ ರಕ್ಷಣೆಗೆ ಕಟಿಬದ್ಧವಾಗಿ ಹೋಗಬೇಕು. ರಕ್ಷಿಸಿಕೊಳ್ಳಬೇಕಿರುವುದು ನಾವೇ ಅಲ್ಲವೇ?. ಮೂರ್ಖರನ್ನು ತಿದ್ದಲು ಹೋಗಬೇಡಿ. ಬದಲಿಗೆ, ಸಜ್ಜನರು, ಮುಗ್ಧರನ್ನು ತಿದ್ದಿದ್ದರೆ ಅವರು ನಿಮಗೆ ಕೃತಜ್ಞರಾಗಿರುತ್ತಾರೆ’ ಎಂಬ ಪತ್ರಕರ್ತ ಕೆ.ದೀಪಕ್ ಸಲಹೆ ಪಾಲಿಸುವುದಾಗಿ ಹೇಳಿದರು.

ಮಾಜಿ ಐಎಎಸ್ ಅಧಿಕಾರಿ ಶಶಿಕಾಂತ್ ಸೆಂಥಿಲ್ ನಿರ್ವಹಿಸಿದರು. ವಿವಿಧ ರಂಗದ ಪ್ರತಿನಿಧಿಗಳಾಗಿ ರವಿಪ್ರಸಾದ್, ರಾಜೇಶ್ ಬಸವಣ್ಣ, ಟಿ.ಗುರುರಾಜ್, ಪ್ರೀತಿ ನಾಗರಾಜ್, ಕುಸುಮಾ ಆಯರಹಳ್ಳಿ, ನಿಶಿತಾ, ನಿರಂತರ ಗುರುಪ್ರಸಾದ್ ಪಾಲ್ಗೊಂಡಿದ್ದರು.

ಅಭೂತಪೂರ್ವ ಸ್ಪಂದನೆ: ಮೈಸೂರು ತಲುಪಿದ ಯಾತ್ರೆಗೆ ಜಿಲ್ಲೆಯ ಗಡಿಯ ಆರಂಭದಿಂದಲೂ ಅಭೂತಪೂರ್ವ ಸ್ವಾಗತ ದೊರೆಯಿತು. ರಾಮನಗರ, ಚನ್ನಪಟ್ಟಣ, ಕನಕಪುರ, ಕುಶಾಲನಗರದಿಂದಲೂ ಕಾರ್ಯಕರ್ತರು ಬಂದಿದ್ದರು.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಕಳಲೆ ಬಳಿಯಿಂದ ಶನಿವಾರ ಸಂಜೆ ನಡೆದ ‘ಭಾರತ ಜೋಡೊ’ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ರಾಹುಲ್ ಗಾಂಧಿ ಕಾರ್ಯಕರ್ತರತ್ತ ಕೈಬೀಸಿದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಇದ್ದಾರೆ —ಪಿಟಿಐ ಚಿತ್ರ

‘ಶೇ 40ರಷ್ಟು ಕಮಿಷನ್ ಕಳ್ಳರು’

ಚಿಕ್ಕಯ್ಯನಛತ್ರ (ಮೈಸೂರು ಜಿಲ್ಲೆ): ‘ಬಿಜೆಪಿ ಸರ್ಕಾರ ಎಲ್ಲದರಲ್ಲೂ ಲೂಟಿ ಹೊಡೆಯುತ್ತಿದೆ. ಅವರು ದೇಶಭಕ್ತರಲ್ಲ, ಧರ್ಮ ರಕ್ಷಕರಲ್ಲ. ಶೇ 40ರಷ್ಟು ಕಮಿಷನ್ ಕಳ್ಳರು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

‘ಭಾರತ್ ಜೋಡೊ’ ಯಾತ್ರೆ ಅಂಗವಾಗಿ ಇಲ್ಲಿ ಶನಿವಾರ ಸಂಜೆ ನಡೆದ ‘ಕಾರ್ನರ್ ಮೀಟಿಂಗ್’ನಲ್ಲಿ ಮಾತನಾಡಿದ ಅವರು, ‘ಸಹಾಯಕ ಪ್ರಾಧ್ಯಾಪಕರ ನೇಮಕಾತಿ, ಪಿಎಸ್‌ಐ ಹಗರಣಗಳು ಬಿಜೆಪಿ ಸರ್ಕಾರದ ಧೋರಣೆಗೆ ಸಾಕ್ಷಿಯಾಗಿವೆ. ಪ್ರತಿ ಇಲಾಖೆಯಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ’ ಎಂದು ದೂರಿದರು. ‘ಬಿಜೆಪಿಯು ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟುಕೊಂಡು ಚುನಾವಣೆ ತಯಾರಿ ನಡೆಸುತ್ತಿದೆ. ಜನರನ್ನು ಒಡೆದು ಆಳುವ ನೀತಿ ಅನುಸರಿಸುತ್ತಿದೆ. ಅದಕ್ಕೆಲ್ಲ ಕರ್ನಾಟಕದ ಜನರು ಮರುಳಾಗದೆ ಭ್ರಷ್ಟ ಸರ್ಕಾರವನ್ನು ಕಿತ್ತೊಗೆಯುತ್ತಾರೆ’ ಎಂದರು.

ಸುದ್ದಿ 2 ನಿಮಿಷ

‘ಜೋಡೊಗೆ ಜನಸ್ಪಂದನೆ ನೋಡಿ ಬಿಜೆಪಿಯವರಿಗೆ ಭಯ’

ಕಳಲೆ (ಮೈಸೂರು ಜಿಲ್ಲೆ): ‘ಭಾರತ್ ಜೋಡೊ ಯಾತ್ರೆಗೆ ಸಿಗುತ್ತಿರುವ ಜನಸ್ಪಂದನೆ ನೋಡಿ ಬಿಜೆಪಿಯವರಿಗೆ ಭಯವಾಗಿದ್ದು, ಹತಾಶೆಯಿಂದ ಏನೇನೋ ಮಾತನಾಡುತ್ತಿದ್ದಾರೆ. ಸರ್ಕಾರ ನಮ್ಮ ಕಾರ್ಯಕರ್ತರ ಮೇಲೆ ಪೊಲೀಸನವರನ್ನು ಛೂ ಬಿಟ್ಟದೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಸಂವಿಧಾನ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಮೂಲಭೂತ ಹಕ್ಕುಗಳ ಬಗ್ಗೆ ಬಿಜೆಪಿಯವರು ನಂಬಿಕೆ ಇಟ್ಟುಕೊಂಡಿಲ್ಲ. ಸಂವಿಧಾನವನ್ನು ವಿರೋಧಿಸುತ್ತಲೇ ಬಂದಿದ್ದಾರೆ’ ಎಂದು ದೂರಿದರು.

‘ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತಿದೆ ಎಂದು ಸಮಾಜಮುಖಿ ಚಿಂತಕರು, ಬರಹಗಾರರು ರಾಹುಲ್ ಗಾಂಧಿ ಜೊತೆಗಿನ ಸಂವಾದದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ’ ಎಂದರು.

ನಾವೂ ‘ಪೇಸಿಎಂ’ ಟಿ-ಶರ್ಟ್ ಧರಿಸ್ತೇವೆ, ಏನ್ಮಾಡ್ತೊತಿರಾ?: ಡಿಕೆಶಿ

ಕಳಲೆ (ಮೈಸೂರು ಜಿಲ್ಲೆ): ‘ಭಾರತ್ ಜೋಡೊ ಯಾತ್ರೆಯಲ್ಲಿ ನಾನು, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ‘ಪೇ ಸಿಎಂ’ ಟಿ-ಶರ್ಟ್‌ಗಳನ್ನು ಧರಿಸಿ ಪಾಲ್ಗೊಳ್ಳುತ್ತೇವೆ. ಬಿಜೆಪಿಯವರು ಅದೇನ್ ಮಾಡ್ತೊತಾರೋ ನೋಡುತ್ತೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಗುಡುಗಿದರು.

‘ಭಾರತ್ ಜೋಡೊ’ ಪಾದಯಾತ್ರೆ ನಡುವೆ ನಂಜನಗೂಡು ತಾಲ್ಲೂಕಿನ ಕಳಲೆ ಗೇಟ್ ಬಳಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪಾದಯಾತ್ರೆ ವೇಳೆ ನಮ್ಮ ಕಾರ್ಯಕರ್ತ ಪೇಸಿಎಂ ಟಿ-ಶರ್ಟ್ ಹಾಕಿದ್ದಕ್ಕೆ ಕೇಸ್ ಮಾಡಿದ್ದಾರೆ. ಇಂಥದ್ದಕ್ಕೆಲ್ಲ ನಾವು ಹೆದರುವುದಿಲ್ಲ; ಜಗ್ಗುವುದಿಲ್ಲ’ ಎಂದರು.

‘ಯಾತ್ರೆಯು ಪಕ್ಷದ ಕಾರ್ಯಕ್ರಮವಲ್ಲ. ಮನಸ್ಸುಗಳನ್ನು ಜೋಡಿಸುವ ಕಾರ್ಯಕ್ರಮ. ಸಮಸ್ಯೆಗಳಿಗೆ ಉತ್ತರ ಕಂಡು ಹಿಡಿಯುವ ಹಾಗೂ ಆತಂಕಿತ ಜನಕ್ಕೆ ಧೈರ್ಯ ತುಂಬುವ ಪ್ರಯತ್ನ’ ಎಂದರು.

‘ಜನರ ಗಮನ ಬೇರೆಡೆ ಸೆಳೆಯಲು ಕ್ಷುಲ್ಲಕ ರಾಜಕಾರಣ ಮಾಡುತ್ತಿರುವ ಬಿಜೆಪಿಯ ತಟ್ಟೆಯಲ್ಲಿ ನೂರೆಂಟು ಹೆಗ್ಗಣಗಳು ಬಿದ್ದಿದ್ದರೂ ನಮ್ಮ ವಿರುದ್ಧ ಟೀಕಿಸುತ್ತಿದ್ದಾರೆ’ ಎಂದು ತಿರುಗೇಟು ನೀಡಿದರು.

ಕಾಮಗಾರಿಗೆ ಚಾಲನೆ: ಎಚ್‌ಡಿಕೆ–ಸಿಪಿವೈ ಜಟಾಪಟಿ

ಯೋಗೇಶ್ವರ್ ಕಾರಿಗೆ ಜೆಡಿಎಸ್ ಕಾರ್ಯಕರ್ತರ ಮುತ್ತಿಗೆ ● ಮೊಟ್ಟೆ, ಕಲ್ಲು ಎಸೆತ ● ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ರಾಮನಗರ: ₹50 ಕೋಟಿ ವಿಶೇಷ ಅನುದಾನದಡಿ ಕಾಮಗಾರಿಗಳಿಗೆ ಚಾಲನೆ ನೀಡುವ ವಿಚಾರದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರ ನಡುವೆ ಶನಿವಾರ ಜಟಾಪಟಿ ನಡೆದಿದೆ.

ಕಾಮಗಾರಿ ಶಂಕುಸ್ಥಾಪನೆಗೆ ಸ್ಥಳೀಯ ಶಾಸಕ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಆಹ್ವಾನ ನೀಡದೆ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ ನೂರಾರು ಜೆಡಿಎಸ್ ಕಾರ್ಯಕರ್ತರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಕಾರನ್ನು ಅಡ್ಡಗಟ್ಟಿ ಮುತ್ತಿಗೆ ಹಾಕಿದ ಪ್ರತಿಭಟನಕಾರರು ಕಾರಿಗೆ ಕಲ್ಲು ಮತ್ತು ಮೊಟ್ಟೆ ಎಸೆದು ಆಕ್ರೋಶ ಹೊರಹಾಕಿದರು.

ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ಕಾರ್ಯಕರ್ತರನ್ನು ಪೊಲೀಸರು ಲಾಠಿ ಪ್ರಹಾರ ನಡೆಸಿ ಚದುರಿಸಿದರು. ಇದರಿಂದ ಸ್ಥಳದಲ್ಲಿ ಕೆಲಹೊತ್ತು ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಘಟನೆಯ ಬೆನ್ನಲ್ಲೇ ಜೆಡಿಎಸ್ ಕಾರ್ಯಕರ್ತರು ಮತ್ತು ಸಿ.ಪಿ. ಯೋಗೇಶ್ವರ್ ಪರಸ್ಪರ ಆರೋಪ, ಪ್ರತ್ಯಾರೋಪ ಮಾಡಿದ್ದಾರೆ.

ಅಶ್ವತ್ಥನಾರಾಯಣ ಗೈರು: ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಕಾರ್ಯಕ್ರಮಕ್ಕೆ ಚಾಲನೆ ನೀಡಬೇಕಿತ್ತು. ಆದರೆ ಆರಂಭದಲ್ಲೇ ಗದ್ದಲವಾಗುತ್ತಿದ್ದಂತೆಯೇ ಅವರು ಬೆಂಗಳೂರಿನಲ್ಲೇ ಉಳಿದರು. ಹೀಗಾಗಿ ಯೋಗೇಶ್ವರ್ ನೇತೃತ್ವದಲ್ಲೇ ಶಂಕುಸ್ಥಾಪನೆ ಕಾರ್ಯಕ್ರಮ ನಡೆದವು.

ಪ್ರಾಯೋಜಿತ ಗಲಭೆ: ಗಲಾಟೆಗೆ ಜೆಡಿಎಸ್ ಗೂಂಡಾಗಳೇ ಕಾರಣ. ಇದು ಕುಮಾರಸ್ವಾಮಿ ಪ್ರಾಯೋಜಿತ ಗಲಭೆ ಎಂದು ಎಂದು ಯೋಗೇಶ್ವರ್ ಸುದ್ದಿಗೋಷ್ಠಿಯಲ್ಲಿ ವಾಗ್ದಾಳಿ ನಡೆಸಿದರು.

'ಐದಾರು ಕಾರುಗಳಲ್ಲಿ ಹೊರಗಿನಿಂದ ಬಂದವರು ನನಗೆ ಮುತ್ತಿಗೆ ಹಾಕಿ ಕಾರಿನ ಮೇಲೆ ಮೊಟ್ಟೆ ಎಸೆದಿದ್ದಾರೆ. ಹೀಗೆ ಹೊರಗಿನಿಂದ ಕರೆಸಿ ಗಲಾಟೆ ಮಾಡಿಸುವುದು ಕುಮಾರಸ್ವಾಮಿಗೆ ಶೋಭೆ ತರುವಂತದ್ದಲ್ಲ. ಇದು ಅವರ ರಾಜಕೀಯ ಅಧಃಪತನಕ್ಕೆ ಸಾಕ್ಷಿ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ನಾನು ಕ್ಷೇತ್ರದ ಅಭಿವೃದ್ಧಿಗೆ ಅನುದಾನ ತಂದರೆ ಅದಕ್ಕೆ ತಡೆ ಒಡ್ಡುತ್ತಿದ್ದಾರೆ. ಕಳೆದ ಒಂದು ವರ್ಷದಿಂದ ಈ ಅನುದಾನಕ್ಕೆ ನಾನು ಪ್ರಯತ್ನಿಸಿದ್ದು, ಅದಕ್ಕೆ ಕುಮಾರಸ್ವಾಮಿ ಕೊಕ್ಕೆ ಹಾಕುತ್ತಲೇ ಬಂದಿದ್ದರು.ಅಧಿಕಾರಿಗಳು ಕುಮಾರಸ್ವಾಮಿ ಅವರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಆಹ್ವಾನ ಪತ್ರಿಕೆಯಲ್ಲೂ ಅವರ ಹೆಸರಿತ್ತು. ಕ್ಷೇತ್ರದ ಬಗ್ಗೆ ಕಾಳಜಿ ಇದ್ದಿದ್ದರೆ ಅವರು ಬರಬೇಕಿತ್ತು' ಎಂದರು.

ಬೈರಾಪಟ್ಟಣ ಬಳಿ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಕಾರಿಗೆ ಪ್ರತಿಭಟನಕಾರರು ಮೊಟ್ಟೆ ಎಸೆದರು

ಧಮ್, ತಾಕತ್ತು ಎದುರಿಸಲು ಸಿದ್ಧ: ಎಚ್‌ಡಿಕೆ

ಬೆಂಗಳೂರು: ‘ಪ್ರೀತಿ, ವಿಶ್ವಾಸ, ಕಾನೂನಿಗೆ ತಲೆ ಬಾಗುತ್ತೇನೆ. ಧಮ್, ತಾಕತ್ತು ತೋರಿಸಲು ಬಂದರೆ ಅದನ್ನು ಎದುರಿಸುವುದಕ್ಕೂ ಸಿದ್ಧ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಚನ್ನಪಟ್ಟಣದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿರುವ ಕುರಿತು ಪಕ್ಷದ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, ‘ಹಿಂದಿನ ಮುಖ್ಯಮಂತ್ರಿಯೊಬ್ಬರು ಎಚ್.ಡಿ. ದೇವೇಗೌಡರ ಕುಟುಂಬವನ್ನು ಕೆಣಕಿ ಏನಾದರು ಎಂಬುದನ್ನು ಒಮ್ಮೆ ನೆನಪು ಮಾಡಿಕೊಂಡರೆ ಉತ್ತಮ. ಯಾವುದೇ ಕಾರಣಕ್ಕೂ ನನ್ನ ಪಕ್ಷದ ಕಾರ್ಯಕರ್ತರನ್ನು ಕೆರಳಿಸುವ ಪ್ರಯತ್ನ ಮಾಡಬೇಡಿ’ ಎಂದರು.

ದೂರು: ‘ಸ್ಥಳೀಯ ಶಾಸಕನಾದ ನನಗೆ ಮಾಹಿತಿ ನೀಡದೆ ಕಾಮಗಾರಿಗಳ ಭೂಮಿಪೂಜೆ ನೆರವೇರಿಸುವ ಮೂಲಕ ವಿಧಾನ ಪರಿಷತ್ ಸದಸ್ಯರು ಮತ್ತು ಅಧಿಕಾರಿಗಳು ಶಾಸಕರ ಹಕ್ಕಿಗೆ ಚ್ಯುತಿ ತಂದಿದ್ದಾರೆ. ಜಿಲ್ಲಾಧಿಕಾರಿಯವರ ಜತೆ ಮಾತನಾಡಿದ್ದೇನೆ. ಈ ಕುರಿತು ತಮಗೆ ಮಾಹಿತಿ ಇರಲಿಲ್ಲ ಎಂದು ಅವರು ತಿಳಿಸಿದ್ದಾರೆ. ಹಕ್ಕುಚ್ಯುತಿ ಎಸಗಿರುವ ಅಧಿಕಾರಿಗಳು ಮತ್ತು ವಿಧಾನ ಪರಿಷತ್ ಸದಸ್ಯರ ವಿರುದ್ಧ ವಿಧಾನಸಭೆ ಅಧ್ಯಕ್ಷರಿಗೆ ದೂರು ನೀಡುವೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಈಗಾಗಲೇ ದೂರು ನೀಡಿದ್ದೇನೆ’ ಎಂದರು.

ದಾಳಿ ಖಂಡನೀಯ: ಸಿ.ಎಂ. ಬೊಮ್ಮಾಯಿ

ಬೆಂಗಳೂರು: ‘ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರ ಮೇಲೆ ರಾಮನಗರದಲ್ಲಿ ಕಲ್ಲು, ಮೊಟ್ಟೆ ಎಸೆದು ದಾಳಿಮಾಡಿರುವುದು ಖಂಡನೀಯ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಘಟನೆ ಕುರಿತು ಟ್ವಿಟರ್‌ನಲ್ಲಿ ಶನಿವಾರ ಪ್ರತಿಕ್ರಿಯಿಸಿರುವ ಅವರು, ‘ಕಲ್ಲು, ಮೊಟ್ಟೆ ಎಸೆದಿರುವುದು ಸರಿಯಲ್ಲ. ಈ ದಾಳಿಯನ್ನು ನಾನು ಕಟುವಾಗಿ ಖಂಡಿಸುತ್ತೇನೆ. ಏನೇ ವಿಷಯಗಳಿದ್ದರೂ ಅವುಗಳನ್ನು ಕಾನೂನಾತ್ಮಕವಾಗಿ ಪರಿಹರಿಸಿಕೊಳ್ಳಬೇಕು. ಯಾರೊಬ್ಬರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು’ ಎಂದಿದ್ದಾರೆ.

ದ್ವೇಷದ ರಾಜಕಾರಣ ಬೇಡ: ‘ರಾಮನಗರ ಜಿಲ್ಲೆಯಲ್ಲಿ ನಮ್ಮ ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಕೆಲಸಗಳನ್ನು ತಡೆಯಲು ಎಚ್.ಡಿ. ಕುಮಾರಸ್ವಾಮಿ ವಾಮಮಾರ್ಗ ಅನುಸರಿಸುತ್ತಿರುವುದು ಖಂಡನೀಯ. ಅಧಿಕಾರವೂ ತಪ್ಪಬಾರದು, ಅಭಿವೃದ್ಧಿಯೂ ಆಗಬಾರದು ಎಂಬ ಸಿದ್ಧಾಂತಕ್ಕೆ ಕಟ್ಟುಬೀಳುವ ಬದಲು ನಾವು ಮಾಡುತ್ತಿರುವ ಜನಪರ ಕಾರ್ಯಗಳನ್ನು ಬೆಂಬಲಿಸಿ’ ಎಂದು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ್ದಾರೆ.

‘ಭಾರತ್ ಜೋಡೊ’ ಯಾತ್ರೆಯಲ್ಲಿ ‘ಪೇ ಸಿಎಂ’ ಚಿತ್ರವುಳ್ಳ ಟೀಶರ್ಟ್ ಧರಿಸಿದ್ದ ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿಯ ಅಕ್ಷಯ್ ಕುಮಾರ್ ಅವರನ್ನು ಪೊಲೀಸರು ವಶಕ್ಕೆ ಪಡೆದರು

‘ಪೇಸಿಎಂ’ ಟೀಶರ್ಟ್ ಧರಿಸಿದ್ದ ಪಾದಯಾತ್ರಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆಯಲ್ಲಿ ‘ಪೇ ಸಿಎಂ’ ಘೋಷಣೆಯ ಟೀ ಶರ್ಟ್ ಧರಿಸಿದ್ದ ಕಾಂಗ್ರೆಸ್ ಕಾರ್ಯಕರ್ತ ಅಕ್ಷಯ್ ಕುಮಾರ್ ಸಿಂದಗಿ ಎಂಬುವವರನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದರು.

ಶನಿವಾರ ಬೆಳಿಗ್ಗೆ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರಿನಿಂದ ಮೈಸೂರು ಜಿಲ್ಲೆಯತ್ತ ಪಾದಯಾತ್ರೆ ನಡೆಯುತ್ತಿದ್ದಾಗ ಚಾಮರಾಜನಗರದ ಸಿಇಎನ್ ಅಪರಾಧ ಠಾಣೆಯ ಪೊಲೀಸರು ವಶಕ್ಕೆ ಪಡೆದು, ಠಾಣೆಯ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿಯ ಅಕ್ಷಯ್ ಕುಮಾರ್ ಶುಕ್ರವಾರ ಗುಂಡ್ಲುಪೇಟೆಯಲ್ಲಿ ಸಾಗಿದ್ದ ಪಾದಯಾತ್ರೆಯಲ್ಲಿ ಧರಿಸಿದ್ದ ಟೀಶರ್ಟ್ ಹಾಗೂ ಧ್ವಜ ಜನರ ಗಮನ ಸೆಳೆದಿತ್ತು. ಅಕ್ಷಯ್ ವಿರುದ್ಧ ಬಿಜೆಪಿ ಮುಖಂಡ, ಗುಂಡ್ಲುಪೇಟೆ ಪುರಸಭೆ ಸದಸ್ಯ ಜಿ.ಎಸ್.ಕಿರಣ್ ಶುಕ್ರವಾರ ದೂರು ನೀಡಿದ್ದರು.

ಕೋವಿಡ್ ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ: ಆಗ್ರಹ

ನವದೆಹಲಿ (ಪಿಟಿಐ): ಕೋವಿಡ್–19 ನಿಂದ ಮೃತಪಟ್ಟವರ ಕುಟುಂಬಗಳಿಗೆ ಸೂಕ್ತವಾದ ಪರಿಹಾರ ನೀಡಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶನಿವಾರ ಆಗ್ರಹಿಸಿದರು.

ಕಾಂಗ್ರೆಸ್‌ನ ‘ಭಾರತ್ ಜೋಡೊ ಯಾತ್ರಾ’ ಕರ್ನಾಟಕದ ಗುಂಡ್ಲು ಪೇಟೆ ಪ್ರವೇಶಿಸಿದ ವೇಳೆ ಅವರು ಕೋವಿಡ್ ಸಾಂಕ್ರಾಮಿಕದ ವೇಳೆ ಆಮ್ಲಜನಕ ಕೊರತೆಯಿಂದಾಗಿ ಮೃತಪಟ್ಟರ ಕುಟುಂಬಗಳ ಜೊತೆ ಚರ್ಚೆ ನಡೆಸಿದರು. ಅವರು ನಡೆಸಿದ ಸಂಭಾಷಣೆಯ ವಿಡಿಯೊವೊಂದನ್ನು ಟ್ವೀಟ್ ಮಾಡಿದ್ದಾರೆ. ಪ್ರತೀಕ್ಷಾ ಎಂಬ ಬಾಲಕಿ ತನ್ನ ಕುಟುಂಬ ನಿರ್ವಹಣೆಗೆ ಮತ್ತು ತನ್ನ ಶಿಕ್ಷಣಕ್ಕೆ ಸಹಾಯ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡುವುದು ಈ ವಿಡಿಯೊದಲ್ಲಿ ಸೆರೆಯಾಗಿದೆ.

ಆಸ್ತಿ ನೋಂದಣಿ: ಆಂಬುಲೆನ್ಸ್‌ನಲ್ಲಿಯೇ ಕಚೇರಿಗೆ ವೃದ್ಧ ತಾಯಿ ಕರೆತಂದ ಮಕ್ಕಳು!

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೃದ್ಧೆಯೊಬ್ಬರನ್ನು, ಆಸ್ತಿ ಪತ್ರಗಳ ಮೇಲೆ ಸಹಿ ಮಾಡಿಸಲು ಉಪನೋಂದಣಾಧಿಕಾರಿ ಕಚೇರಿಗೇ ಕರೆತಂದ ಘಟನೆ ನಡೆದಿದೆ.

ಈ ಘಟನೆ ಶುಕ್ರವಾರ ನಡೆದಿದೆ. ಈ ಕುರಿತ ದೃಶ್ಯಗಳಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಶನಿವಾರ ಹರಿದಾಡಿವೆ.

ತಾಲ್ಲೂಕಿನ ಹಿರೇಬಾಗೇವಾಡಿ ನಿವಾಸಿ ಮಹಾದೇವಿ ಅಗಸಿಮನಿ (79) ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ನಗರದ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಅವರನ್ನು ದಾಖಲಿಸ ಲಾಗಿತ್ತು. ದಿನದಿಂದ ದಿನಕ್ಕೆ ಅವರ ಆರೋಗ್ಯ ಕ್ಷೀಣಿಸುತ್ತಿತ್ತು.

ಮಹಾದೇವಿ ಅವರ ಹೆಸರಿನಲ್ಲಿ 2 ಎಕರೆ 35 ಗುಂಟೆ ಜಮೀನು ಇದೆ. ಇದನ್ನು ತಮ್ಮ ಹೆಸರಿಗೆ ಮಾಡಿಕೊಳ್ಳಲು ಅವರ ಪುತ್ರರು, ಪುತ್ರಿ ಸೇರಿಕೊಂಡು ಆಂಬುಲೆನ್ಸ್‌ನಲ್ಲಿ ಉಪ ನೋಂದಣಾಧಿಕಾರಿ ಕಚೇರಿಗೆ ಕರೆತಂದರು. ವಯೋವೃದ್ಧೆ ‘ವಿಶೇಷ ಬೆಡ್’ ಮೇಲೆ ನಿತ್ರಾಣ ಸ್ಥಿತಿಯಲ್ಲಿದ್ದಾಗೇ ಅಧಿಕಾರಿಗಳು ಹೆಬ್ಬೆರಳು ಗುರುತು ಪಡೆದುಕೊಂಡರು. ನಂತರ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಉಪ ನೋಂದಣಾಧಿಕಾರಿ ಪದ್ಮನಾಭ ಗುಡಿ, ‘ಅನಾರೋಗ್ಯಕ್ಕೆ ಒಳಗಾದವರ ಸಹಿಗಾಗಿ ಸ್ಥಳಕ್ಕೆ ಹೋಗಲು ಅವಕಾಶವಿದೆ. ಕುಟುಂಬದವರು ಇದಕ್ಕೆ ₹ 1,000 ಶುಲ್ಕ ತುಂಬಿ ಅರ್ಜಿ ಸಲ್ಲಿಸಬೇಕು. ಆದರೆ, ಮಹಾದೇವಿ ಕುಟುಂಬದವರು ಅರ್ಜಿ ಸಲ್ಲಿಸಿಲ್ಲ. ಹಾಗಾಗಿ, ನಾವು ಆಸ್ಪತ್ರೆಗೆ ಹೋಗಿಲ್ಲ. ಏಕಾಏಕಿ ಕಚೇರಿಗೆ ಕರೆತಂದರು. ನಿಯಮಗಳ ಪ್ರಕಾರ ನೋಂದಣಿ ಮಾಡಿಸಿದ್ದೇವೆ’ ಎಂದರು. ಇದರ ವಿಡಿಯೊ ತುಣುಕುಗಳು ಶನಿವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.

‘ಮಹಾದೇವಿ ಅವರಿಗೆ ನಮ್ಮಲ್ಲಿ ಸೂಕ್ತ ಚಿಕಿತ್ಸೆ ನೀಡಲಾಗಿದೆ. ಅವರ ಕುಟುಂಬದವರು ವೈಯಕ್ತಿಕ ಜವಾಬ್ದಾರಿ ತೆಗೆದುಕೊಂಡು ಆಸ್ಪತ್ರೆಯಿಂದ ಕರೆದುಕೊಂಡು ಹೋಗುವುದಾಗಿ ಹೇಳಿದರು. ನಿಯಮಗಳ ಪ್ರಕಾರ ನಮ್ಮ ನೋಂದಣಿ ಪುಸ್ತಕದಲ್ಲಿ ಸಹಿ ಮಾಡಿದ್ದಾರೆ. ಮಾನವೀಯತೆ ದೃಷ್ಟಿಯಿಂದ ನಮ್ಮ ಆಸ್ಪತ್ರೆಯ ಆಂಬುಲೆನ್ಸ್‌ನಲ್ಲೇ ಕಳುಹಿಸಿ ಕೊಟ್ಟಿದ್ದೇವೆ. ಅಜ್ಜಿ ಆರೋಗ್ಯ ಸ್ಥಿರವಾಗಿದ್ದು, ಶನಿವಾರ ಬೆಳಿಗ್ಗೆ ಅವರನ್ನು ಜನರಲ್ ವಾರ್ಡ್‌ಗೆ ಸ್ಥಳಾಂತರಿಸಿದ್ದೇವೆ’ ಎಂದು ವೃದ್ಧೆಗೆ ಚಿಕಿತ್ಸೆ ನೀಡಿದ ವೈದ್ಯರು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದರು.

ಬೆಳಗಾವಿಯ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಸಿಬ್ಬಂದಿ ಶುಕ್ರವಾರ, ‘ವಿಶೇಷ ಬೆಡ್’ ಮೇಲೆ ಮಲಗಿದ್ದ ವಯೋವೃದ್ಧೆ ಮಹಾದೇವಿ ಅಗಸಿಮನಿ ಅವರಿಂದ ಆಸ್ತಿಗೆ ಸಂಬಂಧಿಸಿದ ದಾಖಲೆಗಳ ಮೇಲೆ ಸಹಿ ಪಡೆದರು

ಬಾಲಕನಿಗೆ ಥಳಿತ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಕಳ್ಳತನ ಆರೋಪದ ಮೇಲೆ ಪರಿಶಿಷ್ಟ ಜಾತಿಯ ಬಾಲಕನನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಹಾಕಿ ಥಳಿಸಿದ ಆರೋಪದ ಮೇಲೆ ಮೂವರು ಗ್ರಾಮಸ್ಥರನ್ನು ಬಂಧಿಸಲಾಗಿದ್ದು, ಉಳಿದ ಆರೋಪಿಗಳಿಗಾಗಿ ಪೊಲೀಸರು ಶೋಧ ನಡೆಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಎರಡು ಪ್ರಕರಣ ದಾಖಲಾಗಿವೆ. ಹತ್ತು ಗ್ರಾಮಸ್ಥರ ವಿರುದ್ಧ ದೌರ್ಜನ್ಯ ಮೊಕದ್ದಮೆ ದಾಖಲಾಗಿದ್ದು, ತಲೆಮರೆಸಿಕೊಂಡಿರುವ ಏಳು ಆರೋಪಿಗಳಿಗಾಗಿ ಪೊಲೀಸರು ಶೋಧ ನಡೆಸಿದ್ದಾರೆ. ಸಂತ್ರಸ್ತ ಕುಟುಂಬಕ್ಕೆ ಪೊಲೀಸ್ ರಕ್ಷಣೆ ನೀಡಲಾಗಿದೆ.

ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿರುವ ಪರಿಶಿಷ್ಟ ಜಾತಿಯ ಬಾಲಕ ಮತ್ತು ಆತನ ಪೋಷಕರನ್ನು ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಎಲ್.ನಾಗೇಶ್ ಶನಿವಾರ ಭೇಟಿ ಮಾಡಿ ಧೈರ್ಯ ತುಂಬಿದರು. ಸಂತ್ರಸ್ತ ಕುಟುಂಬಕ್ಕೆ ಎಲ್ಲ ರೀತಿಯ ಕಾನೂನಾತ್ಮಕ ನೆರವು ಹಾಗೂ ರಕ್ಷಣೆ ನೀಡಲಾಗುವುದು ಎಂದರು.

ಜಿಲ್ಲಾಡಳಿತದಿಂದ ಪ್ರಥಮ ಹಂತದ ಪರಿಹಾರವಾಗಿ ತಲಾ ₹25 ಸಾವಿರದ ಚೆಕ್ ನೀಡಲಾಯಿತು. ಬಾಲಕ ಮತ್ತು ಪೋಷಕರಿಂದ ಅಧಿಕಾರಿಗಳು ಘಟನೆಯ ಬಗ್ಗೆ ಮಾಹಿತಿ ಪಡೆದರು. ‘ಚಿಂತಾಮಣಿಯ ಎಎಸ್‌ಪಿ ಕುಶಾಲ್ ಚೌಕ್ಸೆ ತನಿಖಾಧಿಕಾರಿಯಾಗಿದ್ದು, ಉಳಿದ ಆರೋಪಿಗಳನ್ನು ಶೀಘ್ರ ಬಂಧಿಸಲಾಗುವುದು. ಕುಟುಂಬಕ್ಕೆ ತೊಂದರೆಯಾಗದಂತೆ ರಕ್ಷಣೆ ನೀಡಲಾಗಿದೆ’ ಎಂದು ಎಸ್ಪಿ ಡಿ.ಎಲ್ ನಾಗೇಶ್ ಹೇಳಿದರು.

ಪಿಎಫ್‌ಐ ನಂಟು: ಬಂಧಿತ 14 ಮಂದಿಗೆ ಜಾಮೀನು

ಮಂಗಳೂರು: ಶಾಂತಿ ಸುವ್ಯವಸ್ಥೆ ಕಾಪಾಡುವ ಮುನ್ನೆಚ್ಚರಿಕಾ ಕ್ರಮವಾಗಿ ಬಂಧನಕ್ಕೊಳಗಾಗಿದ್ದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಮುಖಂಡರು ಹಾಗೂ ಸದಸ್ಯರು ಜಾಮೀನಿನ ಮೇಲೆ ಶನಿವಾರ ಬಿಡುಗಡೆಯಾಗಿದ್ದಾರೆ.

ಪಿಎಫ್‌ಐನ ‘ಮಂಗಳೂರು ಜಿಲ್ಲಾ ಘಟಕ’ದ ಅಧ್ಯಕ್ಷ ಬಂಟ್ವಾಳ ಇಜಾಜ್ ಅಹಮದ್ ಹಾಗೂ ‘ಪುತ್ತೂರು ಜಿಲ್ಲಾ ಘಟಕ’ದ ಅಧ್ಯಕ್ಷ ಜಾಬೀರ್ ಅರಿಯಡ್ಕ ಸೇರಿದಂತೆ ಒಟ್ಟು 14 ಮಂದಿಯನ್ನು ಪೊಲೀಸರು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 107 ಹಾಗೂ 151ರ ಅಡಿ ಮಂಗಳವಾರ ಬಂಧಿಸಿ ತಾಲ್ಲೂಕು ದಂಡಾಧಿಕಾರಿ ಮುಂದೆ ಹಾಜರುಪಡಿಸಿದ್ದರು. ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿತ್ತು.

ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಪಾಂಡೇಶ್ವರದ ಮಹಮ್ಮದ್ ಶರೀಫ್, ಕುದ್ರೋಳಿಯ ಮುಝೈರ್ ಮತ್ತು ಮಹಮ್ಮದ್ ನೌಫಾಲ್ ಹಂಝ, ತಲಪಾಡಿ ಕೆ.ಸಿ.ನಗರದ ಶಬ್ಬೀರ್ ಅಹಮದ್, ಉಳ್ಳಾಲ ಮಾಸ್ತಿಕಟ್ಟೆಯ ನವಾಜ್ ಉಳ್ಳಾಲ್, ಉಳಾಯಿಬೆಟ್ಟುವಿನ ಮಹಮ್ಮದ್ ಇಕ್ಬಾಲ್, ಕಾಟಿಪಳ್ಳದ ಕೃಷ್ಣಾಪುರ ಚೊಕ್ಕಬೆಟ್ಟುವಿನ ದಾವೂದ್ ನೌಷಾದ್, ಬಜ್ಪೆ ಕಿನ್ನಿಪದವು ಗ್ರಾಮದ ಇಸ್ಮಾಯಿಲ್ ಎಂಜಿನಿಯರ್ ಮತ್ತು ಮಹಮ್ಮದ್ ನಜೀರ್, ಮೂಡುಬಿದಿರೆ ಪುತ್ತಿಗೆ ಗ್ರಾಮದ ಮುಂಡೇಲುವಿನ ಇಬ್ರಾಹಿಂ ಬಂಧನವಾಗಿತ್ತು. ‘ಮುನ್ನೆಚ್ಚರಿಕೆ ಕ್ರಮವಾಗಿ ಬಂಧನಕ್ಕೊಳಗಾದ ಪಿಎಫ್‌ಐನ ಎಲ್ಲ ಕಾರ್ಯಕರ್ತರೂ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ’ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.

‘ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಬಂಧಿಸಿದ್ದ ಬಿ. ಮೂಡಾದ ರಝಿಕ್, ಫಿರೋಜ್, ಇಜಾಜ್ ಅಹ್ಮದ್ ಹಾಗೂ ಅರಿಯಡ್ಕದ ಜಬೀರ್ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ್ ಸೋನಾವಣೆ ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.56	5,969	7,029
ಹಾರಂಗಿ	2,859	2,855.98	625	1,650
ಕಬಿನಿ	2,284	2,282.66	875	1,000
ಹೇಮಾವತಿ	2,922	2,921.58	2,172	3,225
ಲಿಂಗನಮಕ್ಕಿ	1,819	1,815	3,809	6,180
ಸೂಪಾ (ಮೀ)	564	553.76	1,574	2,839
ಮಾಣಿ	594	590	723	723
ತುಂಗಭದ್ರಾ	1,633	1,632.71	47,483	55,320
ಮಲಪ್ರಭಾ	2,079.50	2,079.50	2,194	2,194
ಘಟಪ್ರಭಾ	2,175	2,174.85	2,922	2,603
ಭದ್ರಾ	186	184	2,831	2,831
ಆಲಮಟ್ಟಿ (ಮೀ)	519.60	519.60	16,543	16,543
ನಾರಾಯಣಪುರ (ಮೀ)	492.25	492.08	40,000	46,600

* ನೆಲಮಟ್ಟದಿಂದ

ಮನೆ ಕುಸಿದು ತಾಯಿ, ಮಗ ಸಾವು

ಬೆಂಗಳೂರು: ಬೆಳಗಾವಿ ಜಿಲ್ಲೆಯ ಮಾಡಮಗೇರಿ ಗ್ರಾಮದಲ್ಲಿ ಶನಿವಾರ ರಾತ್ರಿ ಮಳೆಯಿಂದಾಗಿ ಮನೆ ಕುಸಿದು ಯಲ್ಲವ್ವ ಮಹಾದೇವ ಬಾಗಿಲದ (40) ಹಾಗೂ ಅವರ ಪುತ್ರ ಪ್ರಜ್ವಲ್ (5) ಎಂಬುವವರು ಮೃತಪಟ್ಟಿದ್ದಾರೆ.

ಹೊಲದ ಕೆಲಸ ಮುಗಿಸಿಕೊಂಡು ಶನಿವಾರ ರಾತ್ರಿ ಮನೆಗೆ ಮರಳುವಾಗ, ಒಂದೇ ಕುಟುಂಬದ ನಾಲ್ವರು ಕೊಪ್ಪಳ ಜಿಲ್ಲೆ ಸಂಕನೂರು ಗ್ರಾಮದ ಸಮೀಪದ ಹಳ್ಳದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಸಂಕನೂರು ಗ್ರಾಮದ ಗಿರಿಜಾ ಕಲ್ಲನಗೌಡ ಪೊಲೀಸ್ ಪಾಟೀಲ (32), ಭುವನೇಶ್ವರಿ ಶಾಂತವೀರಯ್ಯ ಪೊಲೀಸ್ ಪಾಟೀಲ (40), ರೇಖಾ ಸಿದ್ದಯ್ಯ ಪೊಲೀಸ್ ಪಾಟೀಲ (45) ಮತ್ತು ವೀಣಾ ಬಸವರಾಜ ಪೊಲೀಸ್ ಪಾಟೀಲ (19) ಹಳ್ಳದಲ್ಲಿ ಕೊಚ್ಚಿ ಹೋದವರು. ಅವರ ಪತ್ತೆಗಾಗಿ ಕಾರ್ಯಾಚರಣೆ ನಡೆಸಿದೆ.

ಅದ್ಧೂರಿ ಬೀಳ್ಕೊಡುಗೆ; ಸೇವೆ ನೆನೆದು ಭಾವುಕರಾದ ಬಿಜ್ಜರಗಿ ಗ್ರಾಮಸ್ಥರು

ನಿವೃತ್ತ ಶಿಕ್ಷಕನಿಗೆ ಭರ್ಜರಿ ಉಡುಗೊರೆ

ಪ್ರಜಾವಾಣಿ ವಾರ್ತೆ

ತಿಕೋಟಾ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಬಿ.ಎ.ಕೆ.ಪ್ರೌಢಶಾಲೆಯಲ್ಲಿ 40 ವರ್ಷ ಸೇವೆ ಸಲ್ಲಿಸಿ ಶುಕ್ರವಾರ ನಿವೃತ್ತಿ ಹೊಂದಿದ ದೈಹಿಕ ಶಿಕ್ಷಣ ಶಿಕ್ಷಕ ಎನ್.ಜಿ.ಕೊಟ್ಯಾಳ ಅವರಿಗೆ 5 ತೊಲೆ (50 ಗ್ರಾಂ) ಬಂಗಾರ, 2 ಕೆಜಿ ಬೆಳ್ಳಿ ಮೂರ್ತಿಗಳು, ಡಬಲ್ ಡೋರ್ ಫ್ರಿಜ್, 32 ಇಂಚಿನ ಎಲ್‌ಇಡಿ ಟಿವಿ, ಕಂಚಿನ ಸರಸ್ವತಿ ಮೂರ್ತಿ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ 25 ಭಾವಚಿತ್ರ, ಬುದ್ದನ ಮೂರ್ತಿ, ಬೆಲೆಬಾಳುವ ಕಂಬಳಿ ಹಾಗೂ ಕನಕದಾಸ ಭಾವಚಿತ್ರ, ಬುದ್ದ, ಬಸವಣ್ಣ, ಅಂಬೇಡ್ಕರ್ ಮಹಾನಾಯಕರ ಹಾಗೂ ಪರಿಸರ ಚಿತ್ರಗಳನ್ನು ಕಾಣಿಕೆಯಾಗಿ ನೀಡಿ ಗ್ರಾಮಸ್ಥರು ಅಭೂತಪೂರ್ವವಾಗಿ ಬೀಳ್ಕೊಟ್ಟರು.

ಗ್ರಾಮದ ಸಾವಿರಾರು ಜನರು, ಹಳೆಯ ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು, ಜನ ಪ್ರತಿನಿಧಿಗಳು, ಎಲ್ಲ ಸಮುದಾಯದವರು ಒಟ್ಟುಗೂಡಿ ಕಾಣಿಕೆಗಳನ್ನು ನೀಡಿದರು. ಇದಲ್ಲದೇ, ಕೊಟ್ಯಾಳ ಗುರುಗಳ ತಲೆಗೆ ರುಮಾಲು, ಧೋತಿ, ನೆಹರು ಶರ್ಟ್ ತೊಡಿಸಿ ತೆರೆದ ವಾಹನದಲ್ಲಿ ವಾದ್ಯ ಮೇಳದೊಂದಿಗೆ ಮೆರವಣಿಗೆ ಮಾಡಿದರು.

ಗ್ರಾಮಸ್ಥರಿಂದ ಕಾಣಿಕೆಯಾಗಿ ಬಂದಿದ್ದ ₹96 ಸಾವಿರ ನಗದು ಜೊತೆಗೆ ತಮ್ಮ ತಂದೆ ಗುರಪ್ಪ ಹಾಗೂ ತಾಯಿ ಲಕ್ಷ್ಮೀಬಾಯಿ ಅವರ ಸ್ಮರಣಾರ್ಥ ಪ್ರೌಢಶಾಲೆಗೆ ₹ 25 ಸಾವಿರ ಹಾಗೂ ಪದವಿಪೂರ್ವ ಕಾಲೇಜಿಗೆ ₹ 25 ಸಾವಿರ ಹಣವನ್ನು ಎನ್.ಜಿ.ಕೊಟ್ಯಾಳ ದೇಣಿಗೆ ನೀಡಿದರು. ಈ ಹಣದಲ್ಲಿ ಪ್ರತಿ ವರ್ಷ ಬರುವ ಬಡ್ಡಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿ ಎಂದರು.

ಕೊಟ್ಯಾಳ ಗುರುಗಳ ಹೆಸರಿನಲ್ಲಿ ಹಳೆಯ ವಿದ್ಯಾರ್ಥಿ ಮಲ್ಲಿನಾಥ ಕುಸನಾಳ ಅವರು ₹ 1 ಲಕ್ಷ ಹಣ ಠೇವಣಿ ಇಟ್ಟು, ಬರುವ ಬಡ್ಡಿ ಹಣದಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವಂತೆ ಹೇಳಿದರು.

ವಿರಕ್ತ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಬಿಜ್ಜರಗಿ ಗ್ರಾ.ಪಂ. ಅಧ್ಯಕ್ಷ ಸುಭಾಸಗೌಡ ಪಾಟೀಲ, ಸಂಸ್ಥೆಯ ಅಧ್ಯಕ್ಷ ಬಸವರಾಜ ಬಿಜ್ಜರಗಿ, ರಾಮಲಿಂಗ ಲೋಣಿ, ಆರ್.ಎಂ.ಮಸಳಿ, ಎಂ.ಬಿ.ಕುಸನಾಳ, ದೈಹಿಕ ಶಿಕ್ಷಣಾಧಿಕಾರಿ ಎಸ್.ಎಂ.ದೆಯಗೊಂಡ, ರಾಜಕುಮಾರ ಮಸಳಿ, ಬಂದೇನವಾಜ ಬೇವನೂರ, ಆರ್.ಬಿ.ಬಿರಾದಾರ, ಎಸ್.ಬಿ.ಬಿರಾದಾರ, ಎಸ್.ಆರ್. ಹಿರೇಮಠ, ಎಂ.ಎ.ಬಿರಾದಾರ, ರಾಜು ಡೆಂಗನವರ, ಅಮರೇಶ ಬಿರಾದಾರ, ಹಳೆಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಇದ್ದರು.

ತಿಕೋಟಾ ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಬಿ.ಎ.ಕೆ ಪ್ರೌಢ ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಎನ್‌.ಜಿ.ಕೊಟ್ಯಾಳ ಅವರನ್ನು ತೆರೆದ ವಾಹನದಲ್ಲಿ ಗ್ರಾಮಸ್ಥರು ಮೆರವಣಿಗೆ ಮಾಡುವ ಮೂಲಕ ಬೀಳ್ಕೊಟ್ಟರು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ಮಿಸಿದ 'ನಾದದ ನವನೀತ ಡಾ. ಪಂಡಿತ್ ವೆಂಕಟೇಶ್ ಕುಮಾರ್' (ನಿ: ಗಿರೀಶ್ ಕಾಸರವಳ್ಳಿ) ಸಾಕ್ಷ್ಯಚಿತ್ರವು 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಪೈಕಿ, ಅತ್ಯುತ್ತಮ ಕಲೆ ಸಂಸ್ಕೃತಿ ಆಧಾರಿತ ಚಿತ್ರ ವಿಭಾಗದ ಅಡಿ ‘ರಜತ ಕಮಲ’ ಪಡೆದಿದ್ದು, ಪ್ರಶಸ್ತಿಯ ಜೊತೆ ಇಲಾಖೆ ಆಯುಕ್ತ ಹರ್ಷ ಪಿ.ಎಸ್. ದೆಹಲಿಯಲ್ಲಿ ಶುಕ್ರವಾರ ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು

ಸರಸ್ವತಿ ದೇವಿ ಶಕ್ತಿಯ ರೂಪ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಸರಸ್ವತಿ ಪೂಜೆ

ಈಗ ನವರಾತ್ರಿಯ ಸಂಭ್ರಮ; ಶಕ್ತಿಯ ಆರಾಧನೆ ನಡೆಯುತ್ತಿದೆ. ಇಡಿಯ ಸೃಷ್ಟಿಗೆ ಕಾರಣವಾಗಿರುವುದೇ 'ಶಕ್ತಿ' ಎಂಬುದು ನಮ್ಮ ಪರಂಪರೆಯ ಒಕ್ಕಣೆ. ಶಕ್ತಿ ಇಲ್ಲದಿದ್ದರೆ ತ್ರಿಮೂರ್ತಿಗಳು ಕೂಡ ಏನೂ ಮಾಡಲಾರರು. ಹೀಗಾಗಿ ಶಕ್ತಿಗೆ ಮನ್ನಣೆ ಸಹಜ.

ಹಾಗಾದರೆ ಶಕ್ತಿ ಎಂದರೆ ಏನು? ಶಕ್ತಿಯ ಸ್ವರೂಪಗಳು ಎಂಥವು? ಶಕ್ತಿಯ ಅನುಸಂಧಾನ ಹೇಗೆ? ಶಕ್ತಿಯ ಪ್ರಯೋಜನ ನಮಗೆ ಹೇಗೆ ಒದಗುತ್ತದೆ? ಇಂಥ ಹತ್ತಾರು ಪ್ರಶ್ನೆಗಳು ಏಳುತ್ತವೆ. ಈ ಎಲ್ಲ ಪ್ರಶ್ನೆಗಳಿಗೂ ಉತ್ತರವೋ ಎಂಬಂತೆ ನವರಾತ್ರಿಯಲ್ಲಿ ಶಕ್ತಿಯ ಆರಾಧನೆಯ ವಿಧಿ-ವಿಧಾನಗಳು ರೂಪುಗೊಂಡಿವೆ. ನವರಾತ್ರಿಯ ಮೊದಲ ಮೂರು ದಿನಗಳನ್ನು ಲಕ್ಷ್ಮಿಯ ಪೂಜೆಗೂ, ಅನಂತರದ ಮೂರು ದಿನಗಳನ್ನು ಸರಸ್ವತಿಯ ಪೂಜೆಗೂ, ಕೊನೆಯ ಮೂರು ದಿನಗಳನ್ನು ದುರ್ಗೆಯ ಪೂಜೆಗೂ ವಿನಿಯೋಗಿ ಸಲಾಗುತ್ತದೆ. ಒಂಬತ್ತು ದಿನಗಳು ನಡೆಯುವುದು ಶಕ್ತಿದೇವತೆಯ ಆರಾಧನೆಯೇ ಹೌದು. ಆದರೆ ಅವಳನ್ನು ಮೂರು ಸ್ವರೂಪಗಳಲ್ಲಿ ಪೂಜಿಸಲಾಗುತ್ತದೆ. ಈ ಮೂರು ಸ್ವರೂಪಗಳು ವಸ್ತುತಃ ಶಕ್ತಿಯ ಪ್ರಮುಖ ಧಾರೆಗಳೇ ಆಗಿವೆ.

ಲಕ್ಷ್ಮಿ, ಸರಸ್ವತಿ ಮತ್ತು ದುರ್ಗೆ – ಇವು ಮೂರು ಶಕ್ತಿಯ ಪ್ರಮುಖ ತತ್ತ್ವಗಳ ವಿಗ್ರಹರೂಪಗಳು. ನಮಗೆ ಬೇಕಾದ ಶಕ್ತಿಯ ಎಲ್ಲ ಆಯಾಮಗಳನ್ನೂ ಇವು ಪ್ರತಿನಿಧಿಸುತ್ತವೆ. ಲಕ್ಷ್ಮಿಯು ನಮಗೆ ಬೇಕಾದ ಹೊರಗಿನ, ಎಂದರೆ ವಸ್ತುರೂಪದ ಶಕ್ತಿಗೆ ಸಂಕೇತ. ಸರಸ್ವತಿಯು ನಮಗೆ ಬೇಕಾದ ಒಳಗಿನ, ಎಂದರೆ ಬೌದ್ಧಿಕ ಸ್ವರೂಪದ ಶಕ್ತಿಗೆ ಸಂಕೇತ. ದುರ್ಗೆಯು ನಮಗೆ ಬೇಕಾದ ದೈಹಿಕ ಶಕ್ತಿಗೆ ಸಂಕೇತ. ನಮ್ಮ ಜೀವನದ ಸಮೃದ್ಧಿಗೆ ಬೇಕಾದ ಎಲ್ಲ ವಿಧದ ಶಕ್ತಿಗಳನ್ನೂ ವಿದ್ಯೆಗಳನ್ನೂ ವಸ್ತುಗಳನ್ನೂ ಈ ಶಕ್ತಿಗಳು ಸಂಕೇತಿಸುತ್ತವೆ.

ಮೂರು ದಿನಗಳ ಲಕ್ಷ್ಮಿಯ ಪೂಜೆಯ ಬಳಿಕ ಬರುವುದೇ ಸರಸ್ವತಿ ಪೂಜೆ. ಇಂದು ಸರಸ್ವತಿ ಪೂಜೆಗೆಂದೇ ಮೀಸಲಾಗಿರುವ ದಿನ.

ಸರಸ್ವತಿಯ ಕಲ್ಪನೆಯ ಬಗ್ಗೆ ನಮಗೆ ತಿಳಿದೇ ಇದೆ. ವಿದ್ಯೆಗೆ ಅಧಿದೇವತೆ ಸರಸ್ವತಿ. ನಮ್ಮ ಪರಂಪರೆ ವಿದ್ಯೆಯನ್ನೂ ಶಕ್ತಿಯನ್ನಾಗಿಯೇ ಕಂಡಿರುವುದು ವಿಶೇಷ. ಅರಿವನ್ನು ಶಕ್ತಿ ಎಂದು ಸಮೀಕರಿಸುವುದು ಆಧುನಿಕವಾದುದು ಎಂದು ನಾವು ತಿಳಿದು-ಕೊಳ್ಳುತ್ತೇವೆ. ಆದರೆ ಅರಿವಿಗಿರುವ ಶಕ್ತಿಯನ್ನು ಗಮನಿಸಿ, ಗುರುತಿಸಿ ಅದನ್ನು ಸಾವಿರಾರು ವರ್ಷಗಳಿಂದಲೂ ನಮ್ಮ ಪರಂಪರೆ ಆರಾಧಿಸಿಕೊಂಡು ಬರುತ್ತಿದೆ.

ಇಂದು ಸರಸ್ವತಿಯನ್ನು, ಎಂದರೆ ವಿದ್ಯೆಯನ್ನು ಪುಸ್ತಕಗಳ ರೂಪದಲ್ಲಿ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತದೆ. ಈಗ ಪುಸ್ತಕಗಳ ಸ್ಥಾನದಲ್ಲಿ ಕಂಪ್ಯೂಟರ್‌ಗಳು, ಟ್ಯಾಬ್‌ಗಳು, ಕಿಂಡಲ್‌ಗಳು ಪ್ರತಿಷ್ಠಾಪನೆ-ಗೊಂಡರೂ ಅದೇನೂ ಅನೌಚಿತ್ಯವಾಗದು. ನಮಗೆ ವಿದ್ಯೆಯನ್ನು, ಶಿಕ್ಷಣವನ್ನು ಒದಗಿಸುವ ಎಲ್ಲ ವಸ್ತು–ಸಲಕರಣೆ–ಯಂತ್ರ–ವ್ಯಕ್ತಿಗಳೂ ಸರಸ್ವತಿಯ ಸ್ವರೂಪಗಳೇ ಹೌದು. ವಿದ್ಯೆ ಎಂಬುದು ನಮ್ಮಲ್ಲಿರುವ ಅಜ್ಞಾನವನ್ನು ದೂರಮಾಡುತ್ತದೆ. ಆ ವಿದ್ಯೆಯ ಉಪಯೋಗದ ವಿಧಾನವನ್ನು ತಿಳಿಸಿಕೊಡುವ ಅರಿವಿನ ಕ್ರಮವೇ 'ಶಿಕ್ಷಣ' ಎಂದಾಗುತ್ತದೆ.

ಆಧುನಿಕ ಮನುಷ್ಯನು ತನ್ನ ಸುತ್ತಮು-ತ್ತಲಿನ ಹಲವು ವಿವರಗಳನ್ನು ಜ್ಞಾನ ಎಂದು ತಿಳಿದುಕೊಂಡು, ಅವುಗಳನ್ನು ಆರಾಧಿಸುತ್ತಿದ್ದಾನೆ, ಪೋಷಿಸುತ್ತಿದ್ದಾನೆ. ಆದರೆ ಅವು ನಿಜವಾದ ಜ್ಞಾನ ಹೌದೋ ಅಲ್ಲವೋ ಎಂಬ ವಿವೇಕ ಅವನಲ್ಲಿ ಮೂಡಬೇಕಾಗಿದೆ. ಅಂಥದೊಂದು ವಿವೇಕ ನಮ್ಮಲ್ಲಿ ಮೂಡಲಿ – ಎಂಬ ಪ್ರಾರ್ಥನೆ ಯೊಂದಿಗೆ ಇಂದು ಸರಸ್ವತಿಯ ಆರಾಧನೆಯನ್ನು ನಾವೆಲ್ಲರೂ ಮಾಡೋಣ.

'ಸ್ವಚ್ಛ ಸರ್ವೇಕ್ಷಣೆ ಪ್ರಶಸ್ತಿ 2022' ಪ್ರಕಟ • ಮಧ್ಯಪ್ರದೇಶ ಸ್ವಚ್ಛ ರಾಜ್ಯ

ಪಟ್ಟಿಯಲ್ಲಿ ಮೈಸೂರು, ಹುಬ್ಬಳ್ಳಿ–ಧಾರವಾಡ

ಪ್ರಜಾವಾಣಿ ವಾರ್ತೆ

ನವದೆಹಲಿ: ನಗರ ಸ್ಥಳೀಯ ಸಂಸ್ಥೆಗಳ ಸ್ವಚ್ಛ ಸರ್ವೇಕ್ಷಣೆ–2022 ರ್‍ಯಾಂಕಿಂಗ್‌ನಲ್ಲಿ ಕರ್ನಾಟಕ ಕಳಪೆ ಸಾಧನೆ ತೋರಿದ್ದು, ಮೊದಲ 100 ಸ್ವಚ್ಛ ನಗರಗಳ ಪಟ್ಟಿಯಲ್ಲಿ ರಾಜ್ಯದ ಎರಡು ನಗರಗಳು ಮಾತ್ರ ಸ್ಥಾನ ಪಡೆದಿವೆ.

ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಸ್ವಚ್ಛ ನಗರಗಳ ಪಟ್ಟಿಯಲ್ಲಿ ಮೈಸೂರು 8ನೇ ಸ್ಥಾನ ಪಡೆದುಕೊಂಡಿದೆ. ಹುಬ್ಬಳ್ಳಿ-ಧಾರವಾಡಕ್ಕೆ 82ನೇ ಶ್ರೇಯಾಂಕ ಲಭಿಸಿದೆ.

3ರಿಂದ 10 ಲಕ್ಷ ಜನಸಂಖ್ಯೆ ಹೊಂದಿರುವ ವಿಭಾಗದ 388 ಮಧ್ಯಮ ನಗರಗಳಲ್ಲಿ ಮೈಸೂರು ಮಹಾನಗರ ಪಾಲಿಕೆಯು 2ನೇ ಸ್ಥಾನ ಗಳಿಸಿದೆ. ಸ್ವಚ್ಛ ಮಧ್ಯಮ ನಗರ ಪ್ರಶಸ್ತಿಯನ್ನು ಶನಿವಾರ ಪ್ರದಾನ ಮಾಡಲಾಯಿತು. ಅಚ್ಚರಿಯೆಂದರೆ, ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ದೇಶದ 100 ಸ್ವಚ್ಛ ನಗರಗಳ ಪಟ್ಟಿಯಲ್ಲಿ ರಾಜ್ಯದ ಯಾವ ನಗರವೂ ಸ್ಥಾನ ಪಡೆದಿಲ್ಲ.

ಸ್ವಚ್ಛ ಕಂಟೋನ್ಮೆಂಟ್ ವರ್ಗದಲ್ಲಿ ಬೆಳಗಾವಿ ಕಂಟೋನ್ಮೆಂಟ್ 44ನೇ ಶ್ರೇಯಾಂಕ ಪಡೆದುಕೊಂಡಿದ್ದರೆ, ಶಿವಮೊಗ್ಗವನ್ನು ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಗುರುತಿಸಲಾಗಿದೆ. ಸುಸ್ಥಿರ ನಗರ ವಿಭಾಗದಲ್ಲಿ ಹೊಸದುರ್ಗ-ವನ್ನು ಪರಿಗಣಿಸಲಾಗಿದೆ.

6 ಪ್ರಶಸ್ತಿ ಇಂದು ಪ್ರದಾನ: ಸ್ವಚ್ಛತೆಗೆ ಸಂಬಂಧಿಸಿದ 6 ಪ್ರಶಸ್ತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ವಚ್ಛ ಭಾರತ ದಿವಸದ ಅಂಗವಾಗಿ ಭಾನುವಾರ ಪ್ರದಾನ ಮಾಡಲಿದ್ದಾರೆ. ಸ್ವಚ್ಛ ಸರ್ವೇಕ್ಷಣೆ ಗ್ರಾಮೀಣ–2022, ಸ್ವಚ್ಛತಾ ಹಿ ಸೇವಾ, ಜಲ್ ಜೀವನ ಮಿಶನ್ ಕಾರ್ಯನಿರ್ವಹಣೆ ಮೌಲ್ಯಮಾಪನ ಪ್ರಶಸ್ತಿಗಳನ್ನು ಮುರ್ಮು ಅವರು ಪ್ರದಾನ ಮಾಡಲಿದ್ದಾರೆ.

ಇಂದೋರ್ 6ನೇ ಬಾರಿಗೆ ಸ್ವಚ್ಛ ನಗರ

ಕೇಂದ್ರ ಸರ್ಕಾರದ ವಾರ್ಷಿಕ ಸ್ವಚ್ಛತಾ ಸರ್ವೇಕ್ಷಣೆ ಫಲಿತಾಂಶ ಶನಿವಾರ ಪ್ರಕಟವಾಗಿದ್ದು, ದೇಶದ ಸ್ವಚ್ಛ ನಗರ ಎಂಬ ಹೆಗ್ಗಳಿಕೆಗೆ ಮಧ್ಯಪ್ರದೇಶದ ಇಂದೋರ್ ಸತತ ಆರನೇ ಬಾರಿಗೆ ಪಾತ್ರವಾಗಿದೆ. ನಂತರದ ಎರಡು ಸ್ಥಾನಗಳಲ್ಲಿ ಅನುಕ್ರಮವಾಗಿ ಗುಜರಾತ್‌ನ ಸೂರತ್ ಮತ್ತು ಮಹಾರಾಷ್ಟ್ರದ ನವಿ ಮುಂಬೈ ನಗರಗಳು ಇವೆ.

'ಸ್ವಚ್ಛ ಸರ್ವೇಕ್ಷಣೆ ಪ್ರಶಸ್ತಿ 2022'ರ ಉತ್ತಮ ಪ್ರದರ್ಶನ ತೋರಿದ ರಾಜ್ಯಗಳ ವಿಭಾಗದಲ್ಲಿ ಮಧ್ಯಪ್ರದೇಶ ಮೊದಲ ಸ್ಥಾನ ಪಡೆದಿದೆ. ನಂತರದ ಸ್ಥಾನಗಳಲ್ಲಿ ಛತ್ತೀಸಗಢ ಮತ್ತು ಮಹಾರಾಷ್ಟ್ರ ರಾಜ್ಯಗಳು ಇವೆ.

100ಕ್ಕಿಂತ ಕಡಿಮೆ ಸ್ಥಳೀಯ ಸಂಸ್ಥೆಗಳನ್ನು ಹೊಂದಿರುವ ಸ್ವಚ್ಛ ರಾಜ್ಯಗಳ ಪಟ್ಟಿಯಲ್ಲಿ ತ್ರಿಪುರಾ ಪ್ರಥಮ ಸ್ಥಾನ ಪಡೆದಿದೆ.

1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ಮಹಾರಾಷ್ಟ್ರದ ಪಂಚಗಣಿ ಮೊದಲ ಸ್ಥಾನ ಪಡೆದರೆ, ನಂತರದ ಸ್ಥಾನವನ್ನು ಛತ್ತೀಸಗಢದ ಪಟಾನ್ ಪಡೆದಿದೆ. ಗಂಗಾ ತೀರದ ಸ್ವಚ್ಛನಗರ ಎಂಬ ಹೆಗ್ಗಳಿಕೆಗೆ ಹರಿದ್ವಾರ ಪಾತ್ರವಾಗಿದೆ.

ಪ್ರಶಸ್ತಿ ಪ್ರದಾನ: ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಈ ವೇಳೆ ಉಪಸ್ಥಿತರಿದ್ದರು.

ಭೂ ಸ್ವಾಧೀನದ ಕಬಂಧಬಾಹು!

ರೈತರ ಜಮೀನು ಡಿನೋಟಿಫೈ ಆಗುತ್ತಾ?

ಬೆಂಗಳೂರು- ಮೈಸೂರು ಹೆದ್ದಾರಿ ದಶಪಥವಾಗಿ ಬದಲಾಗುತ್ತಲೇ 'ನೈಸ್' ರಸ್ತೆ ವಿಚಾರ ನೇಪಥ್ಯಕ್ಕೆ ಸರಿದಿದೆ.

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ನಿರ್ಮಾಣ ಯೋಜನೆ (ಬಿಎಂಐಸಿ) 1990-2000ರ ದಶಕದಲ್ಲಿ ಹೆಚ್ಚು ಸದ್ದು ಮಾಡಿತ್ತು. ಬೆಂಗಳೂರು-ಮೈಸೂರು ನಡುವೆ 111 ಕಿ.ಮೀ. ಉದ್ದದ ಹೊಸ ರಸ್ತೆ ನಿರ್ಮಾಣಕ್ಕೆ ಸರ್ಕಾರ ಹಾಗೂ ನೈಸ್ ಕಂಪನಿ ನಡುವೆ ಒಪ್ಪಂದವಾಗಿತ್ತು. ಇದರ ಜೊತೆ ಐದು ಟೌನ್‌ಷಿಪ್‌ಗಳ ನಿರ್ಮಾಣಕ್ಕೂ ನಂದಿ ಕಂಪನಿ ಯೋಜಿಸಿತ್ತು.

ಯೋಜನೆಗಾಗಿ ಬೆಂಗಳೂರಿನಿಂದ ಮೈಸೂರುವರೆಗೆ ಅಗತ್ಯ ಇರುವ 20 ಸಾವಿರ ಎಕರೆಗೂ ಹೆಚ್ಚು ಜಮೀನನ್ನು ನೋಟಿಫೈ ಮಾಡಲಾಯಿತು. ಅದಾದ 20 ವರ್ಷದ ಬಳಿಕವೂ ಬೆಂಗಳೂರಿನ ಹೊರಗೆ ಕಾಮಗಾರಿ ಆರಂಭವಾಗುವ ಲಕ್ಷಣ ಕಾಣುತ್ತಿಲ್ಲ.

ಜಮೀನನ್ನು ಸರ್ಕಾರ ನೋಟಿಫೈ ಮಾಡಿ ರೈತರೊಂದಿಗೆ ಆರಂಭದಲ್ಲಿ ದರ ನಿಗದಿ ಸಂಬಂಧ ಮಾತುಕತೆ ನಡೆಸಿತ್ತು. ಸದ್ಯ ಬೆಂಗಳೂರು ಹೊರತುಪಡಿಸಿ ಉಳಿದೆಡೆ ಭೂಸ್ವಾಧೀನವಾಗಿಲ್ಲ.

'ಗುರುತು ಮಾಡಿದ ಜಮೀನಿನ ಮಾಲೀಕರಿಗೆ ಪರಿಹಾರ ಸಿಕ್ಕಿಲ್ಲ. ನೋಟಿಫೈ ಆಗಿರುವ ಕಾರಣ ರೈತರು ಆ ಜಮೀನಿನಲ್ಲಿ ಕೃಷಿ ಬಿಟ್ಟು ಉಳಿದ ಚಟುವಟಿಕೆ ನಡೆಸಲು ಅವಕಾಶ ಇಲ್ಲ. ಸರ್ಕಾರ ಯೋಜನೆ ಕೈಬಿಟ್ಟಿದ್ದರೆ ಡಿನೋಟಿಫೈ ಮಾಡಿ ರೈತರಿಗೆ ಜಮೀನು ಹಿಂತಿರುಗಿಸಬೇಕು' ಎನ್ನುತ್ತಾರೆ ರಾಮನಗರದ ರೈತ ಸಿ. ಪುಟ್ಟಸ್ವಾಮಿ.

ಒಂದನೇ ಪುಟದಿಂದ..

ಇದೇ ಮಧ್ಯವರ್ತಿಗಳಿಗೆ ಬಂಡವಾಳ. ಮೊದಲೇ ಈ ಮಾಹಿತಿ ಅರಿತಿರುವ ರಿಯಲ್ ಎಸ್ಟೇಟ್ ಜಾಲ ಸದ್ದಿಲ್ಲದೆ ಸಕ್ರಿಯವಾಗುತ್ತದೆ. ಆಯಕಟ್ಟಿನ ಸ್ಥಾನದಲ್ಲಿರುವ ಅಧಿಕಾರಿಗಳೇ ಈ ಜಾಲದ ಸೂತ್ರದಾರರು ಎಂಬುದು ರೈತರ ಆರೋಪ.

ಕೈಗಾರಿಕೆಗಾಗಿ ಜಮೀನು ಕಳೆದುಕೊಳ್ಳುವ ರೈತರಿಗೆ ₹5 ಲಕ್ಷದಿಂದ ₹10 ಲಕ್ಷ ಮುಂಗಡ ನೀಡಿ ಭೂಮಿಯನ್ನು ತಮಗೆ ಮಾರಾಟ ಮಾಡುವಂತೆ ಖಾಲಿ ಕರಾರು ಪತ್ರಗಳಿಗೆ ಸಹಿ ಹಾಕಿಸಿಕೊಳ್ಳುತ್ತಾರೆ. ಅದರೊಟ್ಟಿಗೆ ರೈತರ ಬ್ಯಾಂಕ್ ಪುಸ್ತಕ, ಖಾಲಿ ಚೆಕ್‌ಗಳನ್ನೂ ಪಡೆಯುತ್ತಾರೆ.

ಕರಾರು ಪತ್ರದಲ್ಲಿ ತಾವು ನೀಡಿದ ನಗದಿಗಿಂತ ಮೂರ್ನಾಲ್ಕು ಪಟ್ಟು ಹೆಚ್ಚು ನಗದು ನಮೂದಿಸಿ ಕಾನೂನುಬದ್ಧವಾಗಿಯೇ ನೋಂದಣಿ ಮಾಡಿಸುತ್ತಾರೆ. ಭೂಮಿ ಕಳೆದುಕೊಳ್ಳುವ ಕೆಲವು ರೈತರು ಮೂರ್ನಾಲ್ಕು ರಿಯಲ್ ಎಸ್ಟೇಟ್‌ದಾರರಿಂದ ಮುಂಗಡವಾಗಿ ನಗದು ಪಡೆದು ಕರಾರು ಪತ್ರಗಳಿಗೆ ಸಹಿ ಹಾಕಿರುವ ನಿದರ್ಶನಗಳು ಸಾಕಷ್ಟಿವೆ.

ಭೂಸ್ವಾಧೀನ ಕಾಯ್ದೆ ಸೆಕ್ಷನ್ 4(1), 6(1) ಪ್ರಕ್ರಿಯೆ ವೇಳೆಗೆ ಸ್ವಾಧೀನಕ್ಕೊಳಪಡುವ ಜಮೀನಿನ ಮೇಲೆ ಈ ಜಾಲದ ಹಿಡಿತ ಬಿಗಿಯಾಗುತ್ತದೆ. ಭೂಮಿಗೆ ಬೆಲೆ ನಿಗದಿಪಡಿಸುವ ಜಿಲ್ಲಾಧಿಕಾರಿ ಸಭೆಯಲ್ಲಿ ರೈತರೊಟ್ಟಿಗೆ ಇವರೂ ಹಾಜರಾಗುತ್ತಾರೆ. ಬಳಿಕ ಅವರ ಅಸಲಿ ಆಟ ಶುರುವಾಗುತ್ತದೆ.

ನಗದು ಪಡೆದ ರೈತರು ಕರಾರು ಪತ್ರದಂತೆ ತಮಗೆ ಭೂಮಿ ನೀಡಬೇಕೆಂದು ಸಿವಿಲ್ ನ್ಯಾಯಾಲಯಗಳಲ್ಲಿ ದಾವೆ ಹೂಡುತ್ತಾರೆ. ಕೆಐಎಡಿಬಿ ಕಚೇರಿಗೂ ತಕರಾರು ಅರ್ಜಿ ಸಲ್ಲಿಸುತ್ತಾರೆ. ಗೋಪ್ಯವಾಗಿ ನಡೆಯುವ ಈ ಪ್ರಕ್ರಿಯೆ ಅರಿವಿಗೆ ಬರುವುದರೊಳಗೆ ರೈತನ ಕಿಸೆಯಲ್ಲಿದ್ದ ಹಣವೂ ಖಾಲಿಯಾಗಿರುತ್ತದೆ. ಆಗ ಪರಿಹಾರದ ಹಣದಲ್ಲಿ ದಲ್ಲಾಳಿಗಳಿಗೆ ಪಾಲು ನೀಡದೆ ರೈತರಿಗೆ ಬೇರೆ ದಾರಿ ಇರುವುದಿಲ್ಲ. ಬ್ಯಾಂಕ್ ಖಾತೆಗೆ ಪಾವತಿಯಾಗುವ ಪರಿಹಾರದ ಮೊತ್ತ ಸಂಪೂರ್ಣವಾಗಿ ಕೈಸೇರದೆ ರೈತ ಕಂಗಾಲಾಗುತ್ತಾನೆ. ಇತ್ತ ಹಣವೂ ಇಲ್ಲದೆ, ಭೂಮಿಯ ಒಡೆತನದ ಹಕ್ಕನ್ನೂ ಕಳೆದುಕೊಂಡ ಕುಟುಂಬ ಬೀದಿಪಾಲಾಗುತ್ತದೆ.

'ದೇವನಹಳ್ಳಿ ತಾಲ್ಲೂಕಿನ ಹರಳೂರು ಕೈಗಾರಿಕಾ ಪ್ರದೇಶದ ಮೊದಲ ಹಂತದಲ್ಲಿ ರೈತರ ಒಂದು ಎಕರೆ ಭೂಮಿಗೆ ಕೆಐಎಡಿಬಿ ₹1.10 ಕೋಟಿ ಪರಿಹಾರ ನಿಗದಿಪಡಿಸಿತ್ತು. ಮಧ್ಯವರ್ತಿಗಳ ಹಾವಳಿಯಿಂದ ರೈತರಿಗೆ ಅರ್ಧದಷ್ಟೂ ಪರಿಹಾರ ಸಿಕ್ಕಿಲ್ಲ' ಎನ್ನುತ್ತಾರೆ ಚನ್ನರಾಯಪಟ್ಟಣದ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಸಂಚಾಲಕ ಕಾರಹಳ್ಳಿ ಶ್ರೀನಿವಾಸ್.

'ಮಧ್ಯವರ್ತಿಗಳಿಲ್ಲದೆ ಕೆಐಎಡಿಬಿಯಲ್ಲಿ ಸುಲಭವಾಗಿ ಪರಿಹಾರವೂ ಸಿಗುವುದಿಲ್ಲ. ಪರಿಹಾರದ ಹಣ ಬಂದಾಕ್ಷಣ ಅಕ್ಕ, ತಂಗಿಯರು ತವರುಮನೆಗೆ ಬಂದು ಪಾಲು ಕೇಳುತ್ತಾರೆ. ಕೆಲವರು ನ್ಯಾಯಾಲಯದ ಮೆಟ್ಟಿಲೇರುತ್ತಾರೆ. ಇದರಿಂದ ಕೌಟುಂಬಿಕ ಸಾಮರಸ್ಯ ಹದಗೆಡುತ್ತದೆ. ಪರಿಹಾರದ ಹಣ ಸದ್ವಿನಿಯೋಗವೂ ಕಡಿಮೆ. ಮೋಜಿನ ಜೀವನಕ್ಕೆ ಹಣ ಕಳೆದುಕೊಂಡು ಬೀದಿಪಾಲಾದ ಕುಟುಂಬಗಳು ಸಾಕಷ್ಟಿವೆ' ಎನ್ನುತ್ತಾರೆ ಅವರು.

ಭಾವು ಪತ್ತಾರ್

ನಾವು ತೊಗರಿ, ಜೋಳ, ದ್ರಾಕ್ಷಿ ಬೆಳೆಯುತ್ತಿದ್ದೇವೆ. ಕೆಐಎಡಿಬಿ ಏಕಾಏಕಿ ಭೂಸ್ವಾಧೀನಕ್ಕೆ ನೋಟಿಸ್ ಜಾರಿಗೊಳಿಸಿದೆ. ಈ ಭೂಮಿ ಬಿಟ್ಟರೆ ನಮಗೆ ಬದುಕಿಲ್ಲ. ಪರಿಹಾರದ ಹಣ ಇಟ್ಟುಕೊಂಡು ಏನು ಮಾಡೋಣ. ನಾವು ಹುಟ್ಟಿ ಬೆಳೆದ ಜಾಗದಿಂದ ನಮ್ಮನ್ನು ಓಡಿಸಲು ಪ್ರಯತ್ನಿಸುತ್ತಿದ್ದಾರೆ. ನಾವು ಬದುಕಿದರೆ ಇಲ್ಲಿಯೇ ಬದುಕುತ್ತೇವೆ; ಸತ್ತರೆ ಇಲ್ಲಿಯೇ ಸಾಯುತ್ತೇವೆ

ಮುನಿರಾಜು, ರೈತ, ಚನ್ನರಾಯಪಟ್ಟಣ, ದೇವನಹಳ್ಳಿ ತಾಲ್ಲೂಕು.

ಒಳಗಿನವರಿಂದಲೇ ಕನ್ನ!

ಹೊಸ ಕೈಗಾರಿಕಾ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ಚರ್ಚೆಯ ಆರಂಭಿಕ ಹಂತದಲ್ಲಿ ಲಭಿಸುವ ಮಾಹಿತಿಯನ್ನೇ 'ಅಸ್ತ್ರ'ವಾಗಿ ಬಳಸಿಕೊಂಡು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಒಳಗಿನವರೇ ಕನ್ನ ಹಾಕುತ್ತಿರುವುದು ಹಲವು ವರ್ಷಗಳಿಂದ ನಡೆಯುತ್ತಿದೆ. ಈಗಲೂ ಅದು ನಿಂತಿಲ್ಲ.

ಕೆಐಎಡಿಬಿ ಅಧಿಕಾರಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅಧಿಕಾರಿಗಳು, ಸಚಿವರು, ಅವರ ಹಿಂಬಾಲಕರು 'ಒಳಗಿನ ಮಾಹಿತಿ' (ಇನ್‌ಸೈಡರ್ ಇನ್‌ಫಾರ್ಮೇಷನ್) ಆಧರಿಸಿ ಉದ್ದೇಶಿತ ಕೈಗಾರಿಕಾ ಬಡಾವಣೆ ಪ್ರದೇಶದಲ್ಲೇ ಅಗ್ಗದ ಬೆಲೆಗೆ ಜಮೀನು ಖರೀದಿಸುತ್ತಾರೆ. ಅದನ್ನೇ ದುಬಾರಿ ದರಕ್ಕೆ ಮಂಡಳಿಗೆ ಮಾರಾಟ ಮಾಡಿ ಜೇಬು ಭರ್ತಿ ಮಾಡಿಕೊಳ್ಳುತ್ತಾರೆ. ಕೆಲವೆಡೆ ಭೂಮಾಲೀಕರನ್ನು ವಂಚಿಸಿ ದಾಖಲೆಗಳಿಗೆ ಸಹಿ ಪಡೆದು ಪರಿಹಾರದ ಮೊತ್ತ ಕಬಳಿಸುತ್ತಾರೆ.

ಬಿಡದಿ ಬಳಿ ಟೊಯೊಟಾ ಕಿರ್ಲೋಸ್ಕರ್ ಕಾರ್ಖಾನೆ ಪ್ರದೇಶದ ಕೈಗಾರಿಕಾ ಎಸ್ಟೇಟ್ ಅಭಿವೃದ್ಧಿಯ ಸಂದರ್ಭದಲ್ಲಿ ಕೆಐಎಡಿಬಿ ಅಧಿಕಾರಿಗಳೇ ಸುತ್ತಲಿನ ಜಮೀನು ಖರೀದಿಸಿ, ಮಂಡಳಿಗೆ ಮಾರಾಟ ಮಾಡಿದ್ದ ಆರೋಪ ಕೇಳಿಬಂದಿತ್ತು. ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿ ವಿಶೇಷ ಆರ್ಥಿಕ ವಲಯ ನಿರ್ಮಾಣಕ್ಕೆ ಜಮೀನು ಸ್ವಾಧೀನ ಅಕ್ರಮದಲ್ಲಿ ಆಗಿನ ಕೈಗಾರಿಕಾ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಬಂಧಿತರಾಗಿದ್ದರು.

ಈಗ ನೆಲಮಂಗಲ ತಾಲ್ಲೂಕಿನ ದಾಬಸ್‌ಪೇಟೆ ಸಮೀಪದ ತ್ಯಾಮಗೊಂಡ್ಲು ಬಳಿ ಮಲ್ಟಿ ಲೆವೆಲ್ ಲಾಜಿಸ್ಟಿಕ್ ಪಾರ್ಕ್ ನಿರ್ಮಾಣದ ಭೂಸ್ವಾಧೀನ ಪ್ರಕ್ರಿಯೆಯಲ್ಲೂ ಇದೇ ರೀತಿಯ ಅಕ್ರಮ ನಡೆದಿರುವ ಆರೋಪವಿದೆ. ಸಿಟಿಜನ್ ರೈಟ್ಸ್ ಫೌಂಡೇಷನ್, ಪ್ರಧಾನಿ ಕಚೇರಿಯವರೆಗೂ ದೂರು ಒಯ್ದಿದೆ.

ಸ್ವಾಧೀನಪಡಿಸಿದ ಭೂಮಿ ಕಂಪನಿ ಪಾಲು

ಪ್ರಾಥಮಿಕ ಅಧಿಸೂಚನೆ ಹೊರಡಿಸಿ ರೈತರಿಗೆ ಪರಿಹಾರ ನೀಡದಿರುವ ಪ್ರಕರಣಗಳು ಸಾಕಷ್ಟಿವೆ. ಕೆಲವೆಡೆ ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಕೈಗಾರಿಕೆ ಅಭಿವೃದ್ಧಿಪಡಿಸಿಲ್ಲ. ಭೂಮಿಯನ್ನು ರೈತರಿಗೂ ಮರಳಿಸುವುದಿಲ್ಲ. ಕಡಿಮೆ ಮೊತ್ತಕ್ಕೆ ಖಾಸಗಿ ಕಂಪನಿಗಳಿಗೆ ಧಾರೆ ಎರೆಯಲಾಗುತ್ತದೆ. ರೈತರಿಂದ ವಶಪಡಿಸಿಕೊಂಡ 3,677 ಎಕರೆ ಭೂಮಿಯನ್ನು ಜಿಂದಾಲ್ ಕಂಪನಿಗೆ ಕಡಿಮೆ ಹಣಕ್ಕೆ ನೀಡಿದ್ದು ಇದಕ್ಕೊಂದು ನಿದರ್ಶನ.

ಉತ್ತಮ್ ಗಾಲ್ವಾ ಕಂಪನಿಗೆ ಬಳ್ಳಾರಿ ತಾಲ್ಲೂಕಿನ ಕುಡತಿನಿ, ವೇಣಿವೀರಾಪುರ, ಕೊಳಗಲ್ ಬಳಿ ಒಟ್ಟು 4,877.81 ಎಕರೆ ನೀಡಲಾಗಿದೆ. ಅರ್ಸೆಲ್ಲರ್ ಮಿತ್ತಲ್ ಕಂಪನಿಗೆ ಕುಡತಿನಿ ಹರಗಿನ ಡೋಣಿ ಬಳಿ 2,664.75 ಎಕರೆ ನೀಡಲಾಗಿದೆ. ಈ ಜಮೀನು ನೀಡಿ 10 ವರ್ಷಗಳು ಕಳೆದಿವೆ. ಭೂಸ್ವಾಧೀನ ಕಾಯ್ದೆ ಸೆಕ್ಷನ್ 34(3) ಅಡಿ ಈ ಉದ್ಯಮಗಳಿಗೆ 2020ರ ಡಿ. 9ರಂದು ನೋಟಿಸ್ ಜಾರಿಗೊಳಿಸಲಾಗಿದೆ. ಇದುವರೆಗೆ ಜಮೀನು ವಾಪಸ್ ಪಡೆಯಲು ಸಾಧ್ಯವಾಗಿಲ್ಲ.

ಬ್ರಹ್ಮಿಣಿ ಸ್ಟೀಲ್ಸ್‌ಗೆ ವಶಪಡಿಸಿಕೊಂಡ ಜಮೀನನ್ನು ಉತ್ತಮ್ ಗಾಲ್ವಾ ಟೇಕ್ ಓವರ್ ಮಾಡಿದೆ. ಟೇಕ್ ಓವರ್ ಮಾಡಿದೆಯೋ ಅಥವಾ ಮಾರಾಟ ಮಾಡಲಾಗಿದೆಯೋ ಎಂಬ ಮಾಹಿತಿ ಸಂಬಂಧಪಟ್ಟ ಇಲಾಖೆ ಬಳಿ ಇಲ್ಲ. ಒಂದು ಉದ್ಯಮಕ್ಕಾಗಿ ವಶಪಡಿಸಿಕೊಂಡ ಜಮೀನನ್ನು ಮತ್ತೊಂದು ಸಂಸ್ಥೆಗೆ ವರ್ಗಾಯಿಸಲು ಸಾಧ್ಯವೇ ಎಂಬ ಪ್ರಶ್ನೆಗೆ ಕೆಐಎಡಿಬಿ ಅಥವಾ ಕೈಗಾರಿಕಾ ಇಲಾಖೆ ಉತ್ತರಿಸಬೇಕಿದೆ.

ಭೂಸ್ವಾಧೀನದ ವಿರುದ್ಧ ಎರಡು ದಶಕ ಏಕಾಂಗಿ ಹೋರಾಟ

ಸುಪ್ರೀಂ ಕೋರ್ಟ್ ಕದ ತಟ್ಟಿ ಗೆದ್ದ ಗ್ರೆಗರಿ

● ಪ್ರವೀಣ ಕುಮಾರ್ ಪಿ.ವಿ



ಗ್ರೆಗರಿ ಪತ್ರಾವೊ

ಮಂಗಳೂರು ರಿಫೈನರೀಸ್ ಆ್ಯಂಡ್ ಪೆಟ್ರೋಕೆಮಿಕಲ್ಸ್ ಕಂಪನಿ (ಎಂಆರ್‌ಪಿಎಲ್) ಆರಂಭಿಸುವ ವೇಳೆ ತುಂಡು ಭೂಮಿ ನೀಡಿದ್ದ ಮಂಗಳೂರು ತಾಲ್ಲೂಕಿನ ಬಾಳ ಗ್ರಾಮದ ಕಳವಾರಿನ ಕೃಷಿ ಕುಟುಂಬವೊಂದು ಬಳಿಕ ತನ್ನೆಲ್ಲ ಜಮೀನನ್ನು ಆ ಕಂಪನಿಗಾಗಿ ಕಳೆದುಕೊಂಡಿದೆ. ಈ ಕುಟುಂಬದ ಗ್ರೆಗರಿ ಪತ್ರಾವೊ ದೈತ್ಯ ಕಂಪನಿ ವಿರುದ್ಧ ಎರಡು ದಶಕ ಹೋರಾಡಿದರೂ ಫಲವತ್ತಾದ ಕೃಷಿ ಭೂಮಿ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ.

ಭೂಮಿ ಕಳೆದುಕೊಂಡರೂ ಗ್ರೆಗರಿ ಛಲ ಬಿಡದೆ ಕಂಪನಿ ವಿರುದ್ಧ ದಾವೆ ಹೂಡಿ, ಕಾನೂನು ಹೋರಾಟವನ್ನು ಸುಪ್ರೀಂ ಕೋರ್ಟ್‌ವರೆಗೂ ಒಯ್ದು, ಕಳೆದುಕೊಂಡ ಭೂಮಿಗೆ ನ್ಯಾಯಯುತ ಪರಿಹಾರ ಸಿಗಲೇಬೇಕು ಎಂಬ ತೀರ್ಪು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. 14.27 ಎಕರೆ ಕೃಷಿ ಭೂಮಿ ಹೊರತಾಗಿ ಇನ್ನಾವುದೇ ಆಸ್ತಿ ಹೊಂದಿಲ್ಲದ ಗ್ರೆಗರಿ ಎಂಆರ್‌ಪಿಎಲ್‌ನಂತಹ ಕಂಪನಿಯನ್ನು ಎದುರು ಹಾಕಿಕೊಂಡು ಒಬ್ಬಂಟಿಯಾಗಿ ಹೋರಾಟ ನಡೆಸಿ ನ್ಯಾಯ ಪಡೆದಿದ್ದೇ ಒಂದು ಅಚ್ಚರಿ!

ಪೆಟ್ರೋಲಿಯಂ ಕಚ್ಚಾತೈಲದ ಸಂಸ್ಕರಣೆಯ ಕಾರ್ಖಾನೆಗಾಗಿ 52 ಸೆಂಟ್ಸ್ ಜಾಗ ಬಿಟ್ಟುಕೊಡುವಂತೆ ಗ್ರೆಗರಿ ತಂದೆ ಥಾಮಸ್ ಪತ್ರಾವೊ ಅವರನ್ನು ಕೆಐಎಡಿಬಿ ಕೋರಿತ್ತು. ಥಾಮಸ್ 1984ರಲ್ಲಿ ಜಾಗ ಬಿಟ್ಟುಕೊಟ್ಟರು. ಪತ್ರಾವೊ ಕುಟುಂಬಕ್ಕೆ ಭರವಸೆ ನೀಡಿದಷ್ಟು ಪರಿಹಾರ ಸಿಗಲಿಲ್ಲ.

1988ರಲ್ಲಿ ಎಂಆರ್‌ಪಿಎಲ್ ಕಂಪನಿ ಆರಂಭವಾಯಿತು. 1996ರಲ್ಲಿ ಕಂಪನಿ ವಿಸ್ತರಣೆಗಾಗಿ ಮತ್ತಷ್ಟು ಜಾಗಕ್ಕೆ ಬೇಡಿಕೆ ಸಲ್ಲಿಸಿತು. ಗ್ರೆಗರಿ ಕುಟುಂಬ ಇದಕ್ಕೊಪ್ಪಲಿಲ್ಲ.

ಕಂಪನಿಯು ಮೂರನೇ ಹಂತದ ವಿಸ್ತರಣೆಗೆ ಮತ್ತಷ್ಟು ಭೂಮಿ ಬೇಕು ಎಂದು 2006ರಲ್ಲಿ ಬೇಡಿಕೆ ಇಟ್ಟಿತು. ಆಗ ಗ್ರೆಗರಿ ಕಾನೂನು ಹೋರಾಟ ಆರಂಭಿಸಿದರು. 2010ರ ಏಪ್ರಿಲ್‌ನಲ್ಲಿ ಹೈಕೋರ್ಟ್‌ನಲ್ಲಿ ಗ್ರೆಗರಿ ವಿರುದ್ಧ ತೀರ್ಪು ಬಂದಿತು. ಅದೇ ತಿಂಗಳು ಜಿಲ್ಲಾಡಳಿತ ಗ್ರೆಗರಿ ಮನೆ ಕೆಡವಿತು. ಅವರು ಜಗ್ಗಲಿಲ್ಲ. ಮನೆ ಇದ್ದ ಜಾಗದಲ್ಲೇ ಡೇರೆ ಹಾಕಿ ಅಲ್ಲೇ ವಾಸಿಸಲಾರಂಭಿಸಿದರು.

ಗ್ರೆಗರಿ ಮನೆ ಕೆಡವಿದ್ದಕ್ಕೆ ವ್ಯಕ್ತವಾದ ಜನಾಕ್ರೋಶ ಹಾಗೂ ಹೋರಾಟಕ್ಕೆ ಸಿಕ್ಕ ಜನಬೆಂಬಲ ಕಂಡು ಸರ್ಕಾರ ಕಂಗಾಲಾಯಿತು. ಈ ನಡುವೆ 14 ಎಕರೆ 27 ಸೆಂಟ್ಸ್ ಸ್ವಾಧೀನ ಸಂಬಂಧ ಎಂಆರ್‌ಪಿಎಲ್ 2015ರಲ್ಲಿ ಹೈಕೋರ್ಟ್‌ನಲ್ಲಿ ಗ್ರೆಗರಿ ವಿರುದ್ಧ ಮೊಕದ್ದಮೆ ದಾಖಲಿಸಿತು. ಭೂ ಪರಿಹಾರಕ್ಕೆ ಸಂಬಂಧಿಸಿದ ವ್ಯಾಜ್ಯವನ್ನು ಜಿಲ್ಲಾ ನ್ಯಾಯಾಲಯದಲ್ಲೇ ಇತ್ಯರ್ಥಗೊಳಿಸುವಂತೆ ಹೈಕೋರ್ಟ್ ಸೂಚಿಸಿತು. 2020ರಲ್ಲಿ ಮಂಗಳೂರಿನ ಜಿಲ್ಲಾ ನ್ಯಾಯಾಲಯ ಗ್ರೆಗರಿ ಪರ ಆದೇಶ ಪ್ರಕಟಿಸಿತು.

'ಈ ಪ್ರಕರಣದಲ್ಲಿ ಕಂಪನಿ ಪ್ರತಿವಾದಿಯಲ್ಲ. ಭೂಸ್ವಾಧೀನ ಮಾಡಿಕೊಂಡ ಕೆಐಎಡಿಬಿ ಪ್ರತಿವಾದಿ. ಹಾಗಾಗಿ ಪರಿಹಾರ ನೀಡಲು ಸಾಧ್ಯವಿಲ್ಲ' ಎಂದು ಎಂಆರ್‌ಪಿಎಲ್ ತಗಾದೆ ತೆಗೆದು, ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಿತು. ಹೈಕೋರ್ಟ್ ಎಂಆರ್‌ಪಿಎಲ್ ಪರವಾಗಿ ತೀರ್ಪು ನೀಡಿತು. ಗ್ರೆಗರಿ ಜಾಗ ಬಿಟ್ಟುಕೊಡಲು ಒಪ್ಪಿಕೊಂಡರು. ಪರಿಹಾರದ ಮೊತ್ತ ನಿಗದಿ ಸರಿಯಾಗಿ ಆಗಿಲ್ಲ ಎಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು.

'ಸುಪ್ರೀಂ ಕೋರ್ಟ್‌ನಲ್ಲಿ ನನ್ನ ಪರವಾಗಿ ತೀರ್ಪು ಬಂದಿದೆ. ಕಳೆದುಕೊಂಡ ಜಾಗಕ್ಕೆ ಸುಮಾರು ₹ 5 ಕೋಟಿಗಳಷ್ಟು ಪರಿಹಾರ ಸಿಗಬಹುದು. ಪರಿಹಾರದ ಮೊತ್ತ ಇನ್ನೂ ಕೈ ಸೇರಿಲ್ಲ. ಜಾಗ ಕಳೆದುಕೊಂಡ ನೋವಿದೆ. ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯ ಸಿಕ್ಕ ಖುಷಿ ಇದೆ' ಎನ್ನುತ್ತಾರೆ ಗ್ರೆಗರಿ.

ಕೇರಳ: ಆರ್‌ಎಸ್‌ಎಸ್‌ನ ಐವರಿಗೆ 'ವೈ' ಶ್ರೇಣಿ ಭದ್ರತೆ

ನವದೆಹಲಿ(ಪಿಟಿಐ): ಸಂಭಾವ್ಯ ಬೆದರಿಕೆಗಳ ಹಿನ್ನೆಲೆಯಲ್ಲಿ ಕೇರಳದ ಐವರು ಆರ್‌ಎಸ್‌ಎಸ್ ನಾಯಕರಿಗೆ ಕೇಂದ್ರ ಸರ್ಕಾರವು ಶನಿವಾರ 'ವೈ' ಶ್ರೇಣಿಯ ಭದ್ರತೆಯನ್ನು ಒದಗಿಸಿದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಈ ಮುಖಂಡರನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಗುರಿ ಮಾಡಿಕೊಂಡಿದೆ ಎನ್ನಲಾಗಿದೆ. ಸಾರ್ವಜನಿಕರ ಶಾಂತಿಗೆ ಭಂಗ, ಕಾನೂನುಬಾಹಿರ ಚಟುವಟಿಕೆಗೆ ಸಂಚು ರೂಪಿಸಿದ್ದ ಆರೋಪದ ಮೇಲೆ ಪಿಎಫ್‌ಐ ಮೇಲೆ ಇತ್ತೀಚೆಗೆ ಕೇಂದ್ರ ತನಿಖಾ ಸಂಸ್ಥೆಗಳು ದಾಳಿ ನಡೆಸಿದ್ದವು. ನಂತರ ಪಿಎಫ್‌ಐ ಮೇಲೆ ನಿಷೇಧ ಹೇರಲಾಗಿತ್ತು.

ಕೇಂದ್ರೀಯ ತನಿಖಾ ದಳ ಮತ್ತು ಗುಪ್ತಚರ ಸಂಸ್ಥೆಗಳು ಕೇಂದ್ರ ಗೃಹ ಸಚಿವಾಲಯಕ್ಕೆ ನೀಡಿದ ಮಾಹಿತಿ ಮತ್ತು ಶಿಫಾರಸುಗಳ ಆಧಾರದ ಮೇಲೆ ಐದು ಮಂದಿ ಆರ್‌ಎಸ್‌ಎಸ್ ನಾಯಕರಿಗೆ 'ವೈ' ಶ್ರೇಣಿಯ ಭದ್ರತೆ ನೀಡಲಾಗಿದೆ.

ಐವರು ಮುಖಂಡರಿಗೆ ಭದ್ರತೆ ಒದಗಿಸುವ ಹೊಣೆಗಾರಿಕೆಯನ್ನು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್)ಯ ವಿಐಪಿ ಭದ್ರತಾ ವಿಭಾಗಕ್ಕೆ ವಹಿಸಲಾಗಿದೆ.

ಭದ್ರತೆ ಭಾಗವಾಗಿ ಪ್ರತಿ ವ್ಯಕ್ತಿಗೆ ಸುಮಾರು ಎರಡರಿಂದ ಮೂರು ಸಶಸ್ತ್ರ ಕಮಾಂಡೊಗಳನ್ನು ಒದಗಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಬಿಹಾರದ ಬಿಜೆಪಿ ಮುಖ್ಯಸ್ಥ ಮತ್ತು ಪಶ್ಚಿಮ ಚಂಪಾರಣ್‌ನ ಸಂಸದ ಸಂಜಯ್ ಜೈಸ್ವಾಲ್‌ಗೂ ಇದೇ ರೀತಿಯ ಭದ್ರತೆ ಒದಗಿಸಲಾಗಿತ್ತು.

'ಪ್ರಾಸಿಕ್ಯೂಷನ್ ಹೇಳುವ ವಿಷಯಕ್ಕೆ ಸಾಕ್ಷ್ಯಗಳು ಮುಖ್ಯ'

ಮುಂಬೈ(ಪಿಟಿಐ): 'ಪ್ರಾಸಿಕ್ಯೂಷನ್ ಹೇಳುವ ವಿಷಯ ಆಕರ್ಷಕವಾಗಿರಬಹುದು. ಆದರೆ, ಆ ವಿಷಯಕ್ಕೆ ಪ್ರಬಲ ಸಾಕ್ಷ್ಯಗಳ ಬೆಂಬಲ ಇರಬೇಕಾದುದು ಮುಖ್ಯ' ಎಂದು ವಿಶೇಷ ಎನ್‌ಐಎ ಕೋರ್ಟ್ ಹೇಳಿದೆ.

ಇಸ್ಲಾಮಿಕ್ ಬೋಧಕ ಝಾಕೀರ್ ನಾಯ್ಕ್ ನೇತೃತ್ವದ ಇಸ್ಲಾಮಿಕ್ ರಿಸರ್ಚ್ ಫೌಂಡೇಷನ್‌ನ (ಐಆರ್‌ಎಫ್) ಉದ್ಯೋಗಿ ಅರ್ಷಿ ಖುರೇಷಿ ಎಂಬುವವರನ್ನು ಎಲ್ಲ ಆರೋಪಗಳಿಂದ ಮುಕ್ತಗೊಳಿಸಿದ ಕೋರ್ಟ್, ಈ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ವಿಶೇಷ ಎನ್‌ಐಎ ಕೋರ್ಟ್ ನ್ಯಾಯಾಧೀಶ ಎ.ಎಂ.ಪಾಟೀಲ ಅವರು, ಸಾಕ್ಷ್ಯಾಧಾರಗಳ ಕೊರತೆ ಹಿನ್ನೆಲೆಯಲ್ಲಿ ಖುರೇಷಿ ಅವರನ್ನು ಶುಕ್ರವಾರ ದೋಷಮುಕ್ತಗೊಳಿಸಿದ್ದು, ಆದೇಶ ಪ್ರತಿ ಶನಿವಾರ ಲಭ್ಯವಾಗಿದೆ.

ಐಎಸ್ ಅನ್ನು ಸೇರುವಂತೆ ಯುವಕರಿಗೆ ಬೋಧಿಸುತ್ತಿದ್ದ ಆರೋಪದ ಮೇಲೆ ಖುರೇಷಿ ಅವರನ್ನು 2016ರಲ್ಲಿ ಬಂಧಿಸಲಾಗಿತ್ತು.

ಐಎಸ್‌ನ ಸದಸ್ಯನೆನ್ನಲಾದ ಅಶ್ಫಾಕ್ ಮಜೀದ್ ನಾಪತ್ತೆಯಾಗಿದ್ದರ ಕುರಿತು ಆತನ ತಂದೆ ದೂರು ದಾಖಲಿಸಿದ್ದರು. ತಾನು ಐಎಸ್‌ಐಎಸ್ ಸಂಘಟನೆ ಸೇರಿದ್ದಾಗಿ ಮಜೀದ್ ತನ್ನ ಸಹೋದರಿಗೆ ತಿಳಿಸಿದ್ದ ಎನ್ನಲಾಗಿದೆ. ಈ ಕುರಿತು ತನಿಖೆ ಆರಂಭಿಸಿದ್ದ ಎನ್‌ಐಎ, ಖುರೇಷಿ ಅವರನ್ನು ಬಂಧಿಸಿತ್ತು.

ಐಆರ್‌ಎಫ್ ಅನ್ನು ಕಾನೂನುಬಾಹಿರ ಸಂಘಟನೆ ಎಂದು ಘೋಷಿಸಿರುವ ಕೇಂದ್ರ ಸರ್ಕಾರ, ಸಂಘಟನೆಯನ್ನು 2016ರ ನವೆಂಬರ್‌ನಲ್ಲಿ ನಿಷೇಧಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಅಕ್ಟೋಬರ್ 2, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಸಪ್ತಮಿ ಗಂ. 18-48 ನಕ್ಷತ್ರ: ಮೂಲಾ ಗಂ. 25-53 ಯೋಗ: ಸೌಭಾಗ್ಯ ಗಂ. 17-14, ಕರಣ: ಗರಜೆ ಗಂ. 07-49, ಕನ್ಯಾ ಮಾಸದ 15 ನೇ ದಿನ.
ರಾಹುಕಾಲ : ಸಾಯಂಕಾಲ 04:30 – 06:00 ಸೂರ್ಯೋದಯ : 06-23 ಸೂರ್ಯಾಸ್ತ : 06-16 ಮುಸ್ಲಿಂ ದಿನಾಂಕ : 05 ರಬಿಉಲ್ಲಾವಲ್
ದಿನ ವಿಶೇಷ : ಶಾರದಾ ಪೂಜೆ, ಸರಸ್ವತಿ ಆವಾಹನ, ಗಾಂಧಿ ಜಯಂತಿ
ಅದೃಷ್ಟ ಸಂಖ್ಯೆ : 5, 12

ಮೇಷ: ತುರ್ತು ಪರಿಸ್ಥಿತಿಗಳು ಎದುರಾಗಬಹುದು. ಉತ್ತಮ ಆದಾಯದಿಂದ ನೆಮ್ಮದಿ ಇರುವುದು. ವ್ಯಾಪಾರಿಗಳು ಗ್ರಾಹಕರಲ್ಲಿ ಸ್ನೇಹ, ವಿಶ್ವಾಸವನ್ನು ಬೆಳೆಸಿಕೊಳ್ಳುವುದರಿಂದ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಪಡೆಯಬಹುದು.

ವೃಷಭ: ವ್ಯವಹಾರದಲ್ಲಿ ನಿಮಗೆ ಎದುರಾಗುವ ಸಮಸ್ಯೆಗೆ ನಿಮ್ಮ ಸೋಮಾರಿತನವೇ ಮೂಲ ಕಾರಣವಾಗಲಿದೆ. ಆದ್ದರಿಂದ ಉದಾಸೀನತೆಯನ್ನು ದೂರವಿಡಿ. ವೃತ್ತಿಗೆ ಸಂಬಂಧಿಸಿದಂತೆ ನಿತ್ಯದ ದಿನಚರಿಯ ವ್ಯತ್ಯಾಸ ಸರಿಯಲ್ಲ.

ಮಿಥುನ: ಇಂದಿನ ದಿನ ನಿಮ್ಮ ಪಾಲಿಗೆ ಸುದಿನವಾಗುವುದು. ನಿಮ್ಮ ಕನಸುಗಳು ನನಸಾಗುವ ಎಲ್ಲಾ ಲಕ್ಷಣಗಳೂ ಕಂಡು ಬರುವವು. ನಿಮ್ಮ ಮನಸ್ಸಿನ ಭಾವನೆಗಳಿಗೆ ಕಿವಿಗೊಡುವುದು ಇಂದಿನ ಪಾಲಿಗೆ ಬುದ್ಧಿವಂತಿಕೆಯಾಗಲಿದೆ.

ಕರ್ಕಾಟಕ: ನಾಟಕ ಹಾಗೂ ಸಿನಿಮಾ ರಂಗದವರಿಗೆ ಯಶಸ್ಸು ಇದ್ದು ಹೆಚ್ಚಿನ ಪ್ರೋತ್ಸಾಹಗಳು ದೊರೆತು ಸಮಾಜದಲ್ಲಿ ಸ್ಥಾನಮಾನಗಳಿಂದ ಉನ್ನತ ಸ್ಥಿತಿಗೆ ಬರುವಂತಾಗಲಿದೆ. ಉಳಿದ ಕೆಲಸ ಇಂದು ಪೂರ್ಣಗೊಳಿಸುವ ಸಂಕಲ್ಪವಿರಲಿ.

ಸಿಂಹ: ವೃತ್ತಿರಂಗದಲ್ಲಿ ನಕಾರಾತ್ಮಕ ಬೆಳವಣಿಗೆಯಿಂದ ಮನಸ್ಸಿಗೆ ಕಳವಳ. ಆರೋಗ್ಯದ ತೊಂದರೆಗಳು ಇಲ್ಲವಾಗುವುವು. ಮಕ್ಕಳ ವಿದ್ಯಾಭ್ಯಾಸವು ಉತ್ತಮವಾಗಿದ್ದು, ಕುಂಟುಂಬದಲ್ಲಿ ಸುಖ-ಶಾಂತಿ ತುಂಬಿರುತ್ತವೆ.

ಕನ್ಯಾ: ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಮಾಡುವುದು ಸಮಂಜಸವಲ್ಲ. ಇದನ್ನು ಪಾಲಿಸಿದರೆ ಯಶಸ್ಸು ನಿಮ್ಮದೇ ಆಗಿರುತ್ತದೆ. ರಿಯಲ್ ಎಸ್ಟೇಟುದಾರರಿಗೆ ವ್ಯವಹಾರಗಳು ವೃದ್ಧಿಗೊಳ್ಳಲಿದೆ.

ತುಲಾ: ಹೊಸ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸರಿಯಾಗಿ ಯೋಚಿಸಿ ತೀರ್ಮಾನಿಸಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರಲಿದೆ. ಹೋಟೆಲ್ ಉದ್ಯಮಿಗಳಿಗೆ ವ್ಯಾಪಾರದಲ್ಲಿ ಅನುಕೂಲವಾಗುತ್ತದೆ.

ವೃಶ್ಚಿಕ: ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ ಮತ್ತು ದೇವರ ಕೃಪಾ ಕಟಾಕ್ಷ ಪಡಬೇಕಾಗುವುದು. ಇಂದು ನಡೆಯುವ ಮಗಳ ವಿವಾಹ ಪ್ರಸ್ತಾವನೆಯು ಶುಭ ತೀರ್ಮಾನದಲ್ಲಿ ಮುಕ್ತಾಯವಾಗುವುದು.

ಧನು: ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಸತ್ಯದ ಮಾರ್ಗವನ್ನು ಬಿಡುವ ಯೋಚನೆಯನ್ನು ಮಾಡದಿರಿ. ತಪ್ಪಿ ಹೋದ ಸ್ವಂತ ಆಸ್ತಿ ಪುನಃ ನಿಮ್ಮ ಕೈ ಸೇರಿಲು ನಿಮ್ಮ ಪ್ರಯತ್ನ, ತಂತ್ರಗಾರಿಕೆ ಮುಖ್ಯವಾಗುತ್ತದೆ.

ಮಕರ: ಕಮಿಷನ್ ಏಜೆಂಟರಿಗೆ ಅಧಿಕ ಆದಾಯ. ಹಿರಿಯರ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸಲು ಮುಂದಾಗುವಿರಿ. ಹೊಟ್ಟೆಗೆ ಸಂಬಂಧಿಸಿದ ಸಣ್ಣಪುಟ್ಟ ಅನಾರೋಗ್ಯ ಉಂಟಾಗಬಹುದು.

ಕುಂಭ: ಮನರಂಜನೆಗಾಗಿ ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯ. ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕುವುದು ಉತ್ತಮ. ಯಾವುದೇ ಅಡೆತಡೆಗಳು ನಿಮ್ಮ ಮನಸ್ಸನ್ನು ಚಂಚಲಗೊಳಿಸದಂತೆ ಜಾಗ್ರತೆ ವಹಿಸಿ.

ಮೀನ: ನಿಮಗಿರುವ ಹತ್ತಾರು ಪ್ರತಿಭೆಯನ್ನು ಹೊರತನ್ನಿರಿ. ಏಕಮುಖ ಪ್ರತಿಭೆಯನ್ನು ನಾಶಮಾಡಿ, ಇನ್ನಿತರೆ ವಿಷಯಗಳಿಗೂ ಅಷ್ಟೇ ಪ್ರಾಮುಖ್ಯತೆ ನೀಡಿ. ಸ್ನೇಹಿತರೊಂದಿಗೆ ಕ್ಲಿಷ್ಟಕರ ಕ್ಷಣಗಳನ್ನು ಕಳೆಯುವಂತಾಗಲಿದೆ.

25 ವರ್ಷಗಳ ಹಿಂದೆ

ಗುರುವಾರ, 2-10-1997

● **ಹೆಲ್ಮೆಟ್ ಆಜ್ಞೆ ಇಂದು ಜಾರಿ ಇಲ್ಲ**

ಬೆಂಗಳೂರು, ಅಕ್ಟೋಬರ್ 1– ಹೆಲ್ಮೆಟ್ ಕಡ್ಡಾಯಗೊಳಿಸಿದ್ದ ತೀರ್ಪಿಗೆ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ತಡೆಯಾಜ್ಞೆ ನೀಡಿರುವ ಹಿನ್ನೆಲೆಯಲ್ಲಿ ನಾಳೆಯಿಂದ ಹೆಲ್ಮೆಟ್ ಕಡ್ಡಾಯದ ಆಜ್ಞೆ ಜಾರಿಗೆ ಬರುವುದಿಲ್ಲ.

ಈ ಹಿಂದೆ ಅಕ್ಟೋಬರ್ 2ರಿಂದ ದ್ವಿಚಕ್ರ ವಾಹನ ಚಾಲಕ ಹಾಗೂ ಹಿಂಬದಿಯ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕೆಂದು ಏಕ ನ್ಯಾಯಮೂರ್ತಿಯವರ ಪೀಠ ತೀರ್ಪು ನೀಡಿತ್ತು.

50 ವರ್ಷಗಳ ಹಿಂದೆ

ಸೋಮವಾರ, 2-10-1972

● **ಪಾಕ್ ಅತಿಕ್ರಮಣ; ಗುಂಡಿನ ಚಕಮಕಿ ಬಳಿಕ ಕದನವಿರಾಮ**

ನವದೆಹಲಿ, ಅಕ್ಟೋಬರ್ 1– ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಜೌರಿ ಜಿಲ್ಲೆಯಲ್ಲಿರುವ ಕಾರ್ಕುಂಡಿ ಅರಣ್ಯ ಪ್ರದೇಶದಲ್ಲಿ ನಿನ್ನೆ ಬೆಳಿಗ್ಗೆಯಿಂದ ಪಾಕಿಸ್ತಾನಿ ಪಡೆಗಳು ಅಪ್ರಚೋದಿತವಾಗಿ ಗುಂಡು ಹಾರಿಸಲಾರಂಭಿಸಿದ್ದು ಅಲ್ಲಿ ಇಂದು ಬೆಳಿಗ್ಗೆ 11.47ರಿಂದ ಕದನ ವಿರಾಮಕ್ಕೆ ಭಾರತ ಮತ್ತು ಪಾಕಿಸ್ತಾನಗಳ ಸೈನ್ಯಾಧಿಕಾರಿಗಳು ಒಪ್ಪಿಕೊಂಡಿದ್ದಾರೆಂದು ಇಲ್ಲಿ ಪತ್ರಿಕಾ ಹೇಳಿಕೆಯೊಂದು ತಿಳಿಸಿದೆ.

ಆದರೆ, ಪಾಕಿಸ್ತಾನಿಗಳು ನಂತರವೂ ಆಗಾಗ ಗುಂಡು ಹಾರಿಸುತ್ತಿದ್ದಾರೆಂದೂ, ಮಧ್ಯಾಹ್ನ 1 ಗಂಟೆ ನಂತರ ಪರಿಸ್ಥಿತಿ ಶಾಂತಗೊಂಡಿದೆಯೆಂದೂ ವರದಿಯಾಗಿದೆ.

ಪದಬಂಧ 5097

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವನದಲ್ಲಿ ವರನ ಆದಾಯವಿದೆ (4)
3.ಕಾಡು ಪ್ರಾಣಿಯನ್ನು ಹೀಗೆನ್ನಿ (4)
5.ಅತೀ ಆಸೆಯಿದು (3)
6.ಸಾಗಿಸುವುದಕ್ಕೊಂದು ಪರ್ಯಾಯ ಪದ (3)
8.ಪುರದಲ್ಲಿ ಖರೀದಿಸಿರುವ ಕಾಲಂದಿಗೆ (3)
10.ಮಂಕ ಹೊತ್ತ ಬುಟ್ಟಿಯಿದು (3)
11.ಕೊಂಚ ಕೊಂಚವಾಗಿ ಕಚ್ಚಿ ತಿನ್ನು (3)
13.ದೇವಾಲಯದ ಗೋಪುರದ ತುದಿ (3)
15. ಈಕೆ ಒಡಹುಟ್ಟಿದವಳು (4)
16. ಪಟದಲ್ಲಿಯೇ ಈ ತೊಳಲಾಟ! (4)

ಮೇಲಿಂದ ಕೆಳಕ್ಕೆ
1.ವರ ಪಡೆದಿರುವ ಬೇಡ (4)
2.ನನಗದು ಬೇಕು ಎಂದಾಗ ಕೈಯಲ್ಲಿದ್ದ ದುಡ್ಡು (3)
3.ವರ ತೋರಿದ ವ್ಯಾಯಾಮದ ಪಟ್ಟು (3)
4.ಕಾಲವನ್ನು ತೋರಿಸುವ ಯಂತ್ರ (4)
7.ಈತ ವಾದ್ಯ ನುಡಿಸುವವನು (3)
9.ಕಾರು ಹತ್ತಿದವ ಹಬ್ಬಿಸಿರುವ ಕೆಟ್ಟ ಸುದ್ದಿ (3)
10.ಮಂದ ಬುದ್ಧಿಯವ ತೋರಿದ ಮುಗುಳುನಗೆ (4)
12.ಕುಡಿಗಣ್ಣಲ್ಲಿ ನೋಡಿದ ನೋಟ (4)
13. ಕರಿಯ ಮರಿ ಬಿದ್ದಿರುವ ಪ್ರಪಾತ! (3)
14.ಸರಸದ ಮಾತುಕತೆಯಿದು (3)



5096ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹೂಮಂಚ 3.ಸುಧಾರಕ
5.ಘಟ 6.ದರವೇಶಿ
7.ಅತಿಕ್ರಮ ಪ್ರವೇಶ
10.ಸುಮಬಾಣ 11.ಶುಕ
13.ಗಮನಾರ್ಹ 14.ಷರಿಪ

ಮೇಲಿಂದ ಕೆಳಕ್ಕೆ:
1.ಹೂಟ 2.ಚರಟ
4.ಕಕ್ಷಶಿ 5.ಘನಅ
6.ದಮಾಪ್ರ 8.ಕ್ರಮೇಣ
9.ಶತಕ 10ಸುಭಗ
11.ಶುಶ್ರೂಷೆ 12.ಕೋಪ

ಸುಡೊಕು 5483

				5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5482 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ: ಮಾಜಿ ಸಚಿವ ತ್ರಿಪಾಠಿ ನಾಮಪತ್ರ ತಿರಸ್ಕೃತ

ಅಂತಿಮ ಕಣದಲ್ಲಿ ಖರ್ಗೆ–ತರೂರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಚುನಾವಣಾ ಕಣ ರಂಗೇರಿದ್ದು, ಜಾರ್ಖಂಡ್‌ನ ಮಾಜಿ ಸಚಿವ ಎನ್.ಕೆ. ತ್ರಿಪಾಠಿ ಅವರ ನಾಮಪತ್ರವನ್ನು ಪಕ್ಷದ ಚುನಾವಣಾ ಪ್ರಾಧಿಕಾರ ಶನಿವಾರ ತಿರಸ್ಕರಿಸಿದೆ. ಹೀಗಾಗಿ ಅಂತಿಮ ಕಣದಲ್ಲಿ ಮಲ್ಲಿಕಾರ್ಜುನ ಖರ್ಗೆ ಹಾಗೂ ಶಶಿ ತರೂರ್ ಮಾತ್ರ ಉಳಿದಿದ್ದಾರೆ.

ತ್ರಿಪಾಠಿ ಅವರು ಸಲ್ಲಿಸಿದ್ದ ನಾಮಪತ್ರ ಕ್ರಮಬದ್ಧವಾಗಿರಲಿಲ್ಲ ಎಂದು ಪಕ್ಷದ ಚುನಾವಣಾ ಪ್ರಾಧಿಕಾರದ ಮುಖ್ಯಸ್ಥ ಮಧುಸೂದನ್ ಮಿಸ್ತ್ರಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೂವರು ಅಭ್ಯರ್ಥಿಗಳು ಕಡೆಯ ದಿನವಾದ ಶುಕ್ರವಾರ ನಾಮಪತ್ರ ಸಲ್ಲಿಸಿದ್ದರು. ಚುನಾವಣಾ ಪ್ರಾಧಿಕಾರವು ನಾಮಪತ್ರಗಳನ್ನು ಶನಿವಾರ ಪರಿಶೀಲಿಸಿತು. ತ್ರಿಪಾಠಿ ಅವರ ನಾಮಪತ್ರದಲ್ಲಿದ್ದ ಒಬ್ಬರ ಸಹಿ ಹೊಂದಾಣಿಕೆಯಾಗಲಿಲ್ಲ ಹಾಗೂ ಮತ್ತೊಬ್ಬರ ಸಹಿ ಪುನರಾವರ್ತನೆಯಾಗಿತ್ತು ಎಂದು ಮಿಸ್ತ್ರಿ ತಿಳಿಸಿದ್ದಾರೆ.

ನಾಮಪತ್ರ ವಾಪಸ್ ಪಡೆಯಲು ಒಂದು ವಾರ ಕಾಲಾವಕಾಶ ಇದೆ. ಕಣದಲ್ಲಿ ಉಳಿದಿರುವ ಖರ್ಗೆ ಹಾಗೂ ತರೂರ್ ಅವರ ಪೈಕಿ ಯಾರೊಬ್ಬರೂ ಅ.8ರ ಒಳಗೆ ತಮ್ಮ ನಾಮಪತ್ರ ವಾಪಸ್ ಪಡೆಯದಿದ್ದಲ್ಲಿ, ಅಕ್ಟೋಬರ್ 17ರಂದು ಚುನಾವಣೆ ನಡೆಯಲಿದೆ. ಅ.19ರಂದು ಮತ ಎಣಿಕೆ ನಡೆಯಲಿದೆ.

'ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ಖರ್ಗೆ ಹಾಗೂ ನಾನು ಸ್ನೇಹಪೂರ್ವಕವಾಗಿ ಸ್ಪರ್ಧಿಸುತ್ತಿದ್ದೇವೆ. ಈ ಪ್ರಜಾತಂತ್ರ ಪ್ರಕ್ರಿಯೆಯಿಂದ ಪಕ್ಷ ಹಾಗೂ ಪಕ್ಷದ ಸದಸ್ಯರಿಗೆ ನೆರವಾಗಲಿದೆ' ಎಂದು ತರೂರ್ ಹೇಳಿದರು.

ಅಚ್ಚರಿ ಮೂಡಿಸಿದ ತರೂರ್ ಸೂಚಕರು: ಪಕ್ಷ ನಾಯಕಿ ಮೊಹ್ಸಿನಾ ಕಿದ್ವಾಯಿ, ಕಾಶ್ಮೀರದ ಮುಖಂಡ ಸೈಫುದ್ದೀನ್ ಸೋಜ್, ಸಂಸದ ಕಾರ್ತಿ ಚಿದಂಬರಂ ಸೇರಿ ಮೂವರು ಸಂಸದರು, ಮಾಜಿ ಸಂಸದ ಸಂದೀಪ್ ದೀಕ್ಷಿತ್ ಒಳಗೊಂಡಂತೆ 60 ಜನರು ಶಶಿ ತರೂರ್ ಅವರ ಉಮೇದುವಾರಿಕೆಗೆ ಸೂಚಕರಾಗಿ ಸಹಿ ಹಾಕಿದ್ದಾರೆ.

ನೆಹರೂ–ಗಾಂಧಿ ಕುಟುಂಬ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಮೊಹ್ಸಿನಾ ಅವರು ಸಹಿ ಹಾಕಿರುವುದು ಅಚ್ಚರಿ ಮೂಡಿಸಿದೆ. ನಾಯಕತ್ವ ಬದಲಾವಣೆಗೆ ಆಗ್ರಹಿಸಿದ್ದ ಪಕ್ಷದ ಜಿ–23 ಮುಖಂಡರ ಜೊತೆ ಇವರು ಗುರುತಿಸಿಕೊಂಡಿರಲಿಲ್ಲ.

ಸೋಜ್ ಅವರು ತಮ್ಮ ಪುತ್ರನ ಜೊತೆ ಸೆ.25ರಂದೇ ಸಹಿ ಹಾಕಿದ್ದರು. ಗುಲಾಂ ನಬಿ ಆಜಾದ್ ಬಳಿಕ ಸೋಜ್ ಅವರೂ ನೆಹರೂ–ಗಾಂಧಿ ಕುಟುಂಬದಿಂದ ದೂರವಾದಂತೆ ಇದರಿಂದ ತೋರುತ್ತಿದೆ.

ಹಿರಿಯ ಕಾಂಗ್ರೆಸ್ಸಿಗ ಎ.ಕೆ. ಆ್ಯಂಟನಿ ಅವರು ಖರ್ಗೆ ಅವರ ಉಮೇದುವಾರಿಕೆಗೆ ಸೂಚಕರಾಗಿ ಸಹಿ ಹಾಕಿದ್ದರೆ, ಅವರ ಪುತ್ರ ಅನಿಲ್ ಕೆ. ಆ್ಯಂಟನಿ ಅವರು ತರೂರ್ ಅವರನ್ನು ಬೆಂಬಲಿಸಿ ಸಹಿ ಹಾಕಿದ್ದಾರೆ.

ಖರ್ಗೆ, ಗಾಂಧಿ ಕುಟುಂಬದ ರಿಮೋಟ್ ಕಂಟ್ರೋಲ್ ಆಗದಿರಲಿ; ಜೋಶಿ

ಹುಬ್ಬಳ್ಳಿ: 'ಮಲ್ಲಿಕಾರ್ಜುನ ಖರ್ಗೆ ಅವರು ಹಿರಿಯರು. ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. ಖರ್ಗೆ ಅವರು ಗಾಂಧಿ ಕುಟುಂಬದ ರಿಮೋಟ್ ಕಂಟ್ರೋಲ್ ಅಧ್ಯಕ್ಷ ಆಗಬಾರದು ಎನ್ನುವುದು ನಮ್ಮ ಆಶಯ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್ ಪ್ರಥಮ ಬಾರಿಗೆ 'ಭಾರತ ಜೋಡೊ' ಪಾದಯಾತ್ರೆಯಂತಹ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದೆ. ಕನಿಷ್ಠ ರಾಜ್ಯದಲ್ಲಾದರೂ ಭಾರತ ಮಾತೆಯನ್ನು ಗೌರವಿಸುವವರೊಂದಿಗೆ ಅವರು ಸೇರಲಿ' ಎಂದರು.

'ದೆಹಲಿಯಲ್ಲಿ ಕುಳಿತು ಅವರು ಆಡಳಿತ ನಡೆಸುತ್ತಿದ್ದರು. ಈಗ ಭಾರತ ಜೋಡೊ ಯಾತ್ರೆ ಮಾಡುತ್ತಿದ್ದಾರೆ. ಯಾತ್ರೆಗೆ ಯಾರ ಅಭ್ಯಂತರವೂ ಇಲ್ಲ. ಅದು ಭಾರತ ತೋಡೊ ಆಗಬಾರದು. ರಾಹುಲ್ ಗಾಂಧಿ ರಾಜ್ಯದಲ್ಲಿ ಭಾರತ ಮಾತೆಗೆ ಗೌರವ ಕೊಡುವವರನ್ನು ಭೇಟಿ ಆಗಲಿ' ಎಂದು ಹೇಳಿದರು.

'ಹೃದಯದಿಂದ ಬಂದು ಯಾತ್ರೆಯಲ್ಲಿ ತೊಡಗಿಸಿಕೊಳ್ಳಲಿ. ಆರ್‌ಎಸ್‌ಎಸ್ ಅನ್ನು ಮೊದಲಿನಿಂದಲೂ ಟಾರ್ಗೆಟ್ ಮಾಡಲಾಗುತ್ತಿದೆ. ಅದು ದೇಶದ ಹಿತದಲ್ಲಿ ನಂಬಿಕೆ ಇಟ್ಟಿರುವ ಸಾಂಸ್ಕೃತಿಕ ಸಂಘಟನೆ' ಎಂದರು.

ರಾಜ್ಯಸಭೆ ಪ್ರತಿಪಕ್ಷ ನಾಯಕ ಸ್ಥಾನಕ್ಕೆ ಖರ್ಗೆ ರಾಜೀನಾಮೆ

ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿರುವ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯ ವಿರೋಧಪಕ್ಷದ ನಾಯಕ ಸ್ಥಾನಕ್ಕೆ ಶುಕ್ರವಾರ ರಾತ್ರಿಯೇ ರಾಜೀನಾಮೆ ನೀಡಿದ್ದಾರೆ. ಪಕ್ಷದಲ್ಲಿ 'ಒಬ್ಬರಿಗೆ ಒಂದು ಹುದ್ದೆ' ಎಂಬ ನಿಯಮವನ್ನು ಅವರು ಅನುಸರಿಸಿದ್ದಾರೆ.

ಖರ್ಗೆ ಅವರ ಸ್ಥಾನಕ್ಕೆ ಮತ್ತೊಬ್ಬ ಸಮರ್ಥರನ್ನು ಆಯ್ಕೆ ಮಾಡುವ ಸವಾಲು ಸೋನಿಯಾ ಅವರ ಮೇಲಿದ್ದು, ಹಿರಿಯ ಮುಖಂಡರಾದ ದಿಗ್ವಿಜಯ್ ಸಿಂಗ್ ಹಾ ಗೂ ಪಿ.ಚಿದಂಬರಂ ಅವರು ಈ ಹುದ್ದೆಗೆ ಮುಂಚೂಣಿಯಲ್ಲಿದ್ದಾರೆ ಎನ್ನಲಾಗಿದೆ. ಮುಕುಲ್ ವಾಸ್ನಿಕ್ ಹಾಗೂ ಪ್ರಮೋದ್ ತಿವಾರಿ ಅವರ ಹೆಸರೂ ಕೇಳಿಬರುತ್ತಿದೆ. ಅಶೋಕ್ ಗೆಹಲೋತ್ ಅವರು ಸ್ಪರ್ಧೆಯಿಂದ ಹಿಂದೆ ಸರಿದ ಬಳಿಕ ದಿಗ್ವಿಜಯ್ ಸಿಂಗ್ ಅವರು ಕಣಕ್ಕಿಳಿಯಲು ನಿರ್ಧರಿಸಿದ್ದರು. ಆದರೆ ಖರ್ಗೆ ಹೆಸರು ಮುಂಚೂಣಿಗೆ ಬಂದಿದ್ದರಿಂದ ಅವರು ಹಿಂದೆ ಸರಿದಿದ್ದರು.

ಖರ್ಗೆ ಅಧ್ಯಕ್ಷರಾಗ ಚುನಾಯಿತರಾದರೆ, ಉತ್ತರ ಭಾರತದ ಮುಖಂಡರೊಬ್ಬರಿಗೆ ವಿರೋಧಪಕ್ಷದ ನಾಯಕನ ಸ್ಥಾನ ದೊರೆಯಲಿದೆ ಎನ್ನಲಾಗಿದ್ದು, ದಿಗ್ವಿಜಯ್‌ಗೆ ಈ ಸ್ಥಾನ ಸಿಗುವ ಸಾಧ್ಯತೆಯಿದೆ. ಆಗ, ಚಿದಂಬರಂ ಅವರಿಗೆ ಅವಕಾಶ ಸಿಗುವುದು ಕಷ್ಟ. ಮುಕುಲ್ ವಾಸ್ನಿಕ್ ಹಾಗೂ ಪ್ರಮೋದ್ ತಿವಾರಿ ಅವರು ವರಿಷ್ಠರ ಮುಂದಿರುವ ಇತರೆ ಆಯ್ಕೆಗಳು ಎನ್ನಲಾಗಿದೆ.

ಭದ್ರತಾ ಮಂಡಳಿ: ರಷ್ಯಾ ವಿರುದ್ಧ ಅಂಗೀಕಾರವಾಗದ ನಿರ್ಣಯ

ವಿಶ್ವಸಂಸ್ಥೆ(ಪಿಟಿಐ) : ಭದ್ರತಾ ಮಂಡಳಿಯಲ್ಲಿ ರಷ್ಯಾ ವಿರುದ್ಧ ಅಮೆರಿಕ ಮತ್ತು ಅಲ್ಬೇನಿಯಾ ಮಂಡಿಸಿದ ನಿರ್ಣಯದ ಮತದಾನದ ವೇಳೆ ಭಾರತ, ಚೀನಾ, ಗ್ಯಾಬೊನ್ ಮತ್ತು ಬ್ರೆಜಿಲ್ ದೇಶಗಳು ದೂರ ಉಳಿದವು. ರಷ್ಯಾ ತನ್ನ 'ವೀಟೊ' ಅಧಿಕಾರ ಚಲಾಯಿಸಿ ನಿರ್ಣಯ ಅಂಗೀಕಾರವಾಗದಂತೆ ನೋಡಿಕೊಂಡಿತು.

ಉಕ್ರೇನ್‌ಗೆ ಸೇರಿದ ಆಕ್ರಮಿತ ಪ್ರದೇಶಗಳಲ್ಲಿ ಜನಾಭಿಪ್ರಾಯ ಸಂಗ್ರಹ ಮಾಡಿರುವುದು, ಉಕ್ರೇನ್‌ನ ನಾಲ್ಕು ಪ್ರದೇಶಗಳನ್ನು ರಷ್ಯಾ ಸ್ವಾಧೀನಪಡಿಸಿಕೊಂಡಿರುವುದನ್ನು ಖಂಡಿಸಿ ನಿರ್ಣಯ ಮಂಡಿಸಲಾಗಿತ್ತು.

ಇದರ ಜತೆಗೆ, ರಷ್ಯಾ ತನ್ನ ಸೇನಾ ಪಡೆಗಳನ್ನು ಉಕ್ರೇನ್‌ನಿಂದ ಕೂಡಲೇ ಹಿಂದಕ್ಕೆ ಕರೆಸಿಕೊಳ್ಳಬೇಕು ಎಂದು ನಿರ್ಣಯದಲ್ಲಿ ಆಗ್ರಹಿಸಲಾಗಿತ್ತು.

ಉಕ್ರೇನ್‌ನಲ್ಲಿ ಭಾಗಶಃ ವಶಪಡಿಸಿಕೊಂಡಿರುವ ನಾಲ್ಕು ಪ್ರದೇಶಗಳಾದ ಕೆರ್ಸಾನ್, ಝುಪೋರಿಝಿಯಾ, ಲುಹಾನ್‌ಸ್ಕ್, ಡೊನೆಟ್‌ಸ್ಕ್ ಪ್ರದೇಶಗಳನ್ನು ರಷ್ಯಾಕ್ಕೆ ಸೇರ್ಪಡೆ ಮಾಡಿಕೊಳ್ಳುವ ಒಪ್ಪಂದಕ್ಕೆ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶುಕ್ರವಾರವಷ್ಟೇ ಸಹಿ ಹಾಕಿದ್ದರು. ಇದರ ವಿರುದ್ಧ ಭದ್ರತಾ ಮಂಡಳಿಯಲ್ಲಿ ನಿರ್ಣಯ ಮಂಡಿಸಲಾಗಿತ್ತು.

ಆದರೆ, ರಷ್ಯಾ ತನ್ನ ಮೇಲಿನ ಆರೋಪಗಳನ್ನು 'ವಿಟೊ' ಅಧಿಕಾರ ಬಳಸಿ ನಿರಾಕರಿಸಿತು. ಇನ್ನೊಂದೆಡೆ, ಭದ್ರತಾ ಮಂಡಳಿಯ 15 ಸದಸ್ಯ ರಾಷ್ಟ್ರಗಳ ಪೈಕಿ 10 ರಾಷ್ಟ್ರಗಳು ನಿರ್ಣಯಕ್ಕೆ ಸಂಬಂಧಿಸಿದಂತೆ ಮತ ಚಲಾವಣೆ ಮಾಡಿದವು. ಭಾರತ ಸೇರಿದಂತೆ ನಾಲ್ಕು ರಾಷ್ಟ್ರಗಳು ಮತ ಹಾಕುವುದರಿಂದ ದೂರ ಉಳಿದವು. ಹೀಗಾಗಿ ನಿರ್ಣಯವು ಅಂಗೀಕಾರ ಪಡೆಯುವಲ್ಲಿ ವಿಫಲವಾಯಿತು.

'ಬೆದರಿಕೆ ಅಥವಾ ಬಲ ಪ್ರಯೋಗದ ಮೂಲಕ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದ ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವುದು ವಿಶ್ವಸಂಸ್ಥೆಯ ತತ್ವಗಳಿಗೆ ವಿರುದ್ಧವಾದದ್ದು. ಮತ್ತು, ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ' ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಹೇಳಿದರು.

'ಉಕ್ರೇನ್‌ನ ನಾಲ್ಕು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವ ನಿರ್ಧಾರವು ಯಾವುದೇ ಕಾನೂನಾತ್ಮಕ ಮೌಲ್ಯವನ್ನು ಹೊಂದಿಲ್ಲ. ಅದು ಖಂಡನಾರ್ಹ' ಎಂದು ಗುಟೆರೆಸ್ ತಿಳಿಸಿದರು.

'ರಷ್ಯಾದ ಕ್ರಮವನ್ನು ಅಂತರ ರಾಷ್ಟ್ರೀಯ ಕಾನೂನು ಚೌಕಟ್ಟಿನ ಒಳಗೆ ನೋಡಲು ಸಾಧ್ಯವೇ ಇಲ್ಲ. ಇಡೀ ಅಂತರರಾಷ್ಟ್ರೀಯ ಸಮುದಾಯವು ಯಾವುದರ ವಿರುದ್ಧ ನಿಂತಿದೆಯೋ, ಅದರ ಪರವಾಗಿ ರಷ್ಯಾದ ಈ ನಿರ್ಧಾರ ನಿಂತಿದೆ. ಇದು ವಿಶ್ವಸಂಸ್ಥೆಯ ಉದ್ದೇಶಗಳು ಮತ್ತು ತತ್ವಗಳನ್ನು ಉಲ್ಲಂಘಿಸುತ್ತದೆ. ಇದು ಅಪಾಯಕಾರಿ. ಆಧುನಿಕ ಜಗತ್ತಿನಲ್ಲಿ ಇದಕ್ಕೆ ಸ್ಥಾನವಿಲ್ಲ. ರಷ್ಯಾದ ಕ್ರಮವನ್ನು ಒಪ್ಪಿಕೊಳ್ಳಬಾರದು' ಎಂದು ಅವರು ಹೇಳಿದರು.

ರಷ್ಯಾದ ಸೇನೆ: ಕೀವ್‌ನಿಂದ ವಾಪಸು

ಕೀವ್ (ಎಪಿ): ಉಕ್ರೇನ್‌ನ ಲಿಮನ್ ನಗರವನ್ನು ವಶಕ್ಕೆ ಪಡೆದಿದ್ದ ರಷ್ಯಾ ಈಗ ಅಲ್ಲಿ ಬೀಡುಬಿಟ್ಟಿದ್ದ ತನ್ನ ಸೇನೆಯನ್ನು ವಾಪಸು ಕರೆಸಿಕೊಳ್ಳುತ್ತಿದೆ. ಈ ನಗರವನ್ನು ಮತ್ತೆ ತನ್ನ ಸುಪರ್ದಿಗೆ ಪಡೆಯಲು ಉಕ್ರೇನ್ ಸೇನೆ ಸುತ್ತುವರಿದ ಹಿಂದೆಯೇ ಈ ಬೆಳವಣಿಗೆ ನಡೆದಿದೆ.

ರಷ್ಯಾದ ರಕ್ಷಣಾ ಸಚಿವಾಲಯದ ಮೂಲಗಳನ್ನು ಉಲ್ಲೇಖಿಸಿ ಸ್ಥಳೀಯ ಸುದ್ದಿ ಸಂಸ್ಥೆಗಳು ಇದನ್ನು ದೃಢಪಡಿಸಿವೆ. ಹಾರ್ಕಿವ್‌ಗೆ 160 ಕಿ.ಮೀ ದೂರದಲ್ಲಿರುವ ಲಿಮನ್, ಉಕ್ರೇನ್‌ನ ಎರಡನೇ ಅತಿದೊಡ್ಡ ನಗರ. ಪ್ರತಿರೋಧ ಕ್ರಮವಾಗಿ ಉಕ್ರೇನ್ ಸೇನೆ ಈ ನಗರವನ್ನು ಸುತ್ತುವರೆದಿವೆ.

ಉಕ್ರೇನ್ ಪರಮಾಣು ಸ್ಥಾವರದ ಮುಖ್ಯಸ್ಥರ ಅಪಹರಣ: ಯುರೋಪಿನ ಅತಿದೊಡ್ಡ ಪರಮಾಣು ವಿದ್ಯುತ್ ಸ್ಥಾವರದ ಮುಖ್ಯಸ್ಥನನ್ನು ರಷ್ಯಾ ಅಪಹರಣ ಮಾಡಿದೆ ಎಂದು ಶನಿವಾರ ಉಕ್ರೇನ್ ಆರೋಪಿಸಿದೆ. ರಷ್ಯಾ ಸೇನಾಪಡೆಗಳು ಝುಪೊರಿಝಿಯಾ ಸ್ಥಾವರದ ಪ್ರಧಾನ ನಿರ್ದೇಶಕ ಇಹೋರ್ ಮುರಶೋವ್ ಅವರನ್ನು ಶುಕ್ರವಾರ ಸಂಜೆ ಅಪಹರಣ ಮಾಡಿವೆ ಎಂದು ದೂರಿದೆ.

ಸಂಕ್ಷಿಪ್ತ ಸುದ್ದಿ

ಇಂಧನಕ್ಕೆ 'ಪಿಯುಸಿ' ಪ್ರಮಾಣ ಪತ್ರ ಕಡ್ಡಾಯ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಅಕ್ಟೋಬರ್ 25 ರಿಂದ 'ಪಿಯುಸಿ' (ಪಲ್ಯುಷನ್ ಅಂಡರ್ ಕಂಟ್ರೋಲ್) ಪ್ರಮಾಣ ಇಲ್ಲದವರಿಗೆ ಪೆಟ್ರೋಲ್ ಪಂಪ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ನೀಡದೇ ಇರಲು ಎಎಪಿ ಸರ್ಕಾರ ನಿರ್ಧರಿಸಿದೆ ಎಂದು ದೆಹಲಿ ಪರಿಸರ ಸಚಿವ ಗೋಪಾಲ್ ರೈ ಶನಿವಾರ ಹೇಳಿದ್ದಾರೆ.

ವಾಹನ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ದೆಹಲಿ ಸರ್ಕಾರ ಈ ತೀರ್ಮಾನಕ್ಕೆ ಬಂದಿದೆ. 'ಪಿಯುಸಿ' ಎಂದರೆ ವಾಹನದ 'ಮಾಲಿನ್ಯ ನಿಯಂತ್ರಣದಲ್ಲಿದೆ' ಎಂಬುದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವಾಗಿದೆ. ಇದಕ್ಕೆ ಸಂಬಂಧಿಸಿದ ಅಧಿಸೂಚನೆಯನ್ನೂ ಶೀಘ್ರದಲ್ಲೇ ಹೊರಡಿಸಲಾಗುವುದು ಎಂದು ಅವರು ಹೇಳಿದ್ದಾರೆ.

'ನಿಯಮದ ಅನುಷ್ಠಾನ ಮತ್ತು ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲು ಸೆಪ್ಟೆಂಬರ್ 29 ರಂದು ಕರೆಯಲಾಗಿದ್ದ ಪರಿಸರ, ಸಾರಿಗೆ ಮತ್ತು ಸಂಚಾರ ಇಲಾಖೆಗಳ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಅದರಂತೆ ಅಕ್ಟೋಬರ್ 25 ರಿಂದ ನಿಯಮ ಜಾರಿಗೆ ಬರಲಿದೆ' ಎಂದರು.

'ದೆಹಲಿಯಲ್ಲಿ ಹೆಚ್ಚುತ್ತಿರುವ ಮಾಲಿನ್ಯಕ್ಕೆ ವಾಹನಗಳ ಹೊಗೆ ಪ್ರಮುಖ ಕಾರಣವಾಗಿದೆ. ಅದನ್ನು ಕಡಿಮೆ ಮಾಡುವುದು ಅನಿವಾರ್ಯವಾಗಿದೆ' ಎಂದು ರೈ ತಿಳಿಸಿದರು.

ವಿಶ್ವಸಂಸ್ಥೆಯಲ್ಲಿ ಗಾಂಧಿ ಹಾಲೊಗ್ರಾಮ್ ಪ್ರದರ್ಶನ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯಲ್ಲಿ ಇದೇ ಮೊದಲ ಬಾರಿಗೆ ಮಹಾತ್ಮಾ ಗಾಂಧಿ ಅವರ ಪೂರ್ಣ ವ್ಯಕ್ತಿಚಿತ್ರವನ್ನು ಹಾಲೊಗ್ರಾಮ್ ಮೂಲಕ ಪ್ರದರ್ಶಿಸಿ, ಶಿಕ್ಷಣ ಕುರಿತ ಅವರ ಚಿಂತನೆಗಳನ್ನು ಪ್ರಸಾರ ಮಾಡಲಾಯಿತು.

ಗಾಂಧಿ ಜಯಂತಿ ನಿಮಿತ್ತ, ಅಂತರರಾಷ್ಟ್ರೀಯ ಅಹಿಂಸೆ ದಿನಾಚರಣೆ ಅಂಗವಾಗಿ ವಿಶ್ವಸಂಸ್ಥೆಯಲ್ಲಿ ಭಾರತದ ಶಾಶ್ವತ ಮಿಷನ್ ಹಾಗೂ ಯುನೆಸ್ಕೊದ ಶಾಂತಿ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಮಹಾತ್ಮ ಗಾಂಧಿ ಶಿಕ್ಷಣ ಸಂಸ್ಥೆಯು (ಎಂಜಿಐಇಪಿ) ಕಾರ್ಯಕ್ರಮ ಆಯೋಜಿಸಿತ್ತು.

ಗಾಂಧಿ ಜಯಂತಿ ದಿನವನ್ನು ಅಂತರರಾಷ್ಟ್ರೀಯ ಅಹಿಂಸಾ ದಿನವಾಗಿ ಆಚರಿಸಲಾಗುತ್ತದೆ. 'ಮಾನವನ ಏಳಿಗೆಗಾಗಿ ಶಿಕ್ಷಣ' ವಿಷಯ ಕುರಿತು ಚರ್ಚೆ ನಡೆಯಿತು. ಹಾಲೊಗ್ರಾಮ್ ಮೂಲಕ ಇದೇ ಮೊದಲ ಬಾರಿಗೆ ಗಾಂಧಿ ಚಿತ್ರವನ್ನು ಪ್ರದರ್ಶಿಸಲಾಯಿತು ಎಂದು ಹೇಳಿಕೆ ತಿಳಿಸಿದೆ.

ಉತ್ತರಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಬ್ರಿಜ್‌ಲಾಲ್

ನವದೆಹಲಿ: ಉತ್ತರಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಮಾಜಿ ಸಂಸದ, ಪರಿಶಿಷ್ಟ ಜಾತಿ ಮುಖಂಡ ಬ್ರಿಜ್‌ಲಾಲ್ ಖಾಬ್ರಿ ಅವರನ್ನು ಪಕ್ಷ ನೇಮಿಸಿದೆ. ಈ ಮೊದಲು ಬಿಎಸ್‌ಪಿಯಲ್ಲಿದ್ದ ಖಾಬ್ರಿ, 2016ರಲ್ಲಿ ಆ ಪಕ್ಷವು ಟಿಕೆಟ್ ಮಾರಾಟ ಮಾಡುತ್ತಿದೆ ಎಂದು ಆರೋಪಿಸಿ ರಾಜೀನಾಮೆ ನೀಡಿದ್ದರು.

ಉತ್ತರಪ್ರದೇಶ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸೋಲಿನ ಬಳಿಕ ಆಗ ಅಧ್ಯಕ್ಷರಾಗಿದ್ದ ಅಜಯ್ ಲಲ್ಲು ಇದೇ ವರ್ಷದ ಮಾರ್ಚ್ ತಿಂಗಳಲ್ಲಿ ರಾಜೀನಾಮೆ ನೀಡಿದ್ದರು.

ಚೆನ್ನೈನಲ್ಲಿ ಗಾಂಧಿ ಜಯಂತಿ ಮುನ್ನಾ ದಿನ ನಡೆದ ಕಾರ್ಯಕ್ರಮದಲ್ಲಿ ಮಕ್ಕಳು ಮಹಾತ್ಮ ಗಾಂಧಿ ಅವರ ವೇಷ ಧರಿಸಿ ಸಂಭ್ರಮ ಪಟ್ಟರು.

ಹಣ ವರ್ಗಾವಣೆ ಪ್ರಕರಣ: ಸತ್ಯೇಂದ್ರ ಜೈನ್ ಅರ್ಜಿ ವಜಾ

ನವದೆಹಲಿ (ಪಿಟಿಐ): ತಮ್ಮ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ಮತ್ತೊಂದು ಕೋರ್ಟ್‌ಗೆ ವರ್ಗಾಯಿಸಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಸಚಿವ ಸತ್ಯೇಂದ್ರ ಜೈನ್ ಅವರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಶನಿವಾರ ವಜಾಗೊಳಿಸಿತು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಯೋಗೇಶ್ ಖನ್ನಾ, 'ಎಲ್ಲ ವಾಸ್ತವಾಂಶಗಳನ್ನು ಪರಿಗಣಿಸಿಯೇ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಪ್ರಕರಣವನ್ನು ವರ್ಗಾಯಿಸಿದ್ದಾರೆ' ಎಂದರು.

'ಈ ನಿರ್ಧಾರ ಕೈಗೊಳ್ಳುವ ವೇಳೆ ಕಾನೂನು ಪಾಲನೆಯಾಗಿಲ್ಲ ಎನ್ನಲಾಗದು ಅಥವಾ ಹೈಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯ ಇದೆ ಎಂದು ಹೇಳಲಾಗದು' ಎಂದೂ ನ್ಯಾಯಮೂರ್ತಿ ಖನ್ನಾ ಅವರು ಹೇಳಿದರು.

ಪ್ರಕರಣವನ್ನು ಹಸ್ತಾಂತರಿಸುವ ವಿಷಯಕ್ಕೆ ಸಂಬಂಧಿಸಿ, ಜೈನ್ ವಿರುದ್ಧ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ ಆತಂಕ ವ್ಯಕ್ತಪಡಿಸಿದೆ. ಹೀಗಾಗಿ, ಈ ವಿಷಯವನ್ನು ನ್ಯಾಯಾಧೀಶರ ದೃಷ್ಟಿಯಿಂದ ನೋಡದೇ, ಕಕ್ಷಿದಾರರ ದೃಷ್ಟಿಯಿಂದ ಗ್ರಹಿಸುವುದು ಮುಖ್ಯ ಎಂದು ನ್ಯಾಯಮೂರ್ತಿ ಅವರು ಅಭಿಪ್ರಾಯಪಟ್ಟರು.

ಜೈನ್ ವಿರುದ್ಧದ ಪ್ರಕರಣವನ್ನು ವಿಶೇಷ ನ್ಯಾಯಾಧೀಶೆ ಗೀತಾಂಜಲಿ ಗೋಯೆಲ್ ಅವರಿಂದ ವಿಶೇಷ ನ್ಯಾಯಾಧೀಶ ವಿಕಾಸ್ ಧುಲ ಅವರಿಗೆ ವರ್ಗಾಯಿಸಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ವಿನಯಕುಮಾರ್ ಗುಪ್ತಾ ಸೆ.23ರಂದು ಆದೇಶಿಸಿದ್ದರು.

ಕೊಡಿಯೇರಿ ಬಾಲಕೃಷ್ಣನ್ ನಿಧನ

ತಿರುವನಂತಪುರಂ/ಚೆನ್ನೈ (ಪಿಟಿಐ): ಸಿಪಿಎಂ ಪಕ್ಷದ ಹಿರಿಯ ನಾಯಕ, ಕೇರಳದ ಮಾಜಿ ಗೃಹ ಸಚಿವ ಕೊಡಿಯೇರಿ ಬಾಲಕೃಷ್ಣನ್ ಚೆನ್ನೈನ ಅಪೊಲೊ ಆಸ್ಪತ್ರೆಯಲ್ಲಿ ಶನಿವಾರ ರಾತ್ರಿ ನಿಧನರಾದರು. ಅವರಿಗೆ 69 ವರ್ಷವಾಗಿತ್ತು.

ಕ್ಯಾನ್ಸರ್ ಪೀಡಿತರಾಗಿದ್ದ ಅವರು ಕೆಲದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಪಕ್ಷದ ಮೂಲಗಳು ತಿಳಿಸಿವೆ. ಪಕ್ಷದ ಪಾಲಿಟ್ ಬ್ಯೂರೊ ಸದಸ್ಯರೂ ಆಗಿದ್ದ ಬಾಲಕೃಷ್ಣನ್, 2015ರಿಂದ 2022ರವರೆಗೂ ಪಕ್ಷದ ಕೇರಳ ಘಟಕದ ಕಾರ್ಯದರ್ಶಿಯಾಗಿದ್ದರು.

2006 ರಿಂದ 2011ರ ಅವಧಿಯಲ್ಲಿ ವಿ.ಎಸ್.ಅಚ್ಯುತಾನಂದನ್ ನೇತೃತ್ವದ ಸಚಿವ ಸಂಪುಟದಲ್ಲಿ ಗೃಹ ಸಚಿವರಾಗಿದ್ದರು. ಅನಾರೋಗ್ಯದ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯದರ್ಶಿ ಸ್ಥಾನಕ್ಕೆ ಇದೇ ವರ್ಷದ ಆಗಸ್ಟ್ ತಿಂಗಳಲ್ಲಿ ರಾಜೀನಾಮೆ ನೀಡಿದ್ದರು.



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹432

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹132

(ಪ್ರತಿ ಕೆ.ಜಿಗೆ)

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ. ಗಂಗಾಧರ್

(ರಿಟೈರ್ಡ್ ಮ್ಯಾನೇಜರ್, ಬಿ.ಇ.ಎಂ.ಎಲ್)

ದುಃಖತಪ್ತ: ಪತ್ನಿ–ಡಿ. ಗಿರಿಜಾ ಗಂಗಾಧರ್

ಮೊ: 96114 62601

16ನೇ ವರ್ಷದ ಪುಣ್ಯಸ್ಮರಣೆ



ಶ್ರೀ ತ. ರಂ. ಕೃಷ್ಣ ಗೌಡರು.

24.01.1934 – 02.10.2006

ನೀವು ನಮ್ಮ ಹೃದಯಗಳಲ್ಲಿ ಪ್ರೀತಿ ಚೇತನವಾಗಿದ್ದೀರಿ.

ಪತ್ನಿ ಜಯಲಕ್ಷ್ಮಿ ಕೆ. ತಲಕಾಡ್ ಹಾಗೂ ಕುಟುಂಬದವರು.

ರಿಲಯನ್ಸ್‌ನಿಂದ 'ಮಹಾಲಯ' ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಜುವೆಲ್ಸ್ ಕಂಪನಿಯು ಈ ಬಾರಿಯ ಹಬ್ಬದ ಋತುವಿಗಾಗಿ ಮಹಾರಾಷ್ಟ್ರದ ವೈಭವ ಮತ್ತು ಘನತೆಯಿಂದ ಪ್ರೇರಿತವಾದ ಚಿನ್ನ ಮತ್ತು ವಜ್ರದ 'ಮಹಾಲಯ' ಸಂಗ್ರಹವನ್ನು ಬಿಡುಗಡೆ ಮಾಡಿದೆ.

ಮಹಾಲಯ; ಮಹಾ ಎಂದರೆ ಶ್ರೇಷ್ಠತೆ ಮತ್ತು ಆಲಯ ಎಂದರೆ ಸೌಂದರ್ಯ ಎಂದು ಅರ್ಥ. ಮಹಾರಾಷ್ಟ್ರದಲ್ಲಿ ಜೀವನದ ಪ್ರತಿಯೊಂದು ಅಂಶದಲ್ಲಿಯೂ ಶ್ರೇಷ್ಠತೆ ಮತ್ತು ಸೌಂದರ್ಯ ಕಾಣಸಿಗುತ್ತದೆ ಎಂದು ಕಂಪನಿಯು ತಿಳಿಸಿದೆ. ಗ್ರಾಹಕರು ವಿವಿಧ ರೀತಿಯ ವಿನ್ಯಾಸದ ಚಿನ್ನ ಮತ್ತು ವಜ್ರದ ಆಭರಣಗಳನ್ನು ಖರೀದಿಸಬಹುದು ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

1–10–2022

ಜಾವಾ 70/80(ಹೊಸ)	11700-11750
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	10850-10900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	1065 (1055)
ಪಾಮ್ ವಾರದ ಡೆಲಿವರಿ	873 (860)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	50,000 (49,900)
ಬೆಳ್ಳಿ ಕೆ.ಜಿ	56,300 (56,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸೆಪ್ಟೆಂಬರ್ ತಿಂಗಳ ವರಮಾನ ಸಂಗ್ರಹ ₹1.47 ಲಕ್ಷ ಕೋಟಿ

ಜಿಎಸ್‌ಟಿ ಸಂಗ್ರಹ ಶೇ 26 ಹೆಚ್ಚಳ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಸೆಪ್ಟೆಂಬರ್‌ನಲ್ಲಿ ₹1.47 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಆಗಿದ್ದ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಶೇ 26ರಷ್ಟು ಹೆಚ್ಚಾಗಿದೆ.

2021ರ ಸೆಪ್ಟೆಂಬರ್‌ನಲ್ಲಿ ₹1.17 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು. 2022ರ ಆಗಸ್ಟ್‌ನಲ್ಲಿ ಸಂಗ್ರಹ ಆಗಿದ್ದ ₹1.43 ಲಕ್ಷ ಕೋಟಿಗೆ ಹೋಲಿಸಿದರೂ ಸೆಪ್ಟೆಂಬರ್‌ನಲ್ಲಿ ಆಗಿರುವ ಸಂಗ್ರಹವು ಹೆಚ್ಚಿನದ್ದಾಗಿದೆ.

ತೆರಿಗೆ ಸಂಗ್ರಹದಲ್ಲಿ ಚೇತರಿಕೆ ಮತ್ತು ಜಿಎಸ್‌ಟಿ ಜಾಲತಾಣವು ಸ್ಥಿರವಾಗಿದೆ ಎನ್ನುವುದನ್ನು ಸೆಪ್ಟೆಂಬರ್ ತಿಂಗಳ ಅಂಕಿ–ಅಂಶವು ಸೂಚಿಸುತ್ತಿದೆ ಎಂದು ಹಣಕಾಸು ಸಚಿವಾಲಯ ಶನಿವಾರ ತಿಳಿಸಿದೆ.

ಸೆಪ್ಟೆಂಬರ್ ತಿಂಗಳ ಒಟ್ಟು ಸಂಗ್ರಹದಲ್ಲಿ ಸಿಜಿಎಸ್‌ಟಿ ಪಾಲು ₹25,271 ಕೋಟಿ, ಎಸ್‌ಜಿಎಸ್‌ಟಿ ₹31,813 ಕೊಟಿ, ಐಜಿಎಸ್‌ಟಿ ₹80,464 ಕೋಟಿ ಹಾಗೂ ಸೆಸ್ ಮೂಲಕ ₹10,137 ಕೋಟಿ ಸಂಗ್ರಹ ಆಗಿದೆ.

ಸೆಪ್ಟೆಂಬರ್‌ನಲ್ಲಿ ಆಗಿರುವ ವರಮಾನ ಸಂಗ್ರಹವು ಆಗಸ್ಟ್‌ನಲ್ಲಿ ಸರಕು ಮತ್ತು ಸೇವೆಗಳನ್ನು ಪೂರೈಕೆ ಮಾಡಿರುವುದಕ್ಕೆ ಸಂಬಂಧಿಸಿದ್ದಾಗಿದೆ ಎಂದು ಕೆಪಿಎಂಜಿ ಇಂಡಿಯಾದ ಪರೋಕ್ಷ ತೆರಿಗೆಯ ಪಾಲುದಾರ ಅಭಿಷೇಕ್ ಜೈನ್ ಹೇಳಿದ್ದಾರೆ.

ಹಬ್ಬದ ಋತು ಇರುವುದರಿಂದ ಮುಂಬರುವ ತಿಂಗಳುಗಳಲ್ಲಿ ಜಿಎಸ್‌ಟಿ ಸಂಗ್ರಹವು ಇನ್ನಷ್ಟು ಏರಿಕೆ ಆಗುವ ನಿರೀಕ್ಷೆ ಇದೆ ಎಂದೂ ಅವರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಏಳನೇ ತಿಂಗಳಿನಲ್ಲಿಯೂ ₹1.4 ಲಕ್ಷ ಕೋಟಿ ದಾಟಿದ ತಿಂಗಳ ತೆರಿಗೆ ಸಂಗ್ರಹ
- ಮುಂಬರುವ ತಿಂಗಳುಗಳಲ್ಲಿ ತೆರಿಗೆ ಸಂಗ್ರಹ ಇನ್ನಷ್ಟು ಹೆಚ್ಚುವ ನಿರೀಕ್ಷೆ

ಜಿಎಸ್‌ಟಿ ಸಂಗ್ರಹದ ವಿವರ (₹ ಕೋಟಿಗಳಲ್ಲಿ)



ತೆರಿಗೆ ವ್ಯವಸ್ಥೆಯಲ್ಲಿ ಆಗಿರುವ ಸುಧಾರಣೆಗಳು ಮತ್ತು ಹಲವು ವಿನಾಯಿತಿಗಳನ್ನು ಕೈಬಿಟ್ಟಿರುವ ಕಾರಣಗಳಿಂದಾಗಿ ತೆರಿಗೆ ಸಂಗ್ರಹ ಹೆಚ್ಚಾಗುತ್ತಿದೆ. ಜಿಎಸ್‌ಟಿ ವ್ಯವಸ್ಥೆಯು ಸ್ಥಿರವಾಗುತ್ತಿರುವಂತೆ ತೋರುತ್ತಿದೆ ಎಂದು ಎನ್.ಎ. ಶಾ ಅಸೋಸಿಯೇಟ್ಸ್‌ನ ಪಾಲುದಾರ ಪರಾಗ್ ಮೆಹ್ತಾ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇ-ವೇ ಬಿಲ್: 2022ರ ಆಗಸ್ಟ್‌ನಲ್ಲಿ 7.29 ಲಕ್ಷ ಇ–ವೇ ಬಿಲ್ ಮತ್ತು 3.77 ಲಕ್ಷ ಇ–ಇನ್‌ವಾಯ್ಸ್ ಸೃಷ್ಟಿಯಾಗಿದ್ದು, ಎರಡನ್ನೂ ಒಳಗೊಂಡು 1.1 ಕೋಟಿಯನ್ನೂ ದಾಟಿದೆ. ಇದೊಂದು ಮಹತ್ವದ ಮೈಲಿಗಲ್ಲಾಗಿದೆ ಎಂದು ಸಚಿವಾಲಯವು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಚಿತ್ರದುರ್ಗ	
ಆಪಿ	49739-50169
ಬೆಟ್ಟೆ	38119-38559
ಕೆಂಪುಗೋಟು	29609-30010
ರಾಶಿ	49229-49679
ಕುಂದಾಪುರ	
ಹಳೆಚಾಲಿ	40000-47500
ಹೊಸಚಾಲಿ	50000-56000
ಪುತ್ತೂರು	
ಹೊಸತು	34500-47500
ಸಿದ್ದಾಪುರ	
ಬಿಳಿಗೋಟು	28899-33699
ಚಾಲಿ	37699-41509
ಕೋಕ	25399-32819
ಕೆಂಪುಗೋಟು	30289-34089
ರಾಶಿ	46569-49469
ತಟ್ಟಿಬೆಟ್ಟೆ	38069-46509
ಶಿರಸಿ	
ಬೆಟ್ಟೆ	21089-46518
ಬಿಳಿಗೋಟು	24166-39699
ಚಾಲಿ	36099-42739
ಕೆಂಪುಗೋಟು	26199-32199
ರಾಶಿ	45099-50099
ಮೂಡಿಗೆರೆ ಕಾಫಿ (50ಕೆ.ಜಿಗೆ)	
ಮುದ್ರೆಮನೆ	
ಎಪಿ	16200
ಎಸಿ	9100
ಆರ್‌ಪಿ	9800
ಆರ್‌ಸಿ	4800

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಡುಂಡಿರಾಜ್

ಕವಿ, ನಾಟಕಕಾರ

ಹನಿ ಮಾತು

ಸೆಲೆಬ್ರಿಟಿ LIVE

ಬೆಳಿಗ್ಗೆ 11 ಗಂಟೆಗೆ

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8. ಕಥಾಸಾಗರ: ಬೆಳಿಗ್ಗೆ 9.

ಕನ್ನಡ ಧ್ವನಿ

ಪ್ರಜಾವಾಣಿ ಅರ್ಪಿಸುವ

ನವರಾತ್ರಿ ಸಾಂಸ್ಕೃತಿಕ ಉತ್ಸವ- 2022 PREMIER

ಸಹಯೋಗ: ಕಾಸ್ಮೋಪಾಲಿಟನ್ ಕ್ಲಬ್, ಜಯನಗರ, ಬೆಂಗಳೂರು

ಅಕ್ಟೋಬರ್ 5, 2022ರ ವರೆಗೆ ಪ್ರತಿ ಸಂಜೆ 4 ರಿಂದ

ನಾನೇ ಕರ್ನಾಟಕದ ಶಾಶ್ವತ ಮುಖ್ಯಮಂತ್ರಿ

ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಅವರಿಂದ ಹಾಸ್ಯ ಸಂಜೆ

ನಿರ್ವಹಣೆ: ಶ್ರೀನಿವಾಸ ಜಿ.ಕಪ್ಪಣ್ಣ

ನಾಳೆ

ನವರಾತ್ರಿ ನವರೂಪಿಣಿ

ರಘು ಲೀಲಾ ಸಂಗೀತ ಶಾಲೆ, ಮೈಸೂರು ವತಿಯಿಂದ ಸಮೂಹ ಗಾಯನ. ನಿರ್ದೇಶನ: ಸುನೀತಾ ಚಂದ್ರ ಕುಮಾರ್

ನಿರ್ವಹಣೆ: ನಾಗರಾಜ್ ಕಪನಿ

ಭಾರತ್ ಜೋಡೊ ಯಾತ್ರೆ: ಕರ್ನಾಟಕದಲ್ಲಿ ಕಾಂಗ್ರೆಸ್ ಜೋಡಿಸುವುದೇ?

ಭಾಗವಹಿಸುವವರು:

ರಮೇಶ್ ಬಾಬು, ಕಾಂಗ್ರೆಸ್

ಎಂ.ಜಿ. ಮಹೇಶ್, ಮುಖ್ಯ ವಕ್ತಾರ, ಬಿಜೆಪಿ

ಎಲ್. ಗಂಗಾಧರ ಮೂರ್ತಿ, ಪ್ರಧಾನ ಕಾರ್ಯದರ್ಶಿ, ಜೆಡಿಎಸ್

ಉಷಾ ಮೋಹನ್, ವಕ್ತಾರೆ, ಆಮ್ ಆದ್ಮಿ ಪಕ್ಷ

ಸಂವಾದ

ಮಧ್ಯಾಹ್ನ 12 ರಿಂದ 1

ಮೈಸೂರಿನಿಂದ ದಸರಾ ಲೈವ್ LIVE

ಮೈಸೂರು ಅರಮನೆ ವೇದಿಕೆಯಲ್ಲಿ ನಡೆಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ನೇರ ಪ್ರಸಾರ ಪ್ರಜಾವಾಣಿ ಫೇಸ್‌ಬುಕ್ ಪುಟದಲ್ಲಿ ಪ್ರತಿದಿನ ಸಂಜೆ 5.30ರಿಂದ

ಐ.ಟಿ. ಲೆಕ್ಕಪರಿಶೋಧಿತ ವರದಿ ಸಲ್ಲಿಕೆಯ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): 2021–22ನೇ ಹಣಕಾಸು ವರ್ಷಕ್ಕೆ ಆದಾಯ ತೆರಿಗೆಯ ಲೆಕ್ಕ ಪರಿಶೋಧಿತ (ಆಡಿಟೆಡ್) ವರದಿಯನ್ನು ಸಲ್ಲಿಸಲು ನೀಡಿದ್ದ ಗಡುವನ್ನು ಆದಾಯ ತೆರಿಗೆ ಇಲಾಖೆಯು ಅಕ್ಟೋಬರ್ 7ರವರೆಗೆ ವಿಸ್ತರಣೆ ಮಾಡಿದೆ.

ಈ ಹಿಂದಿನ ಆದೇಶದ ಪ್ರಕಾರ, ಸೆಪ್ಟೆಂಬರ್ 30ಕ್ಕೆ ಗಡುವು ಮುಕ್ತಾಯ ಆಗಬೇಕಿತ್ತು.

ಲೆಕ್ಕಪರಿಶೋಧನೆಗೆ ಸಂಬಂಧಿಸಿದ ವಿವಿಧ ವರದಿಗಳನ್ನು ಸಲ್ಲಿಸಲು ತೆರಿಗೆ ಪಾವತಿದಾರರು ಮತ್ತು ಲೆಕ್ಕ ಪರಿಶೋಧಕರಿಗೆ ಕಷ್ಟವಾಗುತ್ತಿದೆ ಎನ್ನುವುದನ್ನು ಪರಿಗಣಿಸಿ ಗಡುವು ವಿಸ್ತರಣೆ ಮಾಡಲು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ನಿರ್ಧರಿಸಿತು ಎಂದು ಶುಕ್ರವಾರ ರಾತ್ರಿ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಾಣಿಜ್ಯ ಬಳಕೆ ಸಿಲಿಂಡರ್ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ 19 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ದರವನ್ನು ₹25.5ರಷ್ಟು ಇಳಿಕೆ ಮಾಡಿವೆ. ಇದರಿಂದಾಗಿ ದೆಹಲಿಯಲ್ಲಿ ಮಾರಾಟ ದರವು ₹1,859.50ಕ್ಕೆ ಇಳಿಕೆ ಆಗಿದೆ.

ಜೂನ್ ತಿಂಗಳ ಬಳಿಕ ಆರನೇ ಬಾರಿಗೆ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಕಡಿಮೆ ಮಾಡಲಾಗಿದೆ. ಇದರಿಂದಾಗಿ ಒಂದು ಸಿಲಿಂಡರ್‌ನ ದರವು ಒಟ್ಟಾರೆ ₹494.50ರಷ್ಟು ಇಳಿಕೆ ಆದಂತಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಇಳಿಕೆ ಆಗಿರುವುದರಿಂದ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಕಂಪನಿಗಳು ತಿಳಿಸಿವೆ. ಗೃಹ ಬಳಕೆಯ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಎಟಿಎಫ್: ವಿಮಾನ ಇಂಧನ (ಎಟಿಎಫ್) ದರವನ್ನು ಶೇ 4.5ರಷ್ಟು ಕಡಿಮೆ ಮಾಡಲಾಗಿದೆ. ಇದರಿಂದಾಗಿ ದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್ ದರವು ₹5,521ರಷ್ಟು ಇಳಿಕೆ ಕಂಡಲು ₹1.15 ಲಕ್ಷಕ್ಕೆ ತಲುಪಿದೆ.

ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ದರದಲ್ಲಿ ವ್ಯತ್ಯಾಸ ಆಗುತ್ತದೆ.

ನಿರುದ್ಯೋಗ ಪ್ರಮಾಣ ಇಳಿಕೆ

ಮುಂಬೈ (ಪಿಟಿಐ): ನಿರುದ್ಯೋಗ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇ 6.43ಕ್ಕೆ ಇಳಿಕೆ ಕಂಡಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಶನಿವಾರ ತಿಳಿಸಿದೆ.

ಆಗಸ್ಟ್‌ನಲ್ಲಿ ನಿರುದ್ಯೋಗ ಪ್ರಮಾಣ 1 ವರ್ಷದ ಗರಿಷ್ಠ ಮಟ್ಟವಾದ ಶೇ 8.3ಕ್ಕೆ ಏರಿಕೆ ಕಂಡಿತ್ತು.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಸಿಎಂಐಇನ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ವ್ಯಾಸ್ ತಿಳಿಸಿದ್ದಾರೆ.

ಅಮೆರಿಕ, ಯುಕೆ ಮಧ್ಯೆ 20 ಹೆಚ್ಚುವರಿ ವಿಮಾನ ಸೇವೆ: ಏರ್ ಇಂಡಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರ್ ಇಂಡಿಯಾ ವಿಮಾನಯಾನ ಕಂಪನಿಯು ಬರ್ಮಿಂಗ್‌ಹ್ಯಾಮ್, ಲಂಡನ್ ಮತ್ತು ಸ್ಯಾನ್ ಫ್ರಾನ್ಸಿಸ್ಕೊಗೆ ಪ್ರತಿ ವಾರವೂ ಹೆಚ್ಚುವರಿಯಾಗಿ 20 ವಿಮಾನಗಳ ಸಂಚಾರದ ಆರಂಭವನ್ನು ಘೋಷಿಸಿದೆ.

ಇದೇ ಅಕ್ಟೋಬರ್‌ನಿಂದ ನವೆಂಬರ್ ಅವಧಿಯಲ್ಲಿ ಹಂತ ಹಂತವಾಗಿ ವಿಮಾನ ಸಂಚಾರ ಆರಂಭಿಸುವುದಾಗಿ ಅದು ತಿಳಿಸಿದೆ. ತನ್ನ ಅಂತರರಾಷ್ಟ್ರೀಯ ಸೇವೆಯನ್ನು ಇನ್ನಷ್ಟು ಬಲಪಡಿಸಲು ಈ ಕ್ರಮ ಕೈಗೊಂಡಿದೆ.

ಬರ್ಮಿಂಗ್‌ಹ್ಯಾಮ್‌ಗೆ 5, ಲಂಡನ್‌ಗೆ 9 ಮತ್ತು ಸ್ಯಾನ್ ಫ್ರಾನ್ಸಿಸ್ಕೊಗೆ 6 ಹೆಚ್ಚುವರಿ ವಿಮಾನಗಳು ಸಂಚಾರ ನಡೆಸಲಿದ್ದು, ಪ್ರತಿ ವಾರವೂ ಗ್ರಾಹಕರಿಗೆ 5 ಸಾವಿರ ಹೆಚ್ಚುವರಿ ಆಸನಗಳು ಲಭ್ಯವಾಗಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇದರಿಂದಾಗಿ ಪ್ರತಿ ವಾರ ಯುಕೆಗೆ ಪ್ರಯಾಣಿಸಲಿರುವ ಏರ್ ಇಂಡಿಯಾದ ವಿಮಾನಗಳ ಸಂಖ್ಯೆಯು 34 ರಿಂದ 48ಕ್ಕೆ ಏರಿಕೆ ಆಗಲಿದೆ. ಅಮೆರಿಕಕ್ಕೆ ಸಂಚರಿಸಲಿರುವ ಏರ್ ಇಂಡಿಯಾದ ವಿಮಾನಗಳ ಸಂಖ್ಯೆಯು 34 ರಿಂದ 40ಕ್ಕೆ ಏರಿಕೆ ಆಗಲಿದೆ.

ಕಂಪನಿಯ 'ವಿಹಾನ್.ಎಐ' (Vihaan.AI) ಕಾರ್ಯಯೋಜನೆಯ ಭಾಗವಾಗಿ, ಭಾರತದ ಪ್ರಮುಖ ನಗರಗಳಿಂದ ಹೆಚ್ಚಿನ ಅಂತರರಾಷ್ಟ್ರೀಯ ಸ್ಥಳಗಳಿಗೆ ಸಂಪರ್ಕ ಹೊಂದಲು ಗಮನ ಹರಿಸಲಾಗುವುದು ಎಂದು ಕಂಪನಿಯ ಸಿಇಒ ಕ್ಯಾಂಪ್‌ಬೆಲ್ ವಿಲ್ಸನ್ ತಿಳಿಸಿದ್ದಾರೆ.

ದೇಶದಲ್ಲಿ '5ಜಿ ಯುಗ' ಆರಂಭ

ಒಂದನೇ ಪುಟದಿಂದ

'ಹೊಸ ಯುಗದ ಆರಂಭವನ್ನು ಇದು ಸೂಚಿಸುತ್ತಿದೆ. ಅಪರಿಮಿತ ಅವಕಾಶಗಳನ್ನು ಇದು ಒದಗಿಸಲಿದೆ' ಎಂದು ಮೊಬೈಲ್ ಸಮಾವೇಶದಲ್ಲಿ (ಐಎಂಸಿ) ಮೋದಿ ಹೇಳಿದರು.

'ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಗೆ ಅತ್ಯಂತ ವಿಶೇಷ ದಿನ ಇದಾಗಿದೆ. 130 ಕೋಟಿ ಭಾರತೀಯರು 5ಜಿ ರೂಪದಲ್ಲಿ ಅದ್ಭುತ ಕೊಡುಗೆಯನ್ನು ದೇಶದ ದೂರಸಂಪರ್ಕ ಉದ್ಯಮದಿಂದ ಪಡೆದಿದ್ದಾರೆ' ಎಂದು ಅವರು ತಿಳಿಸಿದರು.

'5ಜಿ ತಂತ್ರಜ್ಞಾನವು 4ಜಿ ತಂತ್ರಜ್ಞಾನಕ್ಕಿಂತ ಹಲವು ಪಟ್ಟು ಹೆಚ್ಚು ವೇಗದ ಇಂಟರ್ನೆಟ್ ಸಂಪರ್ಕವನ್ನು ಒದಗಿಸುತ್ತದೆ. 5ಜಿ ಜೊತೆ ಸಂಪರ್ಕಿತ ಸಾಧನಗಳು ಅತ್ಯಂತ ಕಡಿಮೆ ಸಮಯದಲ್ಲಿ ಡೇಟಾವನ್ನು ಷೇರ್ ಮಾಡಬಹುದಾಗಿದೆ. ಆರೋಗ್ಯಸೇವೆ, ಶಿಕ್ಷಣ, ಕೃಷಿ ಮತ್ತು ವಿಪತ್ತು ನಿರ್ವಹಣೆಯಂತಹ ವಲಯಗಳಲ್ಲಿ ಆಮೂಲಾಗ್ರ ಬದಲಾವಣೆಯ ಭರವಸೆಯನ್ನು ಇದು ನೀಡಿದೆ.

'2ಜಿ, 3ಜಿ ಮತ್ತು 4ಜಿ ದೂರಸಂಪರ್ಕ ಸೇವೆಗಳಿಗಾಗಿ ಭಾರತವು ಹೊರ ದೇಶಗಳ ಮೇಲೆ ಅವಲಂಬಿತವಾಗಬೇಕಿತ್ತು. ದೇಶಿ ನಿರ್ಮಿತ ತಂತ್ರಜ್ಞನವು 5ಜಿಯಲ್ಲಿ ಪ್ರಮುಖ ಪಾತ್ರ ವಹಿಸಲಿದ್ದು, ಭಾರತವು ಇತಿಹಾಸ ಸೃಷ್ಟಿಸಿದೆ' ಎಂದು ಮೋದಿ ಅಭಿಪ್ರಾಯಪಟ್ಟರು.

ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯ ಪ್ರಗತಿ ಮೈದಾನದಲ್ಲಿ ಶನಿವಾರ ನಡೆದ ಮೊಬೈಲ್ ಸಮಾವೇಶದ (ಐಎಂಸಿ) ಉದ್ಘಾಟನೆಯ ವೇಳೆ ರಿಮೋಟ್ ಮೂಲಕ ನಿಯಂತ್ರಿಸುವ ಕಾರು ಚಲಾಯಿಸಿದರು –ಪಿಟಿಐ ಚಿತ್ರ

ಅಗ್ಗದ ದರದಲ್ಲಿ ಡೇಟಾ: ಭಾರತವು ಸದ್ಯ ಜಗತ್ತಿನಲ್ಲಿಯೇ ಅತಿ ಅಗ್ಗದ ದರದಲ್ಲಿ ಡೇಟಾ ಸೌಲಭ್ಯ ಹೊಂದಿದೆ. 2014ರಲ್ಲಿ 1ಜಿಬಿ ಡೇಟಾ ದರವು ₹300 ಇತ್ತು. ಈಗ 1ಜಿಬಿ ದರವು ಕೇವಲ ₹10 ಇದೆ. ತಿಂಗಳ ಸರಾಸರಿ ಡೇಟಾ ಬಳಕೆಯು 14 ಜಿಬಿ ಇದೆ. ಡೇಟಾ ಬಳಕೆಯ ವೆಚ್ಚವು ₹4,200 ಇದ್ದಿದ್ದು, ₹125 ರಿಂದ ₹150ಕ್ಕೆ ಇಳಿಕೆ ಆಗಿದೆ ಎಂದು ಅವರು ವಿವರಿಸಿದರು.

ಹಾಲಿ ಇರುವ 4ಜಿ ದರದಲ್ಲಿಯೇ 5ಜಿ ಸೇವೆಗಳು ಲಭ್ಯವಾಗಲಿವೆ. 5ಜಿಗೆ ಸಂಬಂಧಿಸಿದ ಹೊಸ ದರಗಳನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದು ಏರ್‌ಟೆಲ್ ಹೇಳಿದೆ.

ಚಿಪ್ ಪೂರೈಕೆಯಲ್ಲಿ ಸುಧಾರಣೆ: ತಯಾರಿಕೆ ಹೆಚ್ಚಳ

ಹಬ್ಬದ ಋತು: ವಾಹನಕ್ಕೆ ಬೇಡಿಕೆ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಪೂರೈಕೆ ಸಮಸ್ಯೆ ತಗ್ಗಿರುವುದರ ಜೊತೆಗೆ ಹಬ್ಬದ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ದೇಶಿ ಪ್ರಯಾಣಿಕ ವಾಹನಗಳ ಸೆಪ್ಟೆಂಬರ್ ತಿಂಗಳ ಮಾರಾಟವು ಏರಿಕೆ ಕಂಡಿದೆ.

ಸೆಪ್ಟೆಂಬರ್‌ನಲ್ಲಿ 3.55 ಲಕ್ಷ ವಾಹನಗಳು ಮಾರಾಟ ಆಗಿದ್ದು, ಕಳೆದ ವರ್ಷದ ಸೆಪ್ಟೆಂಬರ್‌ಗೆ ಹೋಲಿಸಿದರೆ ಶೇ 91ರಷ್ಟು ಏರಿಕೆ ಕಂಡುಬಂದಿದೆ.

ಮಾರುತಿ ಸುಜುಕಿ ಇಂಡಿಯಾ, ಹುಂಡೈ ಮತ್ತು ಟಾಟಾ ಮೋಟರ್ಸ್ ಸೇರಿದಂತೆ ಪ್ರಮುಖ ಕಂಪನಿಗಳ ಮಾರಾಟದಲ್ಲಿ ಹೆಚ್ಚಳವಾಗಿದೆ.

ಮಾರುತಿ ಸುಜುಕಿ ಇಂಡಿಯಾದ ಪ್ರಯಾಣಿಕ ವಾಹನಗಳ ಮಾರಾಟವು 63,111 ರಿಂದ 1.48 ಲಕ್ಷಕ್ಕೆ ಏರಿಕೆಯಾಗಿದೆ.

42 ತಿಂಗಳುಗಳ ಅವಧಿಯಲ್ಲಿ ಕಂಪನಿಗೆ ಎರಡನೇ ಉತ್ತಮ ತಿಂಗಳು ಇದಾಗಿದೆ ಎಂದು ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

2020ರ ಅಕ್ಟೋಬರ್‌ನಲ್ಲಿ 1.63 ಲಕ್ಷ ವಾಹನಗಳು ಮಾರಾಟ ಆಗಿದ್ದವು ಎಂದು ಅವರು ತಿಳಿಸಿದ್ದಾರೆ.

ಸೆಪ್ಟೆಂಬರ್ ತಿಂಗಳ ಅಂತ್ಯಕ್ಕೆ ಕಂಪನಿಯ ಮಾರುಕಟ್ಟೆ ಷೇರುಪಾಲು ಶೇ 42ರಷ್ಟು ಆಗಿದೆ. 2021ರ ಸೆಪ್ಟೆಂಬರ್‌ಗೆ ಹೋಲಿಸಿದರೆ ಶೇ 7.8ರಷ್ಟು ಏರಿಕೆ ಕಂಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಮಾರಾಟವು 10 ಲಕ್ಷದ ಗಡಿ ದಾಟಿದೆ. ಆರು ತಿಂಗಳ ಅವಧಿಯಲ್ಲಿನ ಮಾರಾಟವು 19.37 ಲಕ್ಷ ತಲುಪಿದೆ ಎಂದಿದ್ದಾರೆ.

ಹುಂಡೈ ಮೋಟರ್ ಇಂಡಿಯಾದ ಮಾರಾಟವು ಶೇ 50ರಷ್ಟು ಹೆಚ್ಚಾಗಿ 49,700ಕ್ಕೆ ತಲುಪಿದೆ.

ಕಳೆದ ಕೆಲವು ತ್ರೈಮಾಸಿಕಗಳಲ್ಲಿ ದೇಶದ ಆರ್ಥಿಕತೆಯು ತೋರಿದ ಬೆಳವಣಿಗೆ ಹಾಗು ಹಬ್ಬದ ಋತುವಿನ ಬೇಡಿಕೆಯು ಮಾರಾಟದಲ್ಲಿ ಹೆಚ್ಚಳಕ್ಕೆ ಕಾರಣವಾಗಿವೆ ಎಂದು ಹುಂಡೈ ಮೋಟರ್ ಇಂಡಿಯಾದ ನಿರ್ದೇಶಕ ತರುಣ್ ಗರ್ಗ್ ಹೇಳಿದ್ದಾರೆ.



ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನ ಮಾರಾಟವು 47,654ಕ್ಕೆ ತಲುಪಿದ್ದು, ತಿಂಗಳೊಂದರ ಗರಿಷ್ಠ ಮಟ್ಟ ಇದಾಗಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ತಿಳಿಸಿದ್ದಾರೆ.

ಹೋಂಡಾ ಕಾರ್ಸ್ ಇಂಡಿಯಾದ ಮಾರಾಟವು ಶೇ 29ರಷ್ಟು ಹೆಚ್ಚಾಗಿ 8,714ಕ್ಕೆ ಏರಿಕೆ ಕಂಡಿದೆ.

ಟೊಯೋಟ ಕಿರ್ಲೋಸ್ಕರ್ ಮೋಟರ್‌ನ ಸಗಟು ಮಾರಾಟವು ಶೇ 66ರಷ್ಟು ಹೆಚ್ಚಾಗಿದೆ. ಸ್ಕೋಡಾ ಆಟೊ ಇಂಡಿಯಾದ ಮಾರಾಟ ಶೇ 17ರಷ್ಟು, ಫೋಕ್ಸ್‌ವ್ಯಾಗನ್ ಪ್ಯಾಸೆಂಜರ್ ಕಾರ್ಸ್ ಇಂಡಿಯಾದ ಮಾರಾಟ ಶೇ 60ರಷ್ಟು ಏರಿಕೆ ಕಂಡಿದೆ.

ದ್ವಿಚಕ್ರ ವಾಹನ: ದ್ವಿಚಕ್ರ ವಾಹನ ವಿಭಾಗದಲ್ಲಿ, ಹೀರೊ ಮೋಟೊಕಾರ್ಪ್ ಕಂಪನಿಯ ಮಾರಾಟವು 5.05 ಲಕ್ಷದಿಂದ 5.07 ಲಕ್ಷಕ್ಕೆ ಅಲ್ಪ ಏರಿಕೆ ಕಂಡಿದೆ.

ಟಿವಿಎಸ್ ಮೋಟರ್ ಕಂಪನಿಯ ಮಾರಾಟವು ಶೇ 16ರಷ್ಟು ಹೆಚ್ಚಾಗಿದ್ದು 2.83 ಲಕ್ಷಕ್ಕೆ ತಲುಪಿದೆ. ರಾಯಲ್ ಎನ್‌ಫೀಲ್ಡ್ ಮಾರಾಟವು ಎರಡು ಪಟ್ಟು ಹೆಚ್ಚಾಗಿದ್ದು 82,097ಕ್ಕೆ ತಲುಪಿದೆ.

ಸುಜುಕಿ ಮೋಟರ್‌ಸೈಕಲ್ ಕಂಪನಿಯ ಒಟ್ಟಾರೆ ಮಾರಾಟ ಶೇ 27.55ರಷ್ಟು ಏರಿಕೆ ಕಂಡು 86,750ಕ್ಕೆ ತಲುಪಿದೆ. ದೇಶಿ ಮಾರಾಟವು 14,738ಕ್ಕೆ ಏರಿಕೆ ಆಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

PROPERTY MANAGER, Security Officer Above 35yrs Walk-in 3rd Oct. 10AM to 3PM. VGP Lake View House, Shanthi Nagar, Nr. Kauveri Hospital, Hosur. 9789754418, 8056119178

Wanted

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620985000, 9620557000, 080-41115200. ಮರಿಟ್ಯಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

ತಕ್ಷಣ ಬೇಕಾಗಿದ್ದಾರೆ: 7th, 8th, 10th, PUC, ITI ಡಿಪ್ಲೋಮಾ ಯಾವುದೇ ಪದವಿ ಪಾಸ್/ ಫೇಲ್ ಹುದ್ದೆಗೆ ನೇರ ನೇಮಕಾತಿ. ಕೂಡಲೇ ಸಂಪರ್ಕಿಸಿ: 9742059574, 7259778101

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್

Agricultural Land

Multiple Locations

ಖರೀದಿಗೆ ಬೇಕಾಗಿದೆ: ಹುಲಿಯಾರ್, ಚಿಕ್ಕನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ 4 ರಿಂದ 6 ಎಕರೆ ಕೃಷಿ ಭೂಮಿ ಸಂಪರ್ಕಿಸಿ: 8861733251

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Out-Station

8300 SQFT KHB alloted commercial site highway facing attached-to highway at Kadur, Sale. 9743535151, 9844811841.

ವೈವಾಹಿಕ

Brides Wanted

Hindu

ವಧು ಬೇಕಾಗಿದ್ದಾರೆ

ಆರ್ಥಿಕವಾಗಿ ಸದೃಢವಾಗಿರುವ ಭಾಗಶಃ ಬುದ್ದಿಮಾಂದ್ಯ 30 ವರ್ಷದ ಹಿಂದು ಯುವಕನಿಗೆ ಹಿಂದು ವಧು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ: 9742265547

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ಮೊಟ್ಟ ಮೊದಲ ಬಾರಿಗೆ A/C ಸ್ಲೀಪರ್ ಕೋಚ್ ಬಸ್/ರೈಲು/ವಿಮಾನದಲ್ಲಿ 6 ದಿನಗಳ ಕಾಶಿ,ಅಲಹಾಬಾದ್ ಗಯಾ,ನೈಮಿಶರಣ್ಯ. 15.10.2022 14.11.2022 ನೇಪಾಳ,ಪೋಕ್ರಾ ಮುಕ್ತಿನಾಥ. 10.10.2022 18.11.2022 ಸೋಮನಾಥ ದ್ವಾರಕ,ಓಂಕಾರೇಶ್ವರ್. 09.11.2022 ಕೊನೆಯ ಚಾರ್ ಧಾಮ್ ಸಮೇತ ಪ್ರವಾಸ. 10.10.2022 ರಾಮೇಶ್ವರ ಮಧುರೈ ಕನ್ಯಾಕುಮಾರ. 06.10.2022 ಪಂಚರಾಮ ಕ್ಷೇತ್ರ ಪ್ರವಾಸ. 11.11.2022 ಅಸ್ಸಾಂ, ಮೇಘಾಲಯಾ ಅರುಣಾಚಲ ಪ್ರವಾಸ 21.11.2022 18.12.2022 ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 26574131 26573421 8317446683

PROPERTY CORNER

ನಿವೇಶನಗಳು ಮಾರಾಟಕ್ಕೆ ಇವೆ

ಭದ್ರಾವತಿ

3000/- ಚ.ಅಡಿ

ಶಿವಮೊಗ್ಗ ಪ್ರಾಧಿಕಾರದಿಂದ ಮಂಜೂರು ಆಗಿರುವ ಈ ಕೆಳಕಂಡ ನಿವೇಶನಗಳು ಮಾರಾಟಕ್ಕೆ ಇವೆ.

ಶಿವಮೊಗ್ಗ–ಭದ್ರಾವತಿ ಬೈಪಾಸ್ ರಸ್ತೆಯ ಹತ್ತಿರ

ವಿಶ್ವೇಶ್ವರಯ್ಯ ಬಡಾವಣೆ ಹೊಸ ಸಿದ್ದಾಪುರ.

ನಿ.ನಂ.	ಒಟ್ಟು ಅಳತೆ	ಪೂ–ಪ	ಉ–ದ
1) 24 (ಪ)	2485'	49.2'	50.5'
2) 52 (ಪ)	1785'	51.8'	34.44'
3) 67 (ಉ)	2796	47.3'	59.0'
4) 73 (ಪೂ)	2546'	64.6'	39.4'

ಸಂಪರ್ಕಿಸಿರಿ: ರಾಜಶೇಖರ ಎನ್ : 9480011169; ಬಿ. ನರಸಿಂಹ : 9945889951

ವಿಮಾನ/ A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ,ಮೌಂಟ್‌ಅಬು ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289 9686721196

16.11.2022 16ದಿನಗಳು ಮಧ್ಯಪ್ರದೇಶ ಗುಜರಾತ್ ರಾಜಸ್ಥಾನ 4ಜ್ಯೋತಿರ್ಲಿಂಗ ಪಂಚದ್ವಾರಕ ಜೋದ್‌ಪುರ, ಪುಷ್ಕರ್‌ಉದಯಪುರ ಜೈಸಲ್ಮೇರ್ ಅಹಮದಾಬಾದ್. ಶ್ರೀಗಂಗಾ ಟೂರಿಸ್ಟ್.ಬೆಂಗಳೂರು: 9480253807, 8105522123

★ಶ್ರೇಯಸ್ ಟೂರ್ಸ್★ 16.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ, 26.10.2022 5ದಿನಗಳು ತಮಿಳುನಾಡು ರಾಜ್ಯಪ್ರವಾಸ ಅಹೋಬಲಂ,ಶ್ರೀಶೈಲಂ ಮಹಾನಂದಿ,ಮಂತ್ರಾಲಯ, 03.11.2022 15ದಿನಗಳು ಅಖಂಡ ಮಧ್ಯಪ್ರದೇಶರಾಜ್ಯ ಪ್ರವಾಸ ಅಮರಕಂಟಕ,ಚಿತ್ರಕೂಟ ಮಯ್ಯಾರ್ ಸಹಿತ, 04.11.2022 13ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ ಕಚ್‌ಬುಜ್ ಸಹಿತ, 24.11.2022,28.11.2022 12/15/21ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 8073824856 9206979202 6366322639

★ಶ್ರೇಯಸ್ ಟೂರ್ಸ್★ ಹಾರ್ನೋಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

AC ಬಸ್ಸಿನಲ್ಲಿ ಊಟ,ರೂಂ ವಸತಿಯೊಂದಿಗೆ 5.10.2022 5ದಿನಗಳು ಮಂತ್ರಾಲಯ ಶ್ರೀಶೈಲಂ,ಮಹಾನಂದಿ, ಅಹೋಬಲಂ,ನವನಾರಸಿಂಹ, ಯಾಗಂಟಿ,ಬೇಲಂಗುಹೆ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500

ಮಾರುತಿ ಟ್ರಾವೆಲ್ಸ್. 1.10.2022 ತಮಿಳುನಾಡು 5 ದಿನಗಳು. 7.10.2022 ಕೇರಳ 5 ದಿನಗಳು. 14.10.2022 ಶಿರಡಿ 5 ದಿನಗಳು. 21.10.2022 ಆಂಧ್ರ- ತೆಲಂಗಾಣ 5 ದಿನಗಳು. 30.10.2022 ಕಾಶಿಯಾತ್ರಾ 14 ದಿನಗಳು. 9916688569

★ಶ್ರೇಯಸ್ ಟೂರ್ಸ್★ 14.10.2022, 18.11.2022 8ದಿನಗಳು ಭೂತಾನ್ ರಾಷ್ಟ್ರ ಪ್ರವಾಸ ತಿಂಪೂ,ಫಾರೋ, ಪುನಕಾ ಪೂಚಲಿಂಗ್ ಗೌಹಾತಿ. 8073824856/ 9206979202/ 6366322639

ಶ್ರೀರಾಜರಾಜೇಶ್ವರಿ ಟೂರ್ಸ್ 9739618243, 9743895346 28.10.2022 12ದಿನ ಈಶಾನ್ಯ ರಾಜ್ಯಗಳು ಅಸ್ಸಾಂ, ಮೇಘಾಲಯ ಅರುಣಾಚಲಪ್ರದೇಶ 18.12.2022 7ದಿನ ಕೇರಳ ಪ್ರವಾಸ

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

	Ordinary	Bold	Ordinary Semi Display	Bold Semi Display
Per word	70	100	80	135
CD Per Sqcm		Single Col 480	Double Col 450	Multi Col 475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

conditions apply*

For More Details Contact:

Ph: 080- 45557160 | 163 | 164 |

9731810277 | 9901641752 | 9845114560 | 9886213331

dhclassifieds@deccanherald.co.in www.dhclassifieds.com

ಜಯ ತಂದಿತ್ತ ಜೆಮಿಮಾ

ಮಹಿಳಾ ಏಷ್ಯಾ ಕಪ್ ಟಿ20: ಲಂಕಾ ಎದುರು ಗೆಲುವು; ಭಾರತ ಶುಭಾರಂಭ

ಸಿಲ್ಹೆಟ್, ಬಾಂಗ್ಲಾದೇಶ (ಪಿಟಿಐ): ಜೆಮಿಮಾ ರಾಡ್ರಿಗಸ್ ಅವರ ಬಿರುಸಿನ ಆಟ ಮತ್ತು ಬೌಲರ್‌ಗಳ ಚುರುಕಿನ ದಾಳಿಯ ನೆರವಿನಿಂದ ಭಾರತ ತಂಡ, ಮಹಿಳಾ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಸಿಲ್ಹೆಟ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗ 41 ರನ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಭಾರತ, ಜೆಮಿಮಾ (76 ರನ್, 53 ಎ., 4X11, 6X1) ಅವರ ಜವಾಬ್ದಾರಿಯುತ ಆಟದ ನೆರವಿನಿಂದ ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗೆ 150 ರನ್ ಗಳಿಸಿತು. ಲಂಕಾ ತಂಡ 18.2 ಓವರ್‌ಗಳಲ್ಲಿ 109 ರನ್‌ಗಳಿಗೆ ಆಲೌಟಾಯಿತು.

ಸವಾಲಿನ ಗುರಿ ಬೆನ್ನಟ್ಟಿದ ಚಾಮರಿ ಅಟಪಟ್ಟು ಬಳಗದವರು ಡಿ.ಹೇಮಲತಾ, ದೀಪ್ತಿ ಶರ್ಮಾ ಮತ್ತು ಪೂಜಾ ವಸ್ತ್ರಕರ್ ಅವರ ಶಿಸ್ತಿನ ದಾಳಿಯ ಮುಂದೆ ಪರದಾಡಿದರು. ಹರ್ಷಿಕಾ ಸಮರವಿಕ್ರಮ (26) ಮತ್ತು ಹಸಿನಿ ಪೆರೇರಾ (30) ಮಾತ್ರ ಅಲ್ಪ ಪ್ರತಿರೋಧ ತೋರಿದರು.

61 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್ ಕಳೆದುಕೊಂಡ ಲಂಕಾ ತಂಡಕ್ಕೆ ಆ ಬಳಿಕ ಚೇತರಿಸಿಕೊಳ್ಳಲು ಆಗಲಿಲ್ಲ. ಮೂರು ಮಂದಿ ಮಾತ್ರ ಎರಡಂಕಿಯ ಮೊತ್ತ ತಲುಪಿದರು.

ಜೆಮಿಮಾ ರಾಡ್ರಿಗಸ್ ಬ್ಯಾಟಿಂಗ್ ವೈಖರಿ –ಬಿಸಿಸಿಐ ಟ್ವಿಟರ್ ಚಿತ್ರ

ಜೆಮಿಮಾ ಅರ್ಧಶತಕ: ಭಾರತ ತಂಡದ ಆರಂಭ ಉತ್ತಮವಾಗಿರಲಿಲ್ಲ. ಶಫಾಲಿ ವರ್ಮಾ (10) ಮತ್ತು ಸ್ಮೃತಿ ಮಂದಾನ (6) ಅವರು ತಂಡದ ಮೊತ್ತ 23 ಆಗುವಷ್ಟರಲ್ಲಿ ಪೆವಿಲಿಯನ್‌ಗೆ ಮರಳಿದ್ದರು.

ಆದರೆ ಜೆಮಿಮಾ ಮತ್ತು ನಾಯಕಿ ಹರ್ಮನ್‌ಪ್ರೀತ್ (33 ರನ್, 30 ಎ.) ಮೂರನೇ ವಿಕೆಟ್‌ಗೆ 71 ಎಸೆತಗಳಲ್ಲಿ 92 ರನ್ ರನ್ ಸೇರಿಸಿ ತಂಡವನ್ನು ಉತ್ತಮ ಮೊತ್ತದತ್ತ ಮುನ್ನಡೆಸಿದರು.

ಮುಖ್ಯಾಂಶಗಳು

- ಶ್ರೀಲಂಕಾ ವಿರುದ್ಧ 41 ರನ್ ಗೆಲುವು
- 53 ಎಸೆತಗಳಲ್ಲಿ 76 ರನ್ ಗಳಿಸಿದ ಜೆಮಿಮಾ
- ಹೇಮಲತಾ, ದೀಪ್ತಿ ಚುರುಕಿನ ದಾಳಿ

ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ವಾಪಸಾಗಿರುವ ಜೆಮಿಮಾ, ಎದುರಾಳಿ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿದರು. ಟಿ20 ಪಂದ್ಯದಲ್ಲಿ ತಮ್ಮ ವೈಯಕ್ತಿಕ ಶ್ರೇಷ್ಠ ಮೊತ್ತ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 150 (ಜೆಮಿಮಾ ರಾಡ್ರಿಗಸ್ 76, ಹರ್ಮನ್‌ಪ್ರೀತ್ ಕೌರ್ 33, ಡಿ.ಹೇಮಲತಾ ಔಟಾಗದೆ 13, ಒಶಾದಿ ರಣಸಿಂಘೆ 32ಕ್ಕೆ 3, ಚಾಮರಿ ಅಟಪಟ್ಟು 8ಕ್ಕೆ 1, ಸುಗಂಧಿಕಾ ಕುಮಾರಿ 26ಕ್ಕೆ 1). ಶ್ರೀಲಂಕಾ 18.2 ಓವರ್‌ಗಳಲ್ಲಿ 109 (ಹರ್ಷಿಕಾ ಸಮರವಿಕ್ರಮ 26, ಹಸಿನಿ ಪೆರೇರಾ 30, ಒಶಾದಿ ರಣಸಿಂಘೆ 11, ಡಿ.ಹೇಮಲತಾ 15ಕ್ಕೆ 3, ದೀಪ್ತಿ ಶರ್ಮಾ 15ಕ್ಕೆ 2, ಪೂಜಾ ವಸ್ತ್ರಕರ್ 12ಕ್ಕೆ 2) ಫಲಿತಾಂಶ: ಭಾರತಕ್ಕೆ 41 ರನ್‌ಗಳ ಗೆಲುವು

ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಟಿ20 ಇಂದು; ಬೌಲಿಂಗ್ ಪಡೆಗೆ ಪರೀಕ್ಷೆ

ಭಾರತಕ್ಕೆ ಸರಣಿ ಜಯದ ತವಕ

ಗುವಾಹಟಿ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ಇಲ್ಲದ ಬೌಲಿಂಗ್ ಪಡೆಯನ್ನು ಸಮತೋಲನಗೊಳಿಸುವ ಸವಾಲು ರೋಹಿತ್ ಶರ್ಮಾ ನಾಯಕತ್ವದ ಭಾರತ ಕ್ರಿಕೆಟ್ ಬಳಗದ ಮುಂದಿದೆ.

ಅಸ್ಸಾಂ ರಾಜಧಾನಿಯ ಬರ್ಸಾಪುರದಲ್ಲಿರುವ ಡಾ.ಭೂಪೆನ್ ಹಜಾರಿಕಾ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಎರಡನೇ ಟಿ20 ಪಂದ್ಯವನ್ನು ಗೆದ್ದು ಸರಣಿ ಕೈವಶ ಮಾಡಿಕೊಳ್ಳುವ ಛಲದಲ್ಲಿರುವ ಆತಿಥೇಯರು ಬೌಲಿಂಗ್ ವಿಭಾಗದಲ್ಲಿ ಕೆಲವು ಪ್ರಯೋಗಗಳಿಗೆ ಮುಂದಾಗುವುದು ಖಚಿತ.

ತಿರುವನಂತಪುರದಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಆರ್ಷದೀಪ್ ಸಿಂಗ್ ಒಂದೇ ಓವರ್‌ನಲ್ಲಿ ಮೂರು ವಿಕೆಟ್ ಗಳಿಸಿ ದಕ್ಷಿಣ ಆಫ್ರಿಕಾ ಬಳಗಕ್ಕೆ ಬಲವಾದ ಪೆಟ್ಟುಕೊಟ್ಟಿದ್ದರು. ಮೊದಲು ಬ್ಯಾಟಿಂಗ್ ಮಾಡಿದ್ದ ಪ್ರವಾಸಿ ಬಳಗವು ಸಣ್ಣ ಮೊತ್ತ ಗಳಿಸಿತ್ತು. ಸೂರ್ಯಕುಮಾರ್ ಯಾದವ್ ಹಾಗೂ ಕೆ.ಎಲ್. ರಾಹುಲ್ ಅಜೇಯ ಅರ್ಧ ಶತಕಗಳಿಂದಾಗಿಗೆಲುವುಸುಲಭವಾಗಿತ್ತು.

ತಿರುವನಂತಪುರ ಪಂದ್ಯಕ್ಕೂ ಮುನ್ನವೇ ವೇಗಿ ಜಸ್‌ಪ್ರೀತ್ ಬೂಮ್ರಾ ಬೆನ್ನುನೋವಿನಿಂದಾಗಿ ಹೊರಗುಳಿದಿದ್ದರು. ನಂತರ ವೈದ್ಯಕೀಯ ತಂಡವು ಅವರಿಗೆ ಆರು ತಿಂಗಳ ವಿಶ್ರಾಂತಿ ಅಗತ್ಯವಿರುವುದಾಗಿ ತಿಳಿಸಿತ್ತು. ಇದರಿಂದಾಗಿ ಅವರು ಮುಂದಿನ ತಿಂಗಳು ಟಿ20 ವಿಶ್ವಕಪ್‌ನಲ್ಲಿ ಆಡುವುದಿಲ್ಲವೆಂದು ಬಿಸಿಸಿಐ ಮೂಲಗಳೇ ತಿಳಿಸಿದ್ದವು.

ಇದರಿಂದಾಗಿ ಆಸ್ಟ್ರೇಲಿಯಾಗೆ ತೆರಳುವ ಮುನ್ನ ಉಳಿದಿರುವ ಎರಡು ಟಿ20 ಪಂದ್ಯಗಳಲ್ಲಿ ಬೂಮ್ರಾ ಹೊಣೆಯನ್ನು ನಿಭಾಯಿಸುವ ಬೌಲರ್‌ಗಾಗಿ ಶೋಧ ನಡೆದಿದೆ. ಆರ್ಷದೀಪ್ ಜೊತೆಗೆ ಹರ್ಷಲ್ ಪಟೇಲ್, ದೀಪಕ್ ಚಾಹರ್ ಅವರ ಮೇಲೂ ಕಣ್ಣಿದೆ. ಈ ಪಂದ್ಯದಲ್ಲಿ ಮೊಹಮ್ಮದ್ ಸಿರಾಜ್ ಕಣಕ್ಕಿಳಿಯುವುದು ಬಹುತೇಕ ಖಚಿತ. ಉಮೇಶ್ ಯಾದವ್ ಅವರಿಗೆ ಅವಕಾಶ ಸಿಗುವುದು ಅನುಮಾನ.

ದುರ್ಗಾ ಪೂಜೆಯ ಸಂಭ್ರಮ, ಸಡಗರಗಳು ಮನೆ ಮಾಡಿರುವ ಗುವಾಹಟಿಯಲ್ಲಿ ಸಿಕ್ಸರ್, ಬೌಂಡರಿಗಳ ಚಿತ್ತಾರ ಬಿಡಿಸಲು ಸೂರ್ಯ ತುದಿಗಾಲಿನಲ್ಲಿ ನಿಂತಿದ್ದಾರೆ. ವಿರಾಟ್, ರೋಹಿತ್, ರಿಷಭ್ ಹಾಗೂ ದಿನೇಶ್ ಕೂಡ ತಮ್ಮ ಬ್ಯಾಟಿಂಗ್ ಬಲ ತೋರುವ ವಿಶ್ವಾಸದಲ್ಲಿದ್ದಾರೆ.

ಸರಣಿ ಗೆಲುವಿನ ಆಸೆ ಜೀವಂತವಾಗುಳಿಯಬೇಕಾದರೆ ದಕ್ಷಿಣ ಆಫ್ರಿಕಾ ತಂಡವು ಈ ಪಂದ್ಯದಲ್ಲಿ ಜಯಿಸಲೇಬೇಕಾದ ಒತ್ತಡದಲ್ಲಿದೆ. ತೆಂಬಾ ಬವುಮಾ ಬಳಗವು ಉತ್ತಮ ಸಮತೋಲನದಿಂದ ಕೂಡಿದೆ. ಅನುಭವಿ ಕಗಿಸೊ ರಬಾಡ, ಲುಂಗಿ ಗಿಡಿ ಹಾಗೂ ಎನ್ರಿಚ್ ನಾಕಿಯಾ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಸ್ಫೋಟಕ ಶೈಲಿಯ ಬ್ಯಾಟರ್ ಡೇವಿಡ್ ಮಿಲ್ಲರ್, ಕ್ವಿಂಟನ್ ಡಿಕಾಕ್ ಹಾಗೂ ಏಡನ್ ಮರ್ಕರಂ ಅವರು ಮಿಂಚಿದರೆ ಭಾರತದ ಬೌಲರ್‌ಗಳಿಗೆ ಕಠಿಣವಾಗಬಹುದು.

ಸೂರ್ಯಕುಮಾರ್ ಯಾದವ್ ತಾಲೀಮು –ಪಿಟಿಐ ಚಿತ್ರಗಳು

ಕಗಿಸೊ ರಬಾಡ

ಟಿಕೆಟ್ ಸೋಲ್ಡ್ ಔಟ್

ಎರಡು ವರ್ಷಗಳ ನಂತರ ಇಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ ನಡೆಯುತ್ತಿರುವುದರಿಂದ ವೀಕ್ಷಣೆಗೆ ಅಭಿಮಾನಿಗಳು ಮುಗಿಬಿದ್ದಿದ್ದಾರೆ. ಎಲ್ಲ ಟಿಕೆಟ್‌ಗಳೂ ಮಾರಾಟವಾಗಿವೆ.

‘38 ಸಾವಿರ ಆಸನ ಸಾಮರ್ಥ್ಯವಿರುವ ಕ್ರೀಡಾಂಗಣದಲ್ಲಿ 21,200 ಟಿಕೆಟ್‌ಗಳನ್ನು ಸಾರ್ವಜನಿಕರಿಗೆ ನೀಡಲಾಗಿದೆ. ಉಳಿದದ್ದು ಕ್ಲಬ್‌ಗಳು, ಗಣ್ಯರು, ಪದಾಧಿಕಾರಿಗಳಿಗಾಗಿ ಮೀಸಲಾಗಿವೆ. ಜನರಿಂದ ಅಪಾರ ಬೇಡಿಕೆ ಬಂದಿದೆ’ ಎಂದು ಅಸ್ಸಾಂ ಕ್ರಿಕೆಟ್ ಸಂಸ್ಥೆ ಮೂಲಗಳು ತಿಳಿಸಿವೆ.

ಪಿಚ್ ಪರಿಸ್ಥಿತಿ?

ಇಲ್ಲಿ ಈ ಹಿಂದೆ ನಡೆದಿರುವ ಐದು ಪಂದ್ಯಗಳಲ್ಲಿ ಬೃಹತ್ ಮೊತ್ತಗಳು ದಾಖಲಾಗಿಲ್ಲ. 160 ರನ್ ಇಲ್ಲಿ ದಾಖಲಾಗಿರುವ ಗರಿಷ್ಠ ಮೊತ್ತವಾಗಿದೆ. ಬೌಲರ್‌ಗಳಿಗೇ ಹೆಚ್ಚು ನೆರವು ಸಿಗುವ ಸಾಧ್ಯತೆ ಇದೆ.

ಭಾನುವಾರ ಮಧ್ಯಾಹ್ನ ಮಳೆಯಾಗುವ ಸಾಧ್ಯತೆಯೂ ಇದೆ ಎಂದು ಹವಾಮಾನ ವರದಿಗಳು ತಿಳಿಸಿವೆ.

5 ಆಟಗಳಿಗೆ ಗ್ರಾಮೀಣ ಕ್ರೀಡೆ ಮಾನ್ಯತೆ: ಬೊಮ್ಮಾಯಿ

ಬೆಂಗಳೂರು: ‘ಐದು ಆಟಗಳನ್ನು ಅಧಿಕೃತವಾಗಿ ಗ್ರಾಮೀಣ ಕ್ರೀಡೆಗಳೆಂದು ಗುರುತಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ಉತ್ತರ ಜಿಲ್ಲೆಯ ಕಿಸಾನ್ ಮೋರ್ಚಾದಿಂದ ಮಲ್ಲೇಶ್ವರದ ಚಂದ್ರಶೇಖರ್ ಆಜಾದ್ ಆಟ ಮೈದಾನದಲ್ಲಿ ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರ 72ನೇ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ‘ನಮೋ ಕಿಸಾನ್ ಕಪ್’ಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಕಬಡ್ಡಿ, ಕೊಕ್ಕೊ, ಕುಸ್ತಿ, ಕಂಬಳ ಹಾಗೂ ಎತ್ತಿನಗಾಡಿ ಓಟದ ಸ್ಪರ್ಧೆಗಳನ್ನು ಗ್ರಾಮೀಣ ಕ್ರೀಡೆಗಳ ಪಟ್ಟಿಗೆ ಸೇರಿಸಲಾಗಿದೆ. ಈ ಕ್ರೀಡೆಗಳಿಗೆ ಉತ್ತೇಜನ ನೀಡಲು ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿಯಿಂದ ಅನುದಾನ ಸಹ ನೀಡಲಾಗುವುದು’ ಎಂದರು.

ಪುರುಷರ ವಿಭಾಗದ ಮೊದಲ ಕಬಡ್ಡಿ ಪಂದ್ಯದಲ್ಲಿ ಬ್ಯಾಟರಾಯನಪುರ ವಿರುದ್ಧ ಮಲ್ಲೇಶ್ವರ ತಂಡವು ಗೆಲುವು ಸಾಧಿಸಿತು. ಮಹಿಳಾ ವಿಭಾಗದಲ್ಲಿ ಕೆ.ಆರ್. ಪುರಂ ವಿರುದ್ಧ ಯಶವಂತಪುರ ತಂಡವು ಜಯಿಸಿತು.

ಸಂಕ್ಷಿಪ್ತ ಸುದ್ದಿ

ಬ್ಯಾಸ್ಕೆಟ್‌ಬಾಲ್: ಎಚ್‌ಬಿಆರ್‌ಗೆ ಭರ್ಜರಿ ಜಯ

ಬೆಂಗಳೂರು: ಎಚ್‌ಬಿಆರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ರಾಜ್ಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾದ ಚಾಂಪಿಯನ್‌ಷಿಪ್‌ನ ಹಣಾಹಣಿಯಲ್ಲಿ ಎಚ್‌ಬಿಆರ್ 63–39ರಿಂದ ಅಪ್ಪಯ್ಯ ಬಿ.ಸಿ. ಎದುರು ಗೆದ್ದಿತು. ಸಂಕೇತ್ 16 ಮತ್ತು ಪ್ರಥಮ್ 10 ಪಾಯಿಂಟ್ಸ್ ಕಲೆಹಾಕಿದರು. ಬಾಲಕರ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ ಭಾರತ್ ಎಸ್‌ಯು 59–44ರಿಂದ ರಾಜ್‌ಕುಮಾರ್ ಬಿ.ಸಿ. ವಿರುದ್ಧ, ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ 52–32ರಿಂದ ಮೌಂಟ್ಸ್ ಕ್ಲಬ್ ಎದುರು ಜಯ ಸಾಧಿಸಿದವು.

ಬಾಲಕಿಯರ ವಿಭಾಗದಲ್ಲಿ ಪಿಪಿಸಿ 45–22ರಿಂದ ವೈಎಂಎಂಎ ಎದುರು ಗೆದ್ದರೆ, ಕೋರಮಂಗಲ ಎಸ್‌ಸಿ 51–22ರಿಂದ ಎಂಎನ್‌ಕೆ ರಾವ್ ಪಾರ್ಕ್ ವಿರುದ್ಧ ಜಯ ಸಾಧಿಸಿದವು.

ನಾಕೌಟ್‌ಗೆ ಪಂಕಜ್

ಪಂಕಜ್

ಕ್ವಾಲಾಲಂಪುರ (ಪಿಟಿಐ): ಭಾರತದ ಪಂಕಜ್ ಅಡ್ವಾಣಿ ಅವರು ವಿಶ್ವ 6–ರೆಡ್ ಸ್ನೂಕರ್ ಚಾಂಪಿಯನ್‌ಷಿಪ್‌ನ ನಾಕೌಟ್ ಹಂತಕ್ಕೆ ಲಗ್ಗೆಯಿಟ್ಟರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಗುಂಪು ಹಂತದ ಮೊದಲ ಪಂದ್ಯದಲ್ಲಿ ಪಂಕಜ್ 4–0ಯಿಂದ ಲಿಬಿಯಾದ ಮೊಹಮ್ಮದ್ ಇಮೀಶ್ ಅವರನ್ನು ಪರಾಭವಗೊಳಿಸಿದರು. ಬಳಿಕ 4–1ರಿಂದ ಮಂಗೋಲಿಯಾದ ಎಂಕ್‌ತುವಿಷಿನ್ ಬಾತೊಚಿರ್ ಎದುರು ಗೆದ್ದರು. ಅಂತಿಮ ಪಂದ್ಯದಲ್ಲಿ ಪಂಕಜ್ 4–2ರಿಂದ ಮಲೇಷ್ಯಾದ ಲೊಹ್ ಚುಂಗ್ ಲಿಯೊಂಗ್ ಅವರನ್ನು ಸೋಲಿಸಿದರು.

ರಾಷ್ಟ್ರೀಯ ಕ್ರೀಡಾಕೂಟ: ಅಮ್ಲನ್, ಜ್ಯೋತಿ ವೇಗಿಗಳು

ಪೋಲ್‌ವಾಲ್ಟ್: ರೋಸಿ ದಾಖಲೆ

ಗಾಂಧಿನಗರ (ಪಿಟಿಐ): ತಮಿಳುನಾಡಿನ ರೋಸಿ ಮೀನಾ ಪಾಲ್‌ರಾಜ್ ಅವರು ರಾಷ್ಟ್ರೀಯ ಕ್ರೀಡಾಕೂಟದ ಮಹಿಳೆಯರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ ನೂತನ ರಾಷ್ಟ್ರೀಯ ದಾಖಲೆ ಸ್ಥಾಪಿಸಿದರು.

ಶನಿವಾರ ನಡೆದ ಸ್ಪರ್ಧೆಯಲ್ಲಿ ಅವರು 4.20 ಮೀ. ಎತ್ತರ ಜಿಗಿಯಲು ಯಶಸ್ವಿಯಾದರು. ಈ ಮೂಲಕ ವಿ.ಎಸ್.ಸುರೇಖಾ 2014 ರಲ್ಲಿ ಸ್ಥಾಪಿಸಿದ್ದ ದಾಖಲೆ (4.15 ಮೀ.) ಮುರಿದರು. ತಮಿಳುನಾಡಿನವರೇ ಆದ ಪವಿತ್ರಾ ವೆಂಕಟೇಶ್ (4 ಮೀ.) ಮತ್ತು ಭರಣಿಕ ಇಳಂಗೋವನ್ (3.90 ಮೀ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು.

ಜೆಸ್ವಿನ್‌ಗೆ ಚಿನ್ನ: ಸಾಕಷ್ಟು ರೋಚಕತೆಯಿಂದ ಕೂಡಿದ್ದ ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಜೆಸ್ವಿನ್ ಆಲ್ಡ್ರಿನ್ ಚಿನ್ನ ಜಯಿಸಿದರು. 8.26 ಮೀ. ದೂರ ಜಿಗಿದ ಅವರು 2023ರ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೂ ಅರ್ಹತೆ ಪಡೆದರು.

ಬರ್ಮಿಂಗ್‌ಹ್ಯಾಂ ಕಾಮನ್‌ವೆಲ್ತ್ ಕೂಟದ ಬೆಳ್ಳಿ ಪದಕ ವಿಜೇತ ಕೇರಳದ ಮುರಳಿ ಶ್ರೀಶಂಕರ್ 7.93 ಮೀ. ಸಾಧನೆಯೊಂದಿಗೆ ಎರಡನೇ ಸ್ಥಾನ ಪಡೆದರೆ, ಮೊಹಮ್ಮದ್ ಅನೀಸ್ ಯಹ್ಯಾ (7.92 ಮೀ.) ಮೂರನೆಯವರಾದರು.

ಅಮ್ಲನ್, ಜ್ಯೋತಿ ವೇಗಿಗಳು: ಅಸ್ಸಾಂನ ಅಮ್ಲನ್ ಬೊರ್ಗೊಹೈನ್ ಮತ್ತು ಆಂಧ್ರ ಪ್ರದೇಶದ ಜ್ಯೋತಿ ಯರ್ರಾಜಿ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ 100 ಮೀ. ಓಟದಲ್ಲಿ ಚಿನ್ನ ಗೆದ್ದು, ‘ವೇಗದ ರಾಜ–ರಾಣಿ’ ಎನಿಸಿಕೊಂಡರು.

ಟ್ರ್ಯಾಕ್‌ನಲ್ಲಿ ಮಿಂಚು ಹರಿಸಿದ ಜ್ಯೋತಿ ಅವರು ದ್ಯುತಿ ಚಾಂದ್ ಮತ್ತು ಹಿಮಾ ದಾಸ್ ಅವರಂತಹ ಖ್ಯಾತ ಅಥ್ಲೀಟ್‌ಗಳನ್ನು ಹಿಂದಿಕ್ಕಿ 11.51 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ತಮಿಳುನಾಡಿನ ಅರ್ಚನಾ ಸುಶೀಂದ್ರನ್ (11.55 ಸೆ.) ಮತ್ತು ಮಹಾರಾಷ್ಟ್ರದ ಡಯಾಂಡ್ರ ವಲಡರೆಸ್ (11.62 ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡರು.

100 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ದ್ಯುತಿ (11.69 ಸೆ.) ಆರನೇ ಸ್ಥಾನ ಪಡೆದರೆ, ಹಿಮಾ (11.74 ಸೆ.) ಏಳನೇ ಸ್ಥಾನ ಗಳಿಸಿದರು.

ಪುರುಷರ ವಿಭಾಗದಲ್ಲಿ ಬೊರ್ಗೊಹೈನ್ 10.38 ಸೆ.ಗಳಲ್ಲಿ ಗುರಿ ತಲುಪಿದರು. ತಮಿಳುನಾಡಿನ ವಿ.ಕೆ. ಇಳಕಿಯದಾಸನ್ (10.44 ಸೆ.) ಮತ್ತು ಬಿ.ಶಿವಕುಮಾರ್ ಅವರು ಕ್ರಮವಾಗಿ ಎರಡು ಹಾಗೂ 3ನೇ ಸ್ಥಾನ ಪಡೆದರು.

ಟೆನಿಸ್ ಟೂರ್ನಿಯ ತಂಡ ವಿಭಾಗದಲ್ಲಿ ಕಂಚು ಗೆದ್ದ ಕರ್ನಾಟಕ ಮಹಿಳಾ ತಂಡದವರು ಸಂಭ್ರಮಿಸಿದರು

ಟೆನಿಸ್: ಕರ್ನಾಟಕ ತಂಡಗಳು ಸೆಮಿಗೆ

ಕರ್ನಾಟಕದ ಪುರುಷ ಮತ್ತು ಮಹಿಳಾ ತಂಡಗಳು ರಾಷ್ಟ್ರೀಯ ಕ್ರೀಡಾಕೂಟದ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿ ಪದಕ ಖಚಿತಪಡಿಸಿಕೊಂಡವು.

ಶನಿವಾರ ನಡೆದ ಪುರುಷರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ಆದಿಲ್ ಕಲ್ಯಾಣಪುರ್ ಮತ್ತು ಎಸ್.ಡಿ.ಪ್ರಜ್ವಲ್ ದೇವ್ 3–6, 6–3, 10–2 ರಲ್ಲಿ ಮಹಾರಾಷ್ಟ್ರದ ಅರ್ಜುನ್ ಖಾಡೆ– ಅನ್ವಿತ್ ವಿರುದ್ಧ ಪ್ರಯಾಸದಿಂದ ಗೆದ್ದರು.

ಮಹಿಳೆಯರ ಡಬಲ್ಸ್‌ನಲ್ಲಿ ಸೋಹಾ ಸಾದಿಕ್– ಶರ್ಮದಾ ಬಾಲು ಜೋಡಿ 6–1, 6–3 ರಲ್ಲಿ ತೆಲಂಗಾಣದ ಪಾವನಿ ಪಾಠಕ್– ಅಭಯಾ ವೇಮುರಿ ಅವರನ್ನು ಮಣಿಸಿತು. ತಂಡ ವಿಭಾಗದಲ್ಲಿ ಕರ್ನಾಟಕದ ಪುರುಷರು ಮತ್ತು ಮಹಿಳೆಯರು ಕಂಚಿನ ಪದಕ ಗೆದ್ದುಕೊಂಡರು.

36th NATIONAL GAMES GUJARAT 2022 Celebrating Unity Through Sports

ಟಿಟಿ: ಭಾರತ ಮಹಿಳೆಯರಿಗೆ ನಿರಾಸೆ

ಚೆಂಗ್ಡು, ಚೀನಾ (ಪಿಟಿಐ): ಭಾರತ ಮಹಿಳಾ ಟೇಬಲ್ ಟೆನಿಸ್ ತಂಡದವರು ಇಲ್ಲಿ ಆರಂಭವಾದ ಐಟಿಟಿಎಫ್ ವಿಶ್ವ ತಂಡ ಚಾಂಪಿಯನ್‌ಷಿಪ್‌ನಲ್ಲಿ ಜರ್ಮನಿ ಎದುರು 2–3ರಲ್ಲಿ ಸೋತರು. ಪುರುಷರು 3–0ರಲ್ಲಿ ಉಜ್ಬೆಕಿಸ್ತಾನ ಎದುರು ಗೆದ್ದು ಶುಭಾರಂಭ ಮಾಡಿದರು.

ಮಣಿಕಾ ಬಾತ್ರಾ ತಮ್ಮ ಎರಡೂ ಸಿಂಗಲ್ಸ್ ಪಂದ್ಯಗಳಲ್ಲಿ ಕ್ರಮವಾಗಿ ಯಿಂಗ್ ಹಾನ್ ಮತ್ತು ನಿನಾ ಮಿಟೆಲ್ಹಂ ಎದುರು ಪರಾಭವಗೊಂಡರು.

ಶ್ರೀಜಾ ಅಕುಲಾ ತಮ್ಮ ಮೊದಲ ಸಿಂಗಲ್ಸ್‌ನಲ್ಲಿ ಮಿಟೆಲ್ಹಂ ವಿರುದ್ಧ ಗೆದ್ದರೆ, ಎರಡನೆಯದ್ದರಲ್ಲಿ ಹಾನ್ ಎದುರು ಸೋತರು. ಮತ್ತೊಂದು ಸಿಂಗಲ್ಸ್‌ನಲ್ಲಿ ದಿಯಾ ಚಿತಳೆ ಗೆಲುವು ಸಾಧಿಸಿದರು. ಪುರುಷರ ವಿಭಾಗದಲ್ಲಿ ಭಾರತಕ್ಕೆ ಉಜ್ಬೆಕಿಸ್ತಾನ ಸಾಟಿಯಾಗಲಿಲ್ಲ.

ಬೂಮ್ರಾ ಫಿಟ್: ದ್ರಾವಿಡ್ ನಿರೀಕ್ಷೆ

ಗುವಾಹಟಿ (ಪಿಟಿಐ): ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಮುಂದಿನ ತಿಂಗಳು ಟಿ20 ವಿಶ್ವಕಪ್ ಟೂರ್ನಿಯ ವೇಳೆಗೆ ‘ಫಿಟ್’ ಆಗಬಹುದು ಎಂದು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಭರವಸೆ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ಸದ್ಯ ಅವರು ದಕ್ಷಿಣ ಆಫ್ರಿಕಾ ಸರಣಿಯಿಂದ ಹೊರಬಿದ್ದಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನೂ ಕಾದು ನೋಡಬೇಕಿದೆ. ಅವರ ಫಿಟ್‌ನೆಸ್ ಕುರಿತು ಅಧಿಕೃತ ಮಾಹಿತಿ ಬಂದ ಮೇಲಷ್ಟೇ ವಿಶ್ವಕಪ್‌ಗೆ ಲಭ್ಯತೆ ಬಗ್ಗೆ ಹೇಳಲು ಸಾಧ್ಯ’ ಎಂದರು.

ಹೈದರಾಬಾದ್ ಡರ್ಬಿ

ಅಶ್ವ ಮಗಧೀರ ಗೆಲ್ಲುವ ನಿರೀಕ್ಷೆ

ಕೋರಮಂಡಲ್ ಗ್ರೋಮೋರ್ ಡೆಕ್ಕನ್ ಡರ್ಬಿ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶ್ವ ಮಗಧೀರ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.40 ರಿಂದ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ನೈಟ್ ಟೆಂಪ್ಲಾರ್ 2, ಸ್ಟ್ರಾಮ್‌ಜೆಟ್ 3, ಸೂಪರ್ ಏಂಜಲ್ 6
2ನೇ ರೇಸ್: ಮೂಎಸರ್ 2, ಅಬ್ರ ವಾಹೆಡ್ ಅಬ್ರ 4, ಡಟ್ಸ್ ಮೈ ವೇ 5
3ನೇ ರೇಸ್: ಎಲ್ಯೂಸಿವ್ 5, ಹಾಟ್ ಸೀಟ್ 4, ಕಾರ್ಲಿಸಲ್ 3
4ನೇ ರೇಸ್: ಬಲ್ಲೆರಿನಾ 3, ಬ್ಲಾಕ್ ಒನೈಕ್ಸ್ 7, ಬೆಲ್ಲಾಜಿಯೊ 9
5ನೇ ರೇಸ್: ಫಾಲ್ಕನ್ ಎಡ್ಜ್ 1, ಸ್ಟನ್ನಿಂಗ್ ಫೋರ್ಸ್ 6, ಎಕ್ಸ್‌ಫಿನಿಟ 3
6ನೇ ರೇಸ್: ಆರ್ಥರ್ 6, ಅಶ್ವ ರಾಡೀ 1, ಅಕಿಡೊ 5
7ನೇ ರೇಸ್: ಅಶ್ವ ಮಗಧೀರ 1, ಸಲೆಂಟೋ 3, ಶಬೆಲ್ಲೆ 7
8ನೇ ರೇಸ್: ಫ್ಲೈಟುದಿ ಸ್ಟಾರ್ಸ್ 8, ಡೋಯ್ ಎ ಡೀರ್ 5, ಪೆಡ್ರೋ ಪ್ಲಾನೆಟ್ 6

ಉತ್ತಮ ಬೆಟ್: ನೈಟ್ ಟೆಂಪ್ಲಾರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಕರ್ನಾಟಕ ರಾಜ್ಯಪಾಲರ ಸಚಿವಾಲಯ

ರಾಜಭವನ, ಬೆಂಗಳೂರು–560 001.

ಸಂಖ್ಯೆ: ಜಿಎಸ್ 28 ಕೆಒಎಂ 2022 | ದಿನಾಂಕ: 30.09.2022

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಹತೆಯುಳ್ಳ ಪ್ರಾಧ್ಯಾಪಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ವಿಶ್ವವಿದ್ಯಾಲಯ ಧನ ಸಹಾಯಗಳ ಆಯೋಗದ ಮಾರ್ಗಸೂಚಿಗಳು ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ, 1992 ರನ್ವಯ ಕನಿಷ್ಠ 10 ವರ್ಷಗಳ ಕಾಲ ಪ್ರಾಧ್ಯಾಪಕರ ಅಥವಾ ತತ್ಸಮಾನ ಹುದ್ದೆಯ ಕಾರ್ಯಾನುಭವ ಹೊಂದಿರತಕ್ಕದ್ದು ಹಾಗೂ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವ ಇತ್ಯಾದಿ ವಿವರಗಳೊಂದಿಗೆ ವೆಬ್‌ಸೈಟ್ www.ksoumysuru.ac.in ನಲ್ಲಿ ಲಭ್ಯವಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಸ್ವಯಂಘೋಷಣೆಯೊಂದಿಗೆ “ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ಪಿ.ಬಿ. ನಂ. 5033, ರಾಜಭವನ, ಬೆಂಗಳೂರು–560 001” ಇವರಿಗೆ ದಿನಾಂಕ 27.10.2022ರ ಸಂಜೆ 5.30ರೊಳಗೆ ತಲುಪುವಂತೆ ನಾಲ್ಕು ಪ್ರತಿಗಳಲ್ಲಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಹಾಗೂ ಅರ್ಜಿಯ soft copy ಅನ್ನು email ಮೂಲಕ us.university.rb@karnataka.gov.in ಗೆ ಕಳುಹಿಸುವುದು.

ಸಹಿ/–
(ಆರ್. ಪ್ರಭುಶಂಕರ್)
ರಾಜ್ಯಪಾಲರ ವಿಶೇಷ ಕಾರ್ಯದರ್ಶಿ

ವಾ.ಸಾ.ಸಂ.ಇ/ವಾಪ್ರ/2472/ಆಕಾರ/22–23

ಇರಾನಿ ಟ್ರೋಫಿ: ಸರ್ಫರಾಜ್ ಶತಕ; ರೆಸ್ಟ್ ಆಫ್ ಇಂಡಿಯಾಕ್ಕೆ ಇನಿಂಗ್ಸ್ ಮುನ್ನಡೆ

ಮುಕೇಶ್ ದಾಳಿಗೆ ಸೌರಾಷ್ಟ್ರ ಧೂಳೀಪಟ

ರಾಜ್‌ಕೋಟ್ : ಮಧ್ಯಮವೇಗಿ ಮುಕೇಶ್ ಕುಮಾರ್ ದಾಳಿಯ ಮುಂದೆ ಸೌರಾಷ್ಟ್ರದ ಬಲಿಷ್ಠ ಬ್ಯಾಟಿಂಗ್ ಪಡೆ ಧೂಳೀಪಟವಾಯಿತು.

ಶನಿವಾರ ಇಲ್ಲಿ ಆರಂಭವಾದ ಇರಾನಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ರೆಸ್ಟ್ ಆಫ್ ಇಂಡಿಯಾ ಮೊದಲ ದಿನವೇ ಇನಿಂಗ್ಸ್ ಮುನ್ನಡೆ ಸಾಧಿಸಿತು. ಟಾಸ್ ಗೆದ್ದ ರೆಸ್ಟ್ ಆಫ್ ಇಂಡಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮುಕೇಶ್ ಕುಮಾರ್ (23ಕ್ಕೆ4) ಆರಂಭದಲ್ಲಿಯೇ ಕೊಟ್ಟ ಪೆಟ್ಟಿಗೆ ರಣಜಿ ಚಾಂಪಿಯನ್ ಸೌರಾಷ್ಟ್ರ ತಂಡವು ಊಟಕ್ಕೂ ಮುನ್ನವೇ 24.5 ಓವರ್‌ಗಳಲ್ಲಿ 98 ರನ್ ಗಳಿಸಿ ಆಲೌಟ್ ಆಯಿತು. ಕುಲದೀಪ್ ಸೇನ್ ಹಾಗೂ ಉಮ್ರಾನ್ ಮಲಿಕ್ ತಲಾ ಮೂರು ವಿಕೆಟ್ ಗಳಿಸಿದರು.

ಬ್ಯಾಟಿಂಗ್ ಆರಂಭಿಸಿದ ರೆಸ್ಟ್ ಆಫ್ ಇಂಡಿಯಾಕ್ಕೆ ಜಯದೇವ್ ಉನದ್ಕತ್ ಮೊದಲ ಓವರ್‌ನಲ್ಲಿಯೇ ಹೊಡೆತ ಕೊಟ್ಟರು. ಅಭಿಮನ್ಯು ಈಶ್ವರನ್ ಖಾತೆ ತೆರೆಯದೇ ಮರಳಿದರು. ಮಯಂಕ್ ಅಗರವಾಲ್ ಹಾಗೂ ಯಶ್ ಧುಳ್ ಕೂಡ ವೈಫಲ್ಯ ಅನುಭವಿಸಿದರು.

ಮುಕೇಶ್ ಕುಮಾರ್ ಬೌಲಿಂಗ್ –ಪಿಟಿಐ ಚಿತ್ರ

ಆದರೆ ಸರ್ಫರಾಜ್ ಖಾನ್ (ಬ್ಯಾಟಿಂಗ್ 125; 126ಎ, 4X19, 6X2) ಹಾಗೂ ನಾಯಕ ಹನುಮವಿಹಾರಿ (ಬ್ಯಾಟಿಂಗ್ 62; 145ಎ, 4X9, 6X1) ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 187 ರನ್ ಸೇರಿಸಿದರು. ಇದರಿಂದಾಗಿ ದಿನದಾಟದ ಕೊನೆಗೆ ತಂಡವು 49 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 205 ರನ್ ಗಳಿಸಿತು. 107 ರನ್‌ಗಳ ಮುನ್ನಡೆ ಸಾಧಿಸಿತು. ಸರ್ಫರಾಜ್ ಖಾನ್ ಟಿ20 ಮಾದರಿಯ ಬ್ಯಾಟಿಂಗ್ ಮಾಡಿ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಿದ್ದರು.

ಸಂಕ್ಷಿಪ್ತ ಸ್ಕೋರು: ಸೌರಾಷ್ಟ್ರ: 24.5 ಓವರ್‌ಗಳಲ್ಲಿ 98 (ಅರ್ಪಿತ್ ವಸವದಾ 22, ಧರ್ಮೇಂದ್ರಸಿಂಹ ಜಡೇಜ 28, ಚೇತನ್ ಸಕಾರಿಯಾ ಔಟಾಗದೆ 13, ಮುಕೇಶ್ ಕುಮಾರ್ 23ಕ್ಕೆ4, ಕುಲದೀಪ್ ಸೇನ್ 41ಕ್ಕೆ3, ಉಮ್ರಾನ್ ಮಲಿಕ್ 25ಕ್ಕೆ3) ರೆಸ್ಟ್ ಆಫ್ ಇಂಡಿಯಾ: 49 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 205 (ಹನುಮವಿಹಾರಿ ಬ್ಯಾಟಿಂಗ್ 62, ಸರ್ಫರಾಜ್ ಖಾನ್ ಬ್ಯಾಟಿಂಗ್ 125, ಜಯದೇವ್ ಉನದ್ಕತ್ 47ಕ್ಕೆ2)

ಫೆನ್ಸಿಂಗ್: ಮೈಸೂರಿನ ಸಚಿನ್‌ಗೆ ಚಿನ್ನ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಶನಿವಾರ ನಡೆದ ದಸರಾ ಕೂಟದ ಫೆನ್ಸಿಂಗ್‌ನಲ್ಲಿ ಮೈಸೂರು ವಲಯ ಪ್ರಾಬಲ್ಯ ಮೆರೆಯಿತು.

ಪುರುಷರ ಸೆಬರ್ ಸ್ಪರ್ಧೆಯಲ್ಲಿ ಮೈಸೂರಿನ ಕೆ.ಆರ್.ಸಚಿನ್, 15–13ರಲ್ಲಿ ಮೈಸೂರಿನ ಕೆ.ಡಿ.ಉತ್ತಯ್ಯ ಅವರನ್ನು ಮಣಿಸಿದರು. ಬೆಂಗಳೂರಿನ ವಿನಯ್ ಕುಮಾರ್ ಹಾಗೂ ಎಂ.ಎನ್. ಮನೋಜ್ ಕಂಚು ಗೆದ್ದರು. ಫಾಯ್ಲ್ ಸ್ಪರ್ಧೆಯಲ್ಲಿ ಬೆಂಗಳೂರು ನಗರದ ಗೋಕುಲನಾಥ್, ಎಸ್.ಪಿ.ಶ್ರೀನಾಥ್ ಅವರನ್ನು ಸೋಲಿಸಿ ಚಿನ್ನ ಗೆದ್ದರು.

ಹೈಜಂಪ್ ಸ್ಪರ್ಧೆಯಲ್ಲಿ ದಾಖಲೆ ಬರೆದ ಬೆಂಗಳೂರಿನ ಎಸ್‌.ಹರ್ಷಿತ್ ಅವರ ಮಿಂಚಿನ ನೆಗೆತದ ವೈಖರಿ –ಪ್ರಜಾವಾಣಿ ಚಿತ್ರ/ ಹಂಪಾ ನಾಗರಾಜ



ದಸರಾ ಕ್ರೀಡಾಕೂಟ: ಹರ್ಷಿತ್ ಮಿಂಚಿನ ನೆಗೆತ

ಮೈಸೂರು: ಬೆಂಗಳೂರಿನ ಎಸ್. ಹರ್ಷಿತ್, ಕಲಾವತಿ ಬಸಪ್ಪ ತೇಲಿ ಮತ್ತು ಮೈಸೂರಿನ ಚೈತ್ರಾ ದೇವಾಡಿಗ ಅವರು ಇಲ್ಲಿ ನಡೆಯುತ್ತಿರುವ ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ನೂತನ ದಾಖಲೆ ನಿರ್ಮಿಸಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ 2.14 ಮೀ ಎತ್ತರ ಜಿಗಿದು ಚಿನ್ನ ಗೆದ್ದು ಮಿಂಚಿದ ಹರ್ಷಿತ್, 2014ರಲ್ಲಿ ಬೆಂಗಳೂರಿನ ಬಿ.ಚೇತನ್ ನಿರ್ಮಿಸಿದ್ದ (2.10 ಮೀ) ದಾಖಲೆಯನ್ನು ಮುರಿದರು. ಮೈಸೂರಿನ ಅನಿಲ್ ಕುಮಾರ್ (1.94 ಮೀ), ಬೆಂಗಳೂರಿನ ತ್ರಿಲೋಕ್ ಒಡೆಯರ್ (1.88 ಮೀ) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು.

ಡಿಸ್ಕಸ್ ಥ್ರೋನಲ್ಲಿ ದಾಖಲೆ: ಮಹಿಳೆಯರ ಡಿಸ್ಕಸ್ ಥ್ರೋನಲ್ಲಿ 41.79 ಮೀ ಎಸೆತದ ಸಾಧನೆ ಮಾಡಿದ ಬೆಂಗಳೂರಿನ ಕಲಾವತಿ ಬಸಪ್ಪ ತೇಲಿ, 2014ರಲ್ಲಿ ಮೈಸೂರಿನ ಪ್ರಿಯಾಂಕಾ ಹೆಸರಿನಲ್ಲಿದ್ದ (41.42 ಮೀ.) ದಾಖಲೆ ಮುರಿದರು. ಮೈಸೂರಿನ ಎಂ.ಎನ್. ಸುಷ್ಮಾ (41.62 ಮೀ) ಕೂಡ ದಾಖಲೆ ಬರೆದು ದ್ವಿತೀಯ ಸ್ಥಾನ ಗಳಿಸಿದರೆ, ಸೃಷ್ಟಿ ಯು. ಕಳಿವಾಳ ಮೂರನೇ ಸ್ಥಾನ ಪಡೆದರು.

ಪುರುಷರ ಡಿಸ್ಕಸ್‌ಥ್ರೋನಲ್ಲಿ ಚಿನ್ನ ಗೆದ್ದ ಮೈಸೂರಿನ ಮೊಹಮ್ಮದ್ ಸಖ್ಲೇನ್ ಅಹ್ಮದ್ 49.57 ಮೀ ಎಸೆದರು. 0.20 ಮೀಟರ್ ಅಂತರದಲ್ಲಿ ಹೊಸ ದಾಖಲೆಯ ಅವಕಾಶ ಕೈತಪ್ಪಿತು. ಬೆಂಗಳೂರಿನ ಬಿ.ಕೆ.ಸಂಜೀವ್ ಮತ್ತು ಮೋಹಿತ್ ಎನ್. ರಾಜ್ ಕ್ರಮವಾಗಿ ಬೆಳ್ಳಿ, ಕಂಚು ಗೆದ್ದರು.

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 2 ಅಕ್ಟೋಬರ್ 2022

ಬಾಪೂ ನಮನ- ದರ್ಶನ

3

ಅಬ್ಬಾ... ಗಾಂಧಿ ಭಂಡಾರ

ಗಾಂಧಿ-ಅಂಬೇಡ್ಕರ್

ಸಂವಾದ ಬೇಕು, ವಿವಾದ ಬೇಡ

ಮಹಾತ್ಮ ಗಾಂಧೀಜಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಅಂಧ 'ಭಕ್ತಿ' ತೋರದೆಯೇ ಅವರಿಬ್ಬರಿಂದಲೂ ಸ್ಫೂರ್ತಿ ಪಡೆಯಬೇಕು. ದಾರಿಗಳು ಬೇರೆ ಬೇರೆ ಆಗಿದ್ದರೂ ಈ ಇಬ್ಬರೂ ಸಮಾನ ಗುರಿಯ ಬೆನ್ನು ಹತ್ತಿದ ಶ್ರೇಷ್ಠ ನಾಯಕರು. ಅವರನ್ನು ಸತ್ಯನಿಷ್ಠವಾಗಿ ತಿಳಿದುಕೊಳ್ಳಲು ಸಂವಾದ ಬೇಕು, ವಿವಾದ ಬೇಡ; ಸಹಕಾರ ಬೇಕು, ಸಂಘರ್ಷ ಬೇಡ ಎಂದು ಒತ್ತಾಯಿಸುತ್ತದೆ ಈ ಬರಹ...

ಸುಧೀಂದ್ರ ಕುಲಕರ್ಣಿ

ಹರಿಜನ ಅಥವಾ ದಲಿತ? ಗಾಂಧೀಜಿ ಅಥವಾ ಅಂಬೇಡ್ಕರ್? ಮಹಾತ್ಮ ಗಾಂಧಿ ಮತ್ತು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಿನ್ನ ಗುರಿಗಳನ್ನು ಹೊಂದಿದ್ದರು ಎಂಬ ತಪ್ಪು ಗ್ರಹಿಕೆಯನ್ನು ಪಸರಿಸುವ ಪ್ರಯತ್ನ ನಡೆಯುತ್ತಿರುವುದು ಖೇದಕರ. ಗಾಂಧೀಜಿ ಅವರು ದಲಿತರ ಶತ್ರು ಎಂದು ಕೂಡ ಕೆಲವು ಶಕ್ತಿಗಳು ಬಿಂಬಿಸಿವೆ. 'ಅಸ್ಪೃಶ್ಯರು' ಕೂಡ 'ದೇವರ ಮಕ್ಕಳು' ಎಂಬ ತಮ್ಮ ಪರಿಕಲ್ಪನೆಯನ್ನು 'ಹರಿಜನ' ಪದವನ್ನು ಜನಪ್ರಿಯಗೊಳಿಸುವ ಮೂಲಕ ಜನರಿಗೆ ತಲುಪಿಸಲು ಗಾಂಧೀಜಿ ಪ್ರಯತ್ನಿಸಿದ್ದರು. ಆದರೆ, ಅವರ ಟೀಕಾಕಾರರು ಈ ಪದಕ್ಕೆ ಕಳಂಕ ಅಂಟಿಕೊಳ್ಳುವಂತೆ ವ್ಯವಸ್ಥಿತವಾಗಿ ಮಾಡಿದರು. 'ಹರಿಜನ' ಎಂಬ ಪದವೇ ಅವಮಾನಕಾರಿ ಎಂದು ವಾದಿಸಿದರು.

ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆದ ಮಹತ್ವದ ವಿದ್ಯಮಾನವೊಂದನ್ನು ಈ ಪರಿಪ್ರೇಕ್ಷ್ಯದಲ್ಲಿ ಇರಿಸಿ ನೋಡುವುದು ಉಪಯುಕ್ತ. ಗಾಂಧೀಜಿಯ ಪ್ರತಿನಿಧಿಯಾಗಿ ಮದನ ಮೋಹನ ಮಾಳವೀಯ ('ಪ್ರಬಲ ಜಾತಿ' ಹಿಂದೂಗಳ ಪರವಾಗಿ) ಮತ್ತು ದಮನಿತ ವರ್ಗಗಳ (ದಲಿತ ಎಂಬ ಪದ ಆಗ ಚಾಲ್ತಿಯಲ್ಲಿ ಇರಲಿಲ್ಲ) ಪರವಾಗಿ ಡಾ.ಅಂಬೇಡ್ಕರ್ ಅವರು ಸಹಿ ಮಾಡಿದ್ದ 'ಪೂನಾ ಒಪ್ಪಂದ'ಕ್ಕೆ ಕಳೆದ ತಿಂಗಳು (ಸೆಪ್ಟೆಂಬರ್ 24) 90 ವರ್ಷ ತುಂಬಿದೆ. ಮಹಾತ್ಮ ಗಾಂಧಿ ಅವರು ಉನ್ನತ ಧ್ಯೇಯ ಇರಿಸಿಕೊಂಡಿದ್ದ 'ಹರಿಜನ ಸೇವಕ ಸಂಘ'ವನ್ನು ಅದೇ ದಿನ ಸ್ಥಾಪಿಸಿದರು: ಅಸ್ಪೃಶ್ಯತೆಯ ಶಾಪವನ್ನು ನಿರ್ಮೂಲನಗೊಳಿಸಿ ಜಾತಿ, ಮತ, ಜನಾಂಗ, ಮತ್ತು ಲಿಂಗದ ಆಧಾರದಲ್ಲಿ ಯಾವುದೇ ರೀತಿಯ ಅನ್ಯಾಯ, ಅಪಮಾನ ಮತ್ತು ತಾರತಮ್ಯ ಇಲ್ಲದ ಸಮಾಜ ನಿರ್ಮಾಣವೇ ಆ ಧ್ಯೇಯವಾಗಿತ್ತು. ಈ ಎಲ್ಲ ಅನಿಷ್ಟಗಳಿಂದ ಸಮಾಜವು ಮುಕ್ತವಾಗದೇ ಇದ್ದರೆ ಒಗ್ಗಟ್ಟು, ಶಾಂತಿ, ಸಾಮರಸ್ಯ ಮತ್ತು ಖಚಿತ ಪ್ರಗತಿ ಸಾಧ್ಯವಿಲ್ಲ ಎಂಬುದು ಗಾಂಧೀಜಿಗೆ ಮನದಟ್ಟಾಗಿತ್ತು.

ಈ ಒಪ್ಪಂದದ ಮಹತ್ವ ಅರ್ಥವಾಗಬೇಕಾದರೆ ಅದರ ಹಿನ್ನೆಲೆಯನ್ನು ನೆನಪಿಸಿಕೊಳ್ಳುವುದು ಅಗತ್ಯ. ಬ್ರಿಟಿಷ್ ಸರ್ಕಾರವು ದಮನಿತ ಜಾತಿಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು 1931ರ ನವೆಂಬರ್‌ನಲ್ಲಿ ನಿರ್ಧರಿಸಿತು. ಈ ಯೋಜನೆಯ ಪ್ರಕಾರ, ಪ್ರಾದೇಶಿಕ ಶಾಸನ ಸಭೆಗಳಿಗೆ ದಲಿತರು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಲು ಅವಕಾಶ ಇತ್ತು. ಇದೇ ರೀತಿಯ ಅವಕಾಶವನ್ನು ಮುಸ್ಲಿಮರಿಗೂ ನೀಡಲಾಗಿತ್ತು. ಜಾತಿ ಅಥವಾ ಧರ್ಮದ ಪರಿಗಣನೆ ಇಲ್ಲದೆ ಎಲ್ಲರನ್ನೂ ಒಳಗೊಂಡ ಚುನಾವಣಾ ವ್ಯವಸ್ಥೆ ಪರವಾದ ಒಲವನ್ನು ಮೊದಲು ತೋರಿದ್ದರೂ ಬಳಿಕ ಪ್ರತ್ಯೇಕ ಪ್ರಾತಿನಿಧ್ಯ ಬೇಕು ಎಂಬ ಬೇಡಿಕೆಯನ್ನು ಅಂಬೇಡ್ಕರ್ ಮುಂದಿಟ್ಟಿದ್ದರು. ಆ ಸಂದರ್ಭದಲ್ಲಿ ಗಾಂಧೀಜಿ ಅವರನ್ನು ಬ್ರಿಟಿಷರು ಪುಣೆಯ ಯೆರವಡಾ ಜೈಲಿನಲ್ಲಿ ಇರಿಸಿದ್ದರು. ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಗಾಂಧೀಜಿ ಅವರು ದೃಢವಾಗಿ ವಿರೋಧಿಸಿದ್ದರು. ಹಿಂದೂ ಸಮಾಜವನ್ನು ವಿಭಜಿಸುವುದಕ್ಕಾಗಿ ವಸಾಹತುಶಾಹಿ ಆಡಳಿತಗಾರರ ಸಂಚು ಇದು ಎಂದು ಗಾಂಧೀಜಿ ಹೇಳಿದ್ದರು. 1932ರ ಸೆಪ್ಟೆಂಬರ್ 20ರಂದು ಅವರು ಆಮರಣಾಂತ ಉಪವಾಸ ಕೈಗೊಂಡರು. ಗಾಂಧೀಜಿಯವರ ಜೀವ ಉಳಿಸುವುದಕ್ಕಾಗಿ ಸಾರ್ವಜನಿಕವಾಗಿ ವ್ಯಕ್ತವಾದ ಗಂಭೀರ ಕಾಳಜಿಗೆ ಸ್ಪಂದಿಸಿದ ಅಂಬೇಡ್ಕರ್ ತಮ್ಮ ನಿಲುವಿನಿಂದ ಹಿಂದೆ ಸರಿದರು. ಅದರ ಪ್ರಕಾರ, ಪೂನಾ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಬ್ರಿಟಿಷರು ತಮ್ಮ ನಿರ್ಧಾರವನ್ನು ಕೈಬಿಟ್ಟರು ಮತ್ತು ಗಾಂಧೀಜಿ ಉಪವಾಸ ಕೊನೆಗೊಳಿಸಿದರು. ಪರಿಶಿಷ್ಟ ಜಾತಿಗಳ ಜನರಿಗೆ ಈ ಒಪ್ಪಂದವು ಪ್ರಮುಖ ಪ್ರಯೋಜನವೊಂದನ್ನು ಕೊಟ್ಟಿತು. ಸಾಮಾನ್ಯ ಪ್ರಾತಿನಿಧ್ಯ ವ್ಯವಸ್ಥೆ ಅಡಿಯಲ್ಲಿ ಇದ್ದ ಮೀಸಲು ಕ್ಷೇತ್ರಗಳ ಸಂಖ್ಯೆಯನ್ನು 96ರಿಂದ 148ಕ್ಕೆ ಹೆಚ್ಚಿಸಲಾಯಿತು.

ಈ ಒಪ್ಪಂದದೊಂದಿಗೆ ಗಾಂಧೀಜಿ ತಮ್ಮ ಕೆಲಸಗಳನ್ನು ನಿಲ್ಲಿಸಲಿಲ್ಲ, ದಲಿತರಿಗೆ ಸಮಾನತೆ ಮತ್ತು ನ್ಯಾಯ ದೊರಕಿಸುವ ಪ್ರಯತ್ನಗಳನ್ನು ಇನ್ನಷ್ಟು ತೀವ್ರಗೊಳಿಸಿದರು. 'ಆತ್ಮ ಶುದ್ಧೀಕರಣ'ಕ್ಕಾಗಿ ಮತ್ತು ಅಸ್ಪೃಶ್ಯತೆಯ ಪದ್ಧತಿ ಮುಂದುವರಿದಿರುವುದಕ್ಕೆ ತಮ್ಮ ಗಾಢ ವೇದನೆಯನ್ನು ತೋರಿಸುವುದಕ್ಕಾಗಿ 1933ರ ಮೇಯಲ್ಲಿ ಗಾಂಧೀಜಿ ಅವರು ಯೆರವಡಾ ಜೈಲಿನಲ್ಲಿಯೇ 21 ದಿನಗಳ ಉಪವಾಸ ಆರಂಭಿಸಿದರು. ಅದೇ ವರ್ಷ ನವೆಂಬರ್‌ನಲ್ಲಿ ದೇಶವ್ಯಾಪಿಯಾದ ಒಂಬತ್ತು ತಿಂಗಳ 'ಹರಿಜನ ಯಾತ್ರೆ'ಯನ್ನು ಆರಂಭಿಸಿದರು. ಅದಲ್ಲದೆ, 'ಪ್ರಭಾವಿ ಜಾತಿ'ಗಳ ಹಿಂದೂಗಳು ಅಸ್ಪೃಶ್ಯತೆಯನ್ನು ಶಾಶ್ವತವಾಗಿ ನಿಲ್ಲಿಸಬೇಕು ಮತ್ತು ಎಲ್ಲ ದೇವಾಲಯಗಳನ್ನು ದಲಿತರಿಗೆ ತೆರೆದಿಡಬೇಕು ಎಂದು ಆಗ್ರಹಿಸಿದರು. ಅಸ್ಪೃಶ್ಯತೆಯು 'ಹಿಂದೂ ಧರ್ಮದ ಮೇಲೆ ಕರಿ ಚುಕ್ಕೆ' ಎಂದು ಟೀಕಿಸಿದ ಅವರು 'ಅಸ್ಪೃಶ್ಯತೆ ಇರುವುದಕ್ಕಿಂತ ಹಿಂದೂ ಧರ್ಮವೇ ಸಾಯುವುದು ಮೇಲು ಎಂದು ಭಾವಿಸುವೆ' ಎಂದು ಘೋಷಿಸಿದರು. 'ನಾಯಿಯೊಂದು ಕೆರೆಯಿಂದ ನೀರು ಕುಡಿಯಬಹುದು, ಆದರೆ ಬಾಯಾರಿದ ದಮನಿತವರ್ಗದ ಬಾಲಕನೊಬ್ಬ ಕುಡಿಯಲು ಸಾಧ್ಯವಾಗದು. ಒಂದು ವೇಳೆ ಆತ ಅಲ್ಲಿಗೆ ಹೋದರೆ ಹೊಡೆತ ತಿನ್ನದೆ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಇಂದು ಆಚರಣೆಯಲ್ಲಿರುವ ಅಸ್ಪೃಶ್ಯತೆಯು ಮನುಷ್ಯನನ್ನು ನಾಯಿಗಿಂತ ಕಡೆಯಾಗಿ ನೋಡುತ್ತದೆ' ಎಂದು ತಮ್ಮ ಆಕ್ರೋಶವನ್ನು ಗಾಂಧೀಜಿ ವ್ಯಕ್ತಪಡಿಸಿದ್ದರು.

ಗಾಂಧೀಜಿಯವರ 'ಹರಿಜನ' ಅಭಿಯಾನವು ಹಿಂದೂ ಸಮಾಜದ ಮೇಲೆ ಬಹುದೊಡ್ಡ ಪರಿಣಾಮ ಬೀರಿತ್ತು. ಹಲವು ಹಿಂದೂ ದೇವಾಲಯಗಳು ದಲಿತರಿಗೆ ಪ್ರವೇಶ ನೀಡಿದವು. ಸಾರ್ವಜನಿಕ ಬಾವಿಗಳನ್ನು ಬಳಸಲು ದಲಿತರಿಗೂ ಅವಕಾಶ ಕೊಡಬೇಕು ಎಂದು ಜನರಿಗೆ ಹೇಳಲು ಗಾಂಧೀಜಿಯ ಅನುಯಾಯಿಗಳು ಹಳ್ಳಿಗಳಿಗೆ ಹೋದರು. ಅಸ್ಪೃಶ್ಯತೆಯನ್ನು ತೊಡೆದು ಹಾಕಿ ಸ್ವತಃ ಉದಾಹರಣೆಗಳಾಗಲು ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಲಾಯಿತು. ಇಲ್ಲೊಂದು ಗಮನಾರ್ಹ ಉದಾಹರಣೆ ಇದೆ. ಗಾಂಧೀಜಿ ಅವರು ಯೆರವಡಾ ಸೆರೆಮನೆಯಲ್ಲಿ ಇದ್ದಾಗ ಅವರನ್ನು ನೋಡಲು ಜವಾಹರಲಾಲ್ ನೆಹರೂ ಅವರ ಹೆಂಡತಿ ಕಮಲಾ ಮತ್ತು ತಾಯಿ ಸ್ವರೂಪ ರಾಣಿ ಅವರು ಬಂದರು. ಸ್ವರೂಪ ರಾಣಿ ಅವರು ಅತ್ಯಂತ ಸಂಪ್ರದಾಯಸ್ಥ ಹಿಂದೂ ಮಹಿಳೆ. ಅವರು ಮನೆಯಲ್ಲಿ ತಮಗಾಗಿ ಪ್ರತ್ಯೇಕ, ಸಾಂಪ್ರದಾಯಿಕ ಅಡುಗೆಮನೆ ಹೊಂದಿದ್ದರು. ಅಲಹಾಬಾದ್‌ನಿಂದ ಹೊರಡುವ ಮುನ್ನ 'ಅಸ್ಪೃಶ್ಯ'ರ ಕೈಯಿಂದ ಪ್ರಸಾದ ಸ್ವೀಕರಿಸಿದೆ ಎಂದು ಅವರು ಗಾಂಧೀಜಿಗೆ ಹೇಳಿದರು.

ಪೂನಾ ಕರಾರಿನ ಮೇಲೆ ಆಪಾದನೆ ತಪ್ಪು: ಮೂರು ಕಾರಣಗಳು: ಒಂಬತ್ತು ದಶಕಗಳ ಹಿಂದೆ 'ಪೂನಾ ಒಪ್ಪಂದ'ಕ್ಕೆ ಸಹಿ ಹಾಕಿದ ಬಳಿಕ ಭಾರತದಲ್ಲಿ ಹಲವು ಮಹತ್ವಪೂರ್ಣವಾದ ಬದಲಾವಣೆಗಳು ಆಗಿವೆ. ಮುಖ್ಯವಾಗಿ ಗಾಂಧೀಜಿಯ ನೇತೃತ್ವದಲ್ಲಿ ನಡೆದ ಸುದೀರ್ಘ ಹೋರಾಟದ ಬಳಿಕ ಭಾರತಕ್ಕೆ 1947ರಲ್ಲಿ ಸ್ವಾತಂತ್ರ್ಯ ಸಿಕ್ಕಿದೆ. ಪ್ರಬುದ್ಧವಾದ ಸಂವಿಧಾನವನ್ನು 1950ರಲ್ಲಿ ದೇಶವು ಅಳವಡಿಸಿಕೊಂಡಿದೆ. ಬ್ರಿಟಿಷರು ನೀಡಿದ್ದ ಪ್ರತ್ಯೇಕ ಪ್ರಾತಿನಿಧ್ಯದ ಅವಕಾಶವನ್ನು ಅಂಬೇಡ್ಕರ್ ಅವರಿಗೆ ಮನಸ್ಸಿಲ್ಲದಿದ್ದರೂ ಕೈಬಿಡುವಂತೆ ಬಲವಂತ ಮಾಡಿ ಆ ಸಮುದಾಯಕ್ಕೆ ಗಾಂಧೀಜಿ ಬಹುದೊಡ್ಡ ಅನ್ಯಾಯ ಮಾಡಿದ್ದಾರೆ ಎಂದು ಕರ್ನಾಟಕ ಮತ್ತು ಬೇರೆಡೆಯಲ್ಲಿರುವ ಅಂಬೇಡ್ಕರ್‌ವಾದಿ ಚಿಂತಕರು ಆರೋಪಿಸಿದ್ದಾರೆ. ಇದು ಸುಳ್ಳು ಮತ್ತು ಆಧಾರರಹಿತ ಆರೋಪ ಎಂದು ತೋರಿಸಲು ಮೂರು ಕಾರಣಗಳನ್ನು ನಾನು ಕೊಡಬಲ್ಲೆ.

ಮೊದಲ ಕಾರಣ: ಅಂಬೇಡ್ಕರ್ ಅವರು 1947ರ ಮಾರ್ಚ್‌ನಲ್ಲಿ ಪ್ರಕಟಿಸಿದ್ದ 'ಸ್ಟೇಟ್ಸ್ ಆ್ಯಂಡ್ ಮೈನಾರಿಟೀಸ್' ಪುಸ್ತಕವನ್ನು 'ಭಾರತ ಸಂಯುಕ್ತ ಸಂಸ್ಥಾನದ ಸಂವಿಧಾನ' ಎಂದು ಕರೆದಿದ್ದರು. 'ಪೂನಾ ಒಪ್ಪಂದ'ವನ್ನು ರದ್ದುಪಡಿಸಬೇಕು ಮತ್ತು ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಮರುಪರಿಚಯಿಸಬೇಕು ಎಂದು ಅವರು ಕರೆಕೊಟ್ಟಿದ್ದರು. ಆದರೆ, ಸ್ವತಂತ್ರ ಭಾರತದ ಸಂವಿಧಾನವನ್ನು ಅಳವಡಿಸಿದ ಸಂವಿಧಾನ ರಚನಾ ಸಭೆಯು ಈ ಪ್ರಸ್ತಾವವನ್ನು ತಿರಸ್ಕರಿಸಿತು. ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲು ಕ್ಷೇತ್ರಗಳು ಇರುವ ವ್ಯವಸ್ಥೆಯನ್ನೇ ಉಳಿಸಿಕೊಂಡಿತು. ಸಂವಿಧಾನ ಶಿಲ್ಪಿ ಎಂಬ ಖ್ಯಾತಿ ಹೊಂದಿದ್ದ, ಡಾ. ಅಂಬೇಡ್ಕರ್ ಅವರೇ ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದರೂ ಈ ನಿರ್ಧಾರಕ್ಕೆ ಬರಲಾಗಿತ್ತು.

ಡಾ. ಅಂಬೇಡ್ಕರ್ ಅವರು ಬರೆದ 'ಸ್ಟೇಟ್ಸ್ ಆ್ಯಂಡ್ ಮೈನಾರಿಟೀಸ್' ಪುಸ್ತಕಕ್ಕೂ ಸಂವಿಧಾನ ರಚನಾ ಸಮಿತಿಯು (ಇದರ ಬಹುಸಂಖ್ಯೆಯ ಸದಸ್ಯರು ಕಾಂಗ್ರೆಸ್‌ನವರೇ ಆಗಿದ್ದರು) ಅನುಮೋದಿಸಿದ ಸಂವಿಧಾನಕ್ಕೂ ಅಂತಹ ಹೋಲಿಕೆಯೇನೂ ಇರಲಿಲ್ಲ. ಉದಾಹರಣೆಗೆ, ಪರಿಶಿಷ್ಟ ಜಾತಿಗಳ ಸಮುದಾಯಗಳನ್ನು 'ಅಲ್ಪಸಂಖ್ಯಾತರು' ಎಂದು ಪರಿಗಣಿಸಬೇಕು ಎಂದು ಅಂಬೇಡ್ಕರ್ ಮುಂದಿಟ್ಟಿದ್ದ ಬೇಡಿಕೆಯನ್ನು ಸಂವಿಧಾನ ರಚನಾ ಸಭೆಯು ಸಾರಾ ಸಗಟಾಗಿ ತಿರಸ್ಕರಿಸಿತ್ತು. ಮುಸ್ಲಿಮರಿಗೆ ಇದ್ದ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನೂ ಸಭೆಯು ರದ್ದುಪಡಿಸಿದ್ದು ಗಮನಾರ್ಹ. ಆದುದರಿಂದಲೇ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಗಾಂಧೀಜಿ ಕಸಿದುಕೊಂಡರು ಎಂದು ಆಪಾದಿಸುವ ಅಂಬೇಡ್ಕರ್‌ವಾದಿಗಳು, ಗಾಂಧೀಜಿ ಮಾತ್ರವಲ್ಲ ಅಂಬೇಡ್ಕರ್ ಕೂಡ ಇದಕ್ಕೆ ಹೊಣೆಗಾರರು ಎಂಬುದನ್ನು ಗಮನಿಸಬೇಕು.

ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರೂ 1950ರಲ್ಲಿ ಅಳವಡಿಸಿಕೊಳ್ಳಲಾದ ಸಂವಿಧಾನದಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಉಳಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾಗಲಿಲ್ಲ.

3ನೇ ಪುಟಕ್ಕೆ...

ಪರಂಪರೆ ನೆರಳಿನಲ್ಲಿ ಸ್ವಂತಿಕೆ ಹುಡುಕಾಟ

'ಮೈಸೂರು ಬಾನಿ'ಯನ್ನು ಹುಟ್ಟುಹಾಕಿದ ಶ್ರೇಷ್ಠ ವೈಣಿಕರಾಗಿದ್ದ ವಿದ್ವಾನ್ ದೊರೆಸ್ವಾಮಿ ಅಯ್ಯಂಗಾರ್ ಅವರ ಮಗನಾದ ವಿದ್ವಾನ್ ಬಾಲಕೃಷ್ಣ ತಂದೆಯ ದೈತ್ಯ ಪ್ರಭಾವವನ್ನು ಮೀರಿ ತಮ್ಮದೇ ಅಸ್ಮಿತೆಯನ್ನು ಕಟ್ಟಿಕೊಂಡವರು. ಪರಂಪರೆಯ ಹೋಲಿಕೆಯ ಭಾರವನ್ನು ತಡೆದುಕೊಂಡು, ಸವಾಲನ್ನು ಎದುರಿಸಿ, ಸ್ವಂತಿಕೆಯ ಒಂದು ಛಾಪು ಮೂಡಿಸುವುದು ಅಷ್ಟು ಸರಳವಿರಲಿಲ್ಲ.

ನೋಡಿ ಪುಟ 4

ಕ್ರಿಕೆಟ್ ಪರಿಚಾರಕನ ಕಪೋತ ಪ್ರೇಮ

ಕರ್ನಾಟಕದ ಕ್ರಿಕೆಟ್ ವಲಯದಲ್ಲಿ ವಿ. ಶಂಕರ್ ಹೆಸರು ಚಿರಪರಿಚಿತ. ಅವರು ಕ್ರಿಕೆಟ್ ಕೋಚ್ ಮಾತ್ರವಲ್ಲ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಉದ್ಯೋಗಿಯೂ ಆಗಿದ್ದಾರೆ. ಕ್ರಿಕೆಟ್‌ನಿಂದಾಚೆ ಪಾರಿವಾಳಗಳ ರೇಸ್‌ನಲ್ಲಿಯೂ ತಮ್ಮ ಛಾಪು ಮೂಡಿಸಿರುವ ಹವ್ಯಾಸಿ. ಪತ್ನಿ, ಮಕ್ಕಳು ಹಾಗೂ ಸಹೋದರರ ಜೊತೆಗೆ 65 ಪಾರಿವಾಳಗಳೂ ಇವರ ಸಂಸಾರದ ಸದಸ್ಯರೇ ಆಗಿವೆ.

ಗಿರೀಶ ದೊಡ್ಡಮನಿ

ಬೆಂಗಳೂರಿನ ಹೆಣ್ಣೂರು ಗಾರ್ಡನ್ ಬಡಾವಣೆಯಲ್ಲಿರುವ ತಮ್ಮ ಎರಡಂತಸ್ತಿನ ಮನೆಯ ಮಹಡಿಯ ಮೇಲೆ ನಿಂತಿದ್ದ ವಿ. ಶಂಕರ್ ಬೊಗಸೆಯಲ್ಲಿದ್ದ 'ರೆಡ್ ರಾಕೆಟ್' ತನ್ನ ಬೂದುಬಣ್ಣದ ತಲೆಯನ್ನು ಕೊಂಕಿಸುತ್ತ, ಪಿಳಿಪಿಳಿ ಕಣ್ಣು ಮಿಣುಕಿಸುತ್ತಿತ್ತು. ಬಿಳಿ-ಕಂದು ಮಿಶ್ರಿತ ರೆಕ್ಕೆಗಳನ್ನು ಪಟಪಟನೆ ಬಡಿದು ಹಾರಿಹೋಗಲು ಹವಣಿಸುತ್ತಿತ್ತು. 'ಇದಕ್ಕೀಗ ಬರೀ ಮೂರು ವರ್ಷ ತುಂಬಿದೆ. ಆದರೆ, ಇದು ಅಂತಿಂಥ ಪಾರಿವಾಳವಲ್ಲ. ಕಾವೇರಿನಾಡಿಗೂ ದೆಹಲಿಯ ಯಮುನೆಗೂ ನಂಟು ಬೆಸೆಯುವಂತಹ ಸಾಧನೆ ಮಾಡಿದೆ' ಎಂದು ಹೇಳುತ್ತಲೇ ಶಂಕರ್ ರೋಚಕ ಕತೆಯನ್ನು ಬಿಚ್ಚಿಟ್ಟರು.

2022ರ ಏಪ್ರಿಲ್ 15ರಂದು ನವದೆಹಲಿಯ ಯಮುನಾ ನದಿಯ ಸಿಗ್ನೇಚರ್ ಬ್ರಿಡ್ಜ್ ಮೇಲಿನ ಮುಂಜಾವಿನ ಮಂಜು ಸರಿದುಹೋಗುವ ಧಾವಂತದಲ್ಲಿತ್ತು. ಅದೇ ಹೊತ್ತಿಗೆ ಸೇತುವೆಯ ಮೇಲಿನ ವಿಶಾಲ ಆವರಣದಲ್ಲಿಟ್ಟಿದ್ದ ಎರಡು ಆಯತಾಕಾರದ ಪಂಜರದಂತಹ ಪೆಟ್ಟಿಗೆಗಳಿದ್ದವು.

ಅದರಿಂದ ಗುಟರ್ ಗೂ..ಗುಟರ್..ಗೂ ಕಲರವ ಬೆಳಗಿನ ನೀರವ ವಾತಾವರಣಕ್ಕೆ ಉಲ್ಲಾಸ ತುಂಬುತ್ತಿತ್ತು. ಆ ಪೆಟ್ಟಿಗೆಗಳಲ್ಲಿದ್ದ 26 ಪಾರಿವಾಳಗಳು ಆಗಸಕ್ಕೆ ಲಗ್ಗೆ ಹಾಕಲು ಸಿದ್ಧವಾಗಿದ್ದವು. ಅಲ್ಲಿದ್ದ ಇಬ್ಬರು 'ಕರ್ನಾಟಕ ಹೋಮಿಂಗ್ ಪಿಜನ್ ಫೆಡರೇಷನ್' ಎಂದು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಬರೆದಿದ್ದ ಬ್ಯಾನರ್‌ಗಳನ್ನು ಹಿಡಿದು ನಿಂತಿದ್ದರು.

ಮತ್ತೊಬ್ಬ ವ್ಯಕ್ತಿ ಪಂಜರಗಳ ಬಾಗಿಲು ತೆರೆದರು. ಕತ್ತು ಕೊಂಕಿಸುತ್ತ ಹೊರಬಂದ ಪಾರಿವಾಳಗಳು ಒಂದೊಂದಾಗಿ ನಭದತ್ತ ಹಾರಿದವು. ಅಲ್ಲಿದ್ದವರ ಕೈಗಳಲ್ಲಿದ್ದ ಮೊಬೈಲ್ ಆ್ಯಪ್‌ಗಳಲ್ಲಿ ಸಮಯ ದಾಖಲಾಯಿತು. ಇದಾಗಿ ಒಂಬತ್ತು ದಿನಗಳ ನಂತರ (ಏ.24) ಹೆಣ್ಣೂರು ಗಾರ್ಡನ್‌ನಲ್ಲಿರುವ ತನ್ನ ಮಾಲೀಕ ಶಂಕರ್ ಮನೆಯ ಮಹಡಿಯಲ್ಲಿ ರೆಡ್ ರಾಕೆಟ್ ಪ್ರತ್ಯಕ್ಷವಾಗಿತ್ತು. ತನ್ನ ಮುದ್ದು ಪಾರಿವಾಳವನ್ನು ಕೈಗೆತ್ತಿಕೊಂಡ ಅವರು ಅದರ ರೆಕ್ಕೆಗಳನ್ನು ಅಗಲಿಸಿ ನೋಡಿದರು. ಅದರ ಮೇಲಿದ್ದ ಮುದ್ರೆಯನ್ನು ಓದಿದರು. ಕಾಲುಗಳಿಗೆ ಕಟ್ಟಿದ್ದ ಪುಟ್ಟ ರಬ್ಬರ್ ಉಂಗುರವನ್ನು ಬಿಚ್ಚಿದರು. ಅದರೊಳಗಿದ್ದ ರಹಸ್ಯ ಸಂಖ್ಯೆಯನ್ನು ಹೊರತೆಗೆದು ಮೊಬೈಲ್‌ನಲ್ಲಿ ಫೋಟೊ ತೆಗೆದು ಆ್ಯಪ್‌ಗೆ ದಾಖಲಿಸಿದರು. ಕೆಲ ಹೊತ್ತಿನ ನಂತರ ಅತ್ತಣಿಂದ ಬಂದ ಉತ್ತರದಿಂದ ಶಂಕರ್ ಆನಂದ ಮುಗಿಲುಮುಟ್ಟಿತು.

ರೆಡ್ ರಾಕೆಟ್ 1,741 ಕಿಲೋಮೀಟರ್ ದೂರವನ್ನು ಕ್ರಮಿಸಿ ತನ್ನ ಸ್ವಸ್ಥಾನಕ್ಕೆ ಮರಳಿತ್ತು. ಜೊತೆಗೆ ಪಾರಿವಾಳದ ರೇಸ್‌ನಲ್ಲಿ ದಾಖಲೆಯನ್ನೂ ಬರೆದಿತ್ತು.

'ಪಕ್ಷಿಗಳಿಗೆ ಜಿಪಿಎಸ್ (ಜಾಗತಿಕ ಸ್ಥಾನೀಕರಣ ವ್ಯವಸ್ಥೆ) ಸೌಲಭ್ಯವನ್ನು ಪ್ರಕೃತಿಯು ದಯಪಾಲಿಸಿದೆ. ಮನುಷ್ಯರಿಗೆ ಅದಕ್ಕಾಗಿ ತಂತ್ರಜ್ಞಾನ ಆಧಾರಿತ ಗ್ಯಾಜೆಟ್‌ಗಳು ಬೇಕು. ಆದರೆ, ಪಕ್ಷಿಗಳು ಹಾಗಲ್ಲ. ಅದರಲ್ಲೂ ಪಾರಿವಾಳಗಳು ಇನ್ನೂ ಸೂಕ್ಷ್ಮ ಹಾಗೂ ಚಾಣಾಕ್ಷ. ತಮ್ಮ ಮೂಲ ವಾಸಸ್ಥಳವನ್ನು ಮರೆಯುವುದೇ ಇಲ್ಲ. ಅದಕ್ಕಾಗಿಯೇ ಇವು ವಿಶೇಷ. ನಾವು ಹವ್ಯಾಸಕ್ಕಾಗಿ ಮಾಡುವ ರೇಸ್‌ನಲ್ಲಿ ಇದು ಬಹಳಷ್ಟು ಸಲ ಸಾಬೀತಾಗಿದೆ. ನನ್ನ ಬಳಿ ಇರುವ 65 ಪಾರಿವಾಳಗಳೂ ಇದೇ ರೀತಿ ತರಬೇತಿಗೊಂಡಿವೆ' ಎಂದು ಶಂಕರ್ ಹೇಳುತ್ತಾರೆ.

ಬೆಂಗಳೂರಿನ ವಿ. ಶಂಕರ್ ವಜ್ರವೇಳು ಅವರ ಮನೆಯಲ್ಲಿರುವ ಗೂಡುಗಳಲ್ಲಿ ಪಾರಿವಾಳಗಳ ಕಲರವ –ಪ್ರಜಾವಾಣಿ ಚಿತ್ರ/ರಂಜು ಪಿ.

ಬಾಲ್ಯದ ಹವ್ಯಾಸ

ಶಂಕರ್ 12 ವರ್ಷದ ಬಾಲಕನಾಗಿದ್ದಾಗ ಪಾರಿವಾಳದ ನಂಟು ಬೆಳೆದಿತ್ತು. ಬೆನ್ಸನ್‌ಟೌನ್‌ನ ಅವರ ಮನೆಯ ಅಂಗಳದಲ್ಲಿ ಬಿಳಿ ಬಣ್ಣದ ಪಾರಿವಾಳದ ಮರಿಯೊಂದು ನಿತ್ರಾಣಗೊಂಡು ಬಿದ್ದಿತ್ತು. ಶಂಕರ್ ಅವರ ತಾಯಿ ಅದನ್ನು ರಕ್ಷಿಸಿ ಮನೆಗೆ ತಂದು ನೀರು ಹಾಗೂ ಕಾಳು ಹಾಕಿದರು. ಕೆಲವು ದಿನ ಶಂಕರ್ ಕೂಡ ಆರೈಕೆ ಮಾಡಿದರು. ಸಂಪೂರ್ಣ ಗುಣಮುಖವಾದ ಪಾರಿವಾಳವನ್ನು ಹೊರಗೆ ಹಾರಿಬಿಟ್ಟರು. ಆದರೆ ಕೆಲಹೊತ್ತಿನ ನಂತರ ಅದು ಮನೆಗೆ ಮರಳಿತು. ಇದರಿಂದ ಪುಳಕಗೊಂಡ ಶಂಕರ್ ತಮ್ಮ ಗೆಳೆಯನೊಂದಿಗೆ ಸೇರಿ ಪಾರಿವಾಳವನ್ನು ಮನೆಯಿಂದ ಬಹಳ ದೂರ ಹೋಗಿ ಬಿಟ್ಟುಬಂದರು.

2ನೇ ಪುಟಕ್ಕೆ...

ಕನ್ನಡಕ್ಕೆ ಬಂದ ಅರಬ್ಬಿ-ಪಾರ್ಸಿ ಪದಗಳ ಕೋಶ

ಎಸ್. ಆರ್. ವಿಜಯಶಂಕರ

ಕನ್ನಡಕ್ಕೆ ಸೇರಿದ ನಮ್ಮದೇ ಪದವೆಂದು ಅನೇಕರು ತಿಳಿದಿರಬಹುದಾದ ಹಲವಾರು ಶಬ್ದಗಳು ಬೇರೆ ಭಾಷೆಯಿಂದ ಬಂದವೆಂಬುದನ್ನು ಅರಿತರೆ ಆಶ್ಚರ್ಯವಾದೀತು. ನಮ್ಮ ನಿತ್ಯ ಬಳಕೆಯ 'ತರಕಾರಿ' ಪದ ಪರ್ಶಿಯನ್ ಭಾಷೆಯಿಂದಲೂ, 'ಉಮೇದುವಾರ', 'ಅರ್ಜಿ' ಪದಗಳು ಅರೇಬಿಕ್ ಭಾಷೆಯಿಂದಲೂ ಕನ್ನಡಕ್ಕೆ ಬಂದವು. ನೋಂದಣಿ, ದಾಖಲೆ, ನಕಲು, ನೌಕರ, ಚಂದಾ- ಪದಗಳು ಪರ್ಶಿಯನ್‌ನಿಂದ ಬಂದರೆ, ಸಾದಿಲ್‌ವಾರ್, ವಕಾಲತ್, ಹಕ್ಕು, ಹವಾ, ಹವ್ಯಾಸಗಳೆಲ್ಲಾ ಅರೇಬಿಕ್ ಪದಗಳು. ಕನ್ನಡದಲ್ಲಿ ನಿತ್ಯ ಬಳಕೆಯಲ್ಲಿರುವ ಇಂತಹ ಸುಮಾರು ಎರಡು ಸಾವಿರಕ್ಕೂ ಅಧಿಕ ಪರ್ಶಿಯನ್, ಅರೇಬಿಕ್ ಪದಗಳನ್ನು ಒಂದೆಡೆ ಸೇರಿಸಿದ 'ಅರಬ್ಬಿ-ಪಾರ್ಸಿ ಕನ್ನಡ ಶಬ್ದಕೋಶ'ವೊಂದನ್ನು ಹಿರಿಯ ವಿದ್ವಾಂಸ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿಯವರು ಪ್ರಕಟಿಸಿದ್ದಾರೆ.

ಟೋಫಿ (ಪಾರ್ಸಿ)- ಟೊಪ್ಪಿಗೆ; ಟಂಟಾ, ತಂಟೆ (ಪಾ) – ತಂಟೆ, ಜಗಳ; ಝಂಡಾ (ಪಾ)- ಬಾವುಟ, ನಿಶಾನಿ; ಫನ್ನಾ (ಪಾ) – ಬಟ್ಟೆಯ ಅಗಲ, ಅಗಲಳತೆ; ಪಟ್ಟಾ, ಪಟ್ಟೆ (ಪಾ)- ಅಧಿಕಾರ ಪತ್ರ (ಭೂಮಿ); ಪರವಾ, ಪರ್ವಾ (ಪಾ) – ಚಿಂತೆ; ಗೊಡವೆ-ಅರಿವು (ಪರವಾಗಿಲ್ಲ); ಮರ್ಜಿ (ಅರಬ್ಬಿ)–ಇಷ್ಟ, ದಯೆ; ಮಹಜರ್ (ಅ)–ಮಹಜರು, ಪಂಚನಾಮೆ; ಹಮಾಲ (ಅ) – ಕೂಲಿ, ನೌಕರ; ಹುಂಡಿ (ಅ)- ಹುಂಡಿ ಮೊದಲಾದವು ಈ ಶಬ್ದಕೋಶದ ಕೆಲವು ಉದಾಹರಣೆಗಳಷ್ಟೆ.

ಪು: 172 ₹170

ಅರಬ್ಬಿ-ಪರ್ಶಿಯಾ ಭಾಷಾ ಪದಗಳು
ಲೇ: ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ
ಪ್ರ: ಆಗರ, ಬೆಂಗಳೂರು
ಸಂ: 9844192952

ಕನ್ನಡದಲ್ಲಿ ಈಚೆಗೆ ಭಾಷಾ ಸಂಬಂಧಿತ ಹಲವು ನೂತನ ನಿಘಂಟುಗಳು ಪ್ರಕಟವಾಗಿವೆ. ಪ್ರೊ. ಎಂ. ಮರಿಯಪ್ಪ ಭಟ್ಟರ ಪರಿಷ್ಕೃತ ಕಿಟೆಲ್ ನಿಘಂಟು ಸಂಪುಟಗಳ ಬಳಿಕ ಈಚೆಗೆ ದ್ರಾವಿಡ ಭಾಷಾ ಜ್ಞಾತಿ ಪದಕೋಶ (ಪ್ರಧಾನ ಸಂಪಾದಕ- ಪ್ರೊ. ಹಂಪನಾ), ಪ್ರಾಕೃತ- ಕನ್ನಡ ಬೃಹತ್ ನಿಘಂಟು (ಕನ್ನಡಕ್ಕೆ ಡಾ. ಆರ್. ಲಕ್ಷ್ಮೀನಾರಾಯಣ) ಮುಂತಾದವು ಅವುಗಳಲ್ಲಿ ಕೆಲವು. ಪಂಡಿತ ಸೇಡಿಯಾಪು ಕೃಷ್ಣಭಟ್ಟ, ಶಿವರಾಮ ಕಾರಂತ, ಜಿ. ವೆಂಕಟಸುಬ್ಬಯ್ಯ, ಪಂಡಿತ ಕವಲಿ, ಪ್ರೊ. ಎಲ್.ಎಸ್. ಶೇಷಗಿರಿರಾವ್ ಹೀಗೆ ನಾವು ಹಲವು ಹಿರಿಯರ ನಿಘಂಟುಗಳನ್ನೂ ಹೆಸರಿಸಬಹುದು.

ಅವುಗಳೊಡನೆ ಔದ್ಯೋಗಿಕ, ಆಡಳಿತಾತ್ಮಕ, ಪ್ರಾದೇಶಿಕ (ಕುಂದಾಪುರ ಕನ್ನಡ, ಇತ್ಯಾದಿ), ಸಾಹಿತ್ಯಿಕ (ಪಂಪ, ಕುಮಾರವ್ಯಾಸ ಇತ್ಯಾದಿ ನಿಘಂಟುಗಳು), ಭಾಷಾವಾರು (ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲಿಷ್, ಮರಾಠಿ, ಉರ್ದು ಇತ್ಯಾದಿ), ಜಾನಪದ (ಬಾಲಕೃಷ್ಣ ಜಂಬಲಗಿ ಅವರ 'ನುಡಿ ಜಾನಪದ' ಇತ್ಯಾದಿ), ಕಲೆ (ಡಾ. ಎಂ. ಪ್ರಭಾಕರ ಜೋಶಿಯವರ ಯಕ್ಷಗಾನ ನಿಘಂಟು) ಇತ್ಯಾದಿ ಶಬ್ದಕೋಶಗಳೂ ಕನ್ನಡದಲ್ಲಿವೆ. ಈ ಸಾಲಿಗೆ ಇದೀಗ ಹೊಸದಾಗಿ ಅರಬ್ಬಿ- ಪಾರ್ಸಿ- ಕನ್ನಡ ಶಬ್ದಕೋಶವೂ ಸೇರಿದೆ.

ಸಾಮಾನ್ಯವಾಗಿ ಸಂಸ್ಕೃತ ಅಥವಾ ಇತರ ಕೆಲವು ಭಾರತೀಯ ಭಾಷಾ ಮೂಲಗಳಿಂದ ಬಂದ ಪದಗಳನ್ನು ನಿಘಂಟುಗಳಲ್ಲಿ ಸೂಚಿಸುವ ಕ್ರಮವಿದೆ. ಆದರೆ ವಿದೇಶೀ ಮೂಲದ ಶಬ್ದಗಳನ್ನು ಹಾಗೆ ಸೂಚಿಸುವ ಪರಿಪಾಠ ನಮ್ಮಲ್ಲಿ ಅಷ್ಟಾಗಿ ಬೆಳೆದುಬಂದಿಲ್ಲ. ಕೆಲವು ನಿಘಂಟುಗಳಲ್ಲಿ ಮಾತ್ರ(ಉದಾ:ಪಂಡಿತ್ ಕವಲಿಯವರ ಕಸ್ತೂರೀ ಕೋಶ) ಅನ್ಯದೇಶೀಯ ಎಂದು ಗುರುತಿಸುತ್ತಾರೆ. ಜಿ. ವೆಂಕಟಸುಬ್ಬಯ್ಯನವರ 'ಎರವಲು ಪದಕೋಶ', ಪಾ.ವೆಂ. ಆಚಾರ್ಯರ 'ಪದಾರ್ಥ ಚಿಂತಾಮಣಿ' ಮುಂತಾದ ಕೃತಿಗಳಲ್ಲಿ, ಮಂಜೇಶ್ವರ ಗೋವಿಂದ ಪೈಗಳ ಸಂಶೋಧನಾ ಬರಹಗಳಲ್ಲಿ ಪೋರ್ಚುಗೀಸ್, ಗ್ರೀಕ್ ಮೊದಲಾದ ಭಾಷೆಗಳಿಂದ ಕನ್ನಡಕ್ಕೆ ಬಂದ, ಕನ್ನಡದಿಂದ ಬೇರೆ ಭಾಷೆಗಳಿಗೆ ಹೋಗಿರಬಹುದಾದ ಹಲವು ಪದಗಳ ಮೂಲ ತಿಳಿಯುತ್ತದೆ.

ಡಾ. ಕೆ. ಶಂಕರ ಕೆದಿಲಾಯರು ಕನ್ನಡಕ್ಕೆ ಎರವಲು ಬಂದು ಇಲ್ಲೇ ಉಳಿದ ಅರೇಬಿಕ್ ಮತ್ತು ಪರ್ಶಿಯನ್ ಪದಗಳ ಸಂಶೋಧನಾ ಅಧ್ಯಯನ ಮಾಡಿದ್ದಾರೆ. ಆಡಳಿತದಲ್ಲಿ ಉಪಯೋಗಿಸುವ ವಿದೇಶೀ ಪದಗಳಿಗೆ (ಪರ್ಶಿಯನ್, ಅರೇಬಿಕ್ ಸೇರಿ) ನಿಶ್ಚಿತ ಅರ್ಥಕೊಡುವ ಗ್ಲಾಸರಿಗಳು ಚಾರಿತ್ರಿಕವಾಗಿ ಬ್ರಿಟಿಷರ ಆಡಳಿತ ಕಾಲದಿಂದಲೂ ಬೆಳೆದು ಬಂದಿವೆ. ಕಾನೂನು ಆಡಳಿತದ ಸ್ಪಷ್ಟ, ನೇರ ವಿವರಣೆಗಳಿಗೆ ಅಂತಹ ಲಘು ಶಬ್ದಕೋಶಗಳು ಬೇಕಾಗಿದ್ದವು. ಜರ್ಮನಿಯಿಂದ ಬಂದಿದ್ದ ರೆವರೆಂಡ್ ಕಿಟ್ಟೆಲ್ಲರ ಕನ್ನಡ ನಿಘಂಟು ರಚನೆಗೆ ಅಂತಹ ಆಡಳಿತಾತ್ಮಕ ಕಾರಣಗಳಿಗಾಗಿಯೇ ಬ್ರಿಟಿಷರು ಧನ ಸಹಾಯ ಮಾಡಿದರು. ಅವುಗಳಲ್ಲಿ ಮುಖ್ಯವಾಗಿ ಎಚ್.ಎಚ್. ವಿಲ್ಸನ್‌ರ (1855) ನ್ಯಾಯಾಂಗ ಮತ್ತು ಕಂದಾಯ ಇಲಾಖೆಗಳ ಗ್ಲಾಸರಿ ಮತ್ತು ಇತರ 12 ಕೃತಿಗಳನ್ನು ಡಾ. ಕುಲಕರ್ಣಿಯವರು ತಮ್ಮ ಆಕರ ಸೂಚಿಯಲ್ಲೂ ಹೆಸರಿಸುತ್ತಾರೆ.

ಒಳನೋಟ

ಅಂಚೆಯೆಂಬುದಕ್ಕೆ ನಾವು ನಿತ್ಯ ಬಳಸುವ ಟಪ್ಪಾಲು ಪದ ಪಾರ್ಸಿ ಎಂಬುದು ನೂತನ ಅರಬ್ಬಿ-ಪಾರ್ಸಿ ಶಬ್ದಕೋಶದಲ್ಲಿ ಸೂಚಿತವಾಗಿದೆ. ಈ ಮೊದಲು ಅದೇ ಪದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ನಿಘಂಟಿನಲ್ಲೂ ಸೇರಿದೆ. ಅಲ್ಲಿ ಅರ್ಥವಿವರಣೆ ಜೊತೆ ನಾಮಪದ ಎಂದು ಮಾತ್ರ ಸೂಚಿತವಾಗಿದೆ. 'ಟಪಾಲು' ಈಗ ಕನ್ನಡದ ಪದವೇ ಆಗಿದೆ ಎಂಬುದನ್ನದು ಸೂಚಿಸುತ್ತದೆ. ಅಂತಹ ಹಲವು ಪದಗಳ ಮೂಲ ಅರಿಯಲು ಅರಬ್ಬಿ- ಪಾರ್ಸಿ ಕನ್ನಡ ಶಬ್ದಕೋಶ ಸಹಕರಿಸುತ್ತದೆ.

ಡಾ. ಕುಲಕರ್ಣಿಯವರು ಕರ್ನಾಟಕದ ಬಹಮನಿ, ಆದಿಲ್‌ಶಾಹಿ ಆಡಳಿತಗಳ ಬಗ್ಗೆ ಅಧಿಕೃತವಾಗಿ ಹೇಳಬಲ್ಲವರು.

ಕ್ರಿ. ಶ. 1347 ರಲ್ಲಿ ಕರ್ನಾಟಕದ ಕೆಲವು ಭಾಗಗಳು ಬಹಮನಿ ಆಡಳಿತಕ್ಕೆ ಸೇರಿದ ಬಳಿಕ 1948 ರವರೆಗೆ, ಅಂದರೆ ಹೈದರಾಬಾದ್ ನಿಜಾಮರ ಆಡಳಿತದಲ್ಲಿದ್ದ ಕರ್ನಾಟಕದ ಭಾಗಗಳು ಸ್ವತಂತ್ರ ಭಾರತದಲ್ಲಿ ಸೇರ್ಪಡೆ ಆಗುವವರೆಗೆ ನಮ್ಮ ರಾಜ್ಯದಲ್ಲಿ ಪರ್ಶಿಯನ್ ಭಾಷೆ ಹಲವು ಕಡೆ ರಾಜಭಾಷೆಯಾಗಿ ಆಡಳಿತದಲ್ಲಿತ್ತು.

ಸುಮಾರು 600 ವರುಷಗಳ ಕಾಲ ಬಳಕೆಯಲ್ಲಿದ್ದ ರಾಜ ಭಾಷೆಯ ಪದಗಳು ನಿತ್ಯದ ಬಳಕೆಗೆ ಸೇರುವುದು ಸಹಜ. 'ಸರಕಾರ' ಎಂಬುದೇ ಪರ್ಶಿಯನ್ ಪದ. 'ರೈತ' 'ಜಿಲ್ಲೆ', 'ತಾಲೂಕು' ಪದಗಳು ಕೂಡಾ ಕನ್ನಡ ಮೂಲದ್ದಲ್ಲ. ಇಂತಹ ಹಲವು ಪದಗಳನ್ನು ಒಬ್ಬರ ಅಧ್ಯಯನದಿಂದ ಒಟ್ಟು ಮಾಡುವುದು ಸರಳ ಕೆಲಸವಲ್ಲ. ಅಂತಹ ಅಭಿನಂದನೀಯ ಕೆಲಸವನ್ನು ಡಾ. ಕುಲಕರ್ಣಿಯವರು ಮಾಡಿದ್ದಾರೆ. ಶಬ್ದಕೋಶದ ಮುಂದಿನ ಆವೃತ್ತಿಗಳಲ್ಲಿ ಅದನ್ನು ಪರಿಷ್ಕರಿಸುವುದು ಕನ್ನಡ ವಿದ್ವತ್ ವಲಯಕ್ಕೆ ಸೇರಿದ್ದಾಗಿದೆ.

ಭಾಷೆಯೊಂದು ಹಲವು ಕಾರಣಗಳಿಂದ ಬೆಳೆಯುತ್ತದೆ. ಕನ್ನಡ ಭಾಷೆಯೊಳಗೆ ಸೇರಿರುವ ವಿದೇಶಿ ಪದಗಳು ಅಚ್ಚ ಕನ್ನಡ ಶಬ್ದಗಳಂತೆ ಪ್ರಭಾವಶಾಲಿಯಾಗಿವೆ. ಇಂಗ್ಲಿಷ್ ಭಾಷೆ ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಹಲವು ಭಾಷೆಗಳಿಂದ ನೂತನ ಪದಗಳನ್ನು ಪಡೆಯುತ್ತಲಿದೆ. ಅವುಗಳನ್ನು ವಿಧ್ಯುಕ್ತವಾಗಿ ನಿಘಂಟಿಗೆ ಸೇರಿಸುವ ಕೆಲಸವನ್ನೂ ಅಲ್ಲಿನ ವಿದ್ವಾಂಸರು ಪ್ರತಿ ವರುಷ ಮಾಡುತ್ತಾರೆ.

ವಿಜ್ಞಾನ, ತಂತ್ರಜ್ಞಾನ ಮತ್ತಿತರ ಆಧುನಿಕ ಆರ್ಥಿಕತೆಯಿಂದ ಜನಜೀವನ ಬೆಳೆದಂತೆ ಸಂಪರ್ಕಕ್ಕೆ ಬರುವ ಹೊಸ ಭಾಷೆಗಳ ಪದಗಳು ನಮ್ಮ ಭಾಷೆಯೊಳಗೆ ಸೇರುತ್ತವೆ. ಕೃಷಿಯಲ್ಲಿ ಟ್ರಾಕ್ಟರ್‌ಗಳ ಉಪಯೋಗ ಹೆಚ್ಚಾದಂತೆ ಬೇಸಾಯದ ನಿತ್ಯಬಳಕೆಯಲ್ಲಿ ಹಲವು ಪದಗಳು ವ್ಯತ್ಯಾಸಗೊಂಡವು. ಅದರ ಬಗ್ಗೆ ಮಡಿವಂತಿಕೆ ಇರಬೇಕಾಗಿಲ್ಲ. ಹಾಗೆಯೇ ಅರೇಬಿಕ್, ಪರ್ಶಿಯನ್, ಇಂಗ್ಲಿಷ್, ಗ್ರೀಕ್, ಪೋರ್ಚುಗೀಸ್, ಟರ್ಕಿ, ಫ್ರೆಂಚ್, ಯಾವುದೇ ಭಾಷೆಯ ಪದಗಳನ್ನಾದರೂ ಕನ್ನಡ ಅರಗಿಸಿಕೊಂಡು ತನ್ನದಾಗಿಸಿಕೊಳ್ಳಬಲ್ಲದು. ಇದು ಹೊಸದಲ್ಲ. ಈ ಶಬ್ದಕೋಶದಿಂದ ಡಾ. ಕುಲಕರ್ಣಿಯವರು ಕನ್ನಡ ಭಾಷಾ ಅಧ್ಯಯನ ಪರಂಪರೆಗೆ ಮೌಲ್ಯಯುತವಾದ ಹೊಸ ಕೊಡುಗೆ ನೀಡಿದ್ದಾರೆ.

ಬುದ್ಧಿಜೀವಿ ಬಿಕ್ಕಟ್ಟುಗಳು: ಬೇರೆ ದಿಕ್ಕಿನ ನೋಟ

ಮೇಟಿ ಮಲ್ಲಿಕಾರ್ಜುನ

ಜೀನ್ ಪಾಲ್ ಸಾರ್ತ್ರ ಅವರ A Plea for Intellectuals ಎನ್ನುವ ಮಹತ್ವದ ಬರಹವನ್ನು ಕೆ.ವಿ.ನಾರಾಯಣ ಅವರು ಕನ್ನಡದಲ್ಲಿ ನಿರೂಪಿಸಿದ್ದಾರೆ. ಬುದ್ಧಿಜೀವಿಗಳನ್ನು ಕುರಿತ ಹಲವು ಮಹತ್ವದ ಬರಹಗಳು ಇಪ್ಪತ್ತನೇ ಶತಮಾನದಲ್ಲಿ ಬಂದಿರುತ್ತವೆ. ಆ ಎಲ್ಲ ಬರಹಗಳಲ್ಲಿ ಸಾರ್ತ್ರ ಅವರ ಈ ಬರಹ ವಿಶೇಷವಾಗಿದೆ. ಆದಾಗ್ಯೂ ಈ ಬರಹವು ಹೆಚ್ಚು ಚರ್ಚೆಗೆ ಒಳಗಾಗಿಲ್ಲ ಅನ್ನುವುದು ಗಮನಾರ್ಹ.

ಇಂತಹದೊಂದು ಬರಹವನ್ನು ಕನ್ನಡದಲ್ಲಿ ಈಗ ನಿರೂಪಿಸುವುದರ ಉದ್ದೇಶ ಏನಿರಬಹುದು ಎಂಬ ಕುತೂಹಲ ಯಾರಲ್ಲಾದರೂ ಮೂಡಬಹುದು. ಆದರೆ ಇಲ್ಲಿ ಮಂಡಿತವಾಗಿರುವ ವಿಚಾರಗಳು ಕುತೂಹಲಕ್ಕಷ್ಟೆ ಸಂಬಂಧಿಸಿದವುಗಳಲ್ಲ. ಬದಲಾಗಿ ಬುದ್ಧಿಜೀವಿ ಎನ್ನುವ ಪರಿಕಲ್ಪನೆಯ ಸುತ್ತಲೂ ಏರ್ಪಡಬಹುದಾದ ಗ್ರಹಿಕೆ, ತಾತ್ವಿಕತೆ ಹಾಗೂ ಸಾಮಾಜಿಕ-ರಾಜಕೀಯ ನೆಲೆಗಳು ಎಂತಹವು? ಈ ನಿಲುವುಗಳನ್ನು ಅರ್ಥೈಸುವಲ್ಲಿ ಸಾರ್ತ್ರ ಅವರು ಬಳಸಿಕೊಂಡಿರುವ ವಿಶ್ಲೇಷಣೆಯ ಬಗೆಗಳು ಯಾವವು? ಬುದ್ಧಿಜೀವಿ ಕುರಿತು ಚಾಮ್ಸ್ಕಿ, ಸೈದ್, ಜಾಕಿ ವಾಕರ್, ರೋಮಿಲಾ ಥಾಪರ್ ಮೊದಲಾದವರು ಚಿಂತಿಸಿದ ಬಗೆಗಿಂತ ಭಿನ್ನವಾಗಿ ಸಾರ್ತ್ರ ಅವರು ಹೇಗೆ ಚಿಂತಿಸಿದ್ದಾರೆ? ಬುದ್ಧಿಜೀವಿ ಬಗೆಗಿನ ಇಂತಹ ವಿಭಿನ್ನ ಚರ್ಚೆಗಳನ್ನು ಭಾರತ/ಕರ್ನಾಟಕದ ಸದ್ಯದ ರಾಜಕೀಯ ಹಾಗೂ ಸಾಮಾಜಿಕ ಸನ್ನಿವೇಶದಲ್ಲಿ ನೆಲೆಗೊಳಿಸುವುದರ ಹಿಂದಿನ ಆಶಯ ಏನು? ಎಂಬಿತ್ಯಾದಿ ಪ್ರಶ್ನೆಗಳ ಮೂಲಕ ಪ್ರಸ್ತುತ ಕನ್ನಡದ ನಿರೂಪಣೆಯನ್ನು ಅರಿಯಬಹುದಾಗಿದೆ.

ಬುದ್ಧಿಜೀವಿ ಕುರಿತ ನಮ್ಮ ಅಭಿಪ್ರಾಯ, ತಿಳಿವಳಿಕೆ ಹಾಗೂ ತಾತ್ವಿಕತೆಯನ್ನು ಮರು ಪರಿಶೀಲಿಸುವಂತೆ ಈ ಚಿಂತನೆಗಳು ಒತ್ತಾಯಿಸುತ್ತವೆ. ಬುದ್ಧಿಜೀವಿ ಅನ್ನುವ ಪರಿಕಲ್ಪನೆಯೇ ಎಷ್ಟೊಂದು ಸಂಕೀರ್ಣವಾದದ್ದು ಹಾಗೂ ಬುದ್ಧಿಜೀವಿ ಆಗುವ ಪ್ರಕ್ರಿಯೆಯಲ್ಲಿ ಎದುರಾಗುವ ಬಿಕ್ಕಟ್ಟು, ಸವಾಲು ಹಾಗೂ ವೈರುಧ್ಯಗಳ ಸ್ವರೂಪ ಎಂತಹದು ಎಂಬುದನ್ನು ಅತ್ಯಂತ ಕೂಲಂಕಷವಾಗಿ ಈ ಬರಹದಲ್ಲಿ ಚರ್ಚಿಸಲಾಗಿದೆ.

ಬುದ್ಧಿಜೀವಿಗಳು ಇರುವುದಿಲ್ಲ, ಆಗುತ್ತಾರೆ. ಈ ಆಗುವಿಕೆಗೆ ಕಾರಣಗಳು ಸಾಮಾಜಿಕ ನೆಲೆಯಲ್ಲಿರುತ್ತವೆ. ಸಮಾಜದ ಗತಿಶೀಲತೆಯಲ್ಲಿ ಬುದ್ಧಿಜೀವಿಗಳು ರೂಪುಗೊಳ್ಳುತ್ತಾರೆ ಎನ್ನುವುದು ಸಾರ್ತ್ರ ಅವರ ನಿಲುವು. ಬುದ್ಧಿಜೀವಿಗಳು ಸಮಾಜದಲ್ಲಿ ಇರುತ್ತಾರೆ. ಸರ್ಕಾರವು ಅನುಸರಿಸುವ ನಡೆಗಳಲ್ಲಿ ಜನರ ಹಿತಕ್ಕೆ ವಿರುದ್ಧವಾದುದು ಏನಿದೆ ಎನ್ನುವುದನ್ನು ತಿಳಿಸಿಕೊಡುವುದು ಬುದ್ಧಿಜೀವಿಗಳ ಕೆಲಸ ಎನ್ನುವುದು ಚಾಮ್ಸ್ಕಿ ಅವರ ನಿಲುವು. ಬುದ್ಧಿಜೀವಿ ಎಂಬ ಈ ಪರಿಕಲ್ಪನೆಯನ್ನು ಸಾರ್ತ್ರ ಅವರು ಸಮಸ್ಯೀಕರಿಸುವ ಬಗೆ ಮತ್ತು ಅದಕ್ಕೆ ಬಳಸಿಕೊಳ್ಳುವ ಪರಿಕರಗಳು ವಿಶಿಷ್ಟವೂ ಹಾಗೂ ಅತ್ಯಂತ ಸೂಕ್ತವೂ ಆಗಿರುತ್ತವೆ. ಹಾಗಾಗಿ ಸಾರ್ತ್ರ ಅವರ ಬುದ್ಧಿಜೀವಿ ಕುರಿತಾದ ಚರ್ಚೆಗಳನ್ನು ಕನ್ನಡಿಕರಿಸಿದ್ದು ಸಾಂಸ್ಕೃತಿಕವಾಗಿ ಹಾಗೂ ರಾಜಕೀಯವಾಗಿ ಅತ್ಯಂತ ಮಹತ್ವದ ವಿದ್ಯಮಾನವಾಗಿದೆ.



ಪು: 140 ₹100

ಬುದ್ಧಿಜೀವಿ ಬಿಕ್ಕಟ್ಟುಗಳು
ಕನ್ನಡ ನಿರೂಪಣೆ: ಕೆ.ವಿ. ನಾರಾಯಣ
ಪ್ರ: ಋತುಮಾನ
ಸಂ: 9480009997

ವಿಮರ್ಶೆ

ಬುದ್ಧಿಜೀವಿ ಅನ್ನುವಂತಹ ಪರಿಕಲ್ಪನೆ ಬಹಳ ವ್ಯಾಪಕವಾದ ಹಾಗೂ ಅಷ್ಟೇ ಸಂಕೀರ್ಣವಾದ ಮನೋಧರ್ಮ ಆಗಿರುತ್ತದೆ. ಬುದ್ಧಿಜೀವಿಯಾಗಿ ಹೊರಹೊಮ್ಮುವ ಆ ಇಡೀ ಪ್ರಕ್ರಿಯೆಯಲ್ಲಿ ಸಮಾಜ, ಸಂಸ್ಕೃತಿ, ಪ್ರಭುತ್ವ, ಅಧಿಕಾರ, ಬಂಡವಾಳಶಾಹಿ ಹಾಗೂ ಶಿಕ್ಷಣದಂತಹ ವಿನ್ಯಾಸಗಳು ಹೇಗೆ ಕಾರಣವಾಗುತ್ತವೆ ಮತ್ತು ಹೇಗೆ ಇವುಗಳು ನಿರ್ಬಂಧಕಗಳಾಗಿ ಮೈದೋರುತ್ತವೆ ಅನ್ನುವುದು ವಿಶೇಷ. ಅಂದರೆ ಬುದ್ಧಿಜೀವಿಗಳ ಅಸ್ತಿತ್ವದ ಪ್ರಶ್ನೆಗಳು, ಸಾಮಾಜಿಕ ನೆಲೆ ಮತ್ತು ಬಿಕ್ಕಟ್ಟುಗಳು ಹಾಗೂ ಅವುಗಳನ್ನು ನಿಭಾಯಿಸುವ ವಿನ್ಯಾಸಗಳನ್ನು ಕಂಡುಕೊಳ್ಳುವ ಸವಾಲುಗಳೂ ಅತ್ಯಂತ ಗಮನಾರ್ಹ.

ಬುದ್ಧಿಜೀವಿಗಳು ಆಯಾ ಸಮಾಜದ ಫಲಿತವೇ ಆಗಿರುತ್ತಾರೆ. ಆದರೆ, ಅದೇ ಸಮಾಜ ಅವರನ್ನು ಮಾನ್ಯಮಾಡುವ ಹಾಗೂ ಪರಿಗಣಿಸುವ ಬಗೆಗಳು ಅತ್ಯಂತ ಅಸಹಜವಾಗಿರುತ್ತವೆ. ಎಲ್ಲ ಕಾಲದಲ್ಲೂ ಎಲ್ಲ ಸಮಾಜಗಳಲ್ಲಿಯೂ ಬುದ್ಧಿಜೀವಿಗಳಿಗೆ ಮನ್ನಣೆ ಇರುವಂತೆ ಅತೀವವಾದ ತಿರಸ್ಕಾರವೂ ಇರುವುದನ್ನು ಕಾಣುತ್ತೇವೆ (ಪು:13). ಸೈದ್ ಅವರು ಹೇಳುವಂತೆ, ಬುದ್ಧಿಜೀವಿಗಳಿಗೆ ಒಂದು ಸಾರ್ವತ್ರಿಕವಾದ ಹಾಗೂ ಖಚಿತವಾದ ಚಹರೆಯನ್ನು ಗುರುತಿಸುವುದು ಆಗದ ಮಾತಾಗುತ್ತದೆ. ಕಾರಣವೇನೆಂದರೆ, ಒಬ್ಬ ತಜ್ಞನ ಅಧ್ಯಯನ ವಿಧಾನಕ್ಕೂ ಹಾಗೂ ಬುದ್ಧಿಜೀವಿ ಅಧ್ಯಯನ ವಿಧಾನಕ್ಕೂ ಹಲವು ಬಗೆಯ ಭಿನ್ನತೆಗಳಿರುವಂತೆಯೇ ಬಿಕ್ಕಟ್ಟುಗಳಿರುತ್ತವೆ.

ತಜ್ಞನಿಗೆ ಇರುವ ಸಾಮಾಜಿಕ ಮಾನ್ಯತೆ, ಬುದ್ಧಿಜೀವಿಗೆ ಇರಲಾರದು. ಇವನು ಯಾವಾಗಲೂ ತನ್ನೊಳಗಿನ ವೈರುಧ್ಯಗಳ ಜೊತೆಗೆ ಹೋರಾಡಬೇಕಾಗುತ್ತದೆ. ಹಾಗಾಗಿ ಇವನು ಅಧ್ಯಯನ ಮಾಡಬೇಕಾದ ಸಾಮಾಗ್ರಿಗಳು ಕೂಡ ತನ್ನೊಳಗಿನ ವೈರುಧ್ಯಗಳೇ ಆಗಿರುತ್ತವೆ. ಹಾಗಂತ ಆತ ತನ್ನನ್ನೇ ತಾನು ಅಂತರಂಗ ಪರಿವೀಕ್ಷಣೆಗೆ ಗುರಿ ಮಾಡಿಕೊಂಡು ಆ ಮೂಲಕ ತನ್ನ ಅಧ್ಯಯನ ಉದ್ದೇಶವನ್ನು ಪೂರ್ಣಗೊಳಿಸಿಕೊಳ್ಳಲಾರ. ಏಕೆಂದರೆ ಅವನನ್ನು ಆವರಿಸಿರುವ ಸಮಾಜವು ಅವನನ್ನು ರೂಪಿಸಿದೆ. ಆ ಸಮಾಜದ ಪರಿಪ್ರೇಕ್ಷ್ಯದಲ್ಲಿ ಇರಿಸಿಕೊಳ್ಳದೇ ಅವನ ಅಧ್ಯಯನ ಮುಂದುವರೆಯುವುದು ಸಾಧ್ಯವಾಗದು (ಪು:71).

ಆತ ಚರಿತ್ರೆಯ ಕೂಸೂ ಹೌದು. ಯಾವ ಸಮಾಜ ಕೂಡ ತನ್ನ ಬುದ್ಧಿಜೀವಿಗಳ ಬಗೆಗೆ ತಕರಾರು ತೆಗೆಯುವಂತಿಲ್ಲ. ಏಕೆಂದರೆ ಆ ಸಮಾಜವೇ ಅವರನ್ನು ಸೃಷ್ಟಿಸಿರುತ್ತದೆ. ಬುದ್ಧಿಜೀವಿಗಳ ಬಿಕ್ಕಟ್ಟು ಎನ್ನುವಂತಹದು ಜಾಗತಿಕ ವಿದ್ಯಮಾನ. ಈ ಲೋಕದ ಪ್ರಭುತ್ವ ವ್ಯವಸ್ಥೆ, ಅದು ರೂಪಿಸುವ ಹುಸಿ ನಂಬಿಕೆ, ಈ ನಂಬಿಕೆಯನ್ನು ನೆಲೆಗೊಳಿಸಲು ಶಿಕ್ಷಣವನ್ನು ಪ್ರಭುತ್ವ ಹೇಗೆ ಒಂದು ಆಯುಧವನ್ನಾಗಿ ಬೆಳೆಸುತ್ತದೆ ಎನ್ನುವುದಕ್ಕೆ ಅತ್ಯಂತ ಸಮಂಜಸವಾದ ನಿದರ್ಶನಗಳು ಇಲ್ಲಿ ಪ್ರಕಟಗೊಂಡಿವೆ.

ಬುದ್ಧಿಜೀವಿಯ ಬಿಕ್ಕಟ್ಟುಗಳನ್ನು ರೂಪಿಸುವಲ್ಲಿ ಪ್ರಭುತ್ವದ ಯಜಮಾನಿಕೆ, ಅಧಿಕಾರ ಸಂಬಂಧ ಹಾಗೂ ಬಂಡವಾಳಶಾಹಿ ನಿಲುವು ಪ್ರಮುಖವಾಗಿರುತ್ತವೆ. ಅಷ್ಟೆ ಅಲ್ಲದೇ ಈ ಎಲ್ಲ ನಿಲುವುಗಳು ಬೂರ್ಜ್ವಾಸಿ ವರ್ಗದ ಆಶೋತ್ತರಗಳನ್ನು ಎತ್ತಿಹಿಡಿಯುವ ಆಯಾಮವನ್ನು ಹೊಂದಿರುತ್ತವೆ. ವಿಶ್ವಾತ್ಮಕ ಆಯಾಮಗಳನ್ನು ಹೊಂದಿರುವ ಇಂತಹ ಸಂಗತಿ ಇಲ್ಲವೇ ವಿದ್ಯಮಾನಗಳೂ ಹೇಗೆ ಒಂದು ನಿರ್ದಿಷ್ಟತೆಯನ್ನು ಪಡೆದುಕೊಳ್ಳುತ್ತವೆ ಎಂಬ ಕಟು ವಾಸ್ತವವನ್ನು ಸಾರ್ತ್ರ ಅತ್ಯಂತ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

ಬುದ್ಧಿಜೀವಿಗಳ ಲಕ್ಷಣ, ಸ್ವರೂಪ, ಕ್ರಿಯಾಶೀಲತೆ ಹಾಗೂ ಅವರು ಪ್ರತಿನಿಧಿಸಬಹುದಾದ ವಿನ್ಯಾಸಗಳನ್ನು ಕುರಿತು ಇಷ್ಟೊಂದು ತಲಸ್ಪರ್ಶಿಯಾಗಿ ಚರ್ಚಿಸಿರುವುದು ವಿರಳ. ತಾನು ಹುಟ್ಟಿ ಬೆಳೆದ ಸಮುದಾಯದಿಂದಲೇ ಈ ಬುದ್ಧಿಜೀವಿ ಹೇಗೆ ಪ್ರತ್ಯೇಕಗೊಳ್ಳುತ್ತಾನೆ ಹಾಗೂ ಇಂತಹ ಪ್ರತ್ಯೇಕತೆಯನ್ನು ನೆಲೆಗೊಳಿಸುವಲ್ಲಿ ಪ್ರಭುತ್ವ, ಶಿಕ್ಷಣ ಮತ್ತು ಸವಲತ್ತುಗಳು ಹೇಗೆ ಕಾರಣವಾಗುತ್ತವೆ ಎಂಬುದನ್ನು ವಿಸ್ತೃತವಾಗಿ ಚರ್ಚಿಸಲಾಗಿದೆ. ತಜ್ಞರನ್ನು ರೂಪಿಸುವ ಕ್ರಿಯೆಗೆ ಬೇಕಾಗುವ ತಾತ್ವಿಕತೆಯನ್ನು ಮತ್ತು ಕಾರ್ಯವಿಧಾನಗಳನ್ನು ನಿಯಂತ್ರಿಸಲು ಅಗತ್ಯವಾದ ತಕ್ಕ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಲಾಗಿದೆ (ಪು.51). ಈ ತಜ್ಞರನ್ನು ಒಂದು ನಿಗದಿಯಾದ ವಲಯದ ತಜ್ಞರನ್ನಾಗಿ ರೂಪಿಸುವ ಮತ್ತು ಪ್ರಭುತ್ವದ ಯಜಮಾನ್ಯವನ್ನು ಸಂರಕ್ಷಿಸುವ ಹೊಣೆಯನ್ನು ನಿರ್ವಹಿಸುವಂತೆ ಇವರಿಗೆ ತರಬೇತಿ ನೀಡಲಾಗುತ್ತದೆ.

ಈ ಪ್ರಕ್ರಿಯೆಯಲ್ಲಿಯೇ ಶಿಕ್ಷಣ ಹೇಗೆ ಒಂದು ರಾಜಕೀಯ ಅಸ್ತ್ರವಾಗಿ ಬಳಕೆಯಾಗುತ್ತದೆ ಅನ್ನುವದನ್ನು ಗಮನಿಸಬಹುದು. ತಜ್ಞರು ರೂಪಿಸುವ ವಿಶ್ಲೇಷಣೆಗಳು ಬಹುತೇಕವಾಗಿ ಪ್ರಭುತ್ವದ ಹಿತಾಸಕ್ತಿಯನ್ನು ಕಾಪಾಡುವ ಇರಾದೆಯನ್ನು ಹೊಂದಿರುತ್ತವೆ ಎಂಬುದು ಇಲ್ಲಿಯ ಚರ್ಚೆಗಳ ಮೂಲಕ ಸಾಬೀತುಗೊಂಡಿದೆ. ಆದರೆ ಆಳುವ ವರ್ಗವು ತಜ್ಞರಿಗೆಂದು ತಾನು ನಿಗದಿಗೊಳಿಸಿರುವ ಸಾಮಾಜಿಕ ಚೌಕಟ್ಟಿನಲ್ಲಿಯೇ ಅಡಕವಾಗಿರುವ ಪರಸ್ಪರ ವಿರೋಧಾತ್ಮಕ ಸಂಗತಿಗಳೇ ಕಾರಣವಾಗಿ ಬುದ್ಧಿಜೀವಿಯು ಮೈದಾಳುತ್ತಾನೆ. ಇಂತಹ ಸಂಗತಿಗಳು ಕೃತಿಯಲ್ಲಿ ವಿಸ್ತೃತವಾಗಿ ಚರ್ಚೆಗೆ ಒಳಗಾಗಿವೆ.

ಮೊದಲ ಓದು

'ಕುವೆಂಪು ಪ್ರತಿಷ್ಠಾನ' ಕಟ್ಟಿದ ಹಾದಿ

ಮನೇ ಮನೇ ಮುದ್ದು ಮನೇ
ಮನೇ ಮನೇ ನನ್ನ ಮನೇ!
ನಾನು ನುಡಿಯ ಕಲಿತ ಮನೆ,
ನಾನು ನಡಿಗೆಯರಿತ ಮನೆ:
ಹಕ್ಕಿ ಬಳಗ ಸುತ್ತ ಕೂಡಿ
ಬೈಗು ಬೆಳಗು ಹಾಡಿ ಹಾಡಿ
ಮಲೆಯನಾಡ ಸಗ್ಗ ಮಾಡಿ
ನಲಿಸುತ್ತಿದ್ದ ನನ್ನ ಮನೆ!
–**ಕುವೆಂಪು**

ಮನೆಯ ಸುತ್ತ ಅದೆಷ್ಟು ನೆನಪುಗಳು. ಕುಪ್ಪಳಿ ಮನೆ ಮತ್ತು ಅದರ ಸುತ್ತಮುತ್ತಲಿನ ಪರಿಸರದ ಕುರಿತು ಸಾಕಷ್ಟು ವಿವರಗಳನ್ನು ತಮ್ಮ ಅನೇಕ ಸಾಹಿತ್ಯದಲ್ಲಿ ಕುವೆಂಪು ಅವರು ಉಲ್ಲೇಖಿಸಿದ್ದರು. ಈ ಮನೆ ಕವಿಮನೆಯಾಗಿ ಜೊತೆಗೆ ಕುವೆಂಪು ಪ್ರತಿಷ್ಠಾನ ಬೆಳೆದ ಹೆಜ್ಜೆಗಳೇ 'ಕಟ್ಟುವ ಹಾದಿಯಲ್ಲಿ...'

ಲೇಖಕ ಕಡಿದಾಳ್ ಪ್ರಕಾಶ್ ಅವರ ಚೊಚ್ಚಲ ಕೃತಿ ಇದು. ಪ್ರಕಾಶ್ ಅವರು ಕುವೆಂಪು ಅವರ ಒಡನಾಡಿಯಾಗಿರಲಿಲ್ಲ. ಆದರೆ ಬಾಲ್ಯದಲ್ಲಿ ಕುವೆಂಪು ಅವರನ್ನು ನೋಡಿದ ನೆನಪಿನಿಂದಲೇ ಮೊದಲ ಅಧ್ಯಾಯವನ್ನು ಆರಂಭಿಸುತ್ತಾರೆ ಪ್ರಕಾಶ್. ಕುವೆಂಪು ಪ್ರತಿಷ್ಠಾನ ಎನ್ನುವುದು ಒಂದೆರಡು ದಿನಗಳಲ್ಲಿ ಹುಟ್ಟಿ ಚಿಗುರಿದ್ದಲ್ಲ. ಅದರ ಹಿಂದೆ ನೆನಪುಗಳ ಸರಮಾಲೆಯೇ ಇದೆ. ಈ ಘಟನಾವಳಿಗಳನ್ನು 28 ಅಧ್ಯಾಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ ಲೇಖಕರು. ಪ್ರತಿಯೊಂದು ಅಧ್ಯಾಯಕ್ಕೂ ಒಪ್ಪುವ ಕುವೆಂಪು ಅವರ ಕವಿತೆಯ ಸಾಲು ಓದಿಗೆ ವೇದಿಕೆ.



ಪು: 288 ₹500

ಕಟ್ಟುವ ಹಾದಿಯಲ್ಲಿ...
ಕುವೆಂಪು ಪ್ರತಿಷ್ಠಾನ: ಉಗಮ–ವಿಕಾಸ
ಲೇ: ಕಡಿದಾಳ್ ಪ್ರಕಾಶ್
ಪ್ರ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ
ಸಂ: 9019063692

'ಕುಪ್ಪಳ್ಳಿಯಲ್ಲಿ ಕವಿಯ ಅಂತ್ಯಸಂಸ್ಕಾರ' ಎಂಬ ಅಧ್ಯಾಯ ರಾಷ್ಟ್ರಕವಿಯ ಅಂತಿಮಯಾತ್ರೆಯ ಕ್ಷಣಕ್ಷಣದ ವಿವರಣೆ. ಅಂತ್ಯಸಂಸ್ಕಾರಕ್ಕೆ ಶಿವಮೊಗ್ಗದ ಅರಣ್ಯ ಇಲಾಖೆ ಒಂದು ಲಾರಿಯಲ್ಲಿ ಗಂಧದ ತುಂಡುಗಳನ್ನು ತುಂಬಿಸಿ ತಂದ ಘಟನೆ, ಪಾರ್ಥಿವ ಶರೀರ ಕುಪ್ಪಳಿ ಮನೆ ತಲುಪುವ ಐದು ನಿಮಿಷದ ಹಿಂದೆ ದೊಡ್ಡ ಹುಲಿಯೊಂದು ಕವಿಮನೆ ಮುಂಭಾಗದಲ್ಲಿ ರಸ್ತೆ ದಾಟಿದ ಘಟನೆ, 'ಮನೇ ಮನೇ ನನ್ನ ಮನೇ' ಎಂಬ ಪದ್ಯ ಕಣ್ಣೀರಾಗಿ ಹರಿದ ವಿವರಣೆ ಮನಸ್ಸು ತಟ್ಟುತ್ತದೆ. ಪ್ರತಿ ಅಧ್ಯಾಯ ಮುಗಿಸುತ್ತಿದ್ದಂತೆಯೇ ಕವಿಮನೆಯ ಸುತ್ತೊಂದು ಪ್ರದಕ್ಷಿಣೆ ಹಾಕಿಬಂದ ಅನುಭವ.

ಓದಿಗೆ ಪೂರಕವಾಗಿ ಛಾಯಾಚಿತ್ರಗಳು ಘಟನಾವಳಿಗಳನ್ನು ಕಣ್ಮುಂದೆ ತಂದು ನಿಲ್ಲಿಸಿವೆ. ಇದಕ್ಕೆ ಉತ್ತಮ ಉದಾಹರಣೆ ಕವಿಶೈಲ ಸ್ಮಾರಕದ ನಿರ್ಮಾಣ. ಅಲ್ಲಿನ ಪ್ರತಿಯೊಂದು ಕಲ್ಲಿನ ದಿಮ್ಮಿಗಳ ಹಿಂದೆ ರೋಚಕ ಕಥೆಯಿದೆ. ಅದೆಲ್ಲವೂ ಈ ಕೃತಿಯಲ್ಲಿ ಅಡಗಿದೆ. ಪ್ರತಿಷ್ಠಾನ ನಡೆದು ಬಂದ ದಾರಿಯ ಸಿಂಹಾವಲೋಕನದ ಈ ಕೃತಿ ತನ್ನ ಅನನ್ಯ ವಿವರಣೆಗಳಿಂದ ಸ್ಮರಣೆಯಲ್ಲಿ ಅಚ್ಚಳಿಯದೆ ಉಳಿಯುತ್ತದೆ.

'ರಾಮ'ರಾಜ್ಯ ಸ್ಥಿರೀಕರಣದ ಆಶಯ

ಇತಿಹಾಸ, ಅಧ್ಯಾತ್ಮ ಮತ್ತು ಪ್ರಸ್ತುತ ನೆಲೆಗಟ್ಟಿನಲ್ಲಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಚಿಂತನೆಯ ದೃಷ್ಟಿಕೋನದಲ್ಲಿ ಭಾರತದ ಪ್ರಜಾತಂತ್ರದ ನೋಟ ಕೊಡಲು ಈ ಕೃತಿ ಪ್ರಯತ್ನಿಸಿದೆ. ಇದುವರೆಗಿನ ಶಿಕ್ಷಣದ ಪಠ್ಯದಲ್ಲಿರುವ ಇತಿಹಾಸದ ಉಲ್ಲೇಖಗಳನ್ನೂ, ಇತರ ದೃಷ್ಟಿಕೋನದ ಇತಿಹಾಸವನ್ನೂ ಸಮತೋಲಿಸಿಕೊಂಡು ಅವಲೋಕನ ಮಾಡಲಾಗಿದೆ.



ಪು: 340 ₹399

ದೇಸಿ ಪ್ರಜಾತಂತ್ರ
ಲೇ: ವಿಕಾಸ್ ಕುಮಾರ್ ಪಿ.
ಪ್ರ: ಅಯೋಧ್ಯಾ ಪಬ್ಲಿಕೇಷನ್ಸ್, ಬೆಂಗಳೂರು
ಸಂ: 9620916996

ಕೃತಿಯಲ್ಲಿ ಮೂರು ಭಾಗಗಳಿವೆ. ವಂಶವೃಕ್ಷ, ಜಟಿಲಸಿಕ್ಕು, ಹಾಲಿ ಮತ್ತು ಭವಿಷ್ಯದ ಭಾರತದ ದೃಷ್ಟಿಯ ಅಸ್ತಿ ಭಾರ ಎಂಬ ವಿಭಾಗಗಳಿವು. ಒಟ್ಟಿನಲ್ಲಿ 2014ರ ನಂತರ ಬದಲಾದ, ಬದಲಾಗುತ್ತಿರುವ ಭಾರತದತ್ತ, ರಾಜಕೀಯ ವಿದ್ಯಮಾನಗಳತ್ತ ಹೆಚ್ಚು ಗಮನಹರಿಸಿದೆ ಈ ಕೃತಿ. ಸಹಜವಾಗಿ 2014ರ ನಂತರದ ಬದಲಾವಣೆಯನ್ನು ಬಲವಾಗಿ ಸ್ಥಿರೀಕರಿಸುವ ಆಶಯವೂ ಕೃತಿಗಿದೆ. ಹಾಗಾಗಿ 'ಅಸ್ತಿಭಾರ' ವಿಭಾಗದಲ್ಲಿ ಆಡಳಿತ ವ್ಯವಸ್ಥೆ (ಧರ್ಮ ರಾಜ್ಯ)ಯಿಂದ ಹಿಡಿದು ರಾಮ ರಾಜ್ಯ– ಆದರ್ಶ ರಾಜ್ಯ, ಆರ್ಥಿಕತೆ, ಸದ್ಯ ಪ್ರತಿಪಾದಿಸುತ್ತಿರುವ ಆತ್ಮ ನಿರ್ಭರ ಭಾರತದ ಕುರಿತೇ ಚರ್ಚೆ ಕೇಂದ್ರೀಕೃತವಾಗಿದೆ. ಸಣ್ಣ ಸಣ್ಣ ವಿಷಯಗಳಿಗೂ ವಿವರಗಳಿವೆ. ಆರ್ಥಿಕ ಸಮೃದ್ಧಿಯೇ ಅಂತಿಮವಲ್ಲ ಎಂಬ ಧೋರಣೆಯನ್ನು ಇಲ್ಲಿನ ಚರ್ಚೆ ಪ್ರತಿಪಾದಿಸುತ್ತಿದೆ. ಭಾರತೀಯನೊಬ್ಬ ಸ್ವಾವಲಂಬಿಯಾಗಿ ವ್ಯಕ್ತಿ ಘನತೆಯನ್ನು ಕಾಪಾಡಿಕೊಂಡು ಬಾಳುವ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆ ಹೊಂದುವ ಪರಿಕಲ್ಪನೆಗಳನ್ನು ನೀಡಲಾಗಿದೆ.

'ಬದಲಾದ' ಭಾರತವನ್ನು ಸಮರ್ಥಿಸುವ, ಪ್ರತಿರೋಧದ ಧ್ವನಿಗಳಿಗೆ ಚುಚ್ಚುವ, ಹಾಲಿ ನಾಯಕತ್ವವೇ ಪರಿಪೂರ್ಣವಾದದ್ದು ಎಂದೇ ಬಿಂಬಿಸುವ ಪ್ರಯತ್ನಗಳು ಕೃತಿಯಲ್ಲಿ ಢಾಳಾಗಿ ಇವೆ. ಹಾಗಾಗಿ 'ರಾಮ' ರಾಜ್ಯದ ಆಶಯವೇ ಕೃತಿಯದ್ದು. ಕೃತಿಗೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಮುನ್ನುಡಿಯಿದೆ. ಇದು ಆರ್‌ಎಸ್‌ಎಸ್ ಸಿದ್ಧಾಂತದ ವಿವರಗಳನ್ನೂ ಹೊಂದಿದ ಕೃತಿ. ಓದುವಿಕೆ, ಹೊಸ ಆಯಾಮದ ಚರ್ಚೆಗಾಗಿ ಓದಬಹುದಾದ ಪುಸ್ತಕ.

ಕಪೋತ ಪ್ರೇಮ

1ನೇ ಪುಟದಿಂದ...

ಆದರೂ ಅದು ಮರಳಿಬಂತು. ಆಗ ಶಂಕರ್ ನಂದಿಬೆಟ್ಟಕ್ಕೆ (ಸುಮಾರು 50 ಕಿ.ಮೀ) ಅದನ್ನು ತೆಗೆದುಕೊಂಡು ಹೋಗಿ ಬಿಟ್ಟರು. ಅವರು ತಮ್ಮ ವಾಹನದಲ್ಲಿ ಮರಳುವ ಮುನ್ನವೇ ಪಾರಿವಾಳ ಮನೆ ಸೇರಿತ್ತು!

ಆಗ ಬೆಳೆದ ಪಾರಿವಾಳ ಪ್ರೀತಿ ಇಂದಿಗೂ ಬೆಸೆದುಕೊಂಡಿದೆ. ತಮ್ಮ ಮನೆಯಲ್ಲಿ ಉತ್ತಮ ತಳಿಯ ಪಾರಿವಾಳ ಸಾಕಲು ಆರಂಭಿಸಿದರು. 2011ರಲ್ಲಿ ತಮ್ಮದೇ ಸ್ವಂತ ಮನೆ ನಿರ್ಮಿಸಿದಾಗ ಮಹಡಿಯಲ್ಲಿ ಪ್ರೀತಿಯ ಹಕ್ಕಿಗಳಿಗಾಗಿಯೇ ವಿಶೇಷ ವಾಸಸ್ಥಳ ನಿರ್ಮಿಸಿದರು.

'ಇವು ನಮ್ಮ ಕುಟುಂಬದ ಅವಿಭಾಜ್ಯ ಅಂಗವಾಗಿಬಿಟ್ಟಿವೆ. ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಹಾರಾಟದ ಟ್ರೇನಿಂಗ್ ನೀಡುವುದು, ಆಹಾರ ಹಾಕುವುದು, ಅವುಗಳ ವಾಸಸ್ಥಳ ಸ್ವಚ್ಛಗೊಳಿಸುವುದು ನನ್ನ ಹಾಗೂ ತಮ್ಮನ ಕೆಲಸವಾಗಿದೆ' ಎಂದು ಶಂಕರ್ ಹೇಳುತ್ತಾರೆ.

ಪಾರಿವಾಳ ರೇಸ್ ಹೇಗೆ?

ಭೂಮಿಯಿಂದ ಹೊರಹೊಮ್ಮುವ ಆಯಸ್ಕಾಂತೀಯ ಸೂಕ್ಷ್ಮ ತರಂಗಗಳನ್ನು ಗ್ರಹಿಸುವ ಸೂಕ್ಷ್ಮವಾದ ಗುಣ ಪಾರಿವಾಳಗಳಿಗಿದೆ. ಆದ್ದರಿಂದ ಅವುಗಳು ಎಷ್ಟೇ ದೂರ ಹೋದರೂ ತಮ್ಮ ಮೂಲಸ್ಥಾನಕ್ಕೆ ಮರಳುತ್ತವೆ. ಅವುಗಳ ಈ ಗುಣದಿಂದಾಗಿ ಅವುಗಳನ್ನು ರೇಸ್‌ಗೆ ಬಳಸಲಾಗುತ್ತದೆ. ಇದು ಮೊಘಲ್ ಕಾಲದಿಂದಲೂ ಇದೆ ಎನ್ನಲಾಗುತ್ತದೆ. ಈಗ ತಮಿಳುನಾಡಿನಲ್ಲಿ ಈ ಹವ್ಯಾಸ ಜೋರಾಗಿದೆ.

'ಇದರಲ್ಲಿ ಎರಡು ಬಗೆ ಇವೆ. ಕೆಲವರು ಬೆಟ್ಟಿಂಗ್‌ಗಾಗಿ ಇದನ್ನು ಮಾಡುತ್ತಾರೆ. ಅದು ಕಾನೂನುಬಾಹಿರ. ಆದರೆ ನಮ್ಮಂತ ಹವ್ಯಾಸಿ ಕ್ಲಬ್‌ಗಳು ದೇಶದಲ್ಲಿ ಬಹಳಷ್ಟಿವೆ. ಇಲ್ಲಿ ವೈಜ್ಞಾನಿಕವಾಗಿ ಹಾಗೂ ಶಿಸ್ತುಬದ್ಧವಾಗಿ ರೇಸ್ ನಡೆಸಲಾಗುತ್ತದೆ. ಪಾರಿವಾಳಗಳನ್ನು ಗುರುತಿಸಲು ಅವುಗಳ ರೆಕ್ಕೆಗಳಿಗೆ ಮುದ್ರೆಯೊತ್ತಲಾಗುತ್ತದೆ. ಅದರಲ್ಲಿ ಅವುಗಳನ್ನು ಹಾರಿಬಿಟ್ಟ ದಿನಾಂಕ, ಊರು ಮತ್ತಿತರ ವಿವರಗಳಿರುತ್ತವೆ. ರಬ್ಬರ್ ಉಂಗುರಗಳನ್ನು (ಬೇರೆ ಬೇರೆ ವರ್ಣ) ಕಾಲಿಗೆ ಹಾಕಲಾಗುತ್ತದೆ. ಅದರಲ್ಲಿ ಅವುಗಳಿಗೊಂದು ರಹಸ್ಯ ಸಂಖ್ಯೆಯನ್ನು ನಮೂದಿಸಲಾಗಿರುತ್ತದೆ. ದೆಹಲಿ, ಜೈಪುರದಂತಹ ದೂರ ಊರುಗಳಿಗೆ ಬೇರೆ ಬೇರೆ ಕ್ಲಬ್‌ನವರು ಸೇರಿಕೊಂಡು ಪಾರಿವಾರಗಳನ್ನು ವಿಶೇಷ ಪಂಜರಗಳಲ್ಲಿ ವಿಮಾನ ಮೂಲಕ ಕಳಿಸುತ್ತೇವೆ. ಅದಕ್ಕೊಬ್ಬರು ಉಸ್ತುವಾರಿ ಇರುತ್ತಾರೆ. ಅವರು ಅಲ್ಲಿ ಹೋಗಿ ಅವುಗಳನ್ನು ನಿಗದಿತ ದಿನ ಹಾಗೂ ಸಮಯಕ್ಕೆ ರಿಲೀಸ್ ಮಾಡ್ತಾರೆ. 200–300 ಕಿಲೋಮೀಟರ್‌ಗಳ ದೂರವಾದರೆ ನಾವೇ ನಮ್ಮ ವಾಹನದಲ್ಲಿ ತೆಗೆದುಕೊಂಡು ಹೋಗುತ್ತೇವೆ. ಇದಕ್ಕೆಲ್ಲ ನಮ್ಮ ಜೇಬಿಂದಲೇ ಖರ್ಚು ಮಾಡಬೇಕಾಗುತ್ತದೆ. ಇಲ್ಲಿ ಲಾಭ ನಷ್ಟದ ಲೆಕ್ಕಾಚಾರವಿಲ್ಲ. ಪ್ರತಿವರ್ಷ ಇವುಗಳನ್ನು ಸಾಕಲು ಸುಮಾರು ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ' ಎಂದು ಶಂಕರ್ ವಿವರಿಸುತ್ತಾರೆ.



ಅದೆಷ್ಟೋ ದೂರದಿಂದ ಹಾರಿಬಂದೆ...ನನಗಂತೂ ಸುಸ್ತಾಯಿತು...ಹೀಗೊಂದು ಸಂವಾದ ನಡೆಯುತ್ತಿದೆಯೇ?

ಪಾರಿವಾಳ–ಮಾನವಸ್ನೇಹ..

'ಕಸ್ತೂರಿ ನಿವಾಸ'ದಲ್ಲಿ ಡಾ. ರಾಜ್‌ಕುಮಾರ್ ಅವರ ಹೆಗಲ ಮೇಲೆ ಕುಳಿತು ನಲಿಯುವ ಪಾರಿವಾಳವನ್ನು ನೋಡುಗರು ಮರೆಯಲು ಸಾಧ್ಯವಿಲ್ಲ. ಈ ಪಾರಿವಾಳಗಳು ಅನಾದಿಕಾಲದಿಂದಲೂ ಮಾನವಸ್ನೇಹಿಗಳು. 12ನೇ ಶತಮಾನದಿಂದಲೂ ಮಂಗೋಲಿಯಾ, ಪರ್ಷಿಯಾ, ಮೊಘಲ್ ರಾಜರು ಪಾರಿವಾಳಗಳನ್ನು ಸಂದೇಶ ರವಾನೆಗಾಗಿ ಬಳಸಿಕೊಳ್ಳುತ್ತಿದ್ದರು. ಆನೆ, ಕುದುರೆಗಳ ಜೊತೆಗೆ ಪಾರಿವಾಳಗಳ ಸಾಕಾಣಿಕೆಗೂ ವಿಶೇಷ ಆದ್ಯತೆ ನೀಡಲಾಗುತ್ತಿತ್ತು.

1851ರಲ್ಲಿ ರಾಯಿಟರ್ಸ್ ಸುದ್ದಿ ಸಂಸ್ಥೆಯ ಸಂಸ್ಥಾಪಕ ಪಾಲ್ ಜೂಲಿಯಸ್ ಕೂಡ ಅಂಚೆನ್ ಹಾಗೂ ಬ್ರುಸೆಲ್ಸ್ ನಡುವೆ ಮಾಹಿತಿ ವಿನಿಮಯಕ್ಕಾಗಿ ಪಾರಿವಾಳಗಳ ಸೇವೆ ಪಡೆಯುತ್ತಿದ್ದರಂತೆ. ಅವರಲ್ಲಿ 40ಕ್ಕೂ ಹೆಚ್ಚು ಪಾರಿವಾಳಗಳ ದಂಡು ಇತ್ತಂತೆ.

ಬ್ರಿಟಾನಿಕಾ ಎನ್‌ಸೈಕ್ಲೊಪಿಡಿಯಾ ಪ್ರಕಾರ 1818ರಲ್ಲಿ ಬೆಲ್ಜಿಯಂನಲ್ಲಿ ಮೊದಲ ಬಾರಿಗೆ ಪಾರಿವಾಳಗಳ ರೇಸ್ ಆರಂಭವಾಯಿತು. ನಂತರ ಯುರೋಪ್ ದೇಶಗಳಲ್ಲಿ ಜನಪ್ರಿಯವಾಯಿತು. ಮೊಘಲ್ ಹಾಗೂ ಬ್ರಿಟಿಷರಿಂದಾಗಿ ಭಾರತದಲ್ಲಿಯೂ ಬೆಳೆಯಿತು. ದೆಹಲಿಯಲ್ಲಿ ಇವತ್ತಿಗೂ 'ಕಬೂತರ್‌ಬಾಜ್' ಬಹಳ ಜನಪ್ರಿಯವಾಗಿದೆ. ತಮಿಳುನಾಡಿನಲ್ಲಂತೂ ಇದು ಪರಂಪರೆ.

ಉತ್ತಮ ತಳಿಯ ಪಾರಿವಾಳಗಳನ್ನು ಸಾಕಲಾಗುತ್ತದೆ. ಮೂರರಿಂದ ಏಳು ವರ್ಷದೊಳಗಿನ ಮರಿಗಳನ್ನು ಮೊದಲು ಅವುಗಳಿಗೆ ತಮ್ಮ ವಾಸಸ್ಥಾನದ ಅರಿವು ಮೂಡಿಸಲು ಕೆಲವು ದಿನಗಳ ತರಬೇತಿ ನೀಡಲಾಗುತ್ತದೆ. ಪ್ರತಿನಿತ್ಯವೂ 15–16 ಬಗೆಯ ಧಾನ್ಯಗಳ ಮಿಶ್ರಣದ ಆಹಾರವನ್ನು ನೀಡಲಾಗುತ್ತದೆ. ಇದರಿಂದಾಗಿ ಅವುಗಳ ಶಕ್ತಿವರ್ಧನೆಯಾಗುತ್ತದೆ. ಹಕ್ಕಿಜ್ವರ ಮತ್ತಿತರ ಕಾಯಿಲೆಗಳು ಬರದಂತೆ ಲಸಿಕೆ ಹಾಗೂ ಟಾನಿಕ್‌ಗಳನ್ನೂ ನೀಡಲಾಗುತ್ತದೆ. ಪ್ರತಿದಿನ ಬೆಳಿಗ್ಗೆ 45 ನಿಮಿಷಗಳ ಕಾಲ ಮುಕ್ತವಾಗಿ ಹಾರಾಡಲು ಬಿಡಲಾಗುತ್ತದೆ. ತಮಗೆ ತಿಳಿದಷ್ಟು ದೂರ ಹೋಗಿ ಮತ್ತೆ ಗೂಡಿಗೇ ಮರಳುತ್ತವೆ. ಕೆಲವು ಬಾರಿ ಗಾಳಿಯ ರಭಸಕ್ಕೋ, ಹದ್ದುಗಳ ದಾಳಿಯನ್ನು ತಪ್ಪಿಸಿಕೊಳ್ಳುವುದಕ್ಕೋ ದಿಕ್ಕು ತಪ್ಪಿ ಬೇರೆಲ್ಲೋ ಹೋಗುತ್ತವೆ. ಕೆಲವು ದಿನಗಳ ನಂತರ ಸ್ವಸ್ಥಾನಕ್ಕೆ ಮರಳುತ್ತವೆ. ಆರು, ಏಳು ವರ್ಷದವರೆಗೂ ಗಂಡು–ಹೆಣ್ಣು ಹಕ್ಕಿಗಳನ್ನು ಪ್ರತ್ಯೇಕವಾಗಿ ಬೆಳೆಸಲಾಗುತ್ತದೆ. ಈ ವಯಸ್ಸು ದಾಟಿದ ನಂತರ ಅವುಗಳನ್ನು ಒಂದೇ ಗೂಡಿನಲ್ಲಿ ಬಿಟ್ಟು ಸಂತಾನೋತ್ಪತ್ತಿಗೆ ಅನುವು ಮಾಡಿಕೊಡಲಾಗುತ್ತದೆ. ಇದರಿಂದಾಗಿ ಅವುಗಳ ವಂಶವೃಕ್ಷವನ್ನು ದಾಖಲಿಸುವ ಕೆಲಸವೂ ನಡೆಯುತ್ತದೆ.

'ರೇಸ್' ಸುಲಭವಲ್ಲ. ಪಾರಿವಾಳಗಳು ಹಲವಾರು ಸವಾಲುಗಳನ್ನು ಎದುರಿಸುತ್ತವೆ. ದೆಹಲಿಯಿಂದ ಇಲ್ಲಿಯವರೆಗೆ ಬರಲು ಐದಾರು ರಾಜ್ಯಗಳ ಗಡಿ ದಾಟಬೇಕು. ನದಿ, ಸಮುದ್ರ, ಗುಡ್ಡಬೆಟ್ಟ, ಕಾಡುಗಳನ್ನು ಹಾದು ಬರುತ್ತವೆ. ಈ ಮಾರ್ಗಗಳಲ್ಲಿ ಕೆಲವೆಡೆ ಬೇಟೆಗಾರ ಪಕ್ಷಿಗಳು ದಾಳಿ ಮಾಡುತ್ತವೆ. ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಇವು ಗಾಯಗೊಂಡು ನೆಲಕ್ಕುರುಳುತ್ತವೆ. ಕೆಲವು ಬಾರಿ ಚೇತರಿಸಿಕೊಂಡು ಅಥವಾ ಸ್ಥಳೀಯರು ನೋಡಿ ಆರೈಕೆ ಮಾಡಿದರೆ ಬರುವ ಸಾಧ್ಯತೆ ಇರುತ್ತದೆ. ಬಿರುಗಾಳಿ, ಮಳೆ ಮತ್ತು ಸಿಡಿಲುಗಳಿಂದ ರಕ್ಷಿಸಿಕೊಳ್ಳುವ ಸವಾಲೂ ಇರುತ್ತದೆ. ಇನ್ನು ಕೆಲವು ಪ್ರದೇಶಗಳಲ್ಲಿ ಈ ರೇಸ್ ಹಕ್ಕಿಗಳನ್ನೇ ಅಪಹರಿಸುವ ತಂಡಗಳಿವೆ. ಪಾರಿವಾಳಗಳನ್ನು ಸೆರೆ ಹಿಡಿದು ಅವುಗಳ ಮಾಹಿತಿ ಸಂಗ್ರಹಿಸಿ ಮಾಲೀಕರಿಗೆ ಕರೆ ಮಾಡಿ ದುಡ್ಡು ಕೊಡುವಂತೆ ಬೆದರಿಕೆಯೊಡ್ಡುತ್ತಾರೆ. ಕೊಡದಿದ್ದರೆ ಹಕ್ಕಿಗಳನ್ನು ಕೊಂದುಹಾಕುತ್ತಾರೆ' ಎಂದು ಶಂಕರ್ ಹೇಳುತ್ತಾರೆ.

ಎಷ್ಟೇ ಅಡೆತಡೆಗಳು ಬಂದರೂ ಕೊನೆಯ ಉಸಿರಿರುವವರೆಗೂ ತಮ್ಮ ಸ್ವಸ್ಥಾನದತ್ತ ಸಾಗುವ ಪ್ರಯತ್ನವನ್ನು ಪಾರಿವಾಳಗಳು ಬಿಡುವುದಿಲ್ಲ. ತಮ್ಮ ಮೈದಡವಿ, ಕಾಳು, ನೀರು, ಆಶ್ರಯ ಕೊಟ್ಟವರನ್ನು ಮರೆಯುವುದಿಲ್ಲ.

'ನಾನು ಹಲವು ವರ್ಷದಿಂದ ಕ್ರಿಕೆಟ್ ತರಬೇತಿ ನೀಡುತ್ತಿದ್ದೇನೆ. ಕೆಲವರು ಒಂದು ಹಂತದ ಸಾಧನೆ ಮಾಡಿದ ನಂತರ ಮರಳಿ ಅಕಾಡೆಮಿಗೆ ಬರುವುದಿಲ್ಲ. ಆದರೆ ಪಾರಿವಾಳಗಳು ಹಾಗಲ್ಲ. ಎಷ್ಟೇ ದೊಡ್ಡದಾಗಿ ಬೆಳೆಯಲಿ, ಸಾವಿರಾರು ಕಿಲೋಮೀಟರ್ ದೂರ ಹೋಗಿರಲಿ. ಮರಳಿ ಬಂದೇ ಬರುತ್ತವೆ. ನಾವು ಕೊಟ್ಟಿದ್ದಕ್ಕಿಂತ ಹೆಚ್ಚು ಪ್ರೀತಿ ಕೊಡುತ್ತವೆ' ಎಂದು ಭಾವುಕರಾಗುತ್ತಾರೆ.

ಕಥೆ
ಸ್ಮಿತಾ ಅಮೃತರಾಜ್, ಸಂಪಾಜೆ
ಅವರ
ಒಂದು ರೂಪಾಯಿ ಹೇಳಿದ ಕತೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಶಂಕರ್ ಸಿಹಿಮೊಗೆ
ಅವರ
'ಯುದ್ಧ ಮತ್ತು ಗಾಂಧೀ'
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry



ಬಾಪೂ ನಮನ–ದರ್ಶನ





ಗಾಂಧಿ, ಪತ್ರಿಕೆ ಓದುತ್ತಿದ್ದಾರೆ. ಆ ಪತ್ರಿಕೆಯಲ್ಲಿ ಜನರ ಚಲನೆ ಕಾಣುತ್ತಿದೆ. ಪತ್ರಿಕೆಯ ಜನಮುಖಿ ಗುಣ ಹಾಗೂ ಪತ್ರಿಕಾಮಾಧ್ಯಮವನ್ನು ಜನರೊಂದಿಗಿನ ವೈಚಾರಿಕ ಸಂವಾದಕ್ಕೆ ಮಹಾತ್ಮ ಬಳಸಿಕೊಂಡಿದ್ದನ್ನು ಈ ಚಿತ್ರ ಸೂಚಿಸುವಂತಿದೆ.

ಇಲ್ಲಿನ ಚಿತ್ರಗಳ ಗೆರೆಗಳನ್ನು ಗಮನಿಸಿ. ಆ ಗೆರೆಗಳು ಗಾಂಧಿತತ್ತ್ವಗಳನ್ನು ಉಸುರುವಂತಿವೆ. ಗಾಂಧಿಯ ವ್ಯಕ್ತಿತ್ವದ ಸರಳತೆ ಹಾಗೂ ಉಜ್ವಲ–ಕಾಲಾತೀತ ಸೌಂದರ್ಯ, ಬಿಡುಬೀಸು ರೇಖೆಗಳಿಗೆ ದಕ್ಕಿದಷ್ಟು ಅರ್ಥಪೂರ್ಣವಾಗಿ, ಮರುಳುಗೊಳಿಸುವ ಬಣ್ಣಗಳಿಗೆ ಒಲಿಯುವುದಿಲ್ಲ ಎನ್ನುವುದಕ್ಕೆ ಈ ಗೆರೆಗಳು ನಿದರ್ಶನವಾಗಿಯೂ ಕಾಣಿಸುತ್ತವೆ.

ಎಂ.ಎಸ್. ಮೂರ್ತಿ ಕಲಾಕಾರರಷ್ಟೇ ಅಲ್ಲ, ಕವಿಯೂ ಹೌದು. ಕಲಾವಿದ ಕವಿಯೂ ಆದಾಗ ರೇಖೆಗಳ ಜೀವಶಕ್ತಿ ಮತ್ತಷ್ಟು ಸೂಕ್ಷ್ಮಗೊಳ್ಳುತ್ತದೆ. ಗಾಂಧಿಯೊಂದಿಗಿನ ಅನುಸಂಧಾನದ ಅವರ ಕೃತಿಗಳು ಈ ಜಗತ್ತು ಕಂಡ ಅಸಾಧಾರಣ ವ್ಯಕ್ತಿತ್ವದ ಚಹರೆಗಳನ್ನಷ್ಟೇ ಕಾಣಿಸುತ್ತಿಲ್ಲ. ಮಹಾತ್ಮನ ನೆಪದಲ್ಲಿ ಈ ಕಾಲಕ್ಕೆ ಅಗತ್ಯವಾದ ಮೌಲ್ಯಗಳ ಶೋಧದಂತೆ ಕಾಣಿಸುತ್ತದೆ. ನಮ್ಮೊಳಗೆ ಬೆಳೆಯುವ ಅವಕಾಶ ಉಳಿಸಿಕೊಂಡಿರುವುದು ಈ ಕೃತಿಗಳ ಶಕ್ತಿ.

ಹಗೆಯ ಎದೆಯನ್ನೂ ಕರಗಿಸಬಲ್ಲ ಶಕ್ತಿಯ ನಗು, ಹೊಳಪು ಕಂಗಳು ಸೂಸುವ ಕಾಂತಿ ಹಾಗೂ ಆಳ ವಿಷಾದ, ನಡಿಗೆಗಿರುವ ಕಟ್ಟುವ ಸೃಜನಶೀಲ ಶಕ್ತಿ – ಇವೆಲ್ಲವನ್ನೂ ಅನುಭವವಾಗಿ ಸಹೃದಯರಿಗೆ ದಾಟಿಸುವ ಕಲಾಕೃತಿಗಳು, ನಮ್ಮೊಳಗೆ ಗಾಂಧಿಬೀಜವನ್ನು ಬಿತ್ತಲು ಹವಣಿಸುವಂತಿವೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ಅನಾವರಣಗೊಂಡಿರುವುದು ಗಾಂಧಿಕೃತಿಗಳ ಎಪ್ಪತ್ತೈದರ ಸಂಖ್ಯೆಗೆ ಹೊಸ ಹೊಳಪು ತಂದುಕೊಟ್ಟಿದೆ.

ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಗ್ಯಾಲರಿಯಲ್ಲಿ ಅ. 3ರಿಂದ ಹತ್ತು ದಿನಗಳ ಕಾಲ 'ಮಹಾತ್ಮನಿಗೆ ನಮನ' ಪ್ರದರ್ಶನ ನಡೆಯಲಿದೆ. ನಾಡಿನ ಬಹುಮುಖ್ಯ ಕಲಾವಿದರೊಬ್ಬರು ತಾವು ಪಡೆದ 'ಗಾಂಧಿ ದರ್ಶನ'ವನ್ನು ನಮನದ ರೂಪದಲ್ಲಿ ಸಹೃದಯರಿಗೆ ತಲುಪಿಸುತ್ತಿರುವ ಈ ಪ್ರದರ್ಶನ ಗಾಂಧಿಪ್ರಿಯರಿಗೆ ಹಬ್ಬವಿದ್ದಂತೆ.



ಸಂವಾದ ಬೇಕು, ವಿವಾದ ಬೇಡ

1ನೇ ಪುಟದಿಂದ...

ಇದು ಮುಖ್ಯವಾದ ಪ್ರಶ್ನೆಯೊಂದಕ್ಕೆ ಕಾರಣವಾಗುತ್ತದೆ: ಡಾ. ಅಂಬೇಡ್ಕರ್ ಅವರು 'ಭಾರತದ ಸಂವಿಧಾನದ ಪಿತಾಮಹ ಎಂದು ಹೊಗಳಲಾಗುತ್ತಿದ್ದರೂ ಸಂವಿಧಾನದಲ್ಲಿರುವ ಎಷ್ಟು ವಿಚಾರಗಳು ಅವರ ಪರಿಕಲ್ಪನೆ ಮತ್ತು ಎಷ್ಟನ್ನು ಅವರು ಸೃಷ್ಟಿಸಿದ್ದಾರೆ? ರಾಜ್ಯಸಭೆಯಲ್ಲಿ 1953ರಲ್ಲಿ ನಡೆದ ಚರ್ಚೆಯಲ್ಲಿ ಡಾ. ಅಂಬೇಡ್ಕರ್ ಅವರೇ ಉತ್ತರಿಸಿದ್ದಾರೆ. 'ಈ ಸಂವಿಧಾನವು ಯಾರೊಬ್ಬರಿಗೂ ಹೊಂದಿಕೆ ಆಗುವುದಿಲ್ಲವಾದ್ದರಿಂದ ಇದನ್ನು ಸುಟ್ಟು ಹಾಕುವವರಲ್ಲಿ ನಾನೇ ಮೊದಲಿಗನಾಗಿರುತ್ತೇನೆ... ಜನರು ನನಗೆ ಹೀಗೆ ಹೇಳುತ್ತಲೇ ಇದ್ದಾರೆ: 'ಓಹ್, ಸಂವಿಧಾನವನ್ನು ಬರೆದವರು ನೀವೇ'. ನನ್ನ ಉತ್ತರ 'ನಾನೊಬ್ಬ ಗುಲಾಮನಾಗಿದ್ದೆ. ಏನನ್ನು ಮಾಡಲು ಹೇಳಿದ್ದರೋ ಅದನ್ನು ನನ್ನ ಇಚ್ಚೆಗೆ ವಿರುದ್ಧವಾಗಿ ಮಾಡಿದ್ದೇನೆ'.

ಭಾರತದ ಸಂವಿಧಾನವು ಹೇಗೆ ರಚನೆಗೊಂಡಿತು ಎಂಬುದರ ನಿಜವಾದ ಇತಿಹಾಸವನ್ನು ಇಂದಿನ ತಲೆಮಾರಿನ ಭಾರತೀಯರಿಗೆ ತೋರಿಸಿಕೊಡಬೇಕಿದೆ.

ಎರಡನೇ ಕಾರಣ: ದಲಿತರಿಗೆ ಪ್ರತ್ಯೇಕ ಪ್ರಾತಿನಿಧ್ಯ ಯೋಜನೆಯನ್ನು ಭಾರತದ ಸಂವಿಧಾನದಲ್ಲಿ ಸೇರಿಸಿಕೊಳ್ಳಲಾಗಿದೆ ಎಂದು ಭಾವಿಸೋಣ. ಅದೇ ತರ್ಕದ ಪ್ರಕಾರ, ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೂ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಮಾಡಬೇಕಾಗುತ್ತಿತ್ತು. ಕ್ರಮೇಣ, ಇಂತಹುದೇ ಬೇಡಿಕೆಗಳು ಇತರೆ ಹಿಂದುಳಿದ ಜಾತಿಗಳಿಂದಲೂ ಬರುತ್ತಿದ್ದವು. ಈ ರೀತಿಯಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ಜಾತಿಗಳ ಸಮುದಾಯಗಳು ತಮ್ಮ ಪ್ರತಿನಿಧಿಗಳನ್ನು ತಾವೇ ಆಯ್ಕೆ ಮಾಡಿಕೊಂಡರೆ ನಮ್ಮ ಪ್ರಜಾಪ್ರಭುತ್ವ ಮತ್ತು ಭಾರತದ ಆಳ್ವಿಕೆ ಗತಿ ಏನಾಗುತ್ತಿತ್ತು? ಇಲ್ಲಿ ಎಲ್ಲವೂ ಅಸ್ತವ್ಯಸ್ತ ಆಗುತ್ತಿತ್ತು. ಅಷ್ಟೇ ಅಲ್ಲದೆ, ದಲಿತ ಸಮುದಾಯದ ವಿವಿಧ ಜಾತಿಗಳು ತಮಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಕು ಎಂಬ ಬೇಡಿಕೆ ಮುಂದಿಡುತ್ತಿದ್ದವು. ಆಯ್ಕೆಯಾದ ಪ್ರತಿನಿಧಿಗಳು ತಮ್ಮ ಜಾತಿಗೆ ಮಾತ್ರ ಉತ್ತರದಾಯಿಗಳಾಗಿರುವುದರಿಂದ ನಮ್ಮ ಸಮಾಜವು ಜಾತಿಯ ನೆಲೆಯಲ್ಲಿ ಚೂರಾಗುತ್ತಿತ್ತು. 'ಜಾತಿ ವಿನಾಶ' ಮಾಡಬೇಕು ಎಂಬ ಡಾ. ಅಂಬೇಡ್ಕರ್ ಅವರ ಗುರಿಯು ಸಾಧ್ಯವಾಗದೆ, ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆ ಇದ್ದರೆ ಜಾತಿ ವ್ಯವಸ್ಥೆಯನ್ನು ಪಾಲಿಸಲು ಸಂವಿಧಾನವೇ ಅನುಮತಿ ಕೊಟ್ಟಂತಹ ವಿಪರ್ಯಾಸ ಸೃಷ್ಟಿಯಾಗುತ್ತಿತ್ತು.

ಮೂರನೇ ಕಾರಣ: ಪ್ರತ್ಯೇಕ ಪ್ರಾತಿನಿಧ್ಯ ಇದ್ದಿದ್ದರೆ ದಲಿತ ಸಮುದಾಯದಿಂದ ಸ್ವತಂತ್ರ ಮತ್ತು ಶಕ್ತ ದಲಿತ ನಾಯಕರು ಹೊರಹೊಮ್ಮುವುದು ಸಾಧ್ಯವಾಗುತ್ತಿತ್ತು ಎಂದು ಅಂಬೇಡ್ಕರ್‌ವಾದಿಗಳಲ್ಲಿ ಹಲವರು ವಾದಿಸುತ್ತಾರೆ. ಸಾಮಾನ್ಯ ಪ್ರಾತಿನಿಧ್ಯ ವ್ಯವಸ್ಥೆಯಲ್ಲಿ ಮೀಸಲು ಕ್ಷೇತ್ರಗಳಿದ್ದರೂ ದಲಿತ ಅಭ್ಯರ್ಥಿಗಳು ದಲಿತೇತರ ಮತದಾರರ ಕಾಳಜಿಗಳಿಗೂ ಸ್ಪಂದಿಸಬೇಕಾಗುತ್ತದೆ. ಇದು ದಲಿತ ಸಮುದಾಯದ ಬಗ್ಗೆ ಅವರಲ್ಲಿ ಇರುವ ಕಾಳಜಿಯನ್ನು ದುರ್ಬಲಗೊಳಿಸುತ್ತದೆ ಎಂದು ಕೆಲವರು ವಾದಿಸುತ್ತಾರೆ. ಆದರೆ, ಪ್ರಜಾಪ್ರಭುತ್ವವು ಕೆಲಸ ಮಾಡಬೇಕಿರುವುದು ಹೀಗೆಯೇ ಅಲ್ಲವೇ? ಅಪಾರ ಸಂಖ್ಯೆಯ ಜಾತಿಗಳು, ಭಾಷೆಗಳು, ಧಾರ್ಮಿಕ ವೈವಿಧ್ಯ ಇರುವ ಭಾರತದಂತಹ ದೇಶದಲ್ಲಿ ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿಯೂ ತಮ್ಮ ಕ್ಷೇತ್ರದ ಎಲ್ಲ ಜನರನ್ನು ಪ್ರತಿನಿಧಿಸಬೇಕು ಮತ್ತು ಅವರಿಗೆ ಸೇವೆ ಒದಗಿಸಬೇಕು; ತಮ್ಮ ಜಾತಿಯ ಜನರಿಗೆ ಮಾತ್ರ ಅಲ್ಲ. ಆದುದರಿಂದ, ದಲಿತರಿಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಕು ಎನ್ನುವುದು ದಲಿತ ಪ್ರತ್ಯೇಕತಾವಾದದ ಅಪಾಯಕಾರಿ ಚಿಹ್ನೆಯಾಗಿದೆ. ಇದು ದಲಿತ ಸಮುದಾಯಕ್ಕೂ ಒಳ್ಳೆಯದಲ್ಲ, ದೇಶಕ್ಕೂ ಒಳ್ಳೆಯದಲ್ಲ.

ಕೊನೆಯ ಒಂದು ಅಂಶ. 'ಹರಿಜನ–ದಲಿತ' ವಿಚಾರವನ್ನು ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ನನಗೆ ಒಂದು ವೈಯಕ್ತಿಕ ಕಾರಣವೂ ಇದೆ. ದೆಹಲಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ, ಕರ್ನಾಟಕ ಸೇರಿ 20ಕ್ಕೂ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿರುವ ಹರಿಜನ ಸೇವಕ ಸಂಘದ ಜೊತೆಗೆ ಇತ್ತೀಚೆಗೆ ನಾನು ತೀರಾ ಹತ್ತಿರದಿಂದ ತೊಡಗಿಸಿಕೊಂಡಿದ್ದೇನೆ. 1950, 60 ಮತ್ತು 70ರ ದಶಕದಲ್ಲಿ ಹರಿಜನ ಸೇವಕ ಸಂಘವು ಅತ್ಯಂತ ಕ್ರಿಯಾಶೀಲವಾಗಿ ಇತ್ತು. ಆದರೆ, ಈಗ ಅದು ಕೇಂದ್ರದಿಂದ ಬದಿಗೆ ಸರಿದಿದೆ. ಡಾ. ಅಂಬೇಡ್ಕರ್ ಅವರ ಜೀವನ ಮತ್ತು ಹೋರಾಟದಿಂದ ಸ್ಫೂರ್ತಿಗೊಂಡು ಸಮಾಜ, ರಾಜಕಾರಣ ಮತ್ತು ಸಂಸ್ಕೃತಿಯಲ್ಲಿ ದಲಿತ ಕ್ರಿಯಾಶೀಲತೆ ಪ್ರಮಾಣವು ಏರುತ್ತಲೇ ಇರುವುದು ಇದಕ್ಕೆ ಮುಖ್ಯವಾದ ಕಾರಣ.

ದಲಿತರಲ್ಲಿನ ಈ ಹೊಸ ದೃಢತೆಗೆ ಒಂದು ಸಕಾರಾತ್ಮವಾದ ಭಾಗವೂ ಇದೆ. ಅದೇ ದಲಿತರಲ್ಲಿ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿರುವುದು. ದಮನ ಮತ್ತು ಅನ್ಯಾಯದ ವಿರುದ್ಧ ಅವರನ್ನು ಒಂದುಗೂಡಿಸಿದೆ. ಹಿಂದೂ 'ಪ್ರಬಲ ಜಾತಿ'ಗಳ ಜನರ ಕಣ್ಣನ್ನೂ ಇದು ತೆರೆಸಿದೆ. ದಲಿತ ಸೋದರರು ಅನುಭವಿಸಿದ ನೋವು ಮತ್ತು ಅಪಮಾನವನ್ನು ತೊಡೆದು ಹಾಕುವ ತಮ್ಮ ಹೊಣೆಗಾರಿಕೆಯ ಬಗ್ಗೆ ಅರಿವು ಮೂಡಿಸಿದೆ. ದಮನಿತ ಜಾತಿಗಳ ಜನರ ಸ್ಥಿತಿಯ ಬಗ್ಗೆ ಅಂಬೇಡ್ಕರ್ ಅವರಲ್ಲಿ ಇರುವ ಆಕ್ರೋಶದ ಆಳ ತಮಗೆ ಅರ್ಥವಾಗುತ್ತದೆ, ಅವರು ಆ ಜಾತಿಗಳಲ್ಲಿಯೇ ಜನಿಸಿದವರು ಮತ್ತು ಜಾತಿ ಶೋಷಣೆಯ ಸಂತ್ರಸ್ತರು ಎಂದು ಗಾಂಧೀಜಿ ಅವರೇ ಹೇಳಿಕೊಂಡಿದ್ದರು.

ಸಮಾಜದ ಎಲ್ಲ ವರ್ಗಗಳ ಜನರೂ ಅಂಬೇಡ್ಕರ್ ಅವರ ಶ್ರೇಷ್ಠತೆಯನ್ನು ಗುರುತಿಸಿದ್ದಾರೆ ಮತ್ತು ಅವರನ್ನು ಗೌರವಿಸುತ್ತಾರೆ ಎಂಬುದೇ ಹಿಂದೂ 'ಪ್ರಬಲ ಜಾತಿ'ಗಳ ಜನರಲ್ಲಿ ಮೂಡಿರುವ ಹೊಸ ಅರಿವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅಸ್ಪೃಶ್ಯತೆಯು ಬಹುಪಾಲು ಮರೆಯಾಗಿದ್ದರೂ ಜಾತಿ ಅಸಮಾನತೆ, ಪೂರ್ವಗ್ರಹ ಮತ್ತು ತಾರತಮ್ಯದ ಎಲ್ಲ ಕುರುಹುಗಳನ್ನು ತೊಡೆದು ಹಾಕುವ ದಿಸೆಯಲ್ಲಿ ಭಾರತವು ಇನ್ನೂ ಬಹುದೂರ ಸಾಗಬೇಕಿದೆ. ಈ ಗುರಿಯನ್ನು ಸಾಧಿಸುವುದಕ್ಕಾಗಿ ನಾವು ಗಾಂಧೀಜಿ ಮತ್ತು ಡಾ. ಅಂಬೇಡ್ಕರ್ ಅವರ ಕುರಿತು ಅಂಧ 'ಭಕ್ತಿ' ತೋರದೆಯೇ ಅವರಿಬ್ಬರಿಂದಲೂ ಸ್ಫೂರ್ತಿ ಪಡೆಯಬೇಕು. ದಾರಿಗಳು ಬೇರೆ ಬೇರೆ ಆಗಿದ್ದರೂ ಈ ಇಬ್ಬರೂ ಸಮಾನ ಗುರಿಯ ಬೆನ್ನು ಹತ್ತಿದ ಶ್ರೇಷ್ಠ ನಾಯಕರು. ಆದ್ದರಿಂದ, ಗಾಂಧಿ-ಅಂಬೇಡ್ಕರ್ ಅವರನ್ನು ಸರಿಯಾಗಿ, ಸತ್ಯನಿಷ್ಠವಾಗಿ ತಿಳಿದುಕೊಳ್ಳಲು ಸಂವಾದ ಬೇಕು, ವಿವಾದ ಬೇಡ; ಸಹಕಾರ ಬೇಕು, ಸಂಘರ್ಷ ಬೇಡ.

ಕನ್ನಡಕ್ಕೆ: ಹಮೀದ್ ಕೆ.

ಅಬ್ಬಾ...ಗಾಂಧಿ ಭಂಡಾರ

ಪಿ. ನಾಗೇಶ್ ಶೆಣೈ

ಮಹಾತ್ಮ ಗಾಂಧಿ ಅವರ ಕುರಿತಾಗಿ 150ಕ್ಕೂ ಹೆಚ್ಚಿನ ದೇಶಗಳು ಹೊರತಂದ ಅಂಚೆ ಚೀಟಿಗಳು, ವಿವಿಧ ದೇಶಗಳ ಗಾಂಧಿ ನಾಣ್ಯಗಳು, ಗಾಂಧಿ ಅವರಿಗೆ ಬಂದ ಪತ್ರಗಳು, ಅವರು ಬೇರೆಯವರಿಗೆ ಬರೆದ 8 ಪತ್ರಗಳ ಮೂಲಪ್ರತಿ, ಅವರ ಹತ್ಯೆಯ ಎಫ್‌ಐಆರ್ ಮೂಲಪ್ರತಿ, ವಿವಿಧ ಸಂದರ್ಭಗಳಲ್ಲಿ ಅವರ ವೈದ್ಯಕೀಯ ವರದಿಗಳ ಪ್ರತಿಗಳು, ಬಳಸಿದ ಚರಕ, ಅವರು ಹೊರ ತಂದ ಮೂರು ಪ್ರಮುಖ ಪತ್ರಿಕೆಗಳ ಪ್ರತಿಗಳು, ಹತ್ಯೆಯಾದ ದಿನ ಸುದ್ದಿ ಪ್ರಕಟಿಸಿದ ದಿನ ಪತ್ರಿಕೆಗಳು, ಗಾಂಧಿ ಅವರ ಮೂಲ ಛಾಯಾಚಿತ್ರಗಳು...

ಜಯಪ್ರಕಾಶ್ ಸರ್ದಾ

– ಹೀಗೆ ರಾಷ್ಟ್ರಪಿತ ಮೋಹನದಾಸ ಕರಮಚಂದ ಗಾಂಧಿ ಅವರಿಗೆ ಸಂಬಂಧಿಸಿದ ಹಲವು ವಸ್ತುಗಳನ್ನು, ಅತ್ಯಪರೂಪದ ದಾಖಲೆಗಳನ್ನು ಜೋಪಾನವಾಗಿ ಇಟ್ಟುಕೊಂಡವರು ಬೆಂಗಳೂರಿನ ಜವಳಿ ಉದ್ಯಮಿ ಜಯಪ್ರಕಾಶ್ ಸರ್ದಾ. ಶಾಂತಿನಗರದ ನಿವಾಸಿಯಾಗಿರುವ ಸರ್ದಾ ಅವರು ತಮ್ಮಲ್ಲಿರುವ ಸಂಗ್ರಹಗಳ ಪ್ರತಿಯೊಂದು ವಸ್ತುಗಳ ಬಗ್ಗೆ ದೀರ್ಘ ವಿವರಣೆಯನ್ನೂ ನೀಡಬಲ್ಲರು.

ಅವರು ಪ್ರದರ್ಶಿಸಿದ ಮಾಲ್ಟಾ ದೇಶದ ಗಾಂಧಿ ಚಿತ್ರವಿರುವ ಬೆಳ್ಳಿಯ ನಾಣ್ಯದ ಭಾರ ಒಂದು ಕೆ.ಜಿ. ಇದೆ. 2004ರಲ್ಲಿ ಈ ನಾಣ್ಯವನ್ನು ಹೊರತರಲಾಗಿತ್ತು. ಅವರ ಸಂಗ್ರಹದಲ್ಲಿರುವ ಗಾಂಧೀಜಿ ಅವರು ಬಳಸಿದ ಚರಕವೂ ಅಮೂಲ್ಯವಾದದ್ದೇ.

'ಯಾರ ಬಳಿಯೂ ಇರದಷ್ಟು ಗಾಂಧಿ ಕುರಿತ ದಾಖಲೆಗಳನ್ನು ಹೊಂದಿದ್ದೇನೆ. ಕ್ರೈಸ್ಟ್ ಕಾಲೇಜು, ಜೈನ್ ಕಾಲೇಜು, ಬಾಲ್ಡ್‌ವಿನ್ಸ್, ಬಿಷಪ್ ಕಾಟನ್ಸ್ ಸೇರಿದಂತೆ ಬೆಂಗಳೂರಿನ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಇವುಗಳ ಪ್ರದರ್ಶನ ಏರ್ಪಡಿಸಿದ್ದೇನೆ. ಈ ವಸ್ತುಗಳ ಸುರಕ್ಷಿತ ಸಾಗಣೆ ಸುಲಭವಲ್ಲದ ಕಾರಣ ನಗರದಿಂದ ಹೊರಗೆಲ್ಲೂ ಪ್ರದರ್ಶನ ನೀಡಲು ಹೋಗಿಲ್ಲ' ಎನ್ನುತ್ತಾರೆ 50 ವರ್ಷ ವಯಸ್ಸಿನ ಜಯಪ್ರಕಾಶ್. ಗಾಂಧಿ ಕುರಿತ ಅಂಚೆ ಚೀಟಿ, ಅಂಚೆ ಪರಿಕರಗಳ ಪ್ರದರ್ಶಿಕೆಗೆ ಅವರು ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ.

'ಶಾಲಾ ದಿನಗಳಲ್ಲಿ ಅಂಚೆ ಚೀಟಿ ಸಂಗ್ರಹದ ಹವ್ಯಾಸವಿತ್ತು. ನಂತರ ಗಾಂಧೀಜಿ ಅಂಚೆ ಚೀಟಿಗಳನ್ನು ಸಂಗ್ರಹಿಸುವ ಹವ್ಯಾಸ ಬೆಳೆಯಿತು. ನಂತರ ಗಾಂಧೀಜಿ, ಸರ್ದಾರ್ ಪಟೇಲ್, ಸುಭಾಷಚಂದ್ರ ಬೋಸ್ ಅವರಿಗೆ ಸೇರಿದ ದಾಖಲೆಗಳು, ಕಡತಗಳನ್ನು ಸಂಗ್ರಹಿಸತೊಡಗಿದೆ. ಹರಾಜಿನಲ್ಲಿ ಕೊಂಡವು ಅಧಿಕ. ಈಗ ಇಂಥ ದಾಖಲೆಗಳೇ ಸುಮಾರು ಆರು ಸಾವಿರದಷ್ಟಿವೆ' ಎಂದು ಅವರು ಹವ್ಯಾಸ ಬೆಳೆದುಬಂದ ದಾರಿಯನ್ನು ಚುಟುಕಾಗಿ ತೆರೆದಿಟ್ಟರು. ಗಾಂಧೀಜಿ ಅವರಿಗೆ ಸಂಬಂಧಿಸಿದ 300 ಛಾಯಾಚಿತ್ರಗಳೂ ಸರ್ದಾ ಅವರಲ್ಲಿವೆ.

'1935 ಅಥವಾ 1939 ಇರಬೇಕು, ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಪ್ರಮುಖ ಪ್ರತಿನಿಧಿಗಳಿಗೆ ಧ್ವಜದ ಚಿತ್ರವಿರುವ ಕಪ್ ಮತ್ತು ಸಾಸರ್‌ಗಳನ್ನು ಉಡುಗೊರೆಯಾಗಿ ನೀಡಲಾಗಿತ್ತು. ಈ ಧ್ವಜದ ಮಧ್ಯೆ ಚರಕದ ಚಿತ್ರವಿದೆ. ಅವುಗಳೂ ನನ್ನ ಸಂಗ್ರಹದಲ್ಲಿವೆ. ನನ್ನ ಪ್ರಕಾರ ಇವುಗಳೂ ಬೆಲೆ ಕಟ್ಟಲಾಗದ ಆ್ಯಂಟಿಕ್‌ಗಳು' ಎನ್ನುತ್ತಾರೆ.

ಗಾಂಧೀಜಿ ಸಂಪಾದಕರಾಗಿದ್ದ ಯಂಗ್ ಇಂಡಿಯಾ, ದಿ ಇಂಡಿಯನ್ ಒಪೀನಿಯನ್, ಹರಿಜನ ಸೇವಕ್ ಪತ್ರಿಕೆಗಳ ನೂರಾರು ಪ್ರತಿಗಳನ್ನೂ ಅವರು ಫೈಲ್‌ಗಳಲ್ಲಿ ಒಪ್ಪವಾಗಿ ಜೋಡಿಸಿಟ್ಟಿದ್ದಾರೆ. ಗಾಂಧಿ ಹತ್ಯೆಯ ವರದಿ ಹೊಂದಿರುವ ದೇಶ –ವಿದೇಶಗಳ, 9 ಭಾಷೆಗಳ 14 ಪತ್ರಿಕೆಗಳನ್ನು ಅವರು ಹೊಂದಿದ್ದಾರೆ. ದೇಶದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು ಬಳಸಿದ 'ಜೈಹಿಂದ್' ಎಂಬ ಉಲ್ಲೇಖವಿರುವ ಶಾಲುಗಳೂ ಅವರ ಸಂಗ್ರಹದಲ್ಲಿವೆ.

1857ರಿಂದ ಹಿಡಿದು ಸ್ವಾತಂತ್ರ್ಯದ ಅವಧಿಯವರೆಗೆ, ಮಹತ್ವದ ಘಟನಾವಳಿಗಳನ್ನು ದಾಖಲಿಸಿರುವ ದೇಶ, ಹೊರದೇಶಗಳ 10,000 ಪತ್ರಿಕೆಗಳು ಅವರಲ್ಲಿವೆ. 1670ರ ಫ್ರಾನ್ಸ್‌ನ Chatteau ಹೆಸರಿನ ಪತ್ರಿಕೆಯೂ ಈ ಸಂಗ್ರಹದಲ್ಲಿದೆ. 'ಈ ಸಂಗ್ರಹ ಕಾರ್ಯದಲ್ಲಿ ಅಣ್ಣ ಪ್ರವೀಣ್ ಕುಮಾರ್ ನನಗೆ ಎಲ್ಲ ರೀತಿಯ ನೆರವು ನೀಡಿದ್ದಾರೆ' ಎಂದು ನೆನಪಿಸಿಕೊಳ್ಳುತ್ತಾರೆ ಸರ್ದಾ.



ಗಾಂಧಿ ಹತ್ಯೆ ಪ್ರಕರಣ ಕುರಿತ ಎಫ್‌ಐಆರ್ ಪ್ರತಿ

ಮಾಲ್ಟಾ ದೇಶ ಹೊರತಂದ ಗಾಂಧಿ ಚಿತ್ರದ ಬೆಳ್ಳಿಯ ನಾಣ್ಯ. ಇದು ಒಂದು ಕೆ.ಜಿ. ತೂಕದ್ದು.



ಮಹಾತ್ಮ ಗಾಂಧಿ ಬಳಕೆ ಮಾಡಿದ್ದ ಚರಕ(ಮೊದಲ ಚಿತ್ರ). ಸ್ವಾತಂತ್ರ್ಯ ಭಾರತದಲ್ಲಿ ಬಿಡುಗಡೆಯಾದ ಗಾಂಧೀಜಿ ಭಾವಚಿತ್ರದ ಮೊದಲ ಅಂಚೆಚೀಟಿ (1948 ಆ.15). ಆಗಲೇ ಇದರ ಬೆಲೆ ₹10. ಈಗಿದನ್ನು ಪಡೆಯಲು ತೆರಬೇಕು ಲಕ್ಷ ಲಕ್ಷ!

ಮುನ್ನೋಟ 02-10-2022 ರಿಂದ 08-10-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಸಂಪನ್ಮೂಲಗಳಿಗಾಗಿ ಸಾಕಷ್ಟು ಹುಡುಕಾಟ ನಡೆಸುವಿರಿ. ಇತರರ ಕೆಲಸಗಳ ಯಶಸ್ಸಿಗಾಗಿ ಸಲಹೆ ನೀಡುವ ಅವಕಾಶ ದೊರೆಯುತ್ತದೆ. ಈ ಹಿಂದೆ ನಿಲ್ಲಿಸಿದ್ದ ವಿದ್ಯಾಭ್ಯಾಸವನ್ನು ಪುನಃ ಆರಂಭಿಸಲು ಸೂಕ್ತ ಆಲೋಚನೆ ಮಾಡುವಿರಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇರುವುದಿಲ್ಲ. ಸದ್ಯದಲ್ಲೇ ಕೌಟುಂಬಿಕ ಸಮಸ್ಯೆಗಳು ಎದುರಾದರೂ ನಂತರ ತಿಳಿಯಾಗುತ್ತವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವಿದೇಶದಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರಚಾರ ಮಾಡುವವರಿಗೆ ಮಾನ್ಯತೆ ಮತ್ತು ಗೌರವ ದೊರೆಯುತ್ತದೆ. ಹಣಕಾಸಿನ ಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮಗೊಳ್ಳುವುದು. ತಾಯಿಯ ಹಿತನುಡಿಗಳು ನಿಮಗೆ ಒಳಿತನ್ನು ಮಾಡುತ್ತವೆ. ವಿನಾಕಾರಣವಾದ ವಿವಾದಗಳನ್ನು ಯಾರೊಂದಿಗೂ ಮಾಡದಿರಿ. ನಿಮ್ಮ ವ್ಯವಹಾರದಲ್ಲಿ ಸಾಮಾನ್ಯ ಅಭಿವೃದ್ಧಿಯನ್ನು ಖಂಡಿತ ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವೈಯಕ್ತಿಕ ವ್ಯವಹಾರದ ಹೋರಾಟದಲ್ಲಿ ಪ್ರಗತಿ ಕಾಣುವಿರಿ. ಮನೆಯವರ ಆರೋಗ್ಯದ ಬಗ್ಗೆ ಎಚ್ಚರವಹಿಸಿರಿ. ವಿದ್ಯಾರ್ಥಿಗಳಿಗೆ ಏಕಾಗ್ರತೆ ಅತಿ ಅಗತ್ಯ. ಕೆಲವರಿಗೆ ಅಧ್ಯಯನದ ನಿಮಿತ್ತ ದೂರ ಪ್ರಯಾಣ ಮಾಡಬೇಕಾದ ಸಂದರ್ಭವಿರುತ್ತದೆ. ಆರ್ಥಿಕ ಸಬಲತೆಗಾಗಿ ಹೊಸ ಹೊಸ ದಾರಿಗಳನ್ನು ಹುಡುಕುವಿರಿ. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಕೆಲಸವೊಂದು ಈಗ ಕೈಗೂಡುವುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು. ಇತರರ ಅಭಿವೃದ್ಧಿಯ ಬಗ್ಗೆ ಚಿಂತೆ ಮಾಡದೆ ನಿಮ್ಮ ಅಭಿವೃದ್ಧಿಯ ಬಗ್ಗೆ ಗಮನ ಹರಿಸಿರಿ. ಕ್ರೀಡಾಪಟುಗಳಿಗೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಉತ್ತಮ ಅವಕಾಶ ದೊರೆಯಬಹುದು. ಹಣದ ಒಳಹರಿವು ಸಾಮಾನ್ಯವಾಗಿದ್ದು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಉದ್ಯೋಗದಲ್ಲಿ ಸ್ಥಾನ ಬದಲಾವಣೆಯ ಸಾಧ್ಯತೆಗಳಿವೆ. ಹಣಕಾಸಿನ ಅನುಕೂಲ ತಕ್ಕಮಟ್ಟಿಗೆ ಹೆಚ್ಚಾಗುತ್ತದೆ. ನಿಮ್ಮ ಸಮಾಜದ ಪ್ರಮುಖರೊಂದಿಗೆ ಬಾಂಧವ್ಯ ವೃದ್ಧಿಸುತ್ತದೆ. ವಾಹನ ಚಾಲನೆ ಮಾಡುವಾಗ ಸ್ವಲ್ಪ ಎಚ್ಚರವಾಗಿರಿ. ಪಾಲುದಾರಿಕೆ ವ್ಯವಹಾರದಲ್ಲಿ ಹೊಸ ತಿರುವು ಬಂದು ನಿಮಗೆ ಹೆಚ್ಚಿನ ಅಧಿಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹೆಚ್ಚಿನ ಶ್ರದ್ಧೆ ಬರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಧೃಡ ಸಂಕಲ್ಪದಿಂದ ಮಾಡಿದ ಕೆಲಸಗಳು ಪೂರ್ಣಗೊಳ್ಳುವವು. ಕೃಷಿ ಕಾರ್ಯಗಳಲ್ಲಿ ಹೆಚ್ಚು ಆಸಕ್ತಿ ಮೂಡಿ ಅದರಲ್ಲಿ ತೊಡಗಿಕೊಳ್ಳುವಿರಿ. ನೃತ್ಯ ಕಲಾವಿದರಿಗೆ ಹೆಚ್ಚಿನ ಕೆಲಸಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ಹಿರಿಯರ ಬಗ್ಗೆ ಗೌರವವನ್ನು ತೋರುವುದು ಒಳ್ಳೆಯದು. ಅನವಶ್ಯಕವಾಗಿ ಇತರರನ್ನು ಹೀಗಳೆಯುವುದು ನಿಮಗೆ ನಷ್ಟ ಕೊಡುವುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಬಹುದು. ರಾಜಕಾರಣಕ್ಕೆ ಸೇರಬೇಕೆನ್ನುವವರು ತಮ್ಮ ಸ್ಥಾನಮಾನಗಳ ಬಗ್ಗೆ ಸರಿಯಾಗಿ ತಿಳಿಯುವುದು ಉತ್ತಮ. ಗೃಹ ನಿರ್ಮಾಣ ಮಾಡುವವರಿಗೆ ಉತ್ತಮ ಸಹಕಾರ ದೊರೆಯುತ್ತದೆ. ಹೂಡಿಕೆ ವ್ಯವಹಾರಗಳಿಂದ ಹೆಚ್ಚಿನ ಹಣ ಬರುತ್ತದೆ. ಕೃಷಿಭೂಮಿಯನ್ನು ಕೊಳ್ಳುವ ಶಕ್ತಿಯನ್ನು ತೋರಿಸುವಿರಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ವಿದ್ಯುತ್ ಉಪಕರಣಗಳನ್ನು ಮಾರಾಟ ಮಾಡುವ ವ್ಯವಹಾರದಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ. ಬಗೆಹರಿಯಬೇಕಿದ್ದ ವ್ಯಾಜ್ಯಗಳು ಸ್ವಲ್ಪ ಕಾಲ ವಿಳಂಬವಾಗುತ್ತದೆ. ನಯವಂಚಕರಿಂದ ನಿಮ್ಮ ಹಣ ಸಾಕಷ್ಟು ಪೋಲು ಆಗಬಹುದು, ಸ್ವಲ್ಪ ಎಚ್ಚರವಾಗಿರಿ. ನಿಮ್ಮ ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿಯನ್ನು ಕಂಡರೂ ಸಾಮಾಜಿಕ ಜೀವನದಲ್ಲಿ ಕಳಂಕ ಬರುವ ಸಾಧ್ಯತೆ ಇದೆ. ಸಂದೇಹಾಸ್ಪದ ವ್ಯಕ್ತಿಗಳಿಂದ ದೂರವಿರುವುದು ಬಹಳ ಒಳ್ಳೆಯದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಹಳ ದಿನಗಳಿಂದ ಅನಾರೋಗ್ಯ ಪೀಡಿತರಾದ ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ಹೊಸ ವಾಹನದ ಖರೀದಿಯನ್ನು ಮುಂದೂಡುವುದು ಒಳ್ಳೆಯದು. ದಿನಸಿ ವ್ಯಾಪಾರಿಗಳಿಗೆ ವ್ಯವಹಾರ ವೃದ್ಧಿಸಿ ಆದಾಯ ಹೆಚ್ಚುತ್ತದೆ. ಸಮಾಜದ ಸಂಕಷ್ಟಗಳಿಗೆ ಸ್ಪಂದಿಸಿ ಸಹಕಾರ ನೀಡುವ ನಿಮ್ಮ ಮನೋಭಾವಕ್ಕೆ ಗೌರವ ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಆದಾಯದಲ್ಲಿ ಸಮತೋಲನ ಕಂಡು ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುತ್ತದೆ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಸ್ವಯಂ ಉದ್ಯೋಗ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಊಟ ತಿಂಡಿಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಲೇಖಕರು ಹೊಸ ವಿಚಾರದ ಬಗ್ಗೆ ಚಿಂತನ ಮಂಥನ ನಡೆಸಿ ಹೊಸ ಪ್ರಬಂಧವನ್ನು ಬರೆಯುವರು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಣಕಾಸಿನ ಅನುಕೂಲದಲ್ಲಿ ತುಸು ಏರಿಕೆಯನ್ನು ಕಾಣಬಹುದು. ಹಿರಿಯರಿಗೆ ಕೆಲವೊಂದು ಸಂಸ್ಥೆಗಳ ನಾಯಕತ್ವವನ್ನು ವಹಿಸುವ ಅವಕಾಶ ದೊರೆಯುತ್ತದೆ. ಶೃಂಗಾರ ಸಾಧನಗಳನ್ನು ತಯಾರಿಸಿ ಮಾರಾಟ ಮಾಡುವವರ ವ್ಯವಹಾರ ಹೆಚ್ಚಾಗುತ್ತದೆ. ಸ್ಥಿರಾಸ್ತಿ ಖರೀದಿ ಮಾಡುವ ಆಲೋಚನೆ ಸದ್ಯಕ್ಕೆ ಬೇಡ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಎದುರಾಳಿಗಳ ಕಾರ್ಯತಂತ್ರಗಳು ವಿಫಲವಾಗಿ ನಿಮಗೆ ಜಯ ದೊರೆಯುತ್ತದೆ. ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅವರ ವಿಷಯದ ಆಯ್ಕೆಯ ಬಗ್ಗೆ ಗೊಂದಲಗಳು ಉಂಟಾಗುತ್ತವೆ. ಸಂಗಾತಿಯ ಸಹಕಾರದಿಂದ ಸ್ವಯಂ ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಸಾಧಿಸುವಿರಿ. ಕಟ್ಟಡ ಕಟ್ಟುವ ಕಾರ್ಮಿಕರಿಗೆ ಹೆಚ್ಚಿನ ಕೆಲಸ ದೊರೆತು ಸಂಪಾದನೆ ಹೆಚ್ಚುತ್ತದೆ.

ಪದಬಂಧ 2758



ಮೇಲಿನಿಂದ ಕೆಳಕ್ಕೆ

1. ಮೊಸಳೆಯ ತೊಡೆಯ ಲಾಂಛನ 4
2. ತನ್ನನ್ನು ತಾನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಆಂತರ್ಯದ ಆಲೋಚನೆ 6
3. ಮಾನವನ ಮನನೀಯ ಮೂರು ಸ್ವಭಾವಗಳು 3
4. ಈತನಿಗೆ ಬಯಕೆಯ ಅಮಲಿನಲ್ಲಿ ಮತ್ತೇರಿದೆ 4
6. ಜಾದುವಿನಿಂದ ಮಾಯ ಮಾಡುವವಳು 4
9. ಮಹಾವಿಷ್ಣು ಪವಡಿಸುವ ಹಾಸಿಗೆ 3
11. ಹಾಸನದ ಹೊಸ ಬೆಣ್ಣೆಗೆ ಒಪ್ಪುವಂತದ್ದು 3
12. ಒಂಭತ್ತು ದಿನದ ಹಬ್ಬಕ್ಕೆ ಸಿಕ್ಕ ಬಿಡುವು 6
13. ಧರ್ಮ ಶಾಸ್ತ್ರದಂತೆ ಹವನದಲ್ಲಿ ಹುಟ್ಟಿದ ಅಗ್ನಿ 4
14. ಹೊರಗೆ ಕೇಳಿಸುವ ಅಹಂಕಾರದ ನಗು 4
15. ಎಡಪಂಥದ ಪರಮಾತ್ಮ 4
17. ಮೈಸೂರು ದಸರೆಯಲ್ಲಿ ಆನೆಗಳು ಸಾಗುವ ದಾರಿ 4

ಎಡದಿಂದ ಬಲಕ್ಕೆ

1. ಹಗುರಗೊಳಿಸುವ ಆಂತರ್ಯದ ಖುಷಿ 4
3. ಮಹಿಮಾನ್ವಿತ ಮಾರ್ಗದರ್ಶಕ ನೆಲೆಸಿರುವ ಪುಣ್ಯಸ್ಥಳ 4
5. ಪವಾಡ ಸದೃಶವಾದ ಎರಡನೇ ಸಿದ್ಧಿ 3
7. ಚಲಾವಣೆಗೆ ಬರದೆ ಕತ್ತಲಲ್ಲಿ ಓಡಾಡುವ ದುಡ್ಡು 4
8. ದಸರಾ ಸಂಭ್ರಮಕ್ಕೆ ಗೆಲುವಿನ ಹತ್ತನೆಯ ದಿನ 6
10. ಆರು ಪಾದದ ಛಂದದ ಸುಂದರಿ 3
11. ಅವತಾರವೆತ್ತಿದ ಸೂಕರ ಹಿಂದುಮುಂದು 3
12. ಹಿಂದುಮುಂದಾದರೂ ಕಣ್ಣೇ ಕಾಣಿಸುತ್ತದೆ 3
13. ತದ್ಭವ ರೂಪದಲ್ಲಿ ಯಾದವ 3
14. ಈ ಸುಧೆಯನ್ನು ಸವಿಯಲು ಅನುಭವ ಬೇಕು 6
16. ದೇಶವೆಂಬ ಒಂದು ವೇದಿಕೆ 4
18. ಹತ್ತು ದಿನಗಳ ಸರಣಿ ಹಬ್ಬ 3
19. ಯಾವಾಗಲೂ ಒಳ್ಳೆಯದನ್ನು ಮಾಡುವ ಈಶ್ವರ 4
20. ಪುರಿಯಲ್ಲಿ ನೆಲಸಿರುವ ವಿಶ್ವದೊಡೆಯ 4

ಪದಬಂಧ ಉತ್ತರ -2757

ಮೇಲಿಂದ ಕೆಳಕ್ಕೆ

1. ತೋಲಕ 2.ಪರಾಯ 3.ಕತ್ತಿಕಾಯಿ 4.ರಮಣೀಯ 7.ನೀರಾನೆ 8.ಬಳಕೆದಾರ 9.ಕಾಡುಮಿಕ 10.ಮತದಾನ 12.ಪಗಲ 13.ದಾಸಗೀತ 14.ವೀತರಾಗ 15.ನೀರಜ 16.ರಿಪೇರಿ

ಎಡದಿಂದ ಬಲಕ್ಕೆ

1.ತೋರುದೀಪ 3.ಕಮ್ಮಾರ 5.ರಾಕ್ಷಸಪ್ರವೃತ್ತಿ 6.ಕಮನೀಯ 8.ಬಡಪಾಯಿಕಾಯಿ 10.ಮನೆಯಂಗಳ 11.ದಾರಿದೀಪಕ 13.ದಾನವೀರಶೂರ 15.ನೀಲಗಿರಿ 17.ರಾಮಮನೋಹರ 18.ತರಂಗ 19.ಜಯಭೇರಿ

ಪರಂಪರೆ ನೆರಳಿನಲ್ಲಿ ಸ್ವಂತಿಕೆ ಹುಡುಕಾಟ

ವಿದ್ವಾನ್ ಡಿ. ಬಾಲಕೃಷ್ಣ

ಸುಮಂಗಲಾ

'ನಾನು ಪ್ರಾಡಿಜಿನೂ ಅಲ್ಲ, ಟ್ರಾಜಿಡಿನೂ ಅಲ್ಲ, ಮಧ್ಯದಲ್ಲಿದ್ದೀನಿ' ಎಂದು ನಗುತ್ತಲೇ ಹೇಳುತ್ತಾರೆ 'ಮೈಸೂರು ಬಾನಿ' ಪರಂಪರೆಯನ್ನು ಇನ್ನಷ್ಟು ಮೇಲೆತ್ತರಿಸಿರುವ ಖ್ಯಾತ ವೈಣಿಕರಾದ ವಿದ್ವಾನ್ ಡಿ. ಬಾಲಕೃಷ್ಣ.

ಈಗ ವೀಣೆಯ ಮೇಲಾಡುವ ಬೆರಳುಗಳು ಬಾಲ್ಯದಲ್ಲಿ ಮೊದಲು ಕಲಿತಿದ್ದು ಮೃದಂಗವನ್ನು ಎಂದರೆ ಅಚ್ಚರಿಯೆನ್ನಿಸಬಹುದು. ವೀಣೆಗೆ ಇನ್ನೊಂದು ಸಮಾನಾರ್ಥಕ ಪದ ಎಂಬಷ್ಟರಮಟ್ಟಿಗೆ ಪ್ರಸಿದ್ಧರಾದ, 'ಮೈಸೂರು ಬಾನಿ'ಯನ್ನು ಹುಟ್ಟುಹಾಕಿದ ಶ್ರೇಷ್ಠ ವೈಣಿಕರಾಗಿದ್ದ ವಿದ್ವಾನ್ ದೊರೆಸ್ವಾಮಿ ಅಯ್ಯಂಗಾರ್ ಅವರ ಎರಡನೇ ಮಗನಾದ ವಿದ್ವಾನ್ ಬಾಲಕೃಷ್ಣ ಹುಟ್ಟಿದ್ದು ಮೈಸೂರಿನ ಹಳೇ ಅಗ್ರಹಾರದ ಮನೆಯಲ್ಲಿ. ದೊರೆಸ್ವಾಮಿಯವರ ತಂದೆ ವಿದ್ವಾನ್ ವೆಂಕಟೇಶ ಅಯ್ಯಂಗಾರ್ ಮೈಸೂರು ಆಸ್ಥಾನದ ವಿದ್ವಾನ್ ಆಗಿದ್ದವರು.

ಪ್ರಖ್ಯಾತ ವೈಣಿಕರ ಮನೆಯಲ್ಲಿ ವೀಣೆಯ ಝೇಂಕಾರವನ್ನು ಆಗಾಗ ಕೇಳುತ್ತಲೇ ಇದ್ದ ಬಾಲಕೃಷ್ಣರಿಗೆ ಚಿಕ್ಕಂದಿನಲ್ಲಿ ಮಾತ್ರ ಮೃದಂಗದ ಸೆಳೆತ. ಖಾಲಿಯಾದ ಅಕ್ಕಿಯ ಟಿನ್‌ಅನ್ನು ಮಲಗಿಸಿ, ಮೃದಂಗದಂತೆ ಇಟ್ಟುಕೊಂಡು ಬಡಿಯುವುದು, ಖಾಲಿ ಬೋರ್ನ್‌ವಿಟಾ ಡಬ್ಬಿಯನ್ನು ಬಡಿಯುವುದು ಇಂತಹದ್ದೇ ಹವ್ಯಾಸ. ಬಾಲಕೃಷ್ಣರು ಹುಟ್ಟಿದ ವರ್ಷವೇ, ಅಂದರೆ 1955ರಲ್ಲಿ ದೊರೆಸ್ವಾಮಿಯವರು ಬೆಂಗಳೂರು ಆಕಾಶವಾಣಿಗೆ ಮ್ಯೂಸಿಕ್ ಪ್ರೊಡ್ಯೂಸರ್ ಆಗಿ ಸೇರಿದರು. ಆದರೆ ಕುಟುಂಬದವರು ಮಾತ್ರ ಮೈಸೂರಿನಲ್ಲಿಯೇ ಇದ್ದರು. 1962-63ರ ಸುಮಾರಿಗೆ ಕುಟುಂಬವನ್ನು ಬೆಂಗಳೂರಿಗೆ ಕರೆದುಕೊಂಡು ಬಂದರು. ಬೆಂಗಳೂರಿಗೆ ಬಂದ ನಂತರ ವಿದ್ವಾನ್ ಸಿ.ಕೆ. ಅಯ್ಯಮಣಿ ಅಯ್ಯರ್ ಅವರಿಂದ ಏಳು ವರ್ಷದ ಬಾಲಕೃಷ್ಣರಿಗೆ ಮೃದಂಗದ ಪಾಠಗಳು ಶುರುವಾದವು. ಸುಮಾರು ಅವರಿಗೆ 12-13 ವರ್ಷ ಆಗುವವರೆಗೂ ಮೃದಂಗದ ಕಲಿಕೆ ಮುಂದುವರೆಯಿತು.

ಆಗೊಮ್ಮೆ ಸುಮ್ಮನೇ ಕೈಯಾಡಿಸಲೆಂದು ತೆಗೆದುಕೊಂಡ ವೀಣೆಯನ್ನು ಬಾಲಕೃಷ್ಣ ಸಾಕಷ್ಟು ಚೆನ್ನಾಗಿಯೇ ನುಡಿಸಿದರು. ದೊರೆಸ್ವಾಮಿಯವರ ಚಿಕ್ಕಪ್ಪ ಇವರು ನುಡಿಸುವುದನ್ನು ಕೇಳಿದರು. 'ಇವನು ಚೆನ್ನಾಗಿ ನುಡಿಸ್ತಾನಯ್ಯ, ನೀನೇ ಅವನಿಗೆ ವೀಣೆ ಹೇಳಿಕೊಡು' ಎಂದು ದೊರೆಸ್ವಾಮಿಯವರ ಮನವೊಲಿಸಿದರು. ತಮ್ಮ ನಾಲ್ಕು ಜನ ಗಂಡುಮಕ್ಕಳಿಗಾಗಲೀ, ಹೆಣ್ಣುಮಕ್ಕಳಿಗಾಗಲೀ ವೀಣೆ ಕಲಿಯಿರಿ ಎಂದು ದೊರೆಸ್ವಾಮಿಯವರು ಎಂದೂ ಒತ್ತಾಯಿಸಿರಲಿಲ್ಲ. ಆಸಕ್ತಿ ಎನ್ನೋದು ಒಳಗಿನಿಂದ ಸಹಜವಾಗಿಯೇ ಹುಟ್ಟಿದರೆ ಮಾತ್ರ ಕಲಿಸಬೇಕು ಎಂಬ ಮನೋಭಾವ ಅವರದ್ದಾಗಿತ್ತು. ಜೊತೆಗೆ ಆಗ ದೊರೆಸ್ವಾಮಿಯವರು ಅವರ ಸಂಗೀತಸಾಧನೆಯ ಉತ್ತುಂಗದಲ್ಲಿದ್ದರು, ಸದಾ ಕಛೇರಿಗಳು, ಆಕಾಶವಾಣಿಯ ವೃತ್ತಿ ಬೇರೆ, ಅವರಿಗೆ ಸಮಯವೂ ಇರುತ್ತಿರಲಿಲ್ಲ. ಬಾಲಕೃಷ್ಣ ನುಡಿಸುವುದನ್ನು ಕೇಳಿದ ದೊರೆಸ್ವಾಮಿಯವರು, 'ನಿನ್ನ ಲಯಜ್ಞಾನ ಚೆನ್ನಾಗಿದೆ' ಎಂದು ಕಲಿಸಲು ಆರಂಭಿಸಿದರು. ಮೃದಂಗದ ಕಲಿಕೆ ವ್ಯರ್ಥವಾಗಿರಲಿಲ್ಲ, ಅದು ಲಯಜ್ಞಾನದ ಗಟ್ಟಿಯಾದ ಬುನಾದಿಯನ್ನು ಹಾಕಿತ್ತು.

'ತಂದೆಯವರು ಮೊದಲು ಹಾಡಿ ತೋರಿಸುತ್ತಿದ್ದರು. ಏನು ಸ್ವರಗಳು ಬರುತ್ತಿವೆ ಎಂಬ ಕಲ್ಪನೆ ನಮಗೆ ಇರಬೇಕು, ಆ ಸಂಗೀತವನ್ನು, ಕೀರ್ತನೆಯನ್ನು ಮೊದಲು ಮನಸ್ಸಿನೊಳಗೆ ಅನುಭವಿಸಬೇಕು, ಅದು ನಮ್ಮನ್ನು ಕಾಡಬೇಕು, ಆಮೇಲೆ ಹಾಡಬೇಕು. ಕೀರ್ತನೆ ಹಾಡುವಾಗ ತಪ್ಪಿದ್ದರೆ ಸರಿ ಮಾಡುತ್ತಿದ್ದರು. ನಂತರ ವೀಣೆಯಲ್ಲಿ ನುಡಿಸಬೇಕಿತ್ತು.

'ನಮ್ಮ ಚಿಕ್ಕಜ್ಜ ಹೇಳಿದ್ದರಿಂದಲೇ ಅವರು ನನಗೆ ಕಲಿಸೋದಕ್ಕೆ ಶುರುಮಾಡಿದರು, ಆಗ ಸುಮಾರು ಹದಿಮೂರು ವರ್ಷ ನನಗೆ. ಆರಂಭದಲ್ಲಿಯೂ ಅಷ್ಟು ಕಷ್ಟವಾಗಲಿಲ್ಲ. ಅವರು ನುಡಿಸೋದನ್ನು ನೋಡುತ್ತ ಬೆರಳಿನ ತಂತ್ರಗಳು ಸ್ವಲ್ಪ ಆಗಲೇ ಬಂದುಬಿಟ್ಟಿದ್ದವು. ಇದರೊಂದಿಗೆ ಆನುವಂಶಿಕವಾಗಿ ಬಂದಿರುತ್ತೆ ಅಂತಾರಲ್ಲ ಹಂಗೆ. ಆದರೆ ಆಳಕ್ಕೆ ಹೋಗುತ್ತಿದ್ದಂತೆ ಸಂಗೀತ ಸಾಧನೆಗೆ ಅದರದ್ದೇ ಆದ ಸಮಸ್ಯೆಗಳಿರುತ್ತವೆ' ಎಂದು ಬಾಲಕೃಷ್ಣ ನೆನಪಿಸಿಕೊಳ್ಳುತ್ತಾರೆ.

ಮೊದಲ ಕಛೇರಿ

ವಿದ್ವಾನ್ ದೊರೆಸ್ವಾಮಿಯವರು ಮಗನಿಗೆ ಮೊದಲಿಗೆ ಹೇಳಿಕೊಟ್ಟ ಕೃತಿ 'ರಾಮಾ ನೀಪ್ಪೈ ತನಕು' ಎಂಬ ತ್ಯಾಗರಾಜರ ರಚನೆ. ಪ್ರತಿದಿನ ಸಂಜೆ ಅವರು ವೀಣೆ ನುಡಿಸುತ್ತ ಅಭ್ಯಾಸ ಮಾಡುವಾಗ ಗಮನವಿಟ್ಟು ಆಲಿಸಬೇಕು, ನೋಡಿಕೊಳ್ಳಬೇಕು. ಆಮೇಲೆ ಅಭ್ಯಾಸ ಮಾಡುತ್ತ, ತಮ್ಮ ಬೆರಳಿಗೆ ಇಳಿಸಿಕೊಳ್ಳಬೇಕು. ನಾಲ್ಕೈದು ವರ್ಷ ಕಲಿಕೆಯ ನಂತರ ಬಾಲಕೃಷ್ಣರಿಗೆ ಹತ್ತೊಂಬತ್ತೋ ಇಪ್ಪತ್ತೋ ವರ್ಷವಾಗಿರಬೇಕು. ಒಂದು ದಿನ ಇದ್ದಕ್ಕಿದ್ದಂತೆ ಮಗನಿಗೆ, 'ನಾಡಿದ್ದು ನನ್ನ ಜೊತೆಗೆ ನುಡಿಸ್ತೀಯ ನೀನು' ಎಂದುಬಿಟ್ಟರು. 'ಹಾಗಂತ ಅದಕ್ಕೆ ತಯಾರಿ ಏನೂ ಇಲ್ಲ. ಏನು ನುಡಿಸೋದು ಎಂದು ಕೇಳಿದರೆ ನನ್ನ ಫಾಲೋ ಮಾಡಿಕೊಂಡು ನುಡಿಸಿಕೊಂಡು ಬಾ ಎಂದುಬಿಟ್ಟರು. ಅದು ನನ್ನ ಮೊದಲ ಕಛೇರಿ. ನಾನು ಇನ್ನೂ ಚೆನ್ನಾಗಿ ನುಡಿಸಬಹುದಿತ್ತು ಎಂದು ವ್ಯಥೆಯೂ ಆಗಿತ್ತು' ಎಂದು ಬಾಲಕೃಷ್ಣ ನೆನಪಿಸಿಕೊಳ್ಳುತ್ತಾರೆ.

ನಿಜವೆಂದರೆ ವಿದ್ವಾನ್ ದೊರೆಸ್ವಾಮಿಯವರ ಜೊತೆ ವೇದಿಕೆಯ ಮೇಲೆ ಕೂರುವುದು ಅಷ್ಟು ಸರಳವಿರಲಿಲ್ಲ. ಪ್ರತಿದಿನದ ಅಭ್ಯಾಸ ನಡೆಯುತ್ತಲೇ ಇರುತ್ತಿತ್ತು ಎನ್ನುವುದನ್ನು ಹೊರತುಪಡಿಸಿದರೆ, ಎಷ್ಟೇ ದೊಡ್ಡ ಕಾರ್ಯಕ್ರಮವಾದರೂ, ಯಾವುದೇ ಕಛೇರಿಯಾದರೂ ಅವರು ಇಂಥದ್ದು, ಹೀಗೆ ನುಡಿಸಬೇಕು ಎಂದು ಮೊದಲು ಸಿದ್ಧತೆ, ರಿಹರ್ಸಲ್ ಮಾಡಿದವರೇ ಅಲ್ಲ. ಸಂಗೀತ ಎನ್ನುವುದು ಅಲ್ಲೇ ವೇದಿಕೆಯ ಮೇಲೆ ಘಟಿಸಬೇಕು ಎನ್ನುವ ಸ್ವಯಂಸ್ಫೂರ್ತಿಯ ಮನೋಭಾವ.

ಸ್ವಂತಿಕೆಯ ಹುಡುಕಾಟ

80ರ ದಶಕದಲ್ಲಿ ಸಂಗೀತವನ್ನೇ ವೃತ್ತಿಯಾಗಿಸಿಕೊಳ್ಳುವುದು ಕಷ್ಟವಿತ್ತು. ಎಂಎಸ್‌ಸಿ ಪದವಿ ಮುಗಿಸಿದ ಬಾಲಕೃಷ್ಣರಿಗೆ ರಿಸರ್ವ್ ಬ್ಯಾಂಕಿನಲ್ಲಿ ಕೆಲಸ ಸಿಕ್ಕಿತು. ಬ್ಯಾಂಕ್ ವೃತ್ತಿ ಹಾಗೂ ಸಂಗೀತ ಎರಡನ್ನೂ ಸಮತೋಲನದಿಂದ ನಡೆಸಿಕೊಂಡು ಹೋಗುವುದು ಕಷ್ಟವೆನ್ನಿಸಲಿಲ್ಲ. ಆದರೆ ಸವಾಲು ಎನ್ನಿಸಿದ್ದು ತಂದೆಯ ದಾರಿಯಲ್ಲಿ ಸಾಗುತ್ತಲೇ, ತಮ್ಮದೇ ಇನ್ನೊಂದು ದಾರಿಯನ್ನು ಕಂಡುಕೊಳ್ಳುವುದು.

> ಮೈಸೂರು ಬಾನಿಯ ವಿಶೇಷಗಳನ್ನು ಪದಗಳಲ್ಲಿ ವಿವರಿಸುವುದು ಕಷ್ಟ, ಅದು ಸೂಕ್ಷ್ಮವಾಗಿ ಕೇಳಿದಾಗ ಅನುಭವಕ್ಕೆ ದಕ್ಕುವಂಥದು

'ಎಷ್ಟೋ ಸಲ ವೀಣೆಯನ್ನು ಬಿಟ್ಟುಬಿಡಲಾ ಅಂತಲೂ ಅನ್ನಿಸುತ್ತಿತ್ತು. ಪ್ರತಿದಿನ ಅಭ್ಯಾಸ ಮಾಡುತ್ತಿದ್ದೆ, ಕಲೀತಿದ್ದೆ. ಆದರೆ ಏನೋ ಅಷ್ಟಾಗಿ ಮುಂದೆ ಸಾಗ್ತಿರಲಿಲ್ಲ, ನಾನು ಇನ್ನೂ ಗಿಫ್ಟೆಡ್ ಆಗಿರಬೇಕಿತ್ತೇನೋ ಎನ್ನಿಸುತ್ತಿತ್ತು' ಎಂದು ಬಾಲಕೃಷ್ಣ ನೆನಪಿಸಿಕೊಳ್ಳುತ್ತಾರೆ.

ಅಷ್ಟು ಪ್ರಸಿದ್ಧ ವೈಣಿಕರ ಮಗನಾಗಿ, ಆ ಹೋಲಿಕೆಯ ಭಾರವನ್ನು ತಡೆದುಕೊಂಡು, ಸವಾಲನ್ನು ಎದುರಿಸಿ, ಸ್ವಂತಿಕೆಯ ಒಂದು ಛಾಪು ಮೂಡಿಸುವುದು ಅಷ್ಟು ಸರಳವಿರಲಿಲ್ಲ.

'ಆರಂಭದಲ್ಲಿ ಅವರನ್ನು ಫಾಲೋ ಮಾಡಿಕೊಂಡು, ಅವರಂತೆಯೇ ನುಡಿಸುವುದಕ್ಕೆ ಪ್ರಯತ್ನಿಸ್ತಾ ಇದ್ದೆ. ನಮ್ಮ ತಂದೆಯವರಿಗೆ ಪುತಿನ ತುಂಬಾ ಆಪ್ತ ಸ್ನೇಹಿತರು. ಪುತಿನ ಅವರ ಹಲವಾರು ಗೀತ ರೂಪಕಗಳಿಗೆ ತಂದೆಯವರು ಸಂಗೀತ ನೀಡಿದ್ದರು. ಪುತಿನ ಅವರೊಮ್ಮೆ ನನಗೆ, 'ಅಲ್ಲಯ್ಯಾ ನಿಂಗೆ 20 ವರ್ಷ, ಅವರಿಗೆ 55, ನೀನ್ಯಾಕಯ್ಯ ಐವತ್ತೈದು ವರ್ಷದವ್ರ ಹಂಗೆ ನುಡಿಸಬೇಕು? ನೀನು ಇಪ್ಪತ್ತು ವರ್ಷದ ಯುವಕನ ಹಂಗೆ ನುಡಿಸೋದನ್ನು ಬಿಟ್ಟು ನಿಮ್ಮ ತಂದೆಯ ಹಾಗೆ ಯಾಕೆ ನುಡಿಸ್ತಿದ್ದೀಯ' ಎಂದು ಗಟ್ಟಿಯಾಗಿ ಕೇಳಿದರು.

'ನನ್ನದು ಎಂದರೆ ಏನು? ಒಂದು ಪ್ರಖರ ಪ್ರಭಾವದಲ್ಲಿ ಬಂದುಬಿಟ್ಟರೆ, ಅದರಿಂದ ಬಿಡಿಸಿಕೊಳ್ಳೋದು ತುಂಬಾ ಕಷ್ಟ. ನಾನು ಹೊಸದಾಗಿ ಏನಾದರೂ ಮಾಡಿದರೆ ಅದು ಸ್ವೀಕೃತವಾಗಬೇಕಲ್ಲ. ಪ್ರಭಾವದಿಂದ ಕಲಿತಿರುವುದನ್ನು ಪೂರ್ಣ ಬಿಟ್ಟು, ನನ್ನತನವನ್ನು ಹೇಗೆ ಬೆರಳುಗೂಡಿಸಿಕೊಳ್ಳುವುದು ಎಂದು ಆಗ ಆಲೋಚನೆ ಶುರುವಾಯಿತು ನನಗೆ. ಫ್ರೆಶ್ ಆಗಿರಬೇಕು, ನುಡಿಸುವಾಗ ಯಾವ ಸಂಗತಿಯೂ ರಿಪೀಟ್ ಆಗಬಾರದು. ಪುನರಾವರ್ತನೆ ನಮ್ಮ ಶತ್ರು ಎನ್ನೋರು ನಮ್ಮ ತಂದೆ. ನಿನ್ನ ಕೈಯಲ್ಲಿ ಸ್ವಾಭಾವಿಕವಾಗಿ ಯಾವುದು ಬರುತ್ತೆ, ನಿನ್ನ ಅಭಿವ್ಯಕ್ತಿಗೆ ನೀನೇ ಕೆಲವೊಂದು ತಂತ್ರಗಳನ್ನು ಮೈಗೂಡಿಸಿಕೊಳ್ಳಬೇಕು ಅಂತ ತಂದೆಯವರೂ ಹೇಳುತ್ತಿದ್ದರು.

'ಕೆಲವು ಬೇಸಿಕ್ ತಂತ್ರಗಳು ಎಲ್ಲದಕ್ಕೂ ಒಂದೇ ಇರುತ್ತವೆ. ಆದರೆ ಮತ್ತೆ ಕೆಲವು ಸಂಗತಿಗಳನ್ನು ಅಭಿವ್ಯಕ್ತಿಸುವಾಗ ನಮ್ಮದೇ ಆದ ವಿಧಾನವನ್ನು ಕಂಡುಕೊಳ್ಳಬೇಕು. ಅವರು ನುಡಿಸುವ ವಿಧಾನವನ್ನು ಅಳವಡಿಸಿಕೊಂಡಿದ್ದೆನಲ್ಲ, ಅದನ್ನು ನಿಧಾನವಾಗಿ ಕೈಬಿಡುತ್ತ, ರಾಗವನ್ನು ಶುರುಮಾಡುವ ವಿಧಾನ, ಭಾವಾಭಿವ್ಯಕ್ತಿ ಎಲ್ಲವನ್ನು ನನ್ನದೇ ರೀತಿಯಲ್ಲಿ ಶುರುಮಾಡಿಕೊಂಡೆ. ಕೆಲವೊಮ್ಮೆ ಹತಾಶೆಯೂ ಅನ್ನಿಸುತ್ತಿತ್ತು. ಆಮೇಲೆ ನಿಧಾನಕ್ಕೆ ನನ್ನ ದಾರಿಯನ್ನು ಕಂಡುಕೊಂಡೆ' ಎಂದು ಬಾಲಕೃಷ್ಣ ತಾವು ನಡೆದುಬಂದ ಹಾದಿಯನ್ನು ತೆರೆದಿಡುತ್ತಾರೆ.

70-80ರ ದಶಕದಲ್ಲಿ ಈ ತಂದೆ-ಮಗನ ಜೋಡಿಯ ವೀಣೆಯ ಕಛೇರಿಗಳನ್ನು ಜನರು ಎದುರು ನೋಡುತ್ತಿದ್ದರು. ವರ್ಷದಲ್ಲಿ ಸರಿಸುಮಾರು ಎಪ್ಪತ್ತು ಕಛೇರಿಗಳನ್ನು ದೇಶಾದ್ಯಂತ ನೀಡುತ್ತಿದ್ದರು. ಸ್ವಾತಂತ್ರ್ಯೋತ್ಸವದ ರಜತೋತ್ಸವದ ಅಂಗವಾಗಿ 1997ರಲ್ಲಿ ಚೆನ್ನೈನಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆದ ಕಾರ್ಯಕ್ರಮವೇ ತಂದೆ-ಮಗ ಜೊತೆಗೂಡಿ ನೀಡಿದ ಕೊನೆಯ ಕಛೇರಿಯಾಯಿತು. ನಂತರ ಅಕ್ಟೋಬರಿನಲ್ಲಿ ವೀಣೆಯ ದಂತಕಥೆಯಾಗಿದ್ದ ವಿದ್ವಾನ್ ದೊರೆಸ್ವಾಮಿಯವರ ಬೆರಳುಗಳು ಮೌನವಾದವು.

ಮೈಸೂರು ಬಾನಿ

ವೀಣೆ ನುಡಿಸುವಾಗ ಗಾಯನದ ಶೈಲಿಯನ್ನೇ ತೀರಾ ಅನುಕರಿಸತೊಡಗಿದರೆ, ವೀಣೆಯ ಸಾಧ್ಯತೆಗಳಿಗೆ, ಅದರ ಅನನ್ಯವಾದ ನಾದ, ಧ್ವನಿಗೆ ಮಿತಿ ಹೇರಿದಂತೆ ಆಗುತ್ತದೆ. ಆದರೆ ದೊರೆಸ್ವಾಮಿ ಅಯ್ಯಂಗಾರರು ವೀಣೆ ನುಡಿಸುವ ತಮ್ಮದೇ ವಿಧಾನವನ್ನು ಅಳವಡಿಸಿಕೊಂಡಿದ್ದರು, ಗಾಯನ ಹಾಗೂ ವಾದನದ ಶೈಲಿಗಳೆರಡರ ಹದವಾದ ಸಮನ್ವಯವದು. ಮುಂದೆ ಇದೇ ಮೈಸೂರು ಬಾನಿ ಎಂದು ಹೆಸರಾಯಿತು.

'ಈ ಮೈಸೂರು ಬಾನಿಯ ವಿಶೇಷಗಳನ್ನು ಪದಗಳಲ್ಲಿ ವಿವರಿಸುವುದು ಕಷ್ಟ, ಅದು ಸೂಕ್ಷ್ಮವಾಗಿ ಕೇಳಿದಾಗ ಅನುಭವಕ್ಕೆ ದಕ್ಕುವಂಥದು. ಬಲಗೈಯನ್ನು ಬಳಸೋದು, ತಂತಿ ಮೀಟೋದು ತುಂಬ ಮೃದುವಾಗಿ, ಆದರೆ ದೃಢವಾಗಿ, ಸತತವಾಗಿ ಇರಬೇಕು, ನಮ್ಮ ಉಗುರಿನಿಂದಲೇ ಮೀಟಬೇಕು. ಜೊತೆಗೆ ಕೈಬೆರಳನ್ನು ಬಿಡಿಸಿ ನುಡಿಸು ಎನ್ನೋರು ನಮ್ಮ ತಂದೆ. ಅಂದರೆ ಎಡಗೈಯ ತೋರುಬೆರಳು, ಮಧ್ಯದ ಬೆರಳನ್ನು ಬಿಡಿಸಿಟ್ಟುಕೊಂಡು, ಆಯಾ ಸಂಗತಿಗೆ ಅನುಗುಣವಾಗಿ ನುಡಿಸೋದು' ಎಂದು ಬಾಲಕೃಷ್ಣ ವಿವರಿಸುತ್ತಾರೆ.

ತಂದೆಯ ಮೆಚ್ಚುಗೆಯೇ ದೊಡ್ಡ ಪ್ರಶಸ್ತಿ

ಒಮ್ಮೆ ರೇಡಿಯೊದಲ್ಲಿ ಬರುತ್ತಿದ್ದ ಬಾಲಕೃಷ್ಣರ ವೀಣಾ ಕಾರ್ಯಕ್ರಮವನ್ನು ಆಲಿಸುತ್ತ, ಅವರ ತಾಯಿಯವರು ತರಕಾರಿ ಸೋಸುತ್ತ ಕುಳಿತಿದ್ದರಂತೆ. ಅದನ್ನು ನೋಡಿದ ದೊರೆಸ್ವಾಮಿಯವರು, 'ಅರೆ, ನನ್ನ ಕಾರ್ಯಕ್ರಮ ರೇಡಿಯೊದಲ್ಲಿ ಬರ್ತಾ ಇದ್ದರೆ, ನೀನು ಅಲ್ಲೆಲ್ಲೋ ಅಡುಗೆ ಮನೆಯಲ್ಲಿ ಇರ್ತೀಯ. ಬಾಲು ನುಡಿಸೋದನ್ನಾದ್ರೆ ಇಲ್ಲಿ ಕುಳಿತು ಗಮನವಿಟ್ಟು ಕೇಳ್ತೀಯ' ಎಂದು ಹೆಂಡತಿಗೆ ತಮಾಷೆ ಮಾಡಿದರಂತೆ.

ಇದೇ ಅಕ್ಟೋಬರ್ 9ರಿಂದ 16ರವರೆಗೆ ನಡೆಯಲಿರುವ ಬೆಂಗಳೂರು ಗಾಯನ ಸಮಾಜದ 52ನೇ ಸಮ್ಮೇಳನದ ಅಧ್ಯಕ್ಷತೆ ವಹಿಸಲಿರುವ ವಿದ್ವಾನ್ ಬಾಲಕೃಷ್ಣರಿಗೆ 'ಸಂಗೀತ ಕಲಾರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಕರ್ನಾಟಕ ಗಾನಕಲಾ ಪರಿಷತ್ತಿನ 'ಗಾನಕಲಾಶ್ರೀ' ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 'ಕರ್ನಾಟಕ ಕಲಾಶ್ರೀ' ಇವರ ಪ್ರತಿಭೆಗೆ ಸಂದ ಇನ್ನಿತರ ಪ್ರಶಸ್ತಿಗಳು.

ಈಗ ಹಲವಾರು ಪ್ರಶಸ್ತಿಯನ್ನು ಗಳಿಸಿರುವ ಬಾಲಕೃಷ್ಣರಿಗೆ ಈ ಎಲ್ಲದಕ್ಕಿಂತ ಮಿಗಿಲಾದ ಪ್ರಶಸ್ತಿ ಸಿಕ್ಕಿದ್ದು ತಂದೆಯವರಿಂದ, ಒಮ್ಮೆ ಕೆಲವು ಯುವ ಸಂಗೀತಗಾರರ ಕುರಿತು ಮಗನೊಂದಿಗೆ ಚರ್ಚಿಸುತ್ತ, ಲಯಜ್ಞಾನದ ಬಗ್ಗೆ ಹೇಳುತ್ತ, 'ನೀನೂ ಪರವಾಗಿಲ್ಲ ಕಣಯ್ಯ' ಎಂದು ಹೇಳಿದರಂತೆ. ಅದು ಮೊಟ್ಟಮೊದಲ ಸಲ ತಂದೆಯಿಂದ ದೊರೆತ ಮೆಚ್ಚುಗೆ. ಆಗ ಬಾಲಕೃಷ್ಣರಿಗೆ ಮೂವತ್ತೈದೋ ಮೂವತ್ತಾರೋ ವರ್ಷಗಳು. ಅವರ ಈ ಒಂದು ಮೆಚ್ಚಿಗೆಯೇ ವಿದ್ವಾನ್ ಬಾಲಕೃಷ್ಣರಿಗೆ ತಮ್ಮದೇ ದಾರಿಯಲ್ಲಿ ಇನ್ನಷ್ಟು ಸಾಧನೆ ಮಾಡಲು ಪ್ರೇರಣೆಯೂ ಆಯಿತು. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಅದಲು ಬದಲು ಕಂಚಿ ಕದಲು

1 ರಾಯನಮಗ = ...
2 ಹೊಗೆರಹಿತ = ...
3 ಬರಿಹಗೆ = ...
4 ಮೊದಲಚಿತ್ರ = ...

ಗಣಿತದಲ್ಲಿ ಗರ್ದಿಗಮ್ಮತ್ತು

ಹಿಗ್ಗಿನಿಂದ ಮಗ್ಗಿ ಬರೆ

9,19, 29...99ರ ಮಗ್ಗಿ ಬರೆಯುವುದು ವಿವರಣೆಗೆ 59ರ ಮಗ್ಗಿ ಬರೆಯೋಣ

+1	
0	9
1	8
2	7
3	6
4	5
5	4
6	3
7	2
8	1
9	0
ಎಡಭಾಗ	ಬಲಭಾಗ

+2	
1	9
3	8
5	7
7	6
9	5
11	4
13	3
15	2
17	1
19	0
ಎಡಭಾಗ	ಬಲಭಾಗ

+6	
5	9
[5 + 6]-11	8
[11 + 6]- 17	7
[17 + 6] - 23	6
[23 + 6] - 29	5
[29 + 6] - 35	4
[35 + 6] - 41	3
[41 + 6] -47	2
[47 + 6] - 53	1
[53 + 6] -59	6
ಎಡಭಾಗ	ಬಲಭಾಗ

ಗಮನಿಸಿ

1) 9, 19, 29...99 ಈ ಎಲ್ಲ ಮಗ್ಗಿಗಳ ಬಲಭಾಗದ ಅಂಕಿಗಳು ಒಂದೇ ಆಗಿರುತ್ತವೆ.

2) 09, 19, 29, 99 ಈ ಎಲ್ಲ ಮಗ್ಗಿಗಳ ಮೊದಲ (ಬಲಭಾಗದ) ಅಂಕಿಗಳು ಕ್ರಮವಾಗಿ 1, 2, 3 10ನ್ನು ಮುಂದಿನ ಪ್ರತಿ ಅಂಕೆಗಳಿಗೂ ಕೂಡಿಸಬೇಕು. ಹೀಗೆ 99ರವರೆಗೆ ಮಗ್ಗಿ ಬರೆಯಬಹುದು.

ಚೂರು ಮರಿ

ವಾಲಿಬಾಲ್, ಟೆನಿಸ್ ಮುಂತಾದ ಆಟಗಳಲ್ಲಿ ಅಂಕಗಳನ್ನು ಎಣಿಸುವಾಗ ಆರಂಭದಲ್ಲಿ ಲವ್ ಆಲ್ ಎಂದು ಹೇಳುವರು. ಈ ಲವ್ ನಿಜವಾದ LOVE ಪದದಿಂದ ಬಂದಿಲ್ಲ. ಗ್ರೀಕ್ ಭಾಷೆಯಲ್ಲಿ ಲವ್ ಎಂದರೆ ತತ್ತಿ ಎಂದು ಅರ್ಥ. 0 ಅಂಕ ತತ್ತಿಯ ಆಕಾರದಲ್ಲಿ ಇರುವುದರಿಂದ ತಮಾಷೆಗಾಗಿ ಈ ಬಳಕೆ ಬಂದಿದೆಯಂತೆ.

ಪದ ವಿನೋದ

ಸುಳಿವು ಆಧರಿಸಿ ಖಾಲಿ ಬಿಟ್ಟ ಸ್ಥಳದಲ್ಲಿ ಸರಿಯಾದ ಅಕ್ಷರ ತುಂಬಿ ಮೂರು ಅಕ್ಷರಗಳ ಪದ ಮಾಡಿ

1 ಸ........ತಿ (ಸತಿ ಸಾಲಿನಲ್ಲಿ ನಿಂತಿದ್ದಾಳೆ)
2 ಸ........ತಿ (ಸತಿಯ ಜಾತಿಯೂ ಅದೇ)
3 ಸ........ತಿ (ಸತಿಗೆ ಸಿಕ್ಕ ಮುಕ್ತಿ)
4 ಸ........ತಿ (ಸತಿಗೆ ಇದೇ ಒಳ್ಳೇ ಬುದ್ಧಿ)
5 ಸ........ತಿ (ಸತಿಯ ಪತಿಗೆ ಇನ್ನೊಬ್ಬಳು ಸತಿ ಇದ್ದರೆ)
6 ಸ........ತಿ (ಸತಿಯೂ ಆ ಮಂಡಳಿಯಲ್ಲಿದ್ದಾಳೆ)
7 ಸ........ತಿ (ಸರಿಯಿಂದ ಸಿಕ್ಕ ಅನುಮತಿ)

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿರುವ ಸುಳಿವು ಆಧರಿಸಿ ಹೊಸ ಪದ ರಚಿಸಿ

	ಕ	ಲ	ಸುಳಿವು
1			ವೇಳೆ
2			ಸಂದು
3			ಬಡಿಗೆ
4			ಮತ
5			ಶರೀರದ ಒಂದು ಭಾಗ



ಡಿಣ್ಣ ಚುಕ್ಕಿ ಕೇಳ್ರಪ್ಪ ಕಥೆಯ

ಬುದ್ಧಿವಂತ ಹಸು

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ರೈತನೊಬ್ಬ ತಾನು ಸಾಕಿದ ಹಸುವನ್ನು ಮಾರಲು ನಿರ್ಧರಿಸಿದ. ಆದರೆ ಅಷ್ಟು ಕಾಲ ಆ ಮನೆಯಲ್ಲಿದ್ದ ಹಸುವಿಗೆ ದುಃಖವಾಯಿತು. ತನ್ನನ್ನು ಮಾರದಿರುವಂತೆ ಮೂಕ ಭಾಷೆಯಲ್ಲಿ ಹೇಳಿತು

ಹೇಗಾದರೂ ಮಾಡಿ ತನ್ನ ಬುದ್ಧಿವಂತಿಕೆ ತೋರಿ ಜೀವ ಉಳಿಸಿಕೊಳ್ಳಬೇಕು ಎಂದು ಹಸು ನಿರ್ಧರಿಸಿತು. ತನ್ನ ಮಹತ್ವ ರೈತನಿಗೆ ಗೊತ್ತು ಮಾಡಬೇಕು ಎಂದು ಯೋಚಿಸಿತು

ಒಂದು ದಿನ ರೈತನ ಮನೆಗೆ ಕಳ್ಳರು ನುಗ್ಗಲು ಯತ್ನಿಸಿದರು. ಆಗ ಕೊಟ್ಟಿಗೆಯಲ್ಲಿದ್ದ ಪಾತ್ರೆಯನ್ನು ಕಾಲಿನಿಂದ ತಳ್ಳಿ ಸದ್ದು ಮಾಡಿ ಎಚ್ಚರಿಸಿತು. ಕಳ್ಳರು ಓಡಿ ಹೋದರು

ಹಸುವಿನ ಬುದ್ಧಿವಂತಿಕೆಗೆ ಮೆಚ್ಚಿದ ರೈತ ಅದನ್ನು ಮಾರದಿರಲು ನಿರ್ಧರಿಸಿದ. ಪ್ರೀತಿಯಿಂದ ಸಾಕಿದ. ಮುಂದೆ ಅದರೊಂದಿಗೆ ನೆಮ್ಮದಿಯಿಂದ ಬಾಳಿದ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಎರಡು ಪದಗಳನ್ನು ಹೊಂದಿಸಿ ಒಂದೇ ಪದ ಮಾಡಿ

1	ಬಡಿ	A	ಯಾತ್ರೆ
2	ಗಡಿ	B	ಕಂಠ
3	ರಾಜ	C	ಕರಿ
4	ಹರಿ	D	ಕಾಸು
5	ಉಡ	E	ವಾಳ
6	ಗರಿ	F	ಮಾನ
7	ಸರ	G	ತಾಪ
8	ನಾಯಿ	H	ಪಾಯ
9	ಹರ	I	ವಾರ
10	ಜನ	J	ಮನ
11	ಜಗ	K	ಕಾರ
12	ವರ	L	ಬಿಡಿ
13	ಮದ	M	ಮುರಿ
14	ದಾಸ	N	ಸ್ಥಾನ
15	ಮಣಿ	O	ವರ
16	ಪಾದ	P	ದಾರ
17	ಅಡಿ	Q	ಹರ
18	ಉಪ	R	ಕೊಡೆ
19	ಹಣ	S	ಯೋಗ
20	ನಟ	T	ತಾಳ

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್
1-N 2-I 3-L 4-G 5-M 6-K 7-J 8-E 9-H 10-P 11-O 12-R 13-Q 14-S 15-B 16-C 17-A 18-T 19-D 20-F

ಜಾಣಪದ ಆಟ: 1 ಸರಿ 2 ಸಾರ 3 ಸಿರಿ 4 ಸೇರು 5 ಸಾರು

ಪದ ಆಟ: 1 ನೀರಾವರಿ 2 ತರಾವರಿ 3 ಶರಾವತಿ 4 ಕರಾವಳಿ 5 ಐರಾವತ

ಅದಲು ಬದಲು : 1 ಆಸ್ತಿ ವಿವರ 2 ನಾಗರಾಜನು 3 ಉತ್ತರಾಧಿಕಾರ 4 ಆಶ್ರಯಮನೆ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಭಾರತಿ ಪಟ್ಟಿಹಾಳ, ಇಂಚಲ (ಬೆಳಗಾವಿ)

ಅಂಕುರ ರಾಮದುರ್ಗ, ಇಳಕಲ್

ಸಮೃದ್ಧ ಜಿನಗಿ, ಗದಗ